ಸಂಗೀತ ಸಾಮ್ರಾಟ

ಪಂ. ಬಸವರಾಜ ರಾಜಗುರು



■ ನಿಜಗುಣ ರಾಜಗುರು

ಪ್ರಸಾರಾಂಗ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಸಂಗೀತ ಸಾಮ್ರಾಟ
ಪಂ. ಬಸವರಾಜ ರಾಜಗುರು

ನಿಜಗುಣ ರಾಜಗುರು

ಪ್ರಸಾರಾಂಗ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು

SANGEETH SAMRAT
PANDIT BASAVARAJA RAJAGURU

by

Nijaguna Rajaguru

Published by

PRASARANGA

Karnataka State Dr. Gangubai Hanagal
Music and Performing Arts University
JLB Road, Lakshmipuram, Mysore-570 004

ಪುಟ : viii + ೧೪೦

Pages : viii + 140

ಮೊದಲ ಮುದ್ರಣ : ೨೦೧೪

First Edition - 2014

Price : ₹ 100/-

ಬೆಲೆ : ಒಂದು ನೂರು ರೂಪಾಯಿಗಳು

ಮುದ್ರಣ :

ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧ಎ, ಈರ್ವಿನ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - ೧, ದೂರವಾಣಿ : ೨೪೭೬೦೧೯

ಕುಲಪತಿಗಳ ಮಾತು

ಸಾಂಸ್ಕೃತಿಕ ಲೋಕವನ್ನು ಬೆಳೆಸುವ ಕುಸುಮಗಳು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು 2009ರಲ್ಲಿ ಸ್ಥಾಪಿತಗೊಂಡು ಸಂಗೀತ, ನೃತ್ಯ, ನಾಟಕಾದಿ ಪ್ರದರ್ಶನ ಕಲೆಗಳ ಸಂರಕ್ಷಣೆ, ಏಳಿಗೆ, ಬೆಳವಣಿಗೆಗೆ ತನ್ನನ್ನು ತೊಡಗಿಸಿಕೊಂಡು ಬರುತ್ತಿದೆ. ಕಲೆಗಳು ಮನುಷ್ಯನ ಮನಸ್ಸಿಗೆ ಮುದ ನೀಡುವುದಲ್ಲದೆ, ಜ್ಞಾನಚಿಂತನೆಗೆ ಎಡೆ ಮಾಡಿಕೊಟ್ಟು ಪರಿಪೂರ್ಣ ಮಾನವನನ್ನಾಗಿಸುತ್ತದೆ. ಕಲೆಗಳ ಸಹಚರ್ಯದಿಂದ ಮಕ್ಕಳ ವಿದ್ಯಾಭ್ಯಾಸ ಉತ್ತಮ ಗುಣಮಟ್ಟ ಸಾಧಿಸಿರುವುದು ಇಂದಿನ ಸಂಶೋಧನೆಗಳಿಂದ ಸಾಬೀತಾಗಿದೆ. ಮುಖ್ಯವಾಗಿ ಕರ್ನಾಟಕ ರಾಜ್ಯ ಸಾಂಸ್ಕೃತಿಕ ನೆಲೆಬೀಡು. ಇನ್ನು ಮೈಸೂರು ಸಾಂಸ್ಕೃತಿಕ ನಗರಿ ಎಂದೇ ಖ್ಯಾತಿ ಗಳಿಸಿದೆ. ಈ ನೆಲೆಯಲ್ಲಿ ನಿಂತಿರುವ ಈ ವಿಶ್ವವಿದ್ಯಾಲಯ ಅನೇಕ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಅವುಗಳನ್ನು ಸಾಕಾರಗೊಳಿಸುವಲ್ಲಿ ಮುನ್ನಡೆದಿದೆ.

ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಇರುವ ಪಠ್ಯ ವಿಚಾರಗಳೊಂದಿಗೆ ಸಂಗೀತ ನೆಲೆಯ ತಾಂತ್ರಿಕತೆಗಳು, ಧ್ವನಿಸಂಸ್ಕರಣೆ, ಸೃಜನಶೀಲತೆ ಇವುಗಳನ್ನು ಅಳವಡಿಸಿಕೊಳ್ಳುವ ಉದ್ದೇಶವಿದೆ. ಪ್ರಸಾರಾಂಗದ ಮೂಲಕ ಮತ್ತಷ್ಟು ಪುಸ್ತಕಗಳು ಬೆಳಕು ಕಂಡು ಜ್ಞಾನಲೋಕಕ್ಕೆ ಆಕರಗಳಾಗಿ ನಿಲ್ಲಬೇಕಿದೆ. ಇದಲ್ಲದೆ, ವಿಶ್ವವಿದ್ಯಾಲಯ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರತರುವ ಉದ್ದೇಶವನ್ನು ಹೊಂದಿದೆ.

ಈ ಹಿಂದೆ ನಮ್ಮ ಸಂಗೀತ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದ ಡಾ. ಹನುಮಣ್ಣ ನಾಯಕ ದೊರೆ ಅವರ ಅವಧಿಯಲ್ಲಿ ಪ್ರಸಾರಾಂಗದ ಮೂಲಕ ಪುಸ್ತಕ ಪ್ರಕಟಣಾ ಕಾರ್ಯ ಆರಂಭಗೊಂಡು, ಮುದ್ರಣ ಹಂತವನ್ನು ತಲುಪಿದ್ದ ಮೂರು ಪುಸ್ತಕಗಳು ನನ್ನ ಆಡಳಿತದ ಅವಧಿಯಲ್ಲಿ ಲೋಕಾರ್ಪಣೆಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ನಾನು ನಿಕಟಪೂರ್ವ ಕುಲಪತಿಗಳಿಗೆ ಹೆಚ್ಚಿನ ಅಭಿನಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಹೀಗೆ ಪ್ರಸಾರಾಂಗದ ಮೂಲಕ ಹೊರಬರುತ್ತಿರುವ ಮಹಾ ಸಂಗೀತ ಮೇರು ಪಂ. ಬಸವರಾಜ ರಾಜಗುರು ಅವರ ಜೀವನ ಮತ್ತು ವ್ಯಕ್ತಿತ್ವವನ್ನು ಒಳಗೊಂಡಿರುವ 'ಸಂಗೀತ ಸಾಮ್ರಾಟ ಪಂ. ಬಸವರಾಜ ರಾಜಗುರು' ಎಂಬ ಪುಸ್ತಕವನ್ನು ರಚಿಸಿಕೊಟ್ಟಿರುವ ಶ್ರೀ ನಿಜಗುಣ ರಾಜಗುರು ಅವರ ಸೃಜನಶೀಲತೆಗೆ ಅಭಿನಂದನೆಗಳು.

ಡಾ. ಸರ್ವಮಂಗಳ ಶಂಕರ್

ಕುಲಪತಿ

ಹಿಂದಿನ ಕುಲಪತಿಗಳ ಮಾತು

ಕನಸುಗಳು ಹಲವಾರು; ಕೈಗೂಡುವುದು ಮಾತ್ರ ಕೆಲವು. ಈ ವಿಶ್ವವಿದ್ಯಾಲಯವು ಅನೇಕ ಕನಸುಗಳನ್ನು ಹೊತ್ತುಕೊಂಡು ಮೈದಾಳಿದೆ. ಸಂಗೀತ, ನೃತ್ಯ, ನಾಟಕ ಮತ್ತು ಇತರ ಪ್ರದರ್ಶಕ ಕಲೆಗಳನ್ನು ಈ ವಿಶ್ವವಿದ್ಯಾಲಯವು ತನ್ನ ಪರಿಧಿಯಲ್ಲಿ ಇರಿಸಿಕೊಂಡಿದೆ. ಭಾರತೀಯ ಸಂಗೀತದಲ್ಲಿ ಎರಡು ಪ್ರಧಾನ ಶೈಲಿಗಳಿವೆ. ಒಂದು ಹಿಂದೂಸ್ತಾನಿ ಸಂಗೀತ ಪ್ರಕಾರವಾದರೆ ಮತ್ತೊಂದು ಕರ್ನಾಟಕಿ ಸಂಗೀತ ಪ್ರಕಾರವಾಗಿದೆ. ಹಾಡುಗಾರಿಕೆ, ವಾದ್ಯಗಾರಿಕೆ ಮತ್ತು ನೃತ್ಯ – ಈ ವಿಷಯಗಳು ಇಲ್ಲಿ ಅಸ್ತಿತ್ವದಲ್ಲಿವೆ. ಕರ್ನಾಟಕಿ ಸಂಗೀತ ಪ್ರಕಾರದಲ್ಲಿ ಗಾಯನ, ವೀಣೆ, ಮೃದಂಗ, ಪಿಟೀಲು ಇತ್ಯಾದಿ ವಾದ್ಯಗಳು ಮತ್ತು ಹಿಂದೂಸ್ತಾನಿ ಸಂಗೀತ ಪ್ರಕಾರದಲ್ಲಿ ಗಾಯನ, ತಬಲಾ, ಸಿತಾರ್ ಇತ್ಯಾದಿ ಪ್ರಕಾರಗಳು ಇವೆ. ನೃತ್ಯ ನಿಕಾಯದಲ್ಲಿ ಭರತನಾಟ್ಯ, ಕಥಕ್, ಕೂಚಿಪುಡಿ ಇತ್ಯಾದಿ ಪ್ರಕಾರಗಳಿವೆ.

ಒಟ್ಟು ಭಾರತೀಯ ಸಂದರ್ಭದಲ್ಲಿ ಸಂಗೀತಾದಿ ಕಲೆಗಳು ಶೈಕ್ಷಣಿಕ ರಂಗದಲ್ಲಿ ಅಧ್ಯಯನಕ್ಕೊಳಪಟ್ಟಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಕೆಲವು ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಲಲಿತಕಲೆಗಳು ಅಧ್ಯಯನದ ವಿಷಯಗಳಾಗಿವೆ. ಈ ಕಲೆಗಳ ಅಧ್ಯಯನಕ್ಕೆಂದೇ ಮೀಸಲಾದ ಈ ವಿಶ್ವವಿದ್ಯಾಲಯವನ್ನು ಸರ್ಕಾರವು ಆರಂಭಿಸಿ ಅನುಕೂಲ ಮಾಡಿಕೊಟ್ಟಿದೆ. ದಕ್ಷಿಣಭಾರತದಲ್ಲಿ ಇದು ಮೊದಲನೆ ವಿಶ್ವವಿದ್ಯಾಲಯವಾಗಿದೆ.

ಅಧ್ಯಯನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ ವಿಭಾಗಗಳು ಇಲ್ಲಿವೆ. ಲಲಿತಕಲೆಗಳಿಗೆ ಸಂಬಂಧಪಟ್ಟ ಗ್ರಂಥಗಳು ಇಂಗ್ಲಿಷ್, ಹಿಂದಿ, ಮರಾಠಿ ಭಾಷೆಗಳಲ್ಲಿ ವಿಪುಲವಾಗಿ ಕಂಡುಬರುತ್ತವೆ. ಆದರೆ ಕನ್ನಡದಲ್ಲಿ ಇಂತಹ ಗ್ರಂಥಗಳ ಅಭಾವ ಎದ್ದು ಕಾಣುತ್ತದೆ. ಈ ಕೊರತೆಯನ್ನು ನೀಗಿಸುವ ದಿಸೆಯಲ್ಲಿ ವಿಶ್ವವಿದ್ಯಾಲಯವು ಪ್ರಸಾರಾಂಗ ವಿಭಾಗವನ್ನು ಆರಂಭಿಸಿ ಗ್ರಂಥಪ್ರಕಟಣೆ, ಪ್ರಚಾರೋಪನ್ಯಾಸ, ಸಂಶೋಧನ ಪತ್ರಿಕೆ ಇತ್ಯಾದಿ ಯೋಜನೆಗಳನ್ನು ಹಾಕಿಕೊಂಡಿದೆ.

ಈ ನಿಟ್ಟಿನಲ್ಲಿ ಶ್ರೀ ನಿಜಗುಣ ರಾಜಗುರು ರಚಿಸಿದ 'ಪಂ. ಬಸವರಾಜ ರಾಜಗುರು' ಎಂಬ ಈ ಗ್ರಂಥವನ್ನು ವಿಶ್ವವಿದ್ಯಾಲಯವು ಸಂತೋಷದಿಂದ ಪ್ರಕಟಿಸುತ್ತಿದೆ. ಇದರಿಂದಾಗಿ ಸಂಬಂಧಪಟ್ಟ ವಿದ್ಯಾರ್ಥಿ ವೃಂದ, ಅಧ್ಯಾಪಕರು ಮತ್ತು ಕಲಾವಿದರಿಗೆ ಪ್ರಯೋಜನವಾದೀತೆಂದು ಆಶಿಸಲಾಗಿದೆ.

ಡಾ. ಹನುಮಣ್ಣನಾಯಕ ದೊರೆ

ರಾಜಗುರುಗಳ ಸಂಗೀತಯಾತ್ರೆ

ಕಲಾವಿದರ ಹುಟ್ಟು ಮತ್ತು ಉಚ್ಛ್ರಾಯಗಳು ಅವರು ಜನಿಸಿ ಜೀವಿಸಿದ ಕಾಲದೇಶಗಳ ಸಂದರ್ಭಗಳ ಮೇಲೆ ಅವಲಂಬಿಸಿರುತ್ತವೆ. ಕಲೆಯ ಸ್ವರೂಪವೂ ಸಹ ಇಂತಹವುಗಳ ಒಟ್ಟು ಮೊತ್ತದ ಪರಿಭಾವ ಎನ್ನಬಹುದು. ಕಲೆಯ ಈ ಓಡು–ಜಾಡುಗಳನ್ನು ನೆಲದ ಸಂಸ್ಕೃತಿಯು ಪ್ರಭಾವಗೊಳಿಸುತ್ತದೆ. ಕಲೆ–ಸಂಸ್ಕೃತಿಗಳ ಈ ಒಡನಾಟವು ಅವಿಭಾಜ್ಯ ಮತ್ತು ಒಂದೇ ನಾಣ್ಯದ ಎರಡು ಮುಖಗಳು. ಕಾಲಕಾಲಕ್ಕೆ ಕಲಾವಾಹಿನಿಯು ತನ್ನ ದಿಕ್ಕುದೆಸೆಯನ್ನು ಸಮಸಾಮಯಿಕವಾಗಿ ಬದಲಾಯಿಸಿ ಬೆಳೆಸಿಕೊಂಡಿರುವುದು ಐತಿಹಾಸಿಕ ಸತ್ಯ. ಈ ವಾಹಿನಿಯಲ್ಲಿ ಮಿಂದುತೇಲಿ ಮೂಡಿಬಂದವರು ಕಲೆಗಾರರು. ಸಂಗೀತಕಲಾ ವಲಯಕ್ಕಂತೂ ಇದು ಸಮಂಜಸವಾಗಿ ಅನ್ವಯಿಸುತ್ತದೆ.

ಸಂಗೀತ ಸಮಯಗಳನ್ನು ಪ್ರತಿಬಿಂಬಿಸುವಲ್ಲಿ ಭಾರತದ ಸಂಗೀತಶಾಸ್ತ್ರ ಗ್ರಂಥಗಳು ತಮ್ಮದೇ ಆದ ಸ್ವಂತಿಕೆಯನ್ನು ಮೆರೆದಿವೆ. ಅಲ್ಲಿ, ಗ್ರಂಥಕರ್ತೃವು ಪೂರ್ವಸೂರಿಗಳಿಂದ ಬಹುತೇಕ ಎಲ್ಲವನ್ನು ಗ್ರಹಿಸಿ ಉದ್ಧರಿಸಿಕೊಂಡು ಗ್ರಂಥನಿರ್ಮಾಣದ ಸಮಯದಲ್ಲಿ ಇದ್ದ ಎಲ್ಲ ಪ್ರಯೋಗ–ಪ್ರಸಂಗಗಳ ಪ್ರಸ್ತುತತೆಯ ಸಾರಾಂಶವನ್ನೂ ಮೇಳೈಸಿ ಸಂಗೀತಾದಿ ಪ್ರದರ್ಶನಗಳಿಗೆ ದಿಗ್ದರ್ಶಕವಾದ ಸಿದ್ಧಾಂತಗಳನ್ನು ನೀಡಿದ್ದಾರೆ. ಆದರೆ, ಇವುಗಳಿಗೆ ಪ್ರೇರಕಶಕ್ತಿಯಾದ ಪ್ರದರ್ಶನಗಳನ್ನು ನೀಡಿ ಕಲಾವಲಯವನ್ನೇ ಪ್ರಭಾವಗೊಳಿಸಿರಬಹುದಾದ ಮಹನೀಯರನ್ನು ಹೆಸರಿಸಿಲ್ಲ. ಹಾಗೊಮ್ಮೆ ಸೂಚಿಸಿದ್ದರೂ ಅವರು ನಟನೋ, ನಾಟ್ಯಾಂಗನೆಯೋ, 'ವಿದ್ಯಾವಂತ'ರೋ ಆಗಿಬಿಡುತ್ತಾರೆ.

ಅಲ್ಲಿಂದ ಕೆಲವು ಕಾಲದಿಂದೀಚೆಗೆ ಓರ್ವ ಕಲಾಸಚೇತಕರಾಗಿ ಸಂಗೀತಗಾರರಾದ ಶ್ರೀಪುರಂದರದಾಸ – ಶ್ರೀವ್ಯಾಸರಾಯರಂತಹವರನ್ನು, ಸಂಗೀತ ಪರಿಭಾಷಾಯುಕ್ತ ವಚನಗಳನ್ನು ರಚಿಸಿರುವ ಹಲವು ಶಿವಶರಣರನ್ನು ಹೆಸರಿಟ್ಟು ಗುರುತಿಸಿ ಕೊಂಡಾಡಿರುವ ಕೀರ್ತಿ ಕರ್ನಾಟಕಕ್ಕೆ ಸಲ್ಲಬೇಕು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ನಡಾವಳಿಯ ಸ್ವರೂಪವು ಬದಲಾವಣೆಗೊಂಡು ಕಲೆಯ ಮಹತ್ತನ್ನು ಕಲೆಗಾರರಲ್ಲಿ ಕಂಡುಕೊಳ್ಳುವ ಪರಿಪಾಠವು ಬೆಳೆದಿದೆ. ಏಕೆಂದರೆ ಇವರು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪ್ರಯೋಕ್ತೃವೂ ಗುರುವೂ ಹೌದು – ಗುರುಶಿಷ್ಯ ಪರಂಪರೆಯ ಪ್ರತ್ಯಕ್ಷ ಸಾಕ್ಷಿಯೂ ಹೌದು. ಇಂತಹವರ ಹುಟ್ಟು, ನೆಲ–ಜಲದ ಚೌಕಟ್ಟು, ಕಲಿಕೆ, ಗುರುಪರಂಪರೆಯ ಅಂತೇವಾಸ, ಸಾಧನ–ಜೀವನಗಳ ಏರಿಳಿತಗಳು ಮತ್ತು ಸಿದ್ಧಿಗಳ ಬಗೆಗೆ ಚಿಂತನೆಗಳು ಅವರೇ ಮುನ್ನಡೆಸುವ ಸಂಗೀತ ಪೀಳಿಗೆಗೆ ಆದರ್ಶ ಮಾರ್ಗಸೂಚಿ ಮತ್ತು ಶ್ರೋತೃಗಳಿಗೆ ರಸಮಾಧುರ್ಯದ ಆಲೋಡನೆಗೆ ಮೇಲೋಗರವೂ ಹೌದು. ಸಂಗೀತದಲ್ಲಿ ಉನ್ನತಿಯನ್ನು ಪಡೆಯುವಲ್ಲಿ ವ್ಯಾಸಂಗಮಾಡುತ್ತಿರುವ ಎಲ್ಲರಿಗೂ ಇಂತಹ ಚಿಂತನೆಗಳಿಂದ ಅಪಾರವಾದ ಉಪಯೋಗವಿದೆ. ಹೀಗಾಗಿ, ಹುಟ್ಟು ಕಲಾವಿದರಾಗಿ, ಸಾಧನೆಯಿಂದ ಮಹತ್ತಾಗಿ ಬೆಳೆದು ಬೆಳಗಿದ ಸಂಗೀತಗಾರರ

ಜೀವನ – ಸಾಧನ – ಸಿದ್ಧಿಗಳನ್ನು ನೈಜವಾಗಿ ಚಿತ್ರಿಸುವ ಹಾಗೂ ಪ್ರಭಾವಗೊಳಿಸುವ ಬರವಣಿಗೆಗಳು ನಮ್ಮ ಸಮಸಾಮಯಿಕ ಕಲಾವಲಯಕ್ಕೆ ಅತ್ಯಂತ ಪ್ರಸ್ತುತವಾಗಿದೆ.

ಇಂತಹ ಮಹತ್ಕಾರ್ಯವನ್ನು ಮಾಡಲೆಳಸುತ್ತದೆ ಈ ಪುಸ್ತಕ. ಕರ್ನಾಟಕದ ಮಹಾನ್‌ಗಾಯಕರ ಅಗ್ರಪಂಗ್ತಿಯಲ್ಲಿ ಸಂಗೀತಸಾಮ್ರಾಟರೆನಿಸಿದ ಪಂ. ಬಸವರಾಜರಾಜಗುರು ಅವರ ಜೀವನವನ್ನು ಅತ್ಯಂತ ಹತ್ತಿರದಿಂದ ಶಿಷ್ಯರಾಗಿಯೂ ಮಗನಾಗಿಯೂ ಕಂಡ ಧನ್ಯ ಶ್ರೀ ನಿಜಗುಣ ರಾಜಗುರುರದು. ಇದರಿಂದಾಗಿ ಪಂ.ಬಸವರಾಜ ರಾಜಗುರುರವರ ಕುರಿತು ಸಮಗ್ರವಾಗಿ ಹೊರಬರುತ್ತಿರುವ ಈ ನಿಕಟನೈಜಚಿತ್ರಣದ ಕೃತಿಯು ಸ್ವಾಗತಾರ್ಹವಾಗಿದೆ. ಅತ್ಯಂತ ನಿಕಟಸಂಬಂಧದ ಕಾರಣದಿಂದ ಭಾವಾವೇಶಗಳಿಗೆ ಒಳಗಾಗದೆ ಸತ್ಯ ಮತ್ತು ಮಹತ್ತುಗಳನ್ನು ಸರಳಮುಗ್ಧತೆಯಲ್ಲಿ ಕಂಡು ಅದನ್ನು ಹೃದ್ಯವಾಗಿ ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಅವರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ.

ಇಂತಹ ಉತ್ತಮ ಪುಸ್ತಕವನ್ನು ಪ್ರಕಟಿಸಲು ಸೂಚಿಸಿದವರು ನಮ್ಮ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು. ಪ್ರಸಾರಾಂಗದಿಂದ ಹೊರಬರುವ ಎಲ್ಲ ಪ್ರಕಟಣೆಗಳು ಅತ್ಯಂತ ಉತ್ತಮ ಮೌಲ್ಯದ್ದಾಗಿ ಸಲ್ಲಬೇಕು ಎಂಬುದು ಅವರ ಅಪೇಕ್ಷೆ ಮತ್ತು ನಿರ್ದೇಶ. ಈ ಪುಸ್ತಕದ ಪ್ರಕಟಣೆಗಾಗಿ ಅವರು ನೀಡಿರುವ ಮಾರ್ಗದರ್ಶನಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು.

ಪ್ರಕಟಣೆಗೆ ಎಲ್ಲ ಸಹಾಯ ಸಹಕಾರಗಳನ್ನೂ ನೀಡಿರುವ ಮಾನ್ಯ ಕುಲಸಚಿವರಿಗೆ ಧನ್ಯವಾದಗಳು. ಪ್ರಸಾರಾಂಗದ ಪ್ರಕಟಣೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಅಚ್ಚಿಟ್ಟಿರುವ ಪುಸ್ತಕಗಳನ್ನು ಆಯ್ದು ಒಪ್ಪಿರುವ ಗ್ರಂಥಪ್ರಕಾಶನ ಸಲಹಾಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞತೆಗಳು. ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಮಾಲೀಕರಾದ ಶ್ರೀ ಡಿ.ಎನ್. ಲೋಕಪ್ಪನವರಿಗೆ, ಮುಖಪುಟವನ್ನು ಸುಂದರವಾಗಿ ವಿನ್ಯಾಸಮಾಡಿರುವ ಶ್ರೀ ಬಸವರಾಜ್‌ರವರಿಗೆ ಕೃತಜ್ಞತೆಗಳು.

ಸಂಗೀತಾಸಕ್ತರೆಲ್ಲರೂ ಈ ಪುಸ್ತಕವನ್ನು ಸ್ವಾಗತಿಸಿ ಓದಿ ಸವಿಯುವಂತಾಗಲೆಂದು ಹಾರೈಸುತ್ತೇವೆ.

ದಿನಾಂಕ :

ಮೈಸೂರು

ಸಂ.ವಿ. ರಾ.ಸ. ನಂದಕುಮಾರ್

ಹಿಂದಿನ ಗೌರವ ನಿರ್ದೇಶಕರು (ಹೆಚ್ಚುವರಿ) ಪ್ರಸಾರಾಂಗ

ಲೇಖಕರ ಮಾತು

ಸಂಗೀತಕ್ಕೆ ಯಾವುದೇ ಜಾತಿ, ಭಾಷೆ, ಧರ್ಮ, ಪ್ರಾಂತ್ಯ ಇಲ್ಲ. ಅದು ಜಾತ್ಯತೀತ, ಭಾಷಾತೀತ, ಅದಕ್ಕೆ ಯಾವುದೇ ಪ್ರದೇಶ ಸೀಮಿತವಾಗಿಲ್ಲ. ಕಲಾವಿದ ಸರ್ವತ್ರ ಪೂಜತೇ ಎಂಬಂತೆ ಕಲಾವಿದ ಎಲ್ಲರಿಗೂ ಬೇಕಾದವನು. ಎಲ್ಲಿಯೇ ಹೋಗಲಿ ಅವನಿಗೆ ಗೌರವವಿದೆ. ಕನ್ನಡದ ನೆಲ ಅನೇಕ ಸಂಗೀತ ದಿಗ್ಗಜರ ತವರೂರು. ಕರ್ನಾಟಕದ ಕೀರ್ತಿ ಪತಾಕೆಯನ್ನು ದೇಶ-ವಿದೇಶಗಳಲ್ಲಿ ಹಾರಿಸಿ ಕನ್ನಡದ ನೆಲಕ್ಕೆ ಹೆಸರು ತಂದು ಕೊಟ್ಟಂತಹ ದಿಗ್ಗಜ ಕಲಾವಿದರಲ್ಲಿ ಸ್ವರ ಸಾಮ್ರಾಟ ಪದ್ಮಭೂಷಣ ಪಂ. ಬಸವರಾಜ ರಾಜಗುರುಗಳು ಒಬ್ಬರು. ಆರು ದಶಕಗಳಿಗಿಂತಲೂ ಹೆಚ್ಚಿನ ಕಾಲ ದೇಶದ ಉದ್ದಗಲಗಳಲ್ಲಿ ಸಂಚರಿಸಿ ಹಾಡುತ್ತಲೇ ಹಳ್ಳಿಯಿಂದ ದಿಲ್ಲಿಯನ್ನು ಮುಟ್ಟಿದ ನಾದಯೋಗಿ, ಅಸಂಖ್ಯ ರಸಿಕ ಶ್ರೋತೃಗಳ ಮನದಂಗಳದಲ್ಲಿ ತಮ್ಮ ಸ್ವರಾಲಾಪನೆಯಿಂದ ಮಿನುಗುವ ನಕ್ಷತ್ರವಾಗಿ ಮಿಂಚಿದ ರಸಿಕ ಗಾಯಕ ಪಂ. ಬಸವರಾಜ ರಾಜಗುರುಗಳು. ಅವರ ಜೀವನ ಒದು ರೋಚಕ ಯಶೋಗಾಥೆ. ತಮ್ಮ ಮಧುರ ಧ್ವನಿ ಅನುಪಮ ಶೈಲಿಯಿಂದ ಸಂಗೀತದ ಶಿಖರವನ್ನೇರಿದ ಇವರು ರಾಜಗುರು ಸಂಗೀತ ಪರಂಪರೆಯನ್ನೇ ರೂಪಿಸಿ ಸಂಗೀತ ಕ್ಷೇತ್ರಕ್ಕೆ ಅಚ್ಚಳಿಯದ ಕೊಡುಗೆಯನ್ನು ನೀಡಿದವರು. ಇಂತಹ ಮಹಾನ್ ಗಾಯಕ, ಶ್ರೇಷ್ಠ ಗುರುವಿನ ಬಗ್ಗೆ ಸಮಗ್ರ ಮಾಹಿತಿಯುಳ್ಳ ಗ್ರಂಥವಿಲ್ಲದೇ ಅನೇಕರು ನನ್ನ ಬಳಿಗೆ ಬಂದು ತಮಗೆ ಬೇಕಾದ ವಿವರಗಳನ್ನು ಪಡೆಯುತ್ತಿದ್ದರು. ಜೀವನವನ್ನೆಲ್ಲಾ ಕಲೋಪಾಸನೆಗಾಗಿ ಮೀಸಲಾಗಿಟ್ಟಿದ್ದ ನಿಮ್ಮ ತಂದೆಯವರ ಬಗ್ಗೆ ನೀವೆ ಏಕೆ ಗ್ರಂಥ ಬರೆಯಬಾರದು? ಅದರಿಂದ ಬಹಳ ಜನರಿಗೆ ಉಪಯೋಗವಾಗುತ್ತದೆ ಎಂದು ಕಲಾಭಿಮಾನಿಗಳು, ಆತ್ಮೀಯರು, ಹೇಳುತ್ತಲೇ ಇದ್ದರು. ನನ್ನ ತಂದೆಯವರ ಬಗ್ಗೆ ನಾನೇ ಹೇಗೆ ಬರೆಯುವುದು ಎಂಬ ಅಳುಕು ನನ್ನಲ್ಲಿತ್ತು. ನಿನ್ನ ತಂದೆಯನ್ನು ನಿನಗಿಂತ ಹೆಚ್ಚಿಗೆ ಯಾರು ಬಲ್ಲರು? ಅವರ ಬಗ್ಗೆ ಬರೆದರೆ ತಪ್ಪೇನು? ಎಂದು ತಂದೆಯವರ ಹಿರಿಯ ಶಿಷ್ಯರಾದ ಪಂ. ಸೋಮನಾಥ ಮರಡೂರ ಅವರು ಆಗಾಗ ಹೇಳುತ್ತಿದ್ದರು. ನನ್ನ ಪೂಜ್ಯ ಮಾತೋಶ್ರೀ ಭಾರತಿದೇವಿ ರಾಜಗುರು ಅವರು ಸಹ ನೀನೇ ಬರೆದರೆ ಒಳ್ಳೆಯದು ಎಂದು ಸಲಹೆ ನೀಡಿದಾಗ ನನ್ನಲ್ಲಿದ್ದ ಅಳುಕು ಮಾಯವಾಗಿ ಉತ್ಸಾಹದಿಂದ ಈ ಗ್ರಂಥ ರಚನೆಗೆ ಆರಂಭಿಸಿದೆ. "ನನ್ನ ಬದುಕೊಂದು ಬೃಹದ್‌ಗ್ರಂಥ"ವೆಂದು

ನನ್ನ ತಂದೆ ಹೇಳುತ್ತಿದ್ದರು. ಅವರ ಜೀವನಶೈಲಿ, ಸಂಗೀತ, ವಿಚಾರಗಳು, ವೃತ್ತಿನಿಷ್ಠೆ, ಚರ್ಚಿಸಿದ ತಿಳಿದುಕೊಂಡ ವಿಷಯಗಳನ್ನು ನೆನಪಿನಂಗಳದಿಂದ ಎಳೆ ಎಳೆಯಾಗಿ ಬಿಡಿಸಿ ಹೊರತರುವ ಪ್ರಯತ್ನ ಮಾಡಿದೆ. ಮತ್ತೊಂದು ವಿಶೇಷವೇನೆಂದರೆ ನನ್ನ ತಂದೆ ತಮ್ಮ ಜೀವನದಲ್ಲಿ ನಡೆದ ಘಟನೆಗಳ ಬಗ್ಗೆ ಕಾರ್ಯಕ್ರಮಗಳ ಬಗ್ಗೆ, ಗುರು-ಶಿಷ್ಯ ಸಂಬಂಧಗಳ ಬಗ್ಗೆ ಎಷ್ಟೊಂದು ರಸವತ್ತಾಗಿ ಹೇಳುತ್ತಿದ್ದರೆಂದರೆ ಅದನ್ನು ಕೇಳಿದವರಿಗೆ ಅದು ತಮ್ಮ ಕಣ್ಣೆದುರಿಗೆ ನಡೆದಿದೆ, ತಾವು ಕೂಡಾ ಅಲ್ಲಿದ್ದೇವೆ ಎನ್ನುವ ಅನುಭವ ಬರುತ್ತಿತ್ತು. ಆ ಮಾತುಗಳನ್ನು ಕೇಳಿದ ಯಾರಿಗೇ ಆಗಲಿ ಅವರ ಮನದ ಮೇಲೆ ಅಚ್ಚೊತ್ತಿದಂತೆ ಆಗುತ್ತಿತ್ತು. ಬುದ್ಧಿ ತಿಳಿದಾಗಿನಿಂದ ಹಿಡಿದು ಅವರ ಕೊನೆಯ ವರೆಗೂ ಅವರೊಂದಿಗೆ ಹೆಚ್ಚಿನ ಸಮಯವನ್ನು ಕಳೆದ, ದೇಶದಾದ್ಯಂತ ಅವರೊಂದಿಗೆ ನೂರಾರು ಕಾರ್ಯಕ್ರಮಗಳಿಗೆ ಸಂಚರಿಸಿದ ನನಗೆ ಅವರ ಪ್ರತಿಯೊಂದು ಮಾತು, ಕೃತಿ, ಘಟನೆಗಳು ಮನದಂಗಳದಲ್ಲಿ ಹಚ್ಚಹಸಿರಾಗಿ ಉಳಿದಿವೆ. ಅವೆಲ್ಲವನ್ನು ಈ ಗ್ರಂಥ ರೂಪದಲ್ಲಿ ಬರೆದು ಕಲಾಭಿಮಾನಿಗಳ, ಓದುಗರ ಮುಂದಿಡುವ ಪ್ರಯತ್ನ ನನ್ನದಾಗಿದೆ. ಗ್ರಂಥ ರಚನಾಕಾರ್ಯದಲ್ಲಿ ನೆರವಾದ ನನ್ನ ಪತ್ನಿ ಶ್ರೀಮತಿ ಮಂಜುಳಾ ಮತ್ತು ಪುತ್ರನಾದ ಕುಮಾರ ವಿಶ್ವರಾಜನನ್ನು ಪ್ರೀತಿಯಿಂದ ನೆನೆಯುತ್ತೇನೆ. ಪುಸ್ತಕದ ಮೂಲಪ್ರತಿ ಓದಿ ಸಹಕರಿಸಿದ ಪತ್ರಕರ್ತ ಶ್ರೀ ಗಣೇಶ ಜೋಶಿ ಅವರಿಗೆ ಋಣಿಯಾಗಿದ್ದೇನೆ. ಈ ಗ್ರಂಥವು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುತ್ತಿರುವುದು ಇನ್ನಷ್ಟು ಅರ್ಥಪೂರ್ಣವಾಗಿದೆ. ಗ್ರಂಥರಚನೆಗೆ ಪ್ರೋತ್ಸಾಹಿಸಿ ಪ್ರಕಟಿಸುತ್ತಿರುವ ಕೆಎಸ್‌ಜಿಎಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿಗಳನ್ನು ತುಂಬು ಹೃದಯದಿಂದ ನೆನೆಯುತ್ತೇನೆ. ಹಾಗೆಯೇ ಗ್ರಂಥ ಪ್ರಕಟಣೆಗೆ ಸಹಕರಿಸಿದ ವಿಶ್ವವಿದ್ಯಾಲಯದ ಕುಲಸಚಿವರನ್ನು, ಪ್ರಸಾರಾಂಗದ ಗೌರವ ನಿರ್ದೇಶಕರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ನಿಜಗುಣ ರಾಜಗುರು
ರಾಜಗುರು ನಿವಾಸ, ೨ನೇ ಅಡ್ಡ ರಸ್ತೆ
ಮಾಳಮಡ್ಡಿ, ಧಾರವಾಡ - ೫೮೦ ೦೦೭
ಮೊಬೈಲ್ ನಂ. ೯೩೪೮೯ ೯೬೨೩೨

ಗ್ರಂಥ ಪ್ರಕಾಶನ ಸಲಹಾಸಮಿತಿ

ಅಧ್ಯಕ್ಷರು

ಡಾ. ಹನುಮಣ್ಣನಾಯಕ ದೊರೆ

ಮಾನ್ಯ ಕುಲಪತಿಗಳು

ಸದಸ್ಯರು

ಡಾ. ಕಾಶಿನಾಥ ಅಂಬಲಗೆ, ಗುಲಬರ್ಗಾ

ಡಾ. ಸರ್ಫ್ರಾಜ್ ಚಂದ್ರಗುತ್ತಿ, ಸಾಗರ

ಶ್ರೀ ಎಸ್.ಆರ್. ಕೃಷ್ಣಮೂರ್ತಿ, ಮೈಸೂರು

ಡಾ. ಬಿ.ಎಂ. ಜಯಶ್ರೀ, ಬೆಂಗಳೂರು

ಡಾ. ಡಿ.ಕೆ. ರಾಜೇಂದ್ರ, ಮೈಸೂರು

ಪ್ರೊ. ಸಿ. ನಾಗಣ್ಣ, ಮೈಸೂರು

ಡಾ. ಬಸವರಾಜ ಮಲಶೆಟ್ಟಿ, ಹೊಸಪೇಟೆ

ಡಾ. ಡಿ.ಟಿ. ಬಸವರಾಜ್, ಮೈಸೂರು

ಪ್ರೊ. ಎಂ. ಬಸವಣ್ಣ, ಮಾನ್ಯ ಕುಲಸಚಿವರು


ಶ್ರೀ ರಾ.ಸ. ನಂದಕುಮಾರ್, ಗೌರವ ನಿರ್ದೇಶಕರು, ಹೆಚ್ಚುವರಿ ಪ್ರಸಾರಾಂಗ




ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರೊಂದಿಗೆ



ಕಡಲತೀರದ ಭಾರ್ಗವ ಡಾ. ಶಿವರಾಮ ಕಾರಂತರೊಂದಿಗೆ



ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರೊಂದಿಗೆ



ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸ್ವೀಕಾರ



ಆಕಾಶವಾಣಿ ಸಂಗೀತ ಸಮ್ಮೇಳನದಲ್ಲಿ ಕಾರ್ಯಕ್ರಮ



ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಪುಣ್ಯದಿನಾಚರಣೆಯಲ್ಲಿ



ಪಂ. ಬಸವರಾಜ ರಾಜಗುರುಗಳ ಹಾಡುವ ಒಂದು ಭಂಗಿ



ಭಾರತ ಸರ್ಕಾರದ "ಪದ್ಮಭೂಷಣ" ಪ್ರಶಸ್ತಿ ಸ್ವೀಕಾರ

ಸಂಗೀತ ಸಾಮ್ರಾಟ

ಪಂ. ಬಸವರಾಜ ರಾಜಗುರು

ಜನನ ಮತ್ತು ಬಾಲ್ಯ

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನಲ್ಲಿರುವ ಯಲಿವಾಳ, ಹುಬ್ಬಳ್ಳಿಯಿಂದ ಸುಮಾರು ೨೨ ಕಿ.ಮೀ. ದೂರದಲ್ಲಿದೆ. ಕುಂದಗೋಳ ಸವಾಯಿ ಗಂಧರ್ವರಿಂದ ಪ್ರಸಿದ್ಧಿ ಪಡೆದ ಊರು. ಅದೇ ತಾಲೂಕಿನಲ್ಲಿರುವ ಯಲಿವಾಳ ಗ್ರಾಮವು ಸಂಗೀತ ದಿಗ್ಗಜ ಸ್ವರಸಾಮ್ರಾಟ್ ಪದ್ಮಭೂಷಣ ಪಂಡಿತ್ ಬಸವರಾಜ ರಾಜಗುರು ಅವರಿಗೆ ಜನ್ಮ ನೀಡಿದ ಸ್ಥಳ. ೧೯೨೦ ಆಗಸ್ಟ್ ೨೪ ರಂದು ಮಹಾಂತಸ್ವಾಮಿ ಹಾಗೂ ರಾಚವ್ವ ದಂಪತಿಗಳ ಪುಣ್ಯಗರ್ಭದಿಂದ ಜನಿಸಿದ ಬಸವರಾಜರು ತಂದೆ ತಾಯಿಗೆ ಎರಡನೆಯ ಮಗ. ಧನು ರಾಶಿ ಮೂಲಾ ನಕ್ಷತ್ರದ ಎರಡನೇ ಚರಣದಲ್ಲಿ ನಾನು ಹುಟ್ಟಿದ್ದು ಎಂದು ಅವರು ಹೇಳುತ್ತಿದ್ದರು. ರಾಜಗುರುಗಳದ್ದು ಸಂಗೀತದ ಮನೆತನ. ತಂದೆ ಮಹಾಂತ ಸ್ವಾಮಿಗಳು ಕೆಲಕಾಲ ತಂಜಾವೂರಿಗೆ ಹೋಗಿ ಕರ್ನಾಟಕಿ ಸಂಗೀತವನ್ನು ಕಲಿತು ಬಂದಿದ್ದರು. ಉತ್ತಮವಾಗಿ ಪಿಟೀಲು ನುಡಿಸುತ್ತಿದ್ದರು. ಚಿಕ್ಕಪ್ಪ ಚನ್ನಬಸವಸ್ವಾಮಿಗಳು ಬಯಲಾಟದ ಪದ, ನಾಟಕದ ಪದಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಅವರು ಹಾರ್ಮೋನಿಯಂ ಕೂಡ ನುಡಿಸುತ್ತಿದ್ದರು.

ಬಸವರಾಜರಿಗೆ ತಂದೆಯೇ ಮೊದಲ ಗುರು. ಚಿಕ್ಕ ಬಾಲಕನಾಗಿರುವಾಗಲೇ ಇವರಿಗೆ ಹಾಗೂ ಇವರ ಅಣ್ಣನಾದ ಸಿದ್ಧಯ್ಯ ಸ್ವಾಮಿಗಳಿಗೆ





ದಕ್ಷಿಣಾದಿ ಪದ್ಧತಿಯಲ್ಲಿ ಸ್ವರ, ಸರಳೆ, ಜಂಟಿ, ಕೀರ್ತನೆಗಳನ್ನು ಕಲಿಸುತ್ತಿದ್ದರು. ಪಿಟೀಲು ನುಡಿಸುತ್ತಾ "ಲಂಬೋದರ ಲಕುಮಿಕರ", "ಶಿವನಿವನೆ ಜಂಗಮಾಂಗಿ" ಮುಂತಾದ ಪದಗಳನ್ನು ಹೇಳಿಕೊಟ್ಟು ಸುಶ್ರಾವ್ಯವಾಗಿ ಹಾಡಿಸುತ್ತಿದ್ದರು. ಚಿಕ್ಕಪ್ಪ ಹಾರ್ಮೋನಿಯಂದಲ್ಲಿ ನಾಟಕದ ಪದಗಳನ್ನು ಕಲಿಸುತ್ತಿದ್ದರು. ಬಸವರಾಜರಿಗೆ ಚಿಕ್ಕಂದಿನಿಂದಲೂ ಸಂಗೀತದಲ್ಲಿ ಬಹಳ ಆಸಕ್ತಿ. ಹಾಡುವ ಚಟ. ಯಾವಾಗಲೂ ಗುನುಗುನು ಹಾಡುತ್ತಲೇ ಇರುತ್ತಿದ್ದರು. ಹಾಡುತ್ತಿದ್ದರೆ ಊಟದ ಪರಿವೇ ಅವರಿಗಿರುತ್ತಿರಲಿಲ್ಲ. ಅವರಿಗೆ ಏಳು ವರ್ಷಗಳು ನಡೆಯುತ್ತಿರುವಾಗ ತಾಯಿ ರಾಚವ್ವ ತೀರಿ ಹೋದರು. ತಂದೆಯವರೇ ಇವರನ್ನು ತಾಯಿಯಾಗಿ-ತಂದೆಯಾಗಿ ಸಲುಹತೊಡಗಿದರು. ಅಣ್ಣ ಸಿದ್ಧಯ್ಯ ಸ್ವಾಮಿ ವಿದ್ಯಾಭ್ಯಾಸಕ್ಕಾಗಿ ಕಮಡೊಳ್ಳಿ ಸೇರಿದರು.

ಬಸವರಾಜರು ಶಾಲೆಗೆ ಸೇರಿದ್ದರಾದರೂ ಸರಿಯಾಗಿ ಹೋಗುತ್ತಿರಲಿಲ್ಲ. ತಂದೆ ಹೊರಗೆ ಹೋದರೆ ಸಾಕು ಆಟವಾಡಲು ಓಡುತ್ತಿದ್ದರು. ಗಿಡಮರಗಳನ್ನೇರುವುದು, ಅಲ್ಲಿ-ಇಲ್ಲಿ ಅಡ್ಡಾಡುವುದು, ಗೆಳೆಯರೊಂದಿಗೆ ಈಜಲು ಹೋಗುವುದು ಮುಂತಾದವು ನಡೆಯುತ್ತಿದ್ದವು. ಮೂರನೆಯ ಇಯತ್ತೆಯ ವರೆಗೆ ಕಲಿಸುವುದಕ್ಕಾಗಿ ತಂದೆ ಬಹಳ ಹೆಣಗಾಡಬೇಕಾಯಿತು. ಆದರೆ ನಿತ್ಯ ರಾತ್ರಿ ತಂದೆ ಪಿಟೀಲು ನುಡಿಸುತ್ತ ಸಂಗೀತ ಪಾಠಗಳನ್ನು ಹೇಳಿಕೊಡುತ್ತಿದ್ದರು. ಬಸವರಾಜರಿಗೆ ಅದೇ ಪ್ರಿಯವಾಗತೊಡಗಿತು. ಶಾಲೆಗೆ ಹೋಗುವುದು ವಿರಳವಾಯಿತು. ಚಿಕ್ಕವರಿರುವಾಗಲೇ ಇವರು ಕೆಲವು ವಿಶೇಷ ಗುಣಗಳನ್ನು ಹೊಂದಿದ್ದರು. ಧೈರ್ಯ ಸಾಹಸಗಳು ಇವರಲ್ಲಿ ಮನೆ ಮಾಡಿದ್ದವು. ಎಂತಹ ಸನ್ನಿವೇಶಗಳಿಗೂ ಹೆದರದೆ ದಿಟ್ಟತನದಿಂದ ಎದುರಿಸುವ ಮನೋಬಲ ಇವರಲ್ಲಿತ್ತು. ಹಾಸ್ಯ, ಕಿಡಿಗೇಡಿತನಕ್ಕೆ ಮಿತಿಯೇ ಇರಲಿಲ್ಲ. ತಮಗಿಂತ ದೊಡ್ಡವರನ್ನೂ ಕೂಡ ಗೋಳುಹೊಯ್ದುಕೊಳ್ಳುತ್ತಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದ ಇವರು ಯಾರು ಏನೇ ಹೇಳಿದರೂ ತಕ್ಷಣ ಗ್ರಹಿಸಿಕೊಳ್ಳುತ್ತಿದ್ದರಷ್ಟೇ ಅಲ್ಲ, ಅವರಂತೆ ತಾವೂ ಸಹ ಮಾತನಾಡಿ ಇಲ್ಲವೇ ಹಾವಭಾವಗಳನ್ನು ಮಾಡಿ ತೋರಿಸುತ್ತಿದ್ದರು. ಕೆಲಸಾರೆ ವಿನೋದಕ್ಕಾಗಿ ಇಲ್ಲದ್ದನ್ನು ಸಹ ಇದ್ದಂತೆ ರಂಜನೀಯವಾಗಿ ವರ್ಣಿಸಿ ಹೇಳಿದಾಗ ಕೇಳಿದವರು ಇದು ನಿಜವೇ ಎಂದು ನಂಬಿಬಿಡುತ್ತಿದ್ದರು. ಅಷ್ಟೊಂದು ಚತುರತೆ ಅವರಲ್ಲಿತ್ತು. ಸುಂದರವಾದ ಶರೀರ, ಇಂಪಾದ ಧ್ವನಿ, ವಾಕ್ಚಾತುರ್ಯದಿಂದ ಎಂತಹವರ ಮನವನ್ನಾದರೂ ಗೆಲ್ಲುವ ಶಕ್ತಿಯನ್ನು ಹೊಂದಿದ್ದರು. ಬಸವರಾಜರ ತಂದೆ ಮಗನ ಭವಿಷ್ಯವನ್ನು ಮೊದಲೇ ಅರಿತಿದ್ದರೋ ಏನೋ, ಓದುವಂತೆ ಒತ್ತಾಯ ಮಾಡುತ್ತಿರಲಿಲ್ಲ. ಕಿಡಿಗೇಡಿತನ ಮಾಡಿ ತರಲೆಯಾದಾಗ ಬುದ್ಧಿ ಮಾತುಗಳಿಂದ ಮಗನನ್ನು ಸರಿದಾರಿಗೆ ತರುತ್ತಿದ್ದರೆ ವಿನಾ ಹೊಡೆದು ಬಡೆದು ಶಿಕ್ಷಿಸುತ್ತಿರಲಿಲ್ಲ. ಯಾರಾದರೂ ಮನೆಯವರೆಗೆ ದೂರು ತಂದರೆ ಅವರಿಗೆ ಸಮಾಧಾನ ಮಾಡಿ ಅವನು ಚಿಕ್ಕ ಹುಡುಗ ತಿಳಿಯದೇ ಮಾಡಿರಬಹುದು ಅವನನ್ನು ಪೀಡಿಸಬೇಡಿ, ಅವನು ಮುಂದೆ ದೊಡ್ಡ ಕಲಾವಿದನಾಗುವ ಲಕ್ಷಣ ಹೊಂದಿದ್ದಾನೆ ಎಂದು ಬಸವರಾಜರು



ಏಳು ವರ್ಷದವರಿರುವಾಗಲೇ ನುಡಿದಿದ್ದರಂತೆ. ಅದಕ್ಕೆ ಉದಾಹರಣೆಯಾಗಿ ಒಂದು ಘಟನೆಯನ್ನು ಆ ಊರಿನ ತಲಾಟಿಯಾಗಿದ್ದ ಶ್ರೀ ಸಿದ್ದಪ್ಪ ಪೂಜಾರ ಹೇಳುತ್ತಿದ್ದರು. ಆವಾಗ ಸಿದ್ದಪ್ಪ ಪೂಜಾರ ಆಗ ತಾನೇ ಮುಲ್ಕಿ ಪರೀಕ್ಷೆ ಮುಗಿಸಿದ್ದರು. ಊರಿನವರು ಹುಡುಗ ಬಹಳ ಶ್ಯಾಣೆ ಇದ್ದಾನಂತ ಹೊಗಳುತ್ತಿದ್ದರು. ಆದರೆ ಬಸವರಾಜರು ತಮಗಿಂತ ಐದಾರು ವರ್ಷ ದೊಡ್ಡವನಾದ ಸಿದ್ದಪ್ಪನನ್ನು ಅಣಕಿಸುವುದು, ಹೋಗುವಾಗ ಹಿಂದಿನಿಂದ ಹರಳನ್ನು ಎಸೆಯುವುದು, ಏನಾದರೂ ಕೂಗಿ ಓಡಿಹೋಗುವುದು ಮಾಡುತ್ತಿದ್ದರಂತೆ. ಇದರಿಂದ ಸಿಟ್ಟಿಗೆದ್ದ ಸಿದ್ದಪ್ಪ ಮಹಾಂತಸ್ವಾಮಿಗಳ ಬಳಿಗೆ ಬಂದು ನಿಮ್ಮ ಮಗ ಬಸವಣ್ಣಿ (ಬಸವರಾಜರಿಗೆ ಬಸವಣ್ಣಿ ಅಂತಲೂ ಕರೆಯುತ್ತಿದ್ದರು) ಹೀಗೆ ಮಾಡುತ್ತಾನೆ ಎಂದು ದೂರು ಹೇಳಿದಾಗ ಅವರು ಸಿದ್ದಪ್ಪನಿಗೆ ಸಮಾಧಾನ ಮಾಡಿ "ನೀನು ಅವನ ಪಾಡಿಗೆ ಅವನನ್ನು ಬಿಟ್ಟು ಬಿಡು, ನಾನು ಬುದ್ಧಿ ಹೇಳುತ್ತೇನೆ. ಆತ ಕಲಾವಿದನಾಗುವ ಆಸಾಮಿ. ಮುಂದೆ ವಿದ್ವಾಂಸನಾಗುತ್ತಾನೆ" ಎಂದು ಹೇಳಿದ್ದರು ಅಂತಾ ಸಿದ್ದಪ್ಪ ಪೂಜಾರ ನಮಗೆಲ್ಲ ಹೇಳುತ್ತಿದ್ದರು. ಅದು ನಿಜವಾಯಿತು.

ಕುದುರೆ ಸವಾರಿ

ರಾಜಗುರುಗಳಿಗೆ ಬಾಲ್ಯದಿಂದಲೇ ಧೈರ್ಯ, ಸಾಹಸದ ಪ್ರವೃತ್ತಿ ಇತ್ತು. ಇದಕ್ಕೆ ಪೂರಕವಾಗಿ ಒಂದೆರಡು ಘಟನೆಗಳು ಇಲ್ಲಿವೆ. ಯಲಿವಾಳದಿಂದ ೧೫ ಮೈಲಿ ದೂರದಲ್ಲಿ ಗಂಗಿಭಾವಿ ಎಂಬ ಕ್ಷೇತ್ರ ಇದೆ. ಅಲ್ಲಿ ಪ್ರತಿ ಸಂಕ್ರಮಣಕ್ಕೆ ಎಂಟು ದಿನಗಳವರೆಗೆ ಜಾತ್ರೆ ನಡೆಯುತ್ತಿತ್ತು. ಆ ಜಾತ್ರೆಗೆ ಊರಿನಿಂದ ಅನೇಕರು ಹೋಗುತ್ತಿದ್ದರು. ಊರಿನಲ್ಲಿದ್ದ ಒಬ್ಬ ಮಿಠಾಯಿ ತಿಂಡಿಗಳನ್ನು ಮಾರುವುದಕ್ಕಾಗಿ ಅಲ್ಲಿ ಹೋಗಿ ಒಂದು ಚಿಕ್ಕ ಅಂಗಡಿಯನ್ನು ಹಾಕುತ್ತಿದ್ದ. ಬಸವರಾಜರು ಹಾಗೂ ಅವರ ಇಬ್ಬರು ಗೆಳೆಯರು ಜಾತ್ರೆಗೆ ಹೋಗುವ ಯೋಚನೆ ಮಾಡಿದರು. ಮನೆಯಲ್ಲಿ ಹೇಳಿದರೆ ಬೈಯ್ಯುತ್ತಾರೆ. ಅದಕ್ಕೆ ಹೇಳದೇ ಹೋಗುವುದು, ಆದರೆ ೧೫ ಮೈಲು ನಡೆಯುವುದು ಸಾಧ್ಯವಿಲ್ಲದಮಾತು, ಏನು ಮಾಡುವುದು ಎಂದು ವಿಚಾರಮಾಡತೊಡಗಿದರು. ಪಕ್ಕದ ಮನೆಯಲ್ಲಿ ಇವರ ದೊಡ್ಡಪ್ಪ ಇರುತ್ತಿದ್ದರು. ಅವರು ಒಂದು ಕುದುರೆಯನ್ನು ಸಾಕಿದ್ದರು.ಕೆಲಸವಿಲ್ಲದ ವೇಳೆಯಲ್ಲಿ ಅದನ್ನು ಮೇಯಲು ಬಿಡುತ್ತಿದ್ದರು. ಇದು ಬಸವರಾಜರಿಗೆ ಗೊತ್ತಿತ್ತು. ಅದನ್ನು ಹೇಗಾದರೂ ಮಾಡಿ ಹಾರಿಸಿಕೊಂಡು ಅದರ ಮೇಲೆ ಜಾತ್ರೆಗೆ ಹೋಗುವುದೆಂದು ತೀರ್ಮಾನಿಸಿದರು. ಕುದುರೆ ಲಗಾಮು ಮನೆಯಲ್ಲಿತ್ತು. ಆದ್ದರಿಂದ ಕುದುರೆ ಮುಖಕ್ಕೆ ಒಂದು ಅಗ್ಗವನ್ನು ಕಟ್ಟಿ ಅದರ ಮೇಲೆ ಹತ್ತಿ ಕುಳಿತರು. ಇವರ ಹಿಂದೆ ಇಬ್ಬರು ಗೆಳೆಯರು ಕುಳಿತರು. ಕುದುರೆಯನ್ನು ಗಂಗೀಭಾವಿಗೆ ಓಡಿಸಿದರು. ಅಂತೂ ಗಂಗೀಭಾವಿಯನ್ನು ಮುಟ್ಟಿ ಜಾತ್ರೆಯಲ್ಲಿ ತಿರುಗಾಡಿದ್ದಾಯಿತು. ಇದ್ದ ಪುಡಿಗಾಸು ಖರ್ಚಾಯಿತು. ರಾತ್ರಿಯಾಗುತ್ತಾ ಬಂತು ಮರಳಿ ಊರಿಗೆ ಹೋಗುವಂತಿಲ್ಲ. ಏನು ಮಾಡುವುದು ಎಂದು ಚಿಂತಿಸುತ್ತಾ ಕುಳಿತಾಗ ಊರಿನಿಂದ




ತಿಂಡಿಗಳನ್ನು ಮಾರಲು ಬಂದಿದ್ದ ವ್ಯಾಪಾರಿಯ ನೆನಪಾಯಿತು. ಅವನ ಹತ್ತಿರ ಹೋದರು. ತನ್ನ ಊರಿನ ಹುಡುಗರು ಬಂದಿದ್ದಾರೆಂದು ಅವನು ತಿನ್ನಲು ಕೊಟ್ಟು ಅಲ್ಲಿಯೇ ಮಲಗಿ ಕೊಳ್ಳಲು ಅನುವು ಮಾಡಿಕೊಟ್ಟನು. ಕುದುರೆಯನ್ನು ಹಿಂದೆ ಒಂದು ಗಿಡಕ್ಕೆ ಕಟ್ಟಿಹಾಕಿ ಮಲಗಿಕೊಂಡರು. ನಸುಕಿನಲ್ಲಿ ಎದ್ದು ಅವನಿಗೆ ಹೇಳದೆ ಕೇಳದೆ ಮೂವರು ಜಾಗಖಾಲಿ ಮಾಡಿದರು. ಆದರೆ ಹೋಗಿದ್ದು ಮಾತ್ರ ಹತ್ತಿರದ ದುಂಡಸಿಗೆ, ಅಲ್ಲಿ ಅವರ ಚಿಕ್ಕಮ್ಮ ಇರುತ್ತಿದ್ದರು. ಇತ್ತ ಯಲಿವಾಳದಲ್ಲಿ ಹುಡುಗರು ಕಾಣದೆ ಎಲ್ಲರಿಗೂ ಗಾಬರಿ, ಕುದುರೆಯು ಇಲ್ಲ. ಎಲ್ಲ ಕಡೆಗೆ ಹುಡುಕಾಟ ಪ್ರಾರಂಭವಾಯಿತು. ಕೊನೆಗೆ ಎರಡು ದಿನಗಳ ನಂತರ ಹುಡುಗರು ಮರಳಿ ಬಂದ ಮೇಲೆ ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು.

ಇದಾದ ಮೇಲೆ ಊರಿನಲ್ಲಿ ಒಂದು ನಾಟಕ ಮಾಡಿಸಬೇಕೆಂದು ಒಬ್ಬ ನಾಟಕದ ಮಾಸ್ತರರನ್ನು ಕರೆ ತಂದರು. ಅವನು ಶನಿಪ್ರಭಾವ ಎಂಬ ನಾಟಕವನ್ನು ಕಲಿಸಲು ಆರಂಭಿಸಿದ. ತುಂಬಾ ಸೊಕ್ಕಿನವನಾದ ಅವನು ನಾಟಕದ ತಾಲೀಮು ನಡೆಯುವಲ್ಲಿಗೆ ಯಾರನ್ನು ಬಿಡುತ್ತಿರಲಿಲ್ಲ. ಬಸವರಾಜರಿಗೆ ತಾಲೀಮು ನೋಡಬೇಕು, ಹಾಡುಗಳನ್ನು ಕೇಳಬೇಕು ಎನ್ನುವ ತವಕ. ಹುಡುಗ ಕಿಟಕಿಯಿಂದ,ಬಾಗಿಲು ಸಂಧಿಯಿಂದ ಇಣುಕಿ ನೋಡಲು ಯತ್ನಿಸಿದಾಗ ಅಲ್ಲಿಯೂ ಸಹ ಅರವಿಗಳನ್ನು ಹಾಕಿ ಮುಚ್ಚಿಸಿಬಿಟ್ಟ. ಬಸವರಾಜರಿಗೆ ತುಂಬಾ ಕೋಪಬಂತು. ಒಂದು ದಿನ ಮಧ್ಯಾಹ್ನ ಎಲ್ಲರೂ ಊಟಕ್ಕೆ ಹೋದ ವೇಳೆಯಲ್ಲಿಒಳಗೆ ನುಗ್ಗಿ ಹಾರ್ಮೋನಿಯಂ ಪಟ್ಟಿ ಕಿತ್ತು ತಬಲಾ ಡಗ್ಗಾಗಳನ್ನು ಹರಿದು ಹಾಕಿ ಬಂದು ಬಿಟ್ಟರು. ಊಟವಾದ ಮೇಲೆ ಎಲ್ಲರೂ ಬಂದು ನೋಡುತ್ತಾರೆ. ವಾದ್ಯಗಳು ಹಾಳಾಗಿ ಹೋಗಿವೆ. ಇದು ಬಸವಣ್ಣಿಯ ಕೆಲಸವೆಂದು ಗೊತ್ತಾದ ಮೇಲೆ ಮಾಸ್ತರನು ಕೋಪದಿಂದ ಮಹಾಂತಸ್ವಾಮಿಗಳ ಹತ್ತಿರ ಬಂದು ನಿಮ್ಮ ಹುಡುಗ ಹೀಗೆ ಮಾಡಿದ್ದಾನೆಂದು ಹೇಳಿದ.ಮೊದಲೇ ಶಾಂತ ಸ್ವಭಾವದವರಾಗಿದ್ದ ಅವರು ಈ ಘಟನೆಯಿಂದ ತುಂಬಾ ನೊಂದುಕೊಂಡರು. ತಾಯಿ ಇಲ್ಲದ ಬಾಲಕ ಏನು ಮಾಡುವುದು ಎಂದು ಚಿಂತಿತರಾದರು. ಮಗನ ಇಂಪಾದ ಧ್ವನಿ, ಸಂಗೀತ, ನಾಟಕಗಳಲ್ಲಿಇರುವ ಆಸಕ್ತಿಯನ್ನು ಮನಗಂಡಿದ್ದ ಅವರು ಮಗನನ್ನು ಕರೆದು ಚಿಂತಿಸಬೇಡ ನಿನ್ನನ್ನು ನಾಟಕ ಕಂಪನಿಗೆ ಸೇರಿಸುತ್ತೇನೆ. ಅಲ್ಲಿ ಸಂಗೀತ,ನಾಟಕ ಕಲಿತು ಕಲಾವಿದನಾಗು ಎಂದು ಹೇಳಿ ಬಸವರಾಜರನ್ನು ಹುಬ್ಬಳ್ಳಿಗೆ ಕರೆತಂದು ಅಲ್ಲಿ ಇದ್ದ ವಾಮನರಾವ್ ಮಾಸ್ತರರ ನಾಟಕ ಕಂಪನಿಗೆ ಸೇರಿಸಿದರು. ಅವಾಗ ಬಸವರಾಜರಿಗೆ ಕೇವಲ ೯ ವರ್ಷ. ಅಲ್ಲಿಂದ ಆರಂಭವಾಯಿತು. ರಾಜಗುರುಗಳ ರಂಗಪ್ರವೇಶ.

ನಾಟಕ ಕಂಪನಿಗೆ ಸೇರ್ಪಡೆ

ನಾಟಕ ಕಂಪನಿಯಲ್ಲಿ ಸಣ್ಣ ಹುಡುಗನನ್ನು ಎಲ್ಲರೂ ಪ್ರೀತಿಯಿಂದ ಕಾಣುತ್ತಿದ್ದರು. ಬಾಲಕೃಷ್ಣ, ದಾಸಿ ಪಾತ್ರಗಳನ್ನು ಮಾಡಿಸುತ್ತಿದ್ದರು. ಸ್ವತಃ ವಾಮನರಾವ್ ಮಾಸ್ತರರು ನಾಟಕದ



ಹಾಡುಗಳನ್ನು ಅಭ್ಯಾಸ ಮಾಡಿಸುತ್ತಿದ್ದರು. ಕಂಪನಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಹೊಸಪೇಟೆ, ಗದಗ, ದಾವಣಗೆರೆ ಮುಂತಾದ ಕಡೆಗಳಲ್ಲಿ ಕ್ಯಾಂಪ್ ಮಾಡಿತ್ತು. ಬಸವರಾಜರು ನಾಟಕ ಕಂಪನಿಯಲ್ಲಿದ್ದ ಸಂದರ್ಭದಲ್ಲಿ ಅವರನ್ನು ಕಂಡಿದ್ದ, ಅವರ ಪಾತ್ರವನ್ನು ನೋಡಿದ್ದ ಖ್ಯಾತ ಲೇಖಕ ಎನ್.ಕೆ. ಕುಲಕರ್ಣಿ ಹೇಳುತ್ತಾರೆ : "೧೯೨೯-೩೦ನೇ ವರ್ಷ ನಾನು ಹುಬ್ಬಳ್ಳಿಯಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದೆ. ವಾಮನರಾವ್ ಮಾಸ್ತರರ ನಾಟಕ ಕಂಪನಿ ಹುಬ್ಬಳ್ಳಿಗೆ ಬಂದಿತ್ತು. ನಾಟಕದ ಹುಚ್ಚಿದ್ದ ನಾನು ಮೇಲಿಂದ ಮೇಲೆ ನಾಟಕಗಳನ್ನು ನೋಡಲು ಹೋಗುತ್ತಿದ್ದೆ. ಅಲ್ಲಿ ಒಬ್ಬ ಬಾಲನಟ ಒಳ್ಳೆಯ ಕಂಠ, ಒಳ್ಳೆಯ ಮುಖ, ಸಕ್ಕುಬಾಯಿ ನಾಟಕದಲ್ಲಿ ಬಾಲಕೃಷ್ಣನ ಪಾತ್ರ ಮಾಡುತ್ತಿದ್ದ. ಆ ನಾಟಕದ ಪದ "ಆಗಲಿ ನಾನಿರೇ ಭಗವಂತ, ಬಿಡು ನೀ ಚಪಲವಿದೇಂ ಪ್ರಿಯಕಾಂತಾ" ಇನ್ನೂ ನನ್ನ ಸ್ಮರಣೆಯಲ್ಲಿದೆ. ಆ ಸಂವಾದ ಹಾಡಿದ ೧೦ ವರ್ಷದ ಬಾಲಕ ಇಂದಿನ ಅಖಿಲ ಭಾರತ ಖ್ಯಾತಿವೆತ್ತಿದ ಕೋಗಿಲೆ ಕಂಠದ ಗಾಯಕ ಪಂಡಿತ ಬಸವರಾಜ ರಾಜಗುರು ಅವರು, ಎಂದು ಹಳೆಯ ಬಾಲ್ಯದ ದಿನಗಳನ್ನು ನೆನೆಪಿಸಿಕೊಳ್ಳುತ್ತಾ ರಾಜಗುರುಗಳ ಬಗ್ಗೆ ಹೇಳುತ್ತಿದ್ದರು. ಒಮ್ಮೆ ಕಂಪನಿಯಲ್ಲಿದ್ದಾಗ ಬಸವರಾಜರು ಬಟ್ಟೆಗೆ ಸಾಬೂನು ತಿಕ್ಕುತ್ತಾ ಬಾಜೀರಾವ್ ಪೇಶ್ವೆ ನಾಟಕದ "ಕೊಟ್ಟ ಕಾಲಕ್ಕೆ ದೇವರು ನೀ ಕೆಟ್ಟ ಕೃತಿಯ ಮಾಡಲು ಬೇಡ" ಎಂಬ ಹಾಡನ್ನು ಹಾಡುತ್ತಿರುವಾಗ ಹಿಂದಿನಿಂದ ವಾಮನರಾವ್ ಮಾಸ್ತರರು ನಿಂತು ಕೇಳುತ್ತಿದ್ದರು. ಹಾಡನ್ನು ಮೆಚ್ಚಿಕೊಂಡ ಅವರು 'ಇವನಿಗೆ ಸಂಗೀತ ಚಲೋ ಸಾಧಸ್ತದ ನೋಡ್ರಿ' ಎಂದು ಎಲ್ಲರೆದರು ಹೇಳುತ್ತಿದ್ದರಂತೆ.

ಮುಂದೆ ಒಂದು ವರ್ಷ ಆಗಿರಬಹುದು. ಬಸವರಾಜರ ತಂದೆ ಪ್ಲೇಗ ರೋಗಕ್ಕೆ ತುತ್ತಾಗಿ ತೀರಿಹೋದರು. ಅನಾಥರಾದ ಇವರಿಗೆ ದಿಕ್ಕೇ ತೋಚದಂತಾಯಿತು. ಇವರ ಮನೆತನದ ಭಾರವನ್ನು ಚನ್ನಬಸವಸ್ವಾಮಿಗಳು ವಹಿಸಿಕೊಂಡರು. ಹುಡುಗನಿಗೆ ಇನ್ನು ಮುಂದೆ ನಾಟಕದ ಕಂಪನಿಗೆ ಕಳುಹಿಸುವುದು ಬೇಡ ಕೆಟ್ಟು ಹೋಗುತ್ತಾನೆ ಎಂದು ವಿಚಾರ ಮಾಡಿದ ಚಿಕ್ಕಪ್ಪ ಮತ್ತು ಅವರ ದೊಡ್ಡಪ್ಪನ ಮಕ್ಕಳಾದ ಕೆಳದಿ ಮಠಾಧಿಪತಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯರು ಸಂಸ್ಕೃತ ಅಭ್ಯಾಸ ಮಾಡಿಸಲು ಯೋಚಿಸಿ ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ಬಸವರಾಜರನ್ನು ತಂದು ಬಿಟ್ಟರು.

ಪಂಚಾಕ್ಷರಿ ಗವಾಯಿಗಳ ದರ್ಶನ ಹಾಗೂ ಶಿಷ್ಯತ್ವ

ಮಠಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಯಾವುದೋ ಊರಿಗೆ ಹೊರಟಾಗ ಗಾಡಿ ತಪ್ಪಿ ಮೂರುಸಾವಿರ ಮಠಕ್ಕೆ ಬಂದಿದ್ದರು. ಆಗ ಮೂರುಸಾವಿರ ಮಠದ ಅಂದಿನ ಶ್ರೀಗಳಾದ ಶ್ರೀ ಗುರುಸಿದ್ಧಸ್ವಾಮಿಗಳು, ಗವಾಯಿಗಳಿಗೆ ಈ ಹುಡುಗ ಬಹಳ ಚಲೋ ಹಾಡುತ್ತಾನೆ. ಇವನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿದರು. ಆಗ ಪಂಚಾಕ್ಷರಿ ಗವಾಯಿಗಳು ಯಾರವನು? ಎಲ್ಲಿದ್ದಾನೆ? ಎಂದು

ಕೇಳಿದಾಗ ಬಸವರಾಜ ಗವಾಯಿಗಳ ಪಾದವನ್ನು ಮುಟ್ಟಿ ನಮಸ್ಕಾರ ಮಾಡಿದನು. ಅವರ ತಲೆಯ ಮೇಲೆ, ಬೆನ್ನು ಮೇಲೆ ಹಸ್ತದಿಂದ ಮುಟ್ಟಿದ ಗವಾಯಿಗಳು ನಿನಗೆ ಹಾಡಲು ಬರುತ್ತದೇನು? ಒಂದು ಹಾಡು ಹೇಳಪಾ ಎಂದಾಗ ಬಸವರಾಜರು ದಿಟ್ಟತನದಿಂದ ಬರುತ್ತದೆ ಎಂದರು. 'ಇಷ್ಟುದಿನ ಎಲ್ಲಿದ್ದೆ?' ಎಂದು ಕೇಳಿದಾಗ ವಾಮನರಾವ್ ಮಾಸ್ತರರ ನಾಟಕ ಕಂಪನಿಯಲ್ಲಿದ್ದೆ ಎಂದು ಉತ್ತರಿಸಿದರು. ಹಾಡು ಎಂದಾಗ ನಿರ್ಭಯರಾಗಿ ಕರ್ಣ ಮಧುರವಾದ ಧ್ವನಿಯಿಂದ ವೀರ ಅಭಿಮನ್ಯು ನಾಟಕದ 'ಭಕ್ತ ಜೀವನ ರಾಮ ಸುಜನ' ಎಂಬ ಪದವನ್ನು ಹಾಡಿದರು. ಗವಾಯಿಗಳು ಮತ್ತೊಂದು ಹಾಡನ್ನು ಹಾಡಲು ಹೇಳಿದಾಗ "ಕರುಣಸಾಗರ ಪ್ರಭು ಪರಮಾತ್ಮ" ಎಂಬ ಪದವನ್ನು ಹಾಡಿದರು. ಪಂಚಾಕ್ಷರಿ ಗವಾಯಿಗಳು ಈ ಲೋಕವನ್ನು ಮರೆತು ಗಾನಲೋಕದಲ್ಲಿ ತಲ್ಲೀನರಾಗಿದ್ದರು. ಅನಂತರ ಸ್ವಾಮಿಗಳಿಗೆ ಈ ಹುಡುಗ ನನಗೆ ಒಪ್ಪಿಗೆಯಾಗಿದ್ದಾನೆ ಇವನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತೇವೆ, ಅವನಿಗೆ ಹಾಸಿಗೆ, ಅರಿವಿಗಳನ್ನು ತರಿಸಿಕೊಡಿರಿ. ನಮ್ಮ ಸಂಗಡ ಕರೆದೊಯ್ಯುತ್ತೇವೆ ಎಂದು ನುಡಿದರು. ಬಸವರಾಜರಿಗೆ ಗುರು ದೊರಕಿದ. ಅವರು ಎಲ್ಲಿ ಸೇರಬೇಕಾಗಿತ್ತೋ ಅಲ್ಲಿ ಸೇರಿದರು. ಇದು ಅವರ ಜೀವನದ ದಿಕ್ಕನ್ನೇ ಬದಲಿಸಿತು. ತಂದೆ-ತಾಯಿ ಇಲ್ಲದ ಅನಾಥ ಬಾಲಕನಿಗೆ ದಾರಿ ತೋರಲೆಂದೇ ದೇವರು ಪಂಚಾಕ್ಷರಿ ಗವಾಯಿಗಳನ್ನು ಅಲ್ಲಿಗೆ ಕಳಿಸಿದ್ದ ಎಂದೇ ಹೇಳಬೇಕು. ಅದಕ್ಕಾಗಿಯೇ ಇರಬೇಕು 'ಸ್ತ್ರೀಯಶ್ಚ ಚರಿತ್ರಂ ಪುರುಷಸ್ಯ ಭಾಗ್ಯಂ ದೇವೋ ನ ಜಾನಾತಿ' ಎಂದು ಹೇಳುವುದು.

ಶಿವಯೋಗ ಮಂದಿರ ಆಶ್ರಮಕ್ಕೆ

ಬಡವರಿಗೆ, ಅನಾಥರಿಗೆ, ಅಂಗವಿಕಲರಿಗೆ ವಿದ್ಯಾದಾನ ಮಾಡಿ ಅವರ ಬಾಳಿಗೆ ದಾರಿಯನ್ನು ತೋರಿಸುವ ಸಂಕಲ್ಪವನ್ನು ಹೊಂದಿದ ಹಾನಗಲ್ ಶ್ರೀ ಕುಮಾರಸ್ವಾಮಿಗಳು ಆ ಮಹಾನ್ ಕಾರ್ಯಕ್ಕೆ ಪೂಜ್ಯ ಪಂಚಾಕ್ಷರಿಗವಾಯಿಗಳನ್ನು ತೊಡಗಿಸಿದ್ದರು. ಅನೇಕ ವಿದ್ವಾಂಸರುಗಳಿಂದ, ಗವಾಯಿಗಳಿಗೆ ಮಾರ್ಗದರ್ಶನ ವನ್ನು ಕೊಡಿಸಿ ಅವರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವಂತೆ ಆಶೀರ್ವದಿಸಿದ್ದರು. ಅಂಧರ, ಅನಾಥರ ಬಾಳಿಗೆ ದಾರಿ ದೀಪವಾಗುವಂತಹ ಮಹಾನ್ ಕಾರ್ಯವನ್ನು ಗವಾಯಿಗಳು ನಡೆಸಿಕೊಂಡು ಬರುತ್ತಿದ್ದರು. ಶಿವಯೋಗ ಮಂದಿರ ಆಶ್ರಮದಲ್ಲಿ ಸಂಗೀತದ ಜೊತೆಗೆ ಸಂಸ್ಕೃತ, ವೈದಿಕ, ಸಾಹಿತ್ಯ ಮುಂತಾದ ವಿದ್ಯೆಯನ್ನು ಕಲಿಸುತ್ತಾ ಊರಿನಿಂದ ಊರಿಗೆ ಸಂಚರಿಸುತ್ತಾ ಭಕ್ತರಿಂದ ದವಸಧಾನ್ಯಗಳನ್ನು ಕಾಣಿಕೆಗಳನ್ನು ಪಡೆದು ವಿದ್ಯಾರ್ಥಿಗಳನ್ನು ಸಾಕಿ ಸಲಹುತ್ತಿದ್ದರು.

ಅಂತಹ ಗುರುವಿನ ಸನ್ನಿಧಾನಕ್ಕೆ ಬಸವರಾಜರು ಸೇರಿದ್ದು ದೈವಾನುಗ್ರಹದಿಂದ. ಪಂಚಾಕ್ಷರಿ ಗವಾಯಿಗಳು ಬಸವರಾಜರನ್ನು ಹುಬ್ಬಳ್ಳಿಯಿಂದ ಶಿವಯೋಗ ಮಂದಿರಕ್ಕೆ



ಕರದೊಯ್ದರು. ಅಲ್ಲಿ ೬೦-೭೦ ವಿದ್ಯಾರ್ಥಿಗಳು. ಎಲ್ಲರನ್ನೂ ಕಟ್ಟಿಕೊಂಡು ಸಂಚರಿಸುತ್ತಾ ವಿದ್ಯೆಯನ್ನು ಕಲಿಸುತ್ತಿದ್ದರು. ಯಾವುದೇ ಭೇದಭಾವ ಅಲ್ಲಿರಲಿಲ್ಲ. ಅದೊಂದು ಸಂಚಾರಿ ಸಂಗೀತ ಶಾಲೆಯಾಗಿತ್ತು. ಯಾವ ಊರಿಗೆ ಹೋಗಲಿ ಅಲ್ಲಿನ ದೇವಸ್ಥಾನಗಳಲ್ಲಿ ಶಿಷ್ಯರೊಂದಿಗೆ ಗವಾಯಿಗಳ ವಾಸ್ತವ್ಯವಿರುತ್ತಿತ್ತು. ಊರಿನ ಸಹೃದಯ ಭಕ್ತರ ಮನೆಗೆ ವಿದ್ಯಾರ್ಥಿಗಳು ವಾರಾನ್ನದ ಊಟಕ್ಕೆ ಹೋಗುತ್ತಿದ್ದರು. ಗವಾಯಿಗಳಿಗೆ ಅನೇಕ ಶ್ರೀಮಂತರು, ದಾನಿಗಳು ಭಕ್ತಿಯಿಂದ ಕಾಣಿಕೆಗಳನ್ನು ನೀಡುತ್ತಿದ್ದರು. ಬಸವರಾಜರಿಗಿದ್ದ ದೈವದತ್ತ ಮಧುರವಾದ ಧ್ವನಿಗೆ ಅನುಗುಣವಾಗಿ ಗವಾಯಿಗಳು ಹಿಂದೂಸ್ತಾನಿ ಹಾಗೂ ಕರ್ನಾಟಕೀ ಸಂಗೀತವನ್ನು ಕಲಿಸಲು ಆರಂಭಿಸಿದರು. ಪ್ರತಿದಿನ ಮುಂಜಾನೆ ೪ ರಿಂದ ೮ರ ವರೆಗೆ, ಸಂಜೆ ೪ ರಿಂದ ೭ರ ವರೆಗೆ ಸಂಗೀತಾಭ್ಯಾಸ ನಡೆಯುತ್ತಿತ್ತು. ಉಳಿದ ವೇಳೆಯಲ್ಲಿ ಸಂಸ್ಕೃತದ ಅಧ್ಯಯನವಿರುತ್ತಿತ್ತು. ಬಸವರಾಜರು ತುಂಬಾ ಕುಶಾಗ್ರಮತಿ, ಏಕಪಾಠಿ,ಒಂದು ಸಾರಿ ಹೇಳಿದರೆ ಸಾಕು ಗ್ರಹಿಸಿಕೊಂಡು ಬಿಡುತ್ತಿದ್ದರು. ಬೆರಳನ್ನು ತೋರಿಸಿದರೆ ಹಸ್ತವನ್ನು ನುಂಗುವ ಹಾಗೆ ಸಂಗೀತವನ್ನು ಅರಿತು ಸಾಧನೆಯನ್ನು ಮಾಡತೊಡಗಿದರು. ಅವರ ಬುದ್ಧಿಮತ್ತೆ ಚುರುಕುತನವನ್ನು ಕಂಡು ಗವಾಯಿಗಳು ತಮ್ಮಲ್ಲಿದ್ದ ವಿದ್ಯೆಯನ್ನು ಅವರಿಗೆ ಧಾರೆ ಎರೆದರು. ಸಂಗೀತದ ಸಾಧನೆಯನ್ನು ತಪಸ್ಸಿನಂತೆ ಮಾಡುತ್ತಿದ್ದ ಬಸವರಾಜರನ್ನು ಕಂಡರೆ ಗುರುಗಳಿಗೆ ತುಂಬಾ ಪ್ರೀತಿ. "ಇವನು ಮುಂದೆ ದೊಡ್ಡ ಗಾಯಕನಾಗುತ್ತಾನೆ. ನನಗೆ ಕೀರ್ತಿಯನ್ನು ತರುತ್ತಾನೆ" ಎಂದು ಪದೇ ಪದೇ ನುಡಿಯುತ್ತಿದ್ದರಂತೆ. ಅವರ ನುಡಿ ಸತ್ಯವಾಣಿಯಾಗಿದೆ ಎಂದು ಪಂಚಾಕ್ಷರಿ ಗವಾಯಿಗಳ ಹಿರಿಯ ಶಿಷ್ಯರೂ ಆಶ್ರಮದ ಉಸ್ತುವಾರಿ ವಹಿಸಿಕೊಂಡಿರುವ ಪದ್ಮಭೂಷಣ ಡಾ|| ಪುಟ್ಟರಾಜ ಗವಾಯಿಗಳು ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾ ನುಡಿಯುತ್ತಿದ್ದರು. ಬಸವರಾಜರಿಗೆ ಗುರುವಾಗಿ ತಂದೆಯಾಗಿ, ತಾಯಿಯಾಗಿ ಸಲಹಿದರು. ಅವರಿಗೆ ಯಾವುದೇ ಸೇವೆಯನ್ನು ಮಾಡಲು ಹಚ್ಚದೇ ಸದಾ ತಮ್ಮ ಬಳಿಯೇ ಇರಿಸಿಕೊಂಡು ವಿದ್ಯೆಯನ್ನು ಕಲಿಸಿದರು ಎಂದು ಅವರು ಹೇಳುತ್ತಾರೆ. ಬಸವರಾಜರಿಗೂ ಸಹ ಗುರುವಿನ ಮೇಲೆ ಅಪಾರ ಭಕ್ತಿ. ಅವರ ಅಪ್ಪಣೆ ಇಲ್ಲದೆ ಏನನ್ನೂ ಮಾಡುತ್ತಿರಲಿಲ್ಲ. ಅವರ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಿದ್ದರು.

ಪಂಚಾಕ್ಷರಿ ಗವಾಯಿಗಳೊಂದಿಗೆ ಇದ್ದಾಗಿನ ಅನೇಕ ಘಟನೆಗಳನ್ನು ಬಸವರಾಜರು ಸದಾ ನೆನಪಿಸಿಕೊಂಡು ಸ್ವಾರಸ್ಯಪೂರ್ಣವಾಗಿ ಹೇಳುತ್ತಿದ್ದರು.

ನವಾಬನಿಂದ ಚಿನ್ನದ ವರಹ

೧೯೩೧ರಲ್ಲಿ ಇವರ ಸಂಗೀತ ಪಾಠಶಾಲೆಯ ಕ್ಯಾಂಪ ಕೊಪ್ಪಳದಲ್ಲಿತ್ತು. ಆಗ ಕೊಪ್ಪಳ ಇನ್ನೂ ಹೈದ್ರಾಬಾದ ನಿಜಾಮನ ಆಡಳಿತದಲ್ಲಿತ್ತು. ಹೀಗಾಗಿ ನಿಜಾಮರು ಆಗಾಗ ಕೊಪ್ಪಳಕ್ಕೆ ಭೇಟಿ ನೀಡುತ್ತಿದ್ದರು. ಹೀಗೆ ಬಂದಾಗ ಅವರಿಗಾಗಿ ಸಂಗೀತದ, ನೃತ್ಯದ ಕಾರ್ಯಕ್ರಮಗಳನ್ನು



ಏರ್ಪಡಿಸಲಾಗುತ್ತಿತ್ತು. ಒಮ್ಮೆ ಆಕಸ್ಮಿಕವಾಗಿ ಬಂದಾಗ ಪಂಚಾಕ್ಷರಿ ಗವಾಯಿಗಳು ಅಲ್ಲಿಯೇ ಇರುವುದನ್ನು ತಿಳಿದು ಅವರಿಗೂ ಕೂಡ ಕಾರ್ಯಕ್ರಮವನ್ನು ನೀಡಲು ಆಮಂತ್ರಣ ಕೊಡಲಾಯಿತು. ಗದಗಿನ ಜೇವೂಸಾನಿ, ಆದವಾನಿ ಲಕ್ಷ್ಮೀದೇವಿ ಮುಂತಾದ ನಾಟಕದವರನ್ನು ಹಾಡಲು ಕರೆದಿದ್ದರು. ಅವರು ಹಾಡಿದ ಮೇಲೆ ಪಂಚಾಕ್ಷರಿ ಗವಾಯಿಗಳ ಸರದಿ ಬಂದಿತು. ಇಂತಹ ಸಂದರ್ಭಗಳಲ್ಲಿ ಗವಾಯಿಗಳು ಬಾಲಕ ಬಸವರಾಜನನ್ನು ಮೊದಲು ಹಾಡಿಸುತ್ತಿದ್ದರು. ತನ್ನ ಇಂಪಾದ ಧ್ವನಿಯಿಂದ ಖಂಬಾವತಿ ರಾಗದಲ್ಲಿ "ಸಖೀಮುಖ ಚಂದ್ರ" ಎಂಬ ಚೀಜ್‌ನ್ನು ಪ್ರಸ್ತುತಪಡಿಸಿ, ನಂತರ ಒಂದು ಗಜಲ್‌ನ್ನು ತುಂಬಾ ಸೊಗಸಾಗಿ ಬಸವರಾಜ ಹಾಡಿದ. ನಾಟಕದವರು ಹಾಡುವಾಗ ಸುಮ್ಮನೇ ಕುಳಿತಿದ್ದ ನವಾಬ್ ಸಾಲಾರ್‌ಜಂಗ್ ಇವರ ಹಾಡಿಗೆ ನಸುನಗುತ್ತಾ ಮೀಸೆಯ ಮೇಲೆ ಕೈಯ್ಯಾಡಿಸಿಕೊಳ್ಳುತ್ತಾ ಬಂದು ಬಾಲಕ ಬಸವರಾಜನಿಗೆ ಮೆಚ್ಚುಗೆಯ ಮಾತು ಹೇಳಿ ಒಂದು ಚಿನ್ನದ ವರಹವನ್ನು (ಅಶರಫಿ) ಬಹುಮಾನವಾಗಿ ನೀಡಿದನು.

ಪ್ರಥಮ ಮುಂಬೈ ಪ್ರವಾಸ, ಮೊದಲ ಧ್ವನಿಮುದ್ರಣ

೧೯೩೩ರಲ್ಲಿ ಮುಂಬೈಯ ಎಚ್.ಎಂ.ವಿ. ಕಂಪನಿಯಿಂದ ಪಂಚಾಕ್ಷರಿ ಗವಾಯಿಗಳಿಗೆ ಧ್ವನಿ ಮುದ್ರಣಕ್ಕೆ ಆಮಂತ್ರಣ ಬಂದಿತು. ಬಸವರಾಜರನ್ನು ಹಾಗೂ ಪುಟ್ಟರಾಜ ಗವಾಯಿಗಳನ್ನು ಕರೆದುಕೊಂಡು ಮುಂಬೈಗೆ ಹೋದರು. ಅಲ್ಲಿ ಚೌಪಾಟಿಯಲ್ಲಿರುವ ಬಾಬುನಾಥ ಛತ್ರದಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಆವಾಗಿನ ಧ್ವನಿ ಮುದ್ರಣದ ಪದ್ಧತಿಯೇ ಬೇರೆಯಾಗಿತ್ತು. ಮೊದಲು ಒಂದು ತಿಂಗಳವರೆಗೂ ಹಾಡುಗಳನ್ನು ಪ್ರಾಕ್ಟೀಸ್ ಮಾಡಬೇಕಾಗಿತ್ತು. ಅನಂತರ ಅಂತಿಮವಾಗಿ ಧ್ವನಿ ಮುದ್ರಣವನ್ನು ಮಾಡಿಕೊಳ್ಳಲಾಗುತ್ತಿತ್ತು. ಎಚ್.ಎಂ.ವಿ. ಕಂಪನಿಯವರು ಹಿಂದಿ ಚೀಜ್‌ಗಳನ್ನು ಹಾಡಲು ಹೇಳಿದಾಗ ಪಂಚಾಕ್ಷರಿ ಗವಾಯಿಗಳು ಕನ್ನಡದ ಚೀಜ್‌ಗಳನ್ನು ಹಾಡುತ್ತೇನೆ ಎಂದರು. ಕಂಪನಿಯವರು ಗಾಬರಿಯಾಗಿ ಅದು ಸಾಧ್ಯವಿಲ್ಲ ಎಂದಾಗ ಗವಾಯಿಗಳು ಪಟ್ಟು ಬಿಡದೆ ಕನ್ನಡ ಚೀಜ್‌ಗಳನ್ನು ಹಾಡಲು ಅವಕಾಶವಿಲ್ಲದಿದ್ದರೆ ಧ್ವನಿ ಮುದ್ರಣವೇ ಬೇಡ ಎಂದು ಹೇಳಿಬಿಟ್ಟರು. ಕೊನೆಗೆ ಎಚ್.ಎಂ.ವಿ.ಯವರು ಮಣಿದು ಒಪ್ಪಿಗೆ ನೀಡಿದರು. ಒಂದು ತಿಂಗಳ ಕಾಲ ಪ್ರಾಕ್ಟೀಸ್ ನಡೆಯಿತು. ಆ ಅವಧಿಯಲ್ಲಿ ಮುಂಬೈದಲ್ಲಿದ್ದ ಅನೇಕ ಕನ್ನಡಿಗರು ಗವಾಯಿಗಳಿಗೆ ಊಟ, ಪೂಜೆಯ ವ್ಯವಸ್ಥೆಯನ್ನು ಮಾಡುತ್ತಿದ್ದರು. ಬಸವರಾಜರನ್ನು ತಮ್ಮ ಮನೆಗೆ ಊಟಕ್ಕೆ ಕರೆದೊಯ್ಯುತ್ತಿದ್ದರು. ಹೀಗಾಗಿ ಪ್ರಥಮ ಮುಂಬೈ ಪ್ರವಾಸದಲ್ಲಿಯೇ ಬಸವರಾಜರಿಗೆ ಮುಂಬೈ ಪರಿಚಿತ ಊರಾಯಿತು.

ಮುಂಬೈಯಲ್ಲಿ ಕೂಡಾ ತಮ್ಮ ಹುಡುಗಾಟವನ್ನು ಪ್ರದರ್ಶಿಸಿಯೇ ಬಿಟ್ಟರು. ಎಚ್.ಎಂ.ವಿ. ಕಂಪನಿಯಲ್ಲಿ ಬಸವರಾಜರ ರಿಕಾರ್ಡಿಂಗ್‌ಗೆ ಎಲ್ಲಾ ವ್ಯವಸ್ಥೆ ಆಗಿದೆ. ಆದರೆ ಬಸವರಾಜರೇ



ಇಲ್ಲ, ಎಲ್ಲರೂ ಹುಡುಕುತ್ತಿದ್ದಾರೆ. ರಿಕಾರ್ಡಿಂಗ್ ಸ್ಟುಡಿಯೋ ಮೊದಲನೆ ಅಂತಸ್ತಿನಲ್ಲಿದ್ದರೆ ಇವರು ಮೂರನೇ ಮಹಡಿಯಲ್ಲಿ ಹೋಗಿ ನಿಂತಿದ್ದಾರೆ. ಅನಂತರ ಯಾರೋ ಹೋಗಿ ಕರೆದುಕೊಂಡು ಬಂದು ರಿಕಾರ್ಡಿಂಗ್‌ಗೆ ಕುಳ್ಳಿರಿಸಿದರಂತೆ.

ಪಂಚಾಕ್ಷರಿ ಗವಾಯಿಗಳು ರಾಗ ಖಮಾಜದಲ್ಲಿ "ನೋಡಲಾರದೇ ದೇವಾ" ಮತ್ತು ರಾಗ-ಪಟದೀಪ್‌ದಲ್ಲಿ "ಮಾಡಲಿಲ್ಲವೇ ತಪವ" ಎಂಬ ನಿಜಗುಣ ಶಿವಯೋಗಿಗಳ ಕೃತಿಗಳನ್ನು ಹಿಂದುಸ್ತಾನಿ ಪದ್ಧತಿಯಲ್ಲಿ ಹಾಡಿದರು. ನಂತರ ಕರ್ನಾಟಕ ಶೈಲಿಯ ರಾಗದಲ್ಲಿ ತ್ಯಾಗರಾಜರ "ಯೋಚನ ಕಮಲಲೋಚನ" ಕೃತಿ ಮತ್ತು "ತ್ಯಾಗರಾಜಾಯ ನಮೋಸ್ತುತೇ" ಕೃತಿಗಳನ್ನು ರೆಕಾರ್ಡಿಂಗ್ ಹಾಡಿದರು. ಪುಟ್ಟರಾಜ ಗವಾಯಿಗಳು ದೇಸಕಾರ್ ರಾಗದಲ್ಲಿ ಘನ ಮಠಾರ್ಯರ "ಧ್ಯಾನವ ಮಾಡು ನಿಜಗುರು" ಮತ್ತು ಜೀವನಪುರಿ ರಾಗದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ "ಮಗನ ತೂಗಿರೋ" ಕೃತಿಗಳನ್ನು ಹಾಡಿದರೆ ರಾಜಗುರುಗಳು ದೇಸಕಾರ್ ರಾಗದಲ್ಲಿ "ಹಾನಗಲ್ ಶ್ರೀ ಕುಮಾರದೇವಾ" ಮತ್ತು ಖಮಾಜ ರಾಗದಲ್ಲಿ "ಶ್ರೀ ಕುಮಾರದೇವಾ" ಎಂಬ ಶ್ರೀ ಕುಮಾರಸ್ವಾಮಿಗಳ ಮೇಲಿನ ಎರಡು ಭಕ್ತಿಗೀತೆಗಳನ್ನು ಹಾಡಿದರು. ಆವಾಗ ಬಸವರಾಜರಿಗೆ ಕೇವಲ ೧೪ ವರ್ಷ ಮಾತ್ರ.

ಈ ಸಮಯದಲ್ಲಿ ಗಣೇಶಚೌತಿ ಬಂದಿತ್ತು. ಅನೇಕ ಕಡೆ ಸಂಗೀತ ಕಾರ್ಯಕ್ರಮಗಳನ್ನು ನೀಡುವ ಅವಕಾಶ ದೊರೆಯಿತು. ಮುಂಬೈ, ಪುಣೆ, ಕೊಲ್ಲಾಪುರ್, ಮಿರಜ್, ಬೆಳಗಾವಿಗಳಲ್ಲಿ ಟಿಕೇಟ್ ಇಟ್ಟು ಜಲಸಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಹೊಸಪೇಟೆಯ ರಾಮಸಾಗರದಲ್ಲಿದ್ದ ಕ್ಯಾಂಪ್‌ಗೆ ಮರಳಿ ಸೇರಿದರು.

ಅಬ್ದುಲ್ ಕರೀಂಖಾನ್‌ರಿಂದ ಪ್ರಶಂಸೆ

೧೯೩೬ರಲ್ಲಿ ಗಜೇಂದ್ರಗಡದಲ್ಲಿ ಗವಾಯಿಗಳ ವಾಸ್ತವ್ಯವಿತ್ತು. ಅಲ್ಲಿನ ಸಂಸ್ಥಾನಿಕರಾಗಿದ್ದ ಘೋರ್ಪಡೆಯವರ ಮಗನ ಮದುವೆ ವೈಭವದಿಂದ ನಡೆಯಿತು. ಮದುಮಗಳ ಕಡೆಯವರು ಕೊಲ್ಲಾಪುರದವರಾಗಿದ್ದರು. ಅವರು ತಮ್ಮೊಂದಿಗೆ ಹಿರಿಯಗಾಯಕರಾಗಿದ್ದ ಉಸ್ತಾದ್ ಅಬ್ದುಲ್ ಕರೀಮ್‌ಖಾನ್‌ರನ್ನು ಕರೆದುಕೊಂಡು ಬಂದಿದ್ದರು. ಅವರ ಕಾರ್ಯಕ್ರಮವಾದ ಅನಂತರ ಮರುದಿನ ಪಂಚಾಕ್ಷರಿ ಗವಾಯಿಗಳ ಮತ್ತು ಶಿಷ್ಯರ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಗವಾಯಿಗಳು ವಾಡಿಕೆಯಂತೆ ಬಸವರಾಜರನ್ನು ಮೊದಲಿಗೆ ಹಾಡಿಸಿದರು. ಇವರ ಹಾಡನ್ನು ಕೇಳಿ ಅಬ್ದುಲ್ ಕರೀಮ್‌ಖಾನ್‌ರು ತುಂಬಾ ಸಂತಸಗೊಂಡು ಇವರಿದ್ದಲ್ಲಿಗೆ ಬಂದು ಬೆನ್ನು ಚಪ್ಪರಿಸಿ "ವ್ಹಾ ಬೇಟಾ ಬಹುತ್ ಅಚ್ಛಾ ಗಾತೇ ಹೋಂ" ಎಂದು ಪ್ರಶಂಸೆ ಮಾಡಿದರು.



ಪಂ. ನೀಲಕಂಠ ಬುವಾರಿಂದ ಚೀಜ್ ಸಂಗ್ರಹ

ಪಂಚಾಕ್ಷರಿ ಗವಾಯಿಗಳು ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಡುವುದರ ಜೊತೆಗೆ ತಾವು ಕೂಡಾ ಅನೇಕ ವಿದ್ವಾಂಸರುಗಳಿಂದ, ಉಸ್ತಾದರಿಂದ ಹೆಚ್ಚಿನ ಸಂಗೀತಾಭ್ಯಾಸವನ್ನು ಮಾಡುತ್ತಿದ್ದರು. ಅವರ ಜ್ಞಾನದಾಹ ಎಷ್ಟಿತ್ತೆಂದರೆ ಆಗಿನ ಕಾಲದಲ್ಲಿ ತಿಂಗಳಿಗೆ ನೂರಾರು ರೂಪಾಯಿಗಳನ್ನು ಕೊಟ್ಟು ತಮ್ಮ ಸಂಚಾರವಿರುವಲ್ಲಿ ದೊಡ್ಡ ಸಂಗೀತಗಾರರನ್ನು ಕರೆಸಿಕೊಂಡು ಅವರಿಂದ ವಿದ್ಯೆಯನ್ನು ಪಡೆಯುತ್ತಿದ್ದರು. ಕಿರಾಣಾ ಘರಾಣೆಯ ಗಾಯಕರಾಗಿದ್ದ ಉಸ್ತಾದ್ ಅಬ್ದುಲ್ ವಹೀದಖಾನ ಸಾಹೇಬರು ಲಾಹೋರಿನಿಂದ ಬಂದು ೬ ತಿಂಗಳುಗಟ್ಟಲೇ ಇದ್ದು ಗವಾಯಿಗಳಿಗೆ ಸಂಗೀತ ಪಾಠವನ್ನು ಹೇಳಿ ಕೊಡುತ್ತಿದ್ದರು. ಹೀಗೆ ಹಲವು ವರ್ಷಗಳ ಕಾಲ ಸಂಗೀತಪಾಠ ನಡೆದಿದೆ. ಗ್ವಾಲಿಯರ್ ಘರಾಣೆಯ ಮೇರು ಗಾಯಕರಾಗಿದ್ದ ಪಂಡಿತ ನೀಲಕಂಠ ಬುವಾ ಮಿರಜಕರ ಅವರು ಕೂಡಾ ಆಗಾಗ ಬಂದು ಗವಾಯಿಗಳಿಗೆ ಸಂಗೀತ ಹೇಳಿಕೊಡುತ್ತಿದ್ದರು. ನೀಲಕಂಠ ಬುವಾ ಅವರು ಮೂಲತಃ ಗದಗ ಜಿಲ್ಲೆಯ ಹೊಳೆ ಆಲೂರಿನವರು. ಅವರಿಗೆ ನೀಲಕಂಠ ಬುವಾ ಆಲೂರಮಠ ಎಂದು ಕರೆಯುತ್ತಿದ್ದರು. ಅವರು ಬಹು ವರ್ಷಗಳಿಂದ ಮಿರಜನಲ್ಲಿ ನೆಲೆಸಿದ್ದರಿಂದ ಮಿರಜಕರ ಎಂದು ಪ್ರಸಿದ್ಧರಾದವರು. ಅವರ ಹತ್ತಿರ ಚೀಜ್‌ಗಳ ಅಪಾರವಾದ ಸಂಗ್ರಹವಿತ್ತು. ಹಿಂದುಸ್ತಾನಿಸಂಗೀತದಲ್ಲಿ ಚೀಜ್ ಎಂದರೆ ರಾಗದ ಸಾಹಿತ್ಯ ಇಲ್ಲವೇ ಕೃತಿ ಅಥವಾ ಗೇಯಭಾಗವೆಂದು ಹೇಳಬಹುದು. ಹಿಂದಿನ ತಲೆಮಾರಿನ ಗವಾಯಿಗಳು ಚೀಜ್‌ಗಳನ್ನು ಸಂಗ್ರಹಿಸಿ ಬರೆದು ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದರಂತೆ. ಬಸವರಾಜರಿಗೆ ಚೀಜ್ ಸಂಗ್ರಹದ ದಾಹ ಎಷ್ಟಿತ್ತೆಂದರೆ ಅವರು ದೊಡ್ಡ ಗಾಯಕರಾದಾಗಲೂ ಕೂಡ ಚೀಜ್‌ಗಳನ್ನು ಪಡೆಯಲು ಸಾಕಷ್ಟು ಹಣವನ್ನು ಖರ್ಚು ಮಾಡಿ ಚೀಜ್‌ಗಳನ್ನು ಪಡೆಯುತ್ತಿದ್ದರು. ಇಲ್ಲವೇ ದೊಡ್ಡ ದೊಡ್ಡ ಉಸ್ತಾದರ ಸೇವೆಯನ್ನು ಮಾಡಿ ಚೀಜ್‌ಗಳನ್ನು ಪಡೆದಿದ್ದು ಉಂಟು.

ಸಾವಿರ ಚೀಜ್‌ಗಳ ಸರದಾರ

ಅವರಿಗೆ ಸಾವಿರಾರು ಚೀಜ್‌ಗಳು ಬಾಯಿಪಾಠ ಬರುತ್ತಿದ್ದವು. ಅದಕ್ಕಾಗಿಯೇ ಅವರನ್ನು "ಸಾವಿರ ಚೀಜ್‌ಗಳ ಸರದಾರ" ಎಂದು ಕರೆಯುತ್ತಿದ್ದರು. ನೀಲಕಂಠ ಬುವಾ ಅವರು ಪಂಚಾಕ್ಷರಿ ಗವಾಯಿಗಳಿಗೆ ಪಾಠವನ್ನು ಹೇಳಿಕೊಡುತ್ತಿರುವ ಸಮಯದಲ್ಲಿ ಶಿಷ್ಯ ವತ್ಸಲರಾಗಿದ್ದ ಗವಾಯಿಗಳು ಬಸವರಾಜರನ್ನು ಕರೆದು "ನೀನು ಕೂಡ ಬಿಡುವಿನ ವೇಳೆಯಲ್ಲಿ ಅವರಿಂದ ಕಲಿತಕೋ, ಅನಂತರ ನನಗೆ ಹೇಳುವೆಯಂತೆ 'ಯಾಕೆಂದರೆ ನೀನು ಬಹಳ ತೇಜ್‌ಇದ್ದಿ ಅದಕ್ಕೆ' ಎಂದು ಹೇಳುತ್ತಿದ್ದುದನ್ನು ಕೇಳಿದಾಗ ಎಂತಹ ಶಿಷ್ಯಪ್ರೇಮ, ಶಿಷ್ಯನಿಗೆ ಹೆಚ್ಚಿನ ವಿದ್ಯೆ ಸಿಗಲಿ ಎನ್ನುವ ಮನಸ್ಸು ಆ ಮಹಾನ್ ಗುರುಗಳಲ್ಲಿತ್ತು ಎಂಬುದು ತಿಳಿಯುತ್ತಿತ್ತು. ನೀಲಕಂಠ ಬುವಾ ಅವರ ಎಲ್ಲಾ ಜವಾಬ್ದಾರಿಯನ್ನು ಬಸವರಾಜರಿಗೆ



ವಹಿಸಲಾಗಿತ್ತು. ಅವರ ಪೂಜೆಗೆ ವ್ಯವಸ್ಥೆಮಾಡುವುದು, ಬಟ್ಟೆಯನ್ನು ಒಗೆದು ಕೊಡುವುದು ಬಸವರಾಜರು ಮಾಡುತ್ತಿದ್ದರು. ನೀಲಕಂಠ ಬುವಾ ಅವರದು ತುಂಬಾ ಗಂಭೀರವಾದ ವ್ಯಕ್ತಿತ್ವ. ಊಟವಾದ ಮೇಲೆ ಯಾರಾದರೂ ಅವರ ಕಾಲನ್ನು ಒತ್ತಬೇಕು, ಹಾಗೆಯೇ ನಿದ್ದೆ ಹೋಗುತ್ತಿದ್ದರು. ಬಸವರಾಜರು ಅವರ ಕಾಲನ್ನು ಒತ್ತುತ್ತಾ ತಾವೂ ಕೂಡ ಅವರ ಕಾಲುಗಳ ಬಳಿಯಲ್ಲಿಯೇ ಮಲಗುತ್ತಿದ್ದರು. ನಿದ್ದೆ ಮುಗಿದ ಮೇಲೆ ಬುವಾ ಅವರು ಬಾಲಕ ಬಸವರಾಜನ ಸೇವೆಗೆ ಮೆಚ್ಚಿಕೊಂಡು ಅವನ ಚುರುಕುತನವನ್ನು ಕಂಡು ಗ್ವಾಲಿಯರ್ ಘರಾಣೆಯ ಅತ್ಯುತ್ತಮವಾದ ನೂರಾರು ಚೀಜ್‌ಗಳನ್ನು ಬಸವರಾಜರಿಗೆ ಕಲಿಸಿಕೊಟ್ಟರು.

ತುಂಟ ವಿದ್ಯಾರ್ಥಿ

ಗವಾಯಿಗಳ ಸಂಗೀತ ಶಾಲೆಯಲ್ಲಿ ಕಿಡಿಗೇಡಿ ವಿದ್ಯಾರ್ಥಿ ಎಂದರೆ ಬಸವರಾಜರೆ. ಏನಾದರೂ ಒಂದು ಕಿತಾಪತಿ ಮಾಡಿ ಬಿಡುತ್ತಿದ್ದರು. ಗವಾಯಿಗಳ ಬಟ್ಟೆಯನ್ನು ಒಗೆಯಲಿಕ್ಕೆ ಹಳ್ಳಕ್ಕೆ ಹೋದರೆ ತಂಬಿಗೆಯಲ್ಲಿ ಮೀನುಗಳನ್ನು ತುಂಬಿಕೊಂಡು ಬಂದು ಮಡಿವಂತರಾದ ಗುರುಗಳಿಂದ ಬೈಯ್ಯಿಸಿಕೊಂಡಿದ್ದರು. ನಿತ್ಯವು ತಪ್ಪದೇ ಸೂರ್ಯ ನಮಸ್ಕಾರ ಯೋಗಾಸನಗಳನ್ನು ಮಾಡುತ್ತಿದ್ದರು. ಕುಸ್ತಿಯನ್ನು ಸಹ ಆಡುತ್ತಿದ್ದರು. ಕುಸ್ತಿಯಲ್ಲಿ ಅವರನ್ನು ಮೀರಿಸುವವರು ಆಶ್ರಮದಲ್ಲಿಯೇ ಯಾರು ಇರಲಿಲ್ಲ. ಉತ್ತಮ ಈಜುಗಾರರೂ ಹೌದು. ಊಟದ ವಿಷಯ ಬಂದಾಗ ಅದರಲ್ಲೂ ಎತ್ತಿದ ಕೈ, ಒಮ್ಮೆ ದಾವಣಗೇರಿಯಲ್ಲಿ ೧೦ ಹೋಳಿಗೆ ೧ ಸೇರು ತುಪ್ಪವನ್ನು ತಿಂದು ಗುರುಗಳಿಂದ ೧೦ ರೂ. ಬಹುಮಾನ ಪಡೆದಿದ್ದರು. ಆಶ್ರಮದಲ್ಲಿ ಜಿದ್ದಿಗೆ ಬಿದ್ದು ೬೦ ಉದ್ದಿನವಡೆಗಳನ್ನುತಿಂದು ಪಂದ್ಯ ಗೆದ್ದಿದ್ದರು. ಎಷ್ಟೇ ಊಟ ಮಾಡಿದರೂ ಅದನ್ನು ಕರಗಿಸಿಕೊಳ್ಳುವ ಸಾಮರ್ಥ್ಯ ಅವರಲ್ಲಿತ್ತು. ೨-೩ ಗಂಟೆ ಹಾಡಿದರೆ ಸಾಕು, ಮತ್ತೆ ಅವರಿಗೆ ಹಸಿವು ಆಗುತ್ತಿತ್ತು.

ಅನುಕರಣಾ ಶಕ್ತಿ

ಗವಾಯಿಗಳು ತಮ್ಮ ಸಂಗೀತ ಶಾಲೆಗೆ ಗ್ರಾಮೋಫೋನ ರೆಕಾರ್ಡ್ಸ್‌ಗಳನ್ನು ತರಿಸುತ್ತಿದ್ದರು. ಆವಾಗ ೭೮ ಆರ್.ಪಿ.ಎಂ. ಮಣ್ಣಿನ ಪ್ಲೇಟುಗಳಲ್ಲಿ ಧ್ವನಿಮುದ್ರಿಕೆಗಳು ಬರುತ್ತಿದ್ದವು. ಉಸ್ತಾದ್ ಅಬ್ದುಲ್ ಕರೀಮ್‌ಖಾನ್, ಫಯ್ಯಾಜ್‌ಖಾನ್, ಅಖ್ತರಿಬಾಯಿ, ನಿಸಾರ್ ಹುಸೇನಖಾನ್, ಕೇಸರಬಾಯಿ, ಬಡೇಗುಲಾಮ ಅಲೀಖಾನ್ ಮುಂತಾದ ದೊಡ್ಡ ದೊಡ್ಡ ಸಂಗೀತಗಾರರ ಧ್ವನಿಮುದ್ರಿಕೆಗಳು ಶಾಲೆಯಲ್ಲಿದ್ದವು. ಅವುಗಳ ಉಸ್ತುವಾರಿ ಬಸವರಾಜರದ್ದು. ಯಾವುದೇ ರಿಕಾರ್ಡಿಂಗ್ ಕೇಳಿದ ತಕ್ಷಣ ಅದರಂತೆಯೇ ಹಾಡಿ ಬಿಡುತ್ತಿದ್ದರು. ಯಾವುದೇ ಘರಾಣೆಯ ಸಂಗೀತವಿದ್ದರೂ ಅವರ ಧ್ವನಿಯಲ್ಲಿ ಸರಾಗವಾಗಿ ಮೂಡಿ ಬರುತ್ತಿತ್ತು. ಅಷ್ಟೊಂದು ಅನುಕರಣಾ ಶಕ್ತಿ ಅವರಲ್ಲಿತ್ತು.



ಇಷ್ಟಲಿಂಗ ಬಾವಿಯಲ್ಲಿ

ಒಮ್ಮೆ ನಿಡಗುಂದಿ ಕ್ಯಾಂಪಿನಲ್ಲಿ ಬಸವರಾಜರು ಬಾವಿಯಲ್ಲಿ ಈಜುತ್ತಿದ್ದಾಗ ಕೊರಳೊಳಗಿನ ಇಷ್ಟಲಿಂಗ ಹರಿದು ಬಿದ್ದು ನೀರಲ್ಲಿ ಮುಳುಗಿತು. ಅನೇಕರು ನೀರಲ್ಲಿ ಮುಳುಗಿ ಹುಡುಕಿದರೂ ಅದು ದೊರೆಯಲಿಲ್ಲ. ಈ ಸುದ್ದಿ ಗವಾಯಿಗಳಿಗೆ ಗೊತ್ತಾಯಿತು. ಅವರು ಕೂಡ ಅಲ್ಲಿಗೆ ಬಂದರು ಕ್ಷಣ ಶಿವಧ್ಯಾನ ಮಾಡಿ ಮುರುಡಯ್ಯನನ್ನು (ಮೃಡದೇವಾ) ಕರೆದು 'ನೀನೂ ನೀರಲ್ಲಿ ಮುಳುಗು ನಿನ್ನ ಕೈಗೆ ಇಷ್ಟಲಿಂಗ ಸಿಗುವುದು' ಎಂದು ಅಪ್ಪಣೆ ಮಾಡಿದರು. ಅದರಂತೆ ಮೃಡದೇವನು ಗುರುಗಳಿಗೆ ನಮಸ್ಕರಿಸಿ ಬಾವಿಯಲ್ಲಿ ಮುಳುಗಿ ಮೇಲೆ ಬಂದಾಗ ಅವನ ಕೈಯಲ್ಲಿ ಇಷ್ಟಲಿಂಗವಿತ್ತು. ಎಲ್ಲರಿಗೂ ಆಶ್ಚರ್ಯ. ಏಕೆಂದರೆ ಎಷ್ಟು ಹುಡುಕಿದರೂ ಇಷ್ಟಲಿಂಗ ದೊರೆತಿರಲಿಲ್ಲ. ಮೃಡದೇವನು ಸಹ ೨-೩ ಸಲ ಮುಳುಗಿ ಹುಡುಕಿದ್ದರೂ ಸಹ ಅದು ದೊರೆತಿರಲಿಲ್ಲ. ಈಗ ದೊರೆತಿರುವುದನ್ನು ಕಂಡು ಅದು ಗುರುಗಳ ಕೃಪೆಯೇ ಎಂದು ಎಲ್ಲರೂ ಭಾವಿಸಿದರು. ಆದರೆ ಗುರುಗಳು ಮಾತ್ರ ಇದು ಪೂಜ್ಯ ಹಾನಗಲ್ ಶ್ರೀಗಳ ಕೃಪೆಯೆಂದು ಹೇಳಿ ಬಸವರಾಜರಿಗೆ ಲಿಂಗವನ್ನು ಕೊಟ್ಟು ಆಶೀರ್ವಾದ ಮಾಡಿದರು. ಈ ಘಟನೆ ಗುರುಶಿಷ್ಯ ಇಬ್ಬರ ನಡುವೆ ಇನ್ನು ಹೆಚ್ಚಿನ ಪ್ರೀತಿಗೆ ಕಾರಣವಾಯಿತು.

ಹಂಪಿ ಉತ್ಸವದಲ್ಲಿ ಗಾಯನ

೧೯೩೬ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಮಹೋತ್ಸವ ಬಸವರಾಜರ ಜೀವನದಲ್ಲಿ ಒಂದು ಮರೆಯಲಾಗದ ಅನುಭವವನ್ನು ತಂದು ಕೊಟ್ಟಿತು. ಅಲ್ಲಿಯವರೆಗೂ ಅನೇಕ ಸಣ್ಣ ಸಮಾರಂಭಗಳಲ್ಲಿ ಹಾಡಿದ್ದ ಅವರಿಗೆ ದೊಡ್ಡದಾದ, ಭವ್ಯವಾದ ಸಮಾರಂಭದಲ್ಲಿ ಹಾಡುವ ಅವಕಾಶ ದೊರೆಯಿತು. ಉತ್ಸವದಲ್ಲಿ ೧೫-೧೬ ಸಾವಿರ ಜನರು ಸೇರಿದ್ದರು. ಅನೇಕ ಗಣ್ಯ ಮಾನ್ಯರ, ಕಲಾವಿದರ ಸಮೂಹ ಅಲ್ಲಿತ್ತು. ದೊಡ್ಡದಾದ ವೇದಿಕೆ ಮೇಲೆ ಕುಳಿತು ನಿರ್ಭಯರಾಗಿ ರಾಗ್-ಭಾಗೇಶ್ರೀ ಹಾಡಲು ಆರಂಭಿಸಿದರು. ತಬಲಾಕ್ಕೆ ಪೂಜ್ಯ ಗುರುಗಳಾದ ಪಂಚಾಕ್ಷರ ಗವಾಯಿಗಳು, ಹಾರ್ಮೋನಿಯಂಗೆ ಪೂಜ್ಯ ಪುಟ್ಟರಾಜ ಗವಾಯಿಗಳು ಕುಳಿತಿದ್ದರು. ನಿರರ್ಗಳವಾಗಿ ಅಮೋಘವಾಗಿ ಭಾಗೇಶ್ರೀಯನ್ನು ಹಾಡಿ "ನೋಡಲಾಗದೆ ದೇವಾ" ಎಂಬ ನಿಜಗುಣರ ಪದವನ್ನು ಹಾಡಿ ಮುಗಿಸಿದಾಗ ಜನರ ಕರತಾಡನ ಮುಗಿಲು ಮುಟ್ಟಿತ್ತು. ಮೈಸೂರು ಆಸ್ಥಾನದ ವಿದ್ವಾನ್ ಆಗಿದ್ದ ಚಿಕ್ಕರಾಮರಾಯ ಎಂಬುವವರು ವೇದಿಕೆಯ ಮೇಲೆ ಬಂದು ಬಾಲಕನ ಬೆನ್ನು ಚಪ್ಪರಿಸಿ ಕೊಂಡಾಡಿದರು. ಬಂಗಾರದ ಪದಕ ಮತ್ತು ಹಣವನ್ನು ನೀಡಿದರು. ಗುರುಗಳಿಗೆ "ಎಂತಹ ಶಿಷ್ಯರತ್ನವನ್ನು ತಯಾರು ಮಾಡಿದ್ದೀರಿ" ಎಂದು ಹೇಳಿದಾಗ ಗುರುಶಿಷ್ಯರಿಬ್ಬರ ಸಂತೋಷಕ್ಕೆ ಮಿತಿಯೇ ಇರಲಿಲ್ಲ.



ಪ್ರಥಮ ರೇಡಿಯೋ ಕಾರ್ಯಕ್ರಮ

೧೯೩೮ರ ಸೆಪ್ಟೆಂಬರ್ ತಿಂಗಳಿನಲ್ಲಿ ಬಸವರಾಜರಿಗೆ ಮುಂಬೈ ಆಕಾಶವಾಣಿಯಿಂದ ಕಾರ್ಯಕ್ರಮಕ್ಕಾಗಿ ಆಹ್ವಾನ ಬಂದಿತು. ಆಗಿನ ರೆಕಾರ್ಡಿಂಗ್ ಪದ್ಧತಿ ಎಂದರೆ (ಲೈವ್ ಕಾನ್ಸರ್ಟ್ಸ್) ನಿಗದಿತ ಸಮಯದಲ್ಲಿ ಕಲಾವಿದರು ಹೋಗಿ ಹಾಡುವುದು. ಅದು ನೇರವಾಗಿ ಪ್ರಸಾರವಾಗುತ್ತಿತ್ತು. ಮುಂಜಾನೆ ವೇಳೆಯಲ್ಲಿ ಇದ್ದರೆ ಮುಂಜಾನೆ ಹೋಗಬೇಕು ರಾತ್ರಿ ವೇಳೆ ಇದ್ದಲ್ಲಿ ರಾತ್ರಿ ಹೋಗಿ ಹಾಡಬೇಕಾಗುತ್ತಿತ್ತು. ಬಸವರಾಜರಿಗೆ ೧೫ ನಿಮಿಷಗಳ ೨ ಕಾರ್ಯಕ್ರಮ ಕೊಟ್ಟಿದ್ದರು. ಮುಂಜಾನೆ ರಾಗ್-ಬಿಲಾವಲ್ ರಾತ್ರಿ ಗೌಡ್ ಮಲ್ಹಾರ್ ರಾಗವನ್ನು ಹಾಡಿದರು. ಈ ಕಾರ್ಯಕ್ರಮವನ್ನು ಮೆಚ್ಚಿಕೊಂಡು ಅನೇಕರು ಪತ್ರವನ್ನು ಬರೆದರು. ಸಾಕಷ್ಟು ಪ್ರಸಿದ್ಧಿ ದೊರೆಯಿತು. ಪಂಚಾಕ್ಷರಿ ಗವಾಯಿಗಳಂತೂ ಅಂದು ಇಡೀ ದಿವಸ ರೇಡಿಯೋ ಬಿಟ್ಟು ಸರಿದಿದ್ದೆ ಇಲ್ಲವಂತೆ, ತಮ್ಮ ಶಿಷ್ಯನ ಹಾಡು ಕೇಳಿ ತಾವೇ ಹಾಡಿದಷ್ಟು ಆನಂದ ಪಟ್ಟರು. ರೇಡಿಯೋ ಕಾರ್ಯಕ್ರಮವಾದ ಅನಂತರ ಮುಂಬೈದಲ್ಲಿಯೇ ಮತ್ತೆ ಕಾರ್ಯಕ್ರಮಗಳನ್ನು ಕೊಟ್ಟು ಬಸವರಾಜರು ೩ ತಿಂಗಳ ಅನಂತರ ಮರಳಿ ಗದಗಿನ ಆಶ್ರಮಕ್ಕೆ ಬಂದರು. ದೂರದಿಂದ ಇವರನ್ನು ನೋಡಿದ ಸ್ನೇಹಿತರೊಬ್ಬರು 'ಬಸವರಾಜ ಬಂದ' ಎಂದು ಕೂಗಿದರು. ಸಂಗೀತ ಶಾಲೆಯಲ್ಲಿ ನಡೆಯುತ್ತಿದ್ದ ಸಂಗೀತ ಪಾಠ ಸ್ಥಗಿತಗೊಂಡಿತು. ಏಕೆಂದರೆ ೩ ತಿಂಗಳ ಹಿಂದೆ ಶಾಲೆಯಿಂದ ಹೋಗಿದ್ದ ಬಸವರಾಜರು ಮರಳಿ ಬಂದದ್ದಕ್ಕೆ ಆದ ಸಂತೋಷ. ಎಡಗೈಯಲ್ಲಿ ಒಂದು ವಾಚು, ಕೊರಳಲ್ಲಿ ಒಂದು ಬಂಗಾರದ ಚೈನು, ಸಿಲ್ಕ ಶರ್ಟ ಮೇಲೊಂದು ಕರಿಯ ಶೇರ್ವಾಣಿ ಕೋಟು ಧರಿಸಿ ಛತ್ರಿಹಿಡಿದುಕೊಂಡು ಕೂಲಿಯವನಿಂದ ಹಣ್ಣಿನ ಬುಟ್ಟಿ ಸಾಮಾನುಗಳನ್ನು ಹೊರಿಸಿಕೊಂಡು ಠೀವಿಯಿಂದ ಬಂದ ಬಸವರಾಜರನ್ನು ಕಂಡು ಆಶ್ಚರ್ಯವಾಗದೇ ಇದ್ದೀತೇ. ಬಸವರಾಜ ಬಂದ ಎಂಬ ಕೂಗು ಪಂಚಾಕ್ಷರಿ ಗವಾಯಿಗಳಿಗೂ ಕೇಳಿಸಿತ್ತು. ತಮಗೆ ಕಣ್ಣು ಬಂದಿದ್ದರೆ ಅಷ್ಟು ಸಂತೋಷಪಡುತ್ತಿದ್ದರೋ ಇಲ್ಲವೋ ಆದರೆ ಶಿಷ್ಯ ರೇಡಿಯೋದಲ್ಲಿ ಹಾಡಿ ಬಂದಿದ್ದನೆಂದು ಅವರಿಗಾದ ಸಂತೋಷ ಹೇಳತೀರದು. ಅವರನ್ನು ಕರೆದು ಹತ್ತಿರ ಕೂರಿಸಿಕೊಂಡು ಪ್ರೀತಿಯಿಂದ ತಲೆ ಬೆನ್ನುಗಳ ಮೇಲೆ ಕೈಯಾಡಿಸುತ್ತಾ ಬೆಳಗಿನವರೆಗೂ ಮಾತನಾಡಿದ್ದೇ ಮಾತನಾಡಿದ್ದು.

ಗವಾಯಿಗಳ ಶಿಷ್ಯ ಬಸವರಾಜ ಮುಂಬೈಗೆ ಹೋಗಿ ರೇಡಿಯೋದಲ್ಲಿ ಹಾಡಿ ಬಂದಿದ್ದಾನೆ ಎಂಬ ಸುದ್ದಿ ಊರೆಲ್ಲ ಪ್ರಚಾರವಾಯಿತು. ಇದನ್ನು ತಿಳಿದ ಮಾನ್ವಿ ಸಿದ್ರಾಮಪ್ಪನವರು ಗವಾಯಿಗಳ ಮತ್ತು ಅವರ ಶಿಷ್ಯರ ಕಾರ್ಯಕ್ರಮವನ್ನು ಏರ್ಪಡಿಸಿದರು. ಅನೇಕ ಪ್ರತಿಷ್ಠಿತರು, ಸಂಗೀತ ಪ್ರಿಯರು ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಗರೂಡ ಸದಾಶಿವರಾಯರು ಬಂದಿದ್ದರು. ಬಸವರಾಜರ ಗಾಯನವನ್ನು ಕೇಳಿದ ಅವರು ಎದ್ದು ಬಂದು ಅವರನ್ನು ಗಟ್ಟಿಯಾಗಿ ತಬ್ಬಿಕೊಂಡು ಬಿಟ್ಟರು. ಗವಾಯಿಗಳಿಗೆ "ಎಂತಹ ಗಾನರತ್ನವನ್ನು ತಯಾರು ಮಾಡಿರುವಿರಿ" ಎಂದು ಹೊಗಳಿದರು.



ಗಾನಕೋಕಿಲೆ, ಗಾನ ಸುಧಾಕರ ಬಿರುದು

ಅದೇ ವರ್ಷ ಹುಬ್ಬಳ್ಳಿಯಲ್ಲಿ ವೀರಶೈವ ಮಹಾಸಭೆ ನಡೆಯಿತು. ಅಲ್ಲಿ ಅನೇಕರು ಸಭೆಯಲ್ಲಿ ರಾಜಗುರುಗಳ ಗಾಯನ ಆಗಲೇಬೇಕೆಂದು ಪಟ್ಟು ಹಿಡಿದು ಅವರ ಕಾರ್ಯಕ್ರಮ ಮಾಡಿಸಿ ಅವರಿಗೆ "ಗಾನಕೋಕಿಲೆ" ಎಂಬ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದರು.

ಹೊಂಬಳದಲ್ಲಿ ಊರ ಪ್ರಮುಖರು ಕಲಾಭಿಮಾನಿಗಳು ಸೇರಿ ಬಸವರಾಜರ ಕಾರ್ಯಕ್ರಮ ಮಾಡಿಸಿ ಅವರಿಗೆ ಸನ್ಮಾನ ಮಾಡಿ "ಗಾನ ಸುಧಾಕರ" ಎಂಬ ಬಿರುದನ್ನು ನೀಡಿದರು.

ಬೆಂಗಳೂರು ಮುಕ್ಕಾಂ - ಚೌಡಯ್ಯನವರ ಭೇಟಿ

೧೯೩೯ರಲ್ಲಿ ಗವಾಯಿಗಳ ಮುಕ್ಕಾಂ ಬೆಂಗಳೂರಿನಲ್ಲಿತ್ತು. ಅಲ್ಲಿನ ಹೆಸರಾಂತ ವೈದ್ಯ ಪಂಡಿತ ತಾರಾನಾಥರು ಬಸವರಾಜರ ಗಾಯನಕ್ಕೆ ಮಾರು ಹೋಗಿ ಅನೇಕ ಸಂಗೀತ ಕಚೇರಿಗಳನ್ನು ಮಾಡಿಸಿದರು. ಯುರೋಪಿಯನ್ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಕೂಡ ಕಾರ್ಯಕ್ರಮವಾಯಿತು. ಪ್ರತಿ ಕಾರ್ಯಕ್ರಮಕ್ಕೆ ಪಂಡಿತ ತಾರಾನಾಥರು ಆಗಮಿಸಿ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಿದ್ದರು. ಉತ್ತಮವಾದ ಆಯುರ್ವೇದದ ಲೇಹಗಳನ್ನು ತಂದು ಕೊಟ್ಟು ತಿನ್ನಿಸುತ್ತಿದ್ದರು. ಹೀಗೆ ನಡೆದೊಂದು ಕಾರ್ಯಕ್ರಮಕ್ಕೆ ಖ್ಯಾತ ಪಿಟೀಲು ವಾದಕರಾದ ಪಿಟೀಲು ಚೌಡಯ್ಯನವರು ಆಗಮಿಸಿದಾಗ ಎಲ್ಲರಿಗೂ ಆನಂದ ಆಶ್ಚರ್ಯ. ಚೌಡಯ್ಯನವರು ಬಸವರಾಜರ ಗಾಯನವನ್ನು ಕೇಳಲೆಂದೇ ಬಂದಿದ್ದರು. ಬಸವರಾಜರ ಕಾರ್ಯಕ್ರಮಕ್ಕೆ ಗವಾಯಿಗಳೇ ತಬಲಾ ನುಡಿಸುತ್ತಿದ್ದರು. ಹಾರ್ಮೋನಿಯಂಗೆ ಪಂಡಿತ ಪುಟ್ಟರಾಜ ಗವಾಯಿಗಳಿದ್ದರು. ಸಾಯಂಕಾಲ ಆರಂಭವಾದ ಕಾರ್ಯಕ್ರಮ ಮುಗಿದಾಗ ರಾತ್ರಿ ೯ ಗಂಟೆಯಾಗಿತ್ತು. ಬಸವರಾಜರ ಸುಮಧುರವಾದ ಧ್ವನಿಯಿಂದ ವಿದ್ವತ್ ಪೂರ್ಣವಾದ ಹಾಡುಗಾರಿಕೆ ಕೇಳುಗರನ್ನು ಗಂಧರ್ವಲೋಕಕ್ಕೆ ಕರೆದೊಯ್ದಿತ್ತು. ಚೌಡಯ್ಯನವರು ಬಸವರಾಜರ ಕೈಯನ್ನು ಹಿಡಿದುಕೊಂಡು "ಏನು ಮಾಧುರ್ಯ, ಇಷ್ಟು ಚಿಕ್ಕ ವಯಸ್ಸಿನಲ್ಲಿ ಎಂತಹ ವಿದ್ವತ್ತು, ಎಷ್ಟು ತಯಾರಿ, ನಾನೆಲ್ಲೂ ಕಾಣೆ" ಎಂದು ಮನಃಪೂರ್ವಕವಾಗಿ ಹೊಗಳಿದರು. ದಕ್ಷಿಣಾದಿಯವರು ಹಿಂದೂಸ್ತಾನಿ ಸಂಗೀತವನ್ನು ಮೆಚ್ಚಿಕೊಂಡು ಇಷ್ಟೊಂದು ಹೊಗಳಬೇಕಾದರೆ ಬಸವರಾಜರು ಹೇಗೆ ಹಾಡಿರಬಹುದು ಎಂದು ಕಲ್ಪನೆ ಮಾಡಿಕೊಂಡರೆ ನಿಜಕ್ಕೂ ಎಂಥವರಿಗಾದರೂ ಹೆಮ್ಮೆ ಎನಿಸುತ್ತದೆ.

ಮದುವೆಮನೆಯಲ್ಲಿ ಭೋಜನ

ಇದೇ ಸಮಯದಲ್ಲಿ ಬೆಂಗಳೂರಿನಲ್ಲಿ ನಡೆದ ಒಂದು ಪ್ರಸಂಗವನ್ನು ಬಸವರಾಜರ ಸಹಪಾಠಿ, ಸ್ನೇಹಿತರಾದ ಡಾ|| ಗದಿಗೆಯ್ಯ ಚರಂತಿಮಠ ಅವರು ರೋಚಕವಾಗಿ ಹೇಳುತ್ತಾರೆ.



ಪಂಚಾಕ್ಷರಿ ಗವಾಯಿಗಳ ಸಂಗೀತ ಶಾಲೆಯಲ್ಲಿ ಬಹಳ ಕಟ್ಟುನಿಟ್ಟು ಇತ್ತು. ವಿದ್ಯಾರ್ಥಿಗಳು ಸಿಕ್ಕಲ್ಲಿ ತಿನ್ನುವಂತಿಲ್ಲ. ಚಹಾದ ಅಂಗಡಿಗೆ ಹೋಗುವಂತಿರಲಿಲ್ಲ, ಒಮ್ಮೆ ಅಲ್ಲಿನ ದೊಡ್ಡ ಶ್ರೀಮಂತರ ಮನೆಯಲ್ಲಿ ಲಗ್ನದ ಸಮಾರಂಭವಿತ್ತು. ಪಂಡಿತ ತಾರಾನಾಥರು ಅಲ್ಲಿ ಇವರ ಕಾರ್ಯಕ್ರಮವನ್ನು ಗೊತ್ತುಪಡಿಸಿದ್ದರು. ಮೊದಲಿಗೆ ಬಸವರಾಜರ ಗಾಯನ, ಕೊನೆಗೆ ಗುರುಗಳ ಗಾಯನವಿತ್ತು. ಬಸವರಾಜರ ಗಾಯನ ಮುಗಿಯಿತು. ಉಳಿದವರ ಗಾಯನ ಆರಂಭವಾಯಿತು. ಬಸವರಾಜರು ಮತ್ತು ಅವರ ಸ್ನೇಹಿತರು ಸಂಗೀತ ಕೇಳುತ್ತ ಎದುರಿಗೆ ಕುಳಿತಿದ್ದರು. ಆಗ ಆ ಶ್ರೀಮಂತರು ಬಸವರಾಜರನ್ನು ಪ್ರೀತಿಯಿಂದ ಮಾತನಾಡಿಸಿ ಭೋಜನಕ್ಕೆ ಕರೆದರು. ಇವರು ನಿರಾಕರಿಸಲಾಗದೆ ಒಪ್ಪಿಕೊಂಡು ಊಟಕ್ಕೆ ಹೋದರು. ಅವರ ಸಂಗಡ ಸ್ನೇಹಿತರು ಕೂಡ ಹೋದರು. ಒಳ್ಳೆಯ ಮೃಷ್ಟಾನ್ನ ಭೋಜನವಾಯಿತು. ಗುರುಗಳ ಸಂಗೀತ ಮುಗಿಯುವುದರೊಳಗಾಗಿ ಎಲ್ಲರೂ ಮತ್ತೆ ಎದುರಿಗೆ ಬಂದು ಕುಳಿತರು. ಕಾರ್ಯಕ್ರಮ ಮುಗಿದ ನಂತರ ಮರಳಿ ತಮ್ಮ ಮುಕ್ಕಾಂ ಇದ್ದಲ್ಲಿ ಹೋದರು. ಹೋದ ನಂತರ ಇವರುಗಳನ್ನು ಊಟಕ್ಕೆ ಕರೆದಾಗ ಹಸಿವೆ ಇಲ್ಲ ಎಂದು ಹೇಳಿ ಮಲಗಿಕೊಂಡರು. ಮರುದಿನ ಒಬ್ಬ ಹುಡುಗನಿಂದ ವಿಷಯವನ್ನು ತಿಳಿದುಕೊಂಡ ಕಾರಕೂನರು ಗುರುಗಳಿಗೆ ಹುಡುಗರು ಆ ಮದುವೆ ಮನೆಯಲ್ಲಿಯೇ ಊಟ ಮಾಡಿ ಬಂದಿದ್ದರು ಎಂದು ತಿಳಿಸಿಬಿಟ್ಟರು. ಮಡಿವಂತರಾದ ಗುರುಗಳು ಕೋಪಗೊಂಡು ಹುಡುಗರನ್ನು ಕ್ಯಾಂಪಿನಿಂದ ಹೊರಗೆ ಹಾಕಲು ಆಜ್ಞೆ ಮಾಡಿದರು. ಆಗ ಹುಡುಗರೆಲ್ಲ ಸೇರಿ ಏನು ಮಾಡುವುದು ಎಂದು ಚಿಂತಿಸಿ ಒಂದು ಉಪಾಯವನ್ನು ಮಾಡಿದರು. ಗುರುಗಳು ಹೇಗಿದ್ದರೂ ಬಸವರಾಜರಿಗೆ ಏನೂ ಅನ್ನುವುದಿಲ್ಲ, ಅವರ ಮೇಲೆ ಹಾಕಿಬಿಡೋಣ ಎಂದುಕೊಂಡು ಗುರುಗಳ ಹತ್ತಿರ ಹೋಗಿ ನಾವು ಬೇಡವೆಂದರೂ ಬಸವರಾಜರು ನಮ್ಮನ್ನು ಕರೆದುಕೊಂಡು ಹೋಗಿ ಊಟ ಮಾಡಿಸಿದರು ಎಂದು ಅವರ ಮೇಲೆ ಹಾಕಿದರು. ಗವಾಯಿಗಳು ಬಸವರಾಜರನ್ನು ಕರೆದು ವಿಚಾರಿಸಿದಾಗ ಚಾಣಾಕ್ಷರಾದ ಅವರು ಗುರುಗಳಿಗೆ "ನಾವು ಊಟ ಮಾಡಲು ನಿರಾಕರಿಸಿದ್ದೆವು. ಆದರೆ ಆ ಶ್ರೀಮಂತರು ನಿಮಗಾಗಿ ಬೇರೆ ವ್ಯವಸ್ಥೆಮಾಡಿದ್ದೇವೆ. ವೀರಶೈವರಿಂದಲೇ ಅಡಿಗೆ ಮಾಡಿಸಿದ್ದೇವೆ. ದಯವಿಟ್ಟು ಊಟ ಮಾಡಿರಿ ಎಂದು ಹೇಳಿದ್ದರಿಂದ ನಾನು ಎಲ್ಲರನ್ನು ಕರೆದುಕೊಂಡು ಊಟ ಮಾಡಿದೆ. ಇಲ್ಲದಿದ್ದರೆ ನಾವು ಊಟ ಮಾಡುತ್ತಿರಲಿಲ್ಲ" ಎಂದು ಹೇಳಿದರು. ಆಗ ಗುರುಗಳ ಕೋಪ ಕರಗಿಹೋಗಿ "ಹಾಗಿದ್ದರೆ ಒಳ್ಳೆಯದು, ಎಲ್ಲರೂ ಇಲ್ಲೇ ಇರಲಿ" ಎಂದು ಬಿಟ್ಟರು. ಬಸವರಾಜರ ಮೇಲೆ ಅವರಿಗಿದ್ದ ಅಕ್ಕರೆ ಮತ್ತು ಸಂದರ್ಭಕ್ಕೆ ತಕ್ಕಂತೆ ಮಾತನಾಡುವ ಕಲೆಯನ್ನು ಹೊಂದಿದ್ದ ಬಸರಾಜರಿಂದ ನಾವೆಲ್ಲರೂ ಪಾರಾಗಿದ್ದೆವು ಎಂದು ಆ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾರೆ.



ಮತ್ತೆ ನಾಟಕಗಳಲ್ಲಿ ಪಾತ್ರ

ಗವಾಯಿಗಳ ಕ್ಯಾಂಪಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಅವರೆಲ್ಲರನ್ನೂ ಸಾಕಿ ಸಲಹುವುದಕ್ಕೆ ಖರ್ಚನ್ನು ನಿಭಾಯಿಸುವುದಕ್ಕೆ ಗವಾಯಿಗಳು ಸಾಲ ಮಾಡುವ ಪ್ರಸಂಗ ಬಂತು. ಸಾಲವನ್ನು ತುಂಬಲು ಟಿಕೇಟುಗಳನ್ನು ಇಟ್ಟು ನಾಟಕಗಳನ್ನು ಆಡುವುದು ಎಂದು ತೀರ್ಮಾನಿಸಲಾಯಿತು. ಅದಕ್ಕಾಗಿ ೧೯೪೦ರಲ್ಲಿ ಕುಮಾರೇಶ್ವರ ಕೃಪಾ ಪೋಷಿತ ನಾಟಕ ಸಂಘ ಪ್ರಾರಂಭವಾಯಿತು. ನಾಟಕ ಸಂಘ ಉತ್ತರ ಕರ್ನಾಟಕದ ಎಲ್ಲೆಡೆಗೆ ಸುತ್ತಾಡಿ ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳನ್ನು ಪ್ರದರ್ಶಿಸಿತು. ಕೆಲ ನಾಟಕಗಳಲ್ಲಿ ಬಸವರಾಜರದು ಪ್ರಧಾನ ಪಾತ್ರ. ನರಗುಂದದಲ್ಲಿ ಸಿದ್ರಾಮೇಶ್ವರ ನಾಟಕ. ಅದರಲ್ಲಿ ಸಿದ್ರಾಮೇಶ್ವರನ ಪಾತ್ರವನ್ನು ವಹಿಸುವ ಮೂಲಕ ನೋಡುಗರ ಗಮನ ಸೆಳೆದರು. ನಾಟಕಗಳು ಹೆಚ್ಚಾಗಿ ಸಂಗೀತ ಪ್ರಧಾನ ನಾಟಕಗಳೇ ಆಗಿದ್ದವು. ಸಿದ್ರಾಮೇಶ್ವರ ನಾಟಕದಲ್ಲಿ ಅಭಿನಯಿಸುವಾಗ ನಡೆದ ಒಂದು ಪ್ರಸಂಗವನ್ನು ಆ ಕಾಲದಲ್ಲಿ ಅವರೊಂದಿಗೆ ಇದ್ದ ಖ್ಯಾತ ಗಾಯಕ ಪಂಡಿತ ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿಯವರು ನೆನಪಿಸಿಕೊಳ್ಳುತ್ತಾ ಹೇಳುತ್ತಾರೆ. ಸಿದ್ರಾಮೇಶ್ವರ ಪಾತ್ರ ವಹಿಸಿದ್ದ ಬಸವರಾಜರು ಭಾವಪೂರ್ಣವಾಗಿ ಹಾಡುತ್ತಾ ವೇದಿಕೆಯ ಮೇಲೆ ಬರುವ ಪ್ರಸಂಗ. ಅವರ ಮುಖದ ಮೇಲೆ ಅಂಟಿಸಿದ್ದ ಗಡ್ಡ ಅವರ ಬಾಯೊಳಗೆ ಹೋಗತೊಡಗಿತು. ಹಾಡುವ ಹುಮ್ಮಸ್ಸಿನಲ್ಲಿದ್ದ ಬಸವರಾಜರು ಗಡ್ಡವನ್ನು ಕಿತ್ತೆಸೆದು ಹಾಡ ತೊಡಗಿದರು. ನಾಟಕ ನೋಡಲು ಬಂದವರಿಗೆ ಇದಾವುದರ ಕಡೆಗೆ ಲಕ್ಷ್ಯವಿರಲಿಲ್ಲ. ಅವರೆಲ್ಲರೂ ಬಸವರಾಜರ ಹಾಡುಗಳನ್ನು ಕೇಳುವುದರಲ್ಲಿಯೇ ತಲ್ಲೀನರಾಗಿದ್ದರು. ಹಾಡು ಮುಗಿದ ಕೂಡಲೇ "ಒನ್ಸ್‌ಮೋರ್" ಎಂದು ಕೂಗಿ ಮತ್ತೆ ಹಾಡುವಂತೆ ಒತ್ತಾಯಿಸ ತೊಡಗಿದರಂತೆ. ಆ ನಾಟಕದ ಹಾಡು ಅಷ್ಟೊಂದು ಜನರಿಗೆ ಹಿಡಿಸಿತ್ತು.

ಇತರ ನಾಟಕಗಳಾದ ರಾಜಶೇಖರ ವಿಳಾಸದಲ್ಲಿ ಶಿವಾಚಾರ್ಯರ ಪಾತ್ರ, ಸತಿ ಸುಕನ್ಯಾದಲ್ಲಿ ಬೃಹಸ್ಪತಿಯ ಪಾತ್ರ, ಹೇಮರಡ್ಡಿ ಮಲ್ಲಮ್ಮನ ನಾಟಕದಲ್ಲಿ ಮಲ್ಲಿಕಾರ್ಜುನನ ಪಾತ್ರವನ್ನು ಬಸವರಾಜರು ವಹಿಸುತ್ತಿದ್ದರು. ನಿತ್ಯ ನಾಟಕಗಳನ್ನು ಆಡುವುದರಿಂದ ಅದರ ಪರಿಣಾಮ ಅವರ ಧ್ವನಿಯ ಮೇಲಾಗ ತೊಡಗಿತು. ಕೆಲವು ಹಿತೈಷಿಗಳು ನಾಟಕಗಳ ಮೂಲಕ ಧ್ವನಿಯನ್ನು ಹಾಳು ಮಾಡಿಕೊಳ್ಳದೆ ಸಂಗೀತವನ್ನೇ ಮುಂದುವರೆಸುವಂತೆ ಸಲಹೆ ನೀಡ ತೊಡಗಿದರು. ಪಂಚಾಕ್ಷರಿ ಗವಾಯಿಗಳು ಕೂಡ ಅದನ್ನೇ ವಿಚಾರ ಮಾಡಿದರು.

ಗುರುವಿನ ಆಶೀರ್ವಾದ

ಬಸವರಾಜರಿಗೆ ಕರ್ನಾಟಕದ ಹೊರಗೆ ಹಾಡಿ ಹೆಸರು ಗಳಿಸಬೇಕೆನಿಸಿತು. ಸಮಸ್ತ ಭಾರತದಾದ್ಯಂತ ಸಂಚರಿಸಿ ಹಾಡಿ ಕೀರ್ತಿ ಪಡೆಯಬೇಕೆಂಬ ಹೆಬ್ಬಯಕೆ ಅವರದು. ಆ ವೇಳೆಗಾಗಲೇ ಅವರ ಹಾಡುಗಾರಿಕೆ ಜನಪ್ರಿಯವಾಗಿತ್ತು. ಸಂಗೀತದ ವಿದ್ಯೆ ಸಿದ್ಧಿಸಿತ್ತು.



ಬಸವರಾಜನ ಹಾಡುಗಾರಿಕೆ ಗುರುಗಳನ್ನು ಕೂಡ ಮೈಮರೆಸಿ ತನ್ಮಯರಾಗುವಂತೆ ಮಾಡುತ್ತಿತ್ತು. "ತಮ್ಮ ಶಿಷ್ಯನ ಭವಿಷ್ಯ ಸಂಗೀತದಲ್ಲಿಯೇ ಇದೆ" ಎಂಬುದು ಅವರಿಗೆ ಮೊದಲೇ ಗೊತ್ತಿತ್ತು. ಬಸವರಾಜರು ದೇಶದ ತುಂಬೆಲ್ಲಾ ಹಾಡಿ ಹೆಸರುಗಳಿಸಿ ತನ್ನ ಗುರುವಿನ ಕೀರ್ತಿ ಪತಾಕೆಯನ್ನು ಹಾರಿಸುವ ಹೆಬ್ಬಯಕೆಯನ್ನು ಪೂಜ್ಯ ಗುರುಗಳ ಮುಂದೆ ನಿವೇದಿಸಿಕೊಂಡರು. ತಮ್ಮ ಪ್ರೀತಿಯ ಶಿಷ್ಯನ ಮನದಲ್ಲಿ ಅಂಕುರಿಸಿದ ಬಯಕೆಯನ್ನು ಗುರುಗಳು ಅರಿತುಕೊಂಡರು. ಆಗ ಕ್ಯಾಂಪು ಕೂಡಲಸಂಗಮಕ್ಕೆ ಆಗಮಿಸಿತ್ತು. ಅಂದು ಬಸವ ಜಯಂತಿ. ಗುರುವಾರ ಅಕ್ಷಯ ತೃತೀಯ. ಸಂಜೆ ಗುರುವಿನಿಂದ ಶಿಷ್ಯ ಅನುಗ್ರಹಿತನಾಗುವ ಯೋಗ. ವಿಶ್ವಮಾನವ ಬಸವೇಶ್ವರ ಪುಣ್ಯ ಕ್ಷೇತ್ರದಲ್ಲಿಯೇ ಬಸವರಾಜರು ಕೂಡ ತಮ್ಮ ಗುರುಗಳ ಅನುಗ್ರಹ ಪಡೆದರು. ಕಣ್ತುಂಬಿ, ಮನತುಂಬಿ ಪಂಚಾಕ್ಷರಿ ಗವಾಯಿಗಳು ಶಿಷ್ಯನಿಗೆ ಆಶೀರ್ವದಿಸುತ್ತಾ "ತಾನು ಕಲಿಸಿದ ವಿದ್ಯೆಯನ್ನು ಹತ್ತು ಪಟ್ಟು ಬೆಳೆಸು, ದುಶ್ಚಟಗಳಿಗೆ ಮನಸ್ಸು ಕೊಡಬೇಡ, ನಿನಗೆ ಒಳ್ಳೆಯ ಭವಿಷ್ಯವಿದೆ ಯಶೋವಂತನಾಗು, ಕೀರ್ತಿವಂತನಾಗು, ಧರ್ಮವಂತನಾಗು" ಎಂದು ಹೇಳಿ ತಲೆಯ ಮೇಲೆ ತಮ್ಮ ಎರಡು ಹಸ್ತಗಳನ್ನಿಟ್ಟು ಹಾರೈಸಿದರು.

ಗುರುದಕ್ಷಿಣೆ

ಇನ್ನು ಗುರುದಕ್ಷಿಣೆ, ವಿದ್ಯಾದಾನ ಮಾಡಿದ ಗುರುವಿಗೆ ಶಿಷ್ಯನು ಗುರುದಕ್ಷಿಣೆ ಸಮರ್ಪಿಸುವುದೇ ಧರ್ಮ. ಈ ವಿಷಯದ ಕುರಿತು ಚಿತ್ತರಗಿ ಗಂಗಾಧರಶಾಸ್ತ್ರಿಗಳು ಪ್ರಸ್ತಾಪಿಸಿದರು. ಆಗ ಪಂಚಾಕ್ಷರಿ ಗವಾಯಿಗಳು "ಸಂಗೀತ ಕಲೆ ನಶಿಸಿಹೋಗುತ್ತಿದ್ದ ಕಾಲದಲ್ಲಿ ನನಗೆ ಆಶ್ರಯವಿತ್ತು, ವಿದ್ಯೆಯನ್ನು ಕಲಿಸಿ ಅದನ್ನು ಬೆಳೆಸಲು ಅನುವು ಮಾಡಿಕೊಟ್ಟ ಪೂಜ್ಯಶ್ರೀ ಹಾನಗಲ್‌ಕುಮಾರಸ್ವಾಮಿಗಳವರ ಪುಣ್ಯತಿಥಿಯ ದಿನದಂದು ನೀನು ಎಲ್ಲಿಯೇ ಇರು ತಪ್ಪದೇ ಶಿವಯೋಗ ಮಂದಿರಕ್ಕೆ ಬಂದು ಹಾಡಬೇಕು. ಅಲ್ಲದೇ ನಾನು ಕಲಿಸಿದ ವಿದ್ಯೆಯನ್ನು ನೀನು ಸಹ ಇತರರಿಗೆ ಕಲಿಸಿ ಪರಂಪರೆಯನ್ನು ಬೆಳೆಸಬೇಕು. ಇದೇ ನಾನು ನಿನ್ನಿಂದ ಅಪೇಕ್ಷಿಸುವ ಗುರುದಕ್ಷಿಣೆ" ಎಂದರು. ಬಸವರಾಜರು ಆಗಲಿ ಎಂದು ತಲೆ ಅಲ್ಲಾಡಿಸಿದರು. ಪ್ರೀತಿಯ ಗುರುಗಳನ್ನು ಅಗಲುವ ನೋವು ಹೃದಯದಲ್ಲಿ ತುಂಬಿ ಬಂದಿತ್ತು. ಆದರೆ ಇಡೀ ದೇಶವನ್ನು ಸುತ್ತಬೇಕು. ದೊಡ್ಡ ಗಾಯಕನಾಗಿ ಹೆಸರುಗಳಿಸಬೇಕೆಂಬ ಉತ್ಸಾಹ ಅವರನ್ನು ಸೆಳೆಯಿತು. 'ಮೊದಲ ಸಲ ತವರು ಮನೆಯನ್ನು ಬಿಟ್ಟು ಗಂಡನ ಮನೆಗೆ ಹೊರಟ ಅನುಭವ ನನ್ನದಾಗಿತ್ತು' ಎಂದು ಬಸವರಾಜರು ಆ ಸನ್ನಿವೇಶವನ್ನು ವಿವರಿಸುತ್ತಿದ್ದರು.

ಮುಂಬೈಗೆ ಪ್ರಯಾಣ

ಹಲವಾರು ಬಾರಿ ಮುಂಬೈ ಪುಣೆಗಳಿಗೆ ಹೋಗಿ ಬಂದಿದ್ದ ಅವರಿಗೆ ಅವು ಚಿರಪರಿಚಿತ ಸ್ಥಳಗಳಾಗಿದ್ದವು. ರೇಡಿಯೋ ಕಾರ್ಯಕ್ರಮಕ್ಕೆ ಹೋದಾಗ ಮತ್ತು ಇತರ ಕಾರ್ಯಕ್ರಮಗಳನ್ನು



ನೀಡಿ ಅನೇಕ ಅಭಿಮಾನಿಗಳನ್ನು ಬೆಳೆಸಿಕೊಂಡಿದ್ದರು. ಕಲಾವಿದರಿಗೆ ಅಲ್ಲಿನ ಜನತೆ ತೋರಿಸುತ್ತಿದ್ದ ಪ್ರೀತಿ ವಿಶ್ವಾಸಗಳು, ನೀಡುತ್ತಿದ್ದ ಪ್ರೋತ್ಸಾಹ ಅವರನ್ನು ಆಕರ್ಷಿಸಿದ್ದವು. ಗುರುಗಳಿಂದ ಆಶೀರ್ವಾದ ಪಡೆದು ಅವರು ನೇರವಾಗಿ ಹೋಗಿದ್ದು ಮುಂಬೈಗೆ. ಅದು ೧೯೪೧ನೇ ಇಸವಿ. ಮುಂಬೈ ವಾಸದ ಅವಧಿ ಅತ್ಯಂತ ಸ್ಮರಣೀಯವಾದುದು. ನಿತ್ಯವೂ ಸಂಗೀತ ಕಾರ್ಯಕ್ರಮ. ಹಾಡುವ ಮತ್ತು ಕಲಿಸುವ ಕಾಯಕ ನಡೆಯಿತು. ಕುಂದಗೋಳದ ಹೆಸರಾಂತ ಗಾಯಕ ಪಂ. ಸವಾಯಿ ಗಂಧರ್ವರು ಮುಂಬೈನಲ್ಲಿಯೇ ಇದ್ದರು. ಬಸವರಾಜರು ಅವರಲ್ಲಿ ಹೋಗಿ ಅವರಿಂದ ಕೂಡ ಸಂಗೀತ ಪಾಠವನ್ನು ಹೇಳಿಸಿಕೊಂಡರು. ಅನೇಕ ದಿನಗಳ ಕಾಲ ಅವರ ಕೋಣೆಯಲ್ಲಿಯೇ ವಾಸವಾಗಿದ್ದರು. ಆ ಸಮಯದಲ್ಲಿ ಗಾಯಕಿ ಡಾ|| ಗಂಗೂಬಾಯಿ ಹಾನಗಲ್ ಕೂಡ ಮುಂಬೈನಲ್ಲಿ ಇದ್ದು ಸವಾಯಿ ಗಂಧರ್ವರಲ್ಲಿ ಸಂಗೀತಾಭ್ಯಾಸವನ್ನು ಮಾಡುತ್ತಿದ್ದರು. ಸವಾಯಿ ಗಂಧರ್ವರು ತಮ್ಮ ಕಾರ್ಯಕ್ರಮಗಳಿಗೆಲ್ಲ ಹಿಂದೆ ಹಾಡಲು ಬಸವರಾಜರನ್ನು ಕರೆದುಕೊಂಡು ಹೋಗುತ್ತಿದ್ದರು. ಮುಂದೆ ಅವರಿಗೆ ಪಾರ್ಶ್ವವಾಯು ಆದಾಗ ಪುಣೆಯಲ್ಲಿರುತ್ತಿದ್ದ ಉಸ್ತಾದ ಅಬ್ದುಲ್ ಕರೀಮ್‌ಖಾನ್‌ರ ಪುತ್ರ ಪಂ. ಸುರೇಶಬಾಬು ಮಾನೆ ಅವರಲ್ಲಿ ಸಂಗೀತದ ಅಭ್ಯಾಸ ಆರಂಭವಾಯಿತು. ಬಸವರಾಜರ ದೈವದತ್ತವಾದ ಕಂಠವನ್ನು ಕೇಳಿದ ಅವರು ಕಿರಾಣಾ ಘರಾಣೆಯ ಉತ್ಕೃಷ್ಟಕರವಾದ ಅಂಶಗಳನ್ನು, ಚೀಜುಗಳನ್ನು ಹೇಳಿಕೊಟ್ಟರು. ತುಂಬಾ ಮೃದು ಸ್ವಭಾವದವರಾದ ಸುರೇಶಬಾಬು ಮಾನೆಯವರು ಬಸವರಾಜರಿಗೆ ಪ್ರೀತಿಯಿಂದ "ಬಸವಣ್ಣಾ" ಎಂದು ಕರೆಯುತ್ತಿದ್ದರು. "ಬಸವರಾಜನಂತಹ ಧ್ವನಿ ಹಾಗೂ ವಿದ್ವತ್ತು ಇರುವ ಕಲಾವಿದರಿರುವುದೇ ಅಪರೂಪವೆಂದು" ಎಲ್ಲರೆದುರು ಹೇಳುತ್ತಿದ್ದರಂತೆ. ಆಗ ಖ್ಯಾತ ಗಾಯಕಿ ಪ್ರಭಾ ಅತ್ರೆ ಕೂಡಾ ಸುರೇಶಬಾಬು ಮಾನೆಯವರಲ್ಲಿ ಸಂಗೀತ ಅಭ್ಯಾಸವನ್ನು ಮಾಡಲು ಬರುತ್ತಿದ್ದರು. ಅವರೂ ಕೂಡಾ ಬಸವರಾಜರ ಸಂಗೀತವನ್ನು ತುಂಬಾ ಮೆಚ್ಚಿಕೊಂಡಿದ್ದರು.

ಪುಣೆಯಲ್ಲಿ ಸಂಗೀತ ಪಾಠಶಾಲೆ

ರಾಜಗುರುಗಳ ಹೆಸರು ಮಹಾರಾಷ್ಟ್ರದಲ್ಲಿ ಸುಗಂಧದಂತೆ ಪಸರಿಸಿತು. ರೇಡಿಯೋದಲ್ಲಿ ಹಾಡಲಾರಂಭಿಸಿದಾಗಿನಿಂದ ಅವರ ಹಾಡನ್ನು ಮೆಚ್ಚಿಕೊಂಡು ಅನೇಕರು ಅವರ ಅಭಿಮಾನಿಗಳಾಗಿದ್ದರು. ಪುಣೆ, ಮುಂಬೈಗಳಲ್ಲದೆ ನಾಸಿಕ್, ಔರಂಗಬಾದ್, ನಾಗ್ಪುರ್ ಮುಂತಾದ ಕಡೆಗಳಲ್ಲಿಯೂ ಅವರ ಕಾರ್ಯಕ್ರಮಗಳು ಆಗ ತೊಡಗಿದವು. ಆ ವೇಳೆಯಲ್ಲಿ ಎಚ್.ಎಂ.ವಿ. ಕಂಪನಿಯಿಂದ ಇವರ ಹಾಡಿನ ಧ್ವನಿ ಮುದ್ರಿಕೆಗಳು ಹೊರಬಂದವು. ಅಲ್ಲಿನ ಸಂಗೀತಾಸಕ್ತರ ಮನದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದರು. ಇದಲ್ಲದೇ ಪುಣೆಯ ಡೆಕ್ಕನ್ ಜಮಖಾನಾದಲ್ಲಿ ಒಂದು ಮನೆಯನ್ನು ತೆಗೆದುಕೊಂಡು ಅಲ್ಲಿ ಸಂಗೀತ ಪಾಠಶಾಲೆಯನ್ನು ಆರಂಭಿಸಿದರು. ಅನೇಕ ವಿದ್ಯಾರ್ಥಿಗಳು ಸಂಗೀತ ಪಾಠಕ್ಕಾಗಿ ಇವರ ಬಳಿ ಬರುತ್ತಿದ್ದರು.



ಇವರಲ್ಲಿ ಸಂಗೀತಾಭ್ಯಾಸಕ್ಕಾಗಿ ಬರುತ್ತಿದ್ದವರಲ್ಲಿ ಗಾಯಕಿ ಮಾಣಿಕ ವರ್ಮಾ ಒಬ್ಬರಾಗಿದ್ದರು. ಆಗಿನ್ನೂ ಕುಮಾರಿ ಮಾಣಿಕ ದಾದಾರಕರ್ ಎಂದಾಗಿದ್ದ ಅವರು ರಾಜಗುರುಗಳ ಗಾನಸಿರಿಗೆ ಬಹಳವಾಗಿ ಆಕರ್ಷಿತರಾಗಿದ್ದರು. ಹೀಗೆ ದಿನಂಪ್ರತಿ ಸಂಗೀತಪಾಠ ಕಾರ್ಯಕ್ರಮಗಳು ನಡೆಯತೊಡಗಿದವು. ಸಂಗೀತ ಕ್ಷೇತ್ರದಲ್ಲಿ ಅವರ ಹೆಸರು ಪ್ರಸಿದ್ಧವಾಗತೊಡಗಿತು.

ಇವರದು ಬಂಗಾರದ ಬಣ್ಣ, ಸ್ಫುರದ್ರೂಪ, ಅಗಾಧವಾದ ಪಾಂಡಿತ್ಯ, ಜೇನು ಸೂಸುವ ಮಧುರ ಧ್ವನಿ, ಲಾಲಿತ್ಯಪೂರ್ಣ ಹಾಡುಗಾರಿಕೆ, ಇನ್ನೇನು ಬೇಕು. ಜೇನಿಗೆ ಮುತ್ತುವ ಇರುವೆಗಳ ಹಾಗೆ ಕೇಳುಗರು ಇವರ ಸುತ್ತ ಇರುತ್ತಿದ್ದರು. ಇವರ ಗಾಯನಕ್ಕೆ ಆಕರ್ಷಿತರಾದ ಕೆಲ ತರುಣಿಯರು ತಮ್ಮನ್ನು ಮದುವೆಯಾಗುವಂತೆ ಹಿಂದೆ ಬಿದ್ದದ್ದು ಉಂಟು. ತಾವು ಉಪಾಯದಿಂದ ತಪ್ಪಿಸಿಕೊಂಡ ಬಗ್ಗೆ ಅವರು ರೋಚಕವಾಗಿ ಹೇಳುತ್ತಿದ್ದರು.

ಯಾರಾದರೂ ಹಿರಿಯ ಗಾಯಕರು, ವಿದ್ವಾಂಸರು ಸಿಕ್ಕರೆ ಸಾಕು ಅವರಿಂದ ವಿದ್ಯೆಯನ್ನು, ಚೀಜುಗಳನ್ನು ಪಡೆದುಕೊಳ್ಳುವಂತಹ ಅಭ್ಯಾಸ ಬಸವರಾಜರದ್ದು. ತಾನು ದೊಡ್ಡ ಕಲಾವಿದ ಎಂಬ ಅಹಂ ಇಲ್ಲದೇ ಒಬ್ಬ ವಿದ್ಯಾರ್ಥಿಯಂತೆ ಹೋಗಿ ಅನೇಕರಲ್ಲಿ ಸಂಗೀತದ ಉತ್ತಮ ಅಂಶಗಳನ್ನು ಪಡೆದು ತಮ್ಮ ಗಾಯನವನ್ನು ಪರಿಪಕ್ವ ಮಾಡಿಕೊಂಡರು. ಪುಣೆಯಲ್ಲಿ ಜೈಪುರ ಘರಾಣೆಯ ದಿನಕರ ಪಾಠಕರಿಂದ ಗೋವಿಂದರಾವ್ ಟೆಂಬೆ ಅವರಿಂದ ಹೊಸ ಹೊಸ ಸಂಗತಿಗಳನ್ನು ಅಭ್ಯಾಸ ಮಾಡಿದರು.

ಅವಿಭಜಿತ ಪಾಕಿಸ್ತಾನದಲ್ಲಿ ಬಸವರಾಜರು

ಸಂಗೀತದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕೆಂಬ ಬಯಕೆ ಅವರದು. ತಮ್ಮ ಗುರುಗಳಾದ ಪಂಚಾಕ್ಷರಿ ಗವಾಯಿಗಳಿಗೆ ಸಂಗೀತಾಭ್ಯಾಸ ಹೇಳಿಕೊಟ್ಟ ಉಸ್ತಾದ ಅಬ್ದುಲ್ ವಹೀದಖಾನರ ಹತ್ತಿರ ಹೋಗಬೇಕೆಂಬುದು ಅವರ ಬಹು ದಿನಗಳ ಆಸೆಯಾಗಿತ್ತು. ೧೯೪೩ರಲ್ಲಿ ಪಾಕಿಸ್ತಾನದ ಲಾಹೋರಿನಲ್ಲಿದ್ದ ವಹೀದ್ ಖಾನರ ಹತ್ತಿರ ಹೋದರು. ಅವರು "ಪಂಚಾಕ್ಷರಿ ಕಾ ಶಾಗಿರ್ದ ಹೈ ಕ್ಯಾ ಬಹುತ್ ಅಚ್ಚಾ" ಎಂದು ಸಂತೋಷದಿಂದ ವಿದ್ಯೆಯನ್ನು ಕಲಿಸಿದರು. ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿದ್ದರು. ಇವರಿಗಾಗಿ ಬೇರೆ ಅಡುಗೆಯನ್ನು ಮಾಡಿಸುತ್ತಿದ್ದರಂತೆ. ಆಗ ಪಾಕಿಸ್ತಾನ ಇನ್ನೂ ಭಾರತದಿಂದ ಬೇರೆಯಾಗಿರಲಿಲ್ಲ. ಉಸ್ತಾದ ಅಬ್ದುಲವಹೀದ ಖಾನರ ನಂತರ ಕರಾಚಿಗೆ ತೆರಳಿ ಲತೀಫಖಾನರಿಂದ ಅನೇಕ ಚೀಜಗಳನ್ನು, ಸಂಗೀತದ ವಿವಿಧ ಅಂಶಗಳನ್ನು ಪಡೆದುಕೊಂಡರು. ಸುಮಾರು ೩ ವರ್ಷಗಳ ಕಾಲ ಅಲ್ಲಿನ ಅನೇಕ ಊರುಗಳಲ್ಲಿ ಕಾರ್ಯಕ್ರಮ ನೀಡಿ ಪ್ರಸಿದ್ಧಿ ಪಡೆದರು. ಇವರ ಸಂಗೀತಕ್ಕೆ ಮಾರುಹೋದ ಶಿಕಾರಪುರದ (ಪಾಕಿಸ್ತಾನ) ಆಗರ್ಭ ಶ್ರೀಮಂತ ಜಾನಕಿರಾಮ ಕ್ಷತ್ರೆ ಅವರು ರಾಜಗುರುಗಳಿಗೆ ೫ ಗುಂಟೆ ಜಾಗಾ ಮತ್ತು ಒಂದು ಚಿಕ್ಕ ಮನೆಯನ್ನು ಬಳುವಳಿಯಾಗಿ ನೀಡಿದ್ದರು. ತಮ್ಮ ಮಗನಿಗೆ ಸಂಗೀತವನ್ನು ಹೇಳಿಕೊಡಲು ಆ ಕಾಲದಲ್ಲಿ ತಿಂಗಳಿಗೆ ೫೦೦ರೂ.



ಬಿದಾಗಿ ನೀಡುತ್ತಿದ್ದರು. ೧೯೪೭ರಲ್ಲಿ ದೇಶ ವಿಭಜನೆಯ ಪ್ರಕ್ರಿಯೆ ಆರಂಭವಾದಾಗ ಹಿಂದು ಮುಸ್ಲಿಂ ವಿವಾದ ಕರಾಳರೂಪವನ್ನು ಪಡೆಯಿತು. ಅಲ್ಲಿ ಜೀವ ಉಳಿಸಿಕೊಳ್ಳುವುದೇ ಕಠಿಣವಾಯಿತು. ರಾಜಗುರುಗಳು ತಮ್ಮ ಎಲ್ಲ ಆಸ್ತಿ ವಸ್ತುಗಳನ್ನು ಬಿಟ್ಟು ಒಂದು ಕೈಚೀಲದಲ್ಲಿ ಅರಿವೆಗಳನ್ನು ತುಂಬಿಕೊಂಡು ಫ್ರಾಂಟೀಯರ್ ಮೇಲ್ ಹತ್ತಿದರು. ಟ್ರೇನ್ ಲಾಹೋರಿಗೆ ಬಂದಾಗ ದಂಗೆಕೋರರು ದಾಳಿ ಮಾಡಿದರು. ಇವರು ಹೇಗೊ ತಪ್ಪಿಸಿಕೊಂಡು ಟ್ರೇನಿನ ಅಡಿಯಲ್ಲಿ ಅವಿತು ಕುಳಿತುಕೊಂಡರು. ೨ ತಾಸುಗಳ ನಂತರ ಮೇಲೆ ಬಂದು ನೋಡಿದರೆ ನೂರಾರು ಹೆಣಗಳು, ದಂಗೆಕೋರರು ಎಲ್ಲ ವಸ್ತುಗಳನ್ನು ಲೂಟಿ ಮಾಡಿ ಹೆಂಗಸರು, ಕೂಸುಗಳನ್ನು ಬಿಡದೆ ಕೊಂದು ಹಾಕಿದ್ದರು. "ಅದೊಂದು ಅತ್ಯಂತ ಕರಾಳ ದೃಶ್ಯವಾಗಿತ್ತು. ಪವಾಡ ಸದೃಶ ರೀತಿಯಲ್ಲಿ ನಾನು ಪಾರಾಗಿದ್ದೆ" ಎಂದು ಅವರು ಹೇಳುತ್ತಿದ್ದರು. ಮುಂದೆ ಮಿಲಿಟರಿಯವರು ಬಂದ ಮೇಲೆ ಅವರ ಕಾವಲಿನಲ್ಲಿ ಟ್ರೇನ್ ದಿಲ್ಲಿಯನ್ನು ತಲುಪಿತು. ಅದಾದ ನಂತರ ಪಾಕಿಸ್ತಾನದಿಂದ ಕಾರ್ಯಕ್ರಮಕ್ಕೆ ಆಹ್ವಾನಗಳು ಬಂದಾಗಲೂ ಸಹ ರಾಜಗುರು ಅವರು ಅಲ್ಲಿಗೆ ಹೋಗಲಿಲ್ಲ.

ಹೋಳಿಹಾಂಡಾ ಕಾರ್ಯಕ್ರಮ

೧೯೪೪ರಲ್ಲಿ ಪಾಕಿಸ್ತಾನದ ಶಿಕಾರಪುರದಲ್ಲಿ ಒಂದು ದೊಡ್ಡ ಸಂಗೀತ ಸಮ್ಮೇಳನ ನಡೆಯಿತು. ಅದಕ್ಕೆ ಹೋಳಿಹಾಂಡಾ ಎಂದು ಕರೆಯುತ್ತಿದ್ದರು. ಹೋಳಿಹಾಂಡಾ ಎಂದರೆ ಸಿಂಧಿ ಭಾಷೆಯಲ್ಲಿ ಹೋಳಿಹುಣ್ಣಿಮೆಯ ಸಮ್ಮೇಳನ ಎಂದು ಅರ್ಥ. ಅಲ್ಲಿ ಹಿಂದೂ ಗಾಯಕರನ್ನು ತಿರಸ್ಕಾರದಿಂದ ಕಾಣುತ್ತಿದ್ದರು. ಸಮ್ಮೇಳನದಲ್ಲಿ ರಾಜಗುರುಗಳು, ನಿವೃತ್ತಿಬುವಾ ಸರ್‌ನಾಯಕ್, ವಿನಾಯಕರಾವ್ ಪಟವರ್ಧನ್, ಕಸ್ತೂರಿಲಾಲ್ ಮುಂತಾದವರು ಆಹ್ವಾನಿತರಾಗಿದ್ದರು. ಸಂಗೀತ ಸಮ್ಮೇಳನದಲ್ಲಿ ಅಲ್ಲಿನ ಛೋಟೆ ಗುಲಾಮ್ ಎಂಬುವವರು ಬಹಳ ಉತ್ತಮವಾಗಿ ತೋಡಿರಾಗವನ್ನು ಹಾಡಿ ಪ್ರಭಾವ ಬೀರಿದ್ದರು. ಅವರ ನಂತರ ಯಾರೂ ಹಾಡಲು ಮುಂದೆ ಬರದಾದರು. ಬಸವರಾಜರು ತಮ್ಮನ್ನು ಉಳಿಸಿದ್ದ ಕೋಣೆಯಲ್ಲಿ ಪ್ರಾಕ್ಟೀಸ್ ಮಾಡುತ್ತಾ ಕುಳಿತಿದ್ದರು. ಆಗ ವಿನಾಯಕರಾವ್ ಪಟವರ್ಧನ್ ನಿವೃತ್ತಿಬುವಾ ಸರ್‌ನಾಯಕ್ ಮುಂತಾದವರು ರಾಜಗುರುಗಳ ಬಳಿಗೆ ಬಂದು ಈಗ ಹಾಡಿದರೆ ನೀನೆ ಹಾಡಬೇಕು ಎಂದು ಒತ್ತಾಯಿಸಿ ಕರೆತಂದು ವೇದಿಕೆ ಮೇಲೆ ಕಳಿಸಿಕೊಟ್ಟರು. ಬಸವರಾಜರಿಗೆ ಇತರ ಕಲಾವಿದರ ಮಾತನ್ನು ಕೇಳಿ ತುಂಬಾ ಉತ್ಸಾಹವು ಬಂದಿತ್ತು. ತಂಬೂರಿಗಳನ್ನು ಕೂಡಿಸಿಕೊಂಡು ಸ್ವರ ಆಲಾಪನೆಯನ್ನು ಮಾಡತೊಡಗಿದರು. ಭರ್ಜರಿಯಾಗಿ ಜೀವನಪುರಿ ರಾಗವನ್ನು ಪ್ರಸ್ತುತಪಡಿಸಿದರು. ಕೇಳುಗರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ೨ ನಿಮಿಷಗಳ ವರೆಗೆ ಕರತಾಡನ. ಉಳಿದ ಕಲಾವಿದರು ಹಾಗೂ ಕಾರ್ಯದರ್ಶಿ ಪರಮಾನಂದ ಎಂಬುವವರು ನಮ್ಮ ಮಾನವನ್ನು ಉಳಿಸಿದೆ ಎಂದು ಅವರನ್ನು ಎತ್ತಿಕೊಂಡು ಕುಣಿದಾಡಿದರು.



ಬಸವರಾಜರು ಒಬ್ಬ ಜಿದ್ದಿ ಗಾಯಕ, ಸೋಲರಿಯದ ಪ್ರತಿಭೆ. ತಮ್ಮ ಗಾಯನದ ಬಗ್ಗೆ ತುಂಬಾ ಆತ್ಮವಿಶ್ವಾಸ. ಯಾರಾದರೂ 'ಈ ಮೊದಲಿಗೆ ಹಾಡಿದವರು ಚೆನ್ನಾಗಿ ಹಾಡಿದ್ದಾರೆ ಈಗ ನಿಮ್ಮ ಸರದಿ' ಎಂದು ಹೇಳಿದರಂತೂ ಅವರಿಗಿಂತ ಚೆನ್ನಾಗಿ ಹಾಡಿಯೇ ತೀರಬೇಕು. ಅಹಂಕಾರಿ ಕಲಾವಿದರಿದ್ದರೆ ಅವರಿಗೆ ಒಂದು ಪಾಠವನ್ನು ಕಲಿಸಬೇಕು ಎಂದು ಭರ್ಜರಿಯಾಗಿ ಹಾಡಿ ಎಲ್ಲರೂ ತಲೆದೂಗುವಂತೆ ಮಾಡಿ ಬಿಡುತ್ತಿದ್ದರು. ತಮ್ಮಗಿಂತ ಮೊದಲು ಹಾಡಿದ ಗಾಯಕ ಕರೆ ಮೂರನೇ ಪಟ್ಟಿಗೆ ಹಾಡಿದರೆ ಬಸವರಾಜರು ಬಿಳಿ ನಾಲ್ಕನೇ ಪಟ್ಟಿಯಲ್ಲಿ ಮೂರು ಸಪ್ತಕದಲ್ಲಿ ಹಾಡುತ್ತಿದ್ದರು.

ಚಿನ್ನದ ಕಡಗ ನೋಟಿನ ಹಾರ

ಲಾಹೋರದಲ್ಲಿ ಖಲೀಫಾ ಎಂಬುವವರು ಸಂಗೀತ ಸಮ್ಮೇಳನವನ್ನು ನಡೆಸುತ್ತಿದ್ದರು. ಅದೊಂದು ವಿಶಿಷ್ಟವಾದ ಸಂಗೀತ ಸಮ್ಮೇಳನ. ಏಳು ಜನ ತಬಲಾಜಿಗಳೊಂದಿಗೆ ಒಬ್ಬನೇ ಗಾಯಕ ಹಾಡಬೇಕು. ಅದು ತುಂಬಾ ಕಸರತ್ತಿನ ಕೆಲಸ. ಕೆಲ ಕಲಾವಿದರು (ತಾಳದ ಮೇಲೆ ಹಿಡಿತವಿಲ್ಲದ) ಹಾಡುವುದನ್ನು ಬಿಟ್ಟು ಪಲಾಯನ ಮಾಡಿದ್ದು ಉಂಟು. ಆ ಸಮ್ಮೇಳನಕ್ಕೆ ರಾಜಗುರು ಅವರಿಗೆ ಆಮಂತ್ರಣ ನೀಡಲಾಯಿತು. ತಾಳದ ಒಂದೊಂದು ಆವೃತ್ತಿಯನ್ನು ಒಬ್ಬರಾದ ಮೇಲೆ ಒಬ್ಬರು ನುಡಿಸುವುದು, ಹಾಡುವವರು ಅದಕ್ಕೆ ಸರಿಯಾಗಿ ಸಮ್ಮಿಗೆ ಬರುವುದು ಅಲ್ಲಿನ ಕ್ರಮವಾಗಿತ್ತು. ರಾಜಗುರುಗಳ ಕಚೇರಿ ಆರಂಭವಾಯಿತು. ಮೊದಲನೇ ತಬಲಜೀಗೆ ಝೂಮ್ರಾ ತಾಳವನ್ನು ಹಿಡಿಯಲು ಹೇಳಿದರು. ಅವನು ಕಕ್ಕಾಬಿಕ್ಕಿಯಾದನು. ಅವನಿಂದ ಸರಿಯಾಗಿ ಬಾರಿಸಲು ಆಗಲಿಲ್ಲ. ೨ನೇ ೩ನೇ ಹೀಗೆ ಎಲ್ಲಾ ತಬಲಜೀಗಳ ಗತಿಯೂ ಹಾಗೆಯೇ ಆಯಿತು. ಆಗ ತಬಲಾ ನುಡಿಸುವವರು ಝೂಮ್ರಾ ತಾಳವನ್ನು ಬಿಟ್ಟು ಬೇರೆ ತಾಳದಲ್ಲಿ ಹಾಡಲು ವಿನಂತಿಸಿಕೊಂಡರು. ಆಗ ರಾಜಗುರುಗಳು ತೀನ್ ತಾಳದಲ್ಲಿ ಹಾಡಲಾರಂಭಿಸಿದರು. ಎಲ್ಲ ತಬಲಜೀಗಳು ಸಮ್ಮು ತೋರುಗೊಡದೇ ಒಂದೇ ಸವನೆ ನುಡಿಸಲಾರಂಭಿಸಿದರು. ರಾಜಗುರುಗಳು ತಾವು ಕೂಡ ಭರ್ಜರಿಯಾಗಿ ಹಾಡುತ್ತಾ ತಪ್ಪದೇ ಸಮ್ಮಿಗೆ ಬರತೊಡಗಿದರು. ಶ್ರೋತೃಗಳು ಆನಂದದಿಂದ ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು. ಖಲೀಫಾ ಅವರು ವೇದಿಕೆಗೆ ಬಂದು ರಾಜಗುರುಗಳನ್ನು ತಬ್ಬಿಕೊಂಡು ಅವರ ಕೈಗೆ ಬಂಗಾರದ ಕಡಗವನ್ನು ತೊಡಿಸಿ ಕೊರಳಿಗೆ ನೋಟಿನ ಹಾರವನ್ನು ಹಾಕಿದರು. ಹೀಗೆ ಎಲ್ಲ ತಬಲ್‌ಜಿಗಳೊಂದಿಗೆ ಧೈರ್ಯವಾಗಿ ಹಾಡಲು ಅವರಲ್ಲಿದ್ದ ಲಯದ ಮೇಲಿನ ಅದ್ಭುತವಾದ ಹಿಡಿತವೇ ಕಾರಣ. ಕರ್ನಾಟಕ ಸಂಗೀತಗಾರರ ಹಾಗೆ ಕೈಯಲ್ಲಿ ತಾಳವನ್ನು ಹಾಕುತ್ತ ಹಾಡುತ್ತಿದ್ದರು.

ತಬಲಾವಾದಕರು ಹಾಡುವವರನ್ನು ಹೇಗೆ ಅವಮಾನ ಮಾಡುತ್ತಾರೆ. ಹಾಡುವವರು ತಬಲಜೀಗಳ ಬಗ್ಗೆ ಹಾಗೂ ಲಯದ ಬಗ್ಗೆ ಹೇಗೆ ಎಚ್ಚರದಿಂದ ಇರಬೇಕು ಎಂಬು ದನ್ನು ಪಂಚಾಕ್ಷರಿ ಗವಾಯಿಗಳು ತಿಳಿಸಿಕೊಟ್ಟಿದ್ದರು. ಕೆಲವು ಗಾಯಕರು ಸುಮ್ಮನೆ ಕೇವಲ ಠೇಕಾ



ನುಡಿಸಲು ಹೇಳಿ ಹಾಡುತ್ತಾರೆ. ಆದರೆ ರಾಜಗುರುಗಳು ತಬಲಾವಾದಕನಿಗೆ ತನ್ನ ಕಸರತ್ತನ್ನು ಪ್ರದರ್ಶಿಸಲು ಅವಕಾಶ ನೀಡಿ ಹಾಡುತ್ತಿದ್ದರು. ಹೀಗಾಗಿ ತಬಲಜೀಗಳಿಗೆ ರಾಜುಗುರುಗಳೊಂದಿಗೆ ನುಡಿಸುವುದೆಂದರೆ ಅದೊಂದು ಸಾಹಸದ ಕೆಲಸವಾಗುತ್ತಿತ್ತು. ತಮ್ಮಲ್ಲಿರುವ ಎಲ್ಲಾ ಪ್ರತಿಭೆಯನ್ನು ಉಪಯೋಗಿಸಿಕೊಂಡು ತಬಲಾ ನುಡಿಸಬೇಕಾಗುತ್ತಿತ್ತು. ಇಲ್ಲವಾದರೆ ರಾಜಗುರುಗಳು ಅಂತಹ ತಬಲಜೀಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಪಾಕಿಸ್ತಾನದಿಂದ ಕುಂದಗೋಳಕ್ಕೆ

ಪಾಕಿಸ್ತಾನದಿಂದ ಮರಳಿ ಬಂದ ಬಸವರಾಜರು ನೇರವಾಗಿ ತಮ್ಮ ಊರಾದ ಯಲಿವಾಳಕ್ಕೆ ಬಂದರು. ಹುಬ್ಬಳ್ಳಿಯ ಮೋಹನ ಟಾಕೀಸ್‌ನಲ್ಲಿ ಅವರ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆ ಸಂಗೀತ ಕಾರ್ಯಕ್ರಮಕ್ಕೆ ಕುಂದಗೋಳದ ಶ್ರೀ ನಾನಾಸಾಹೇಬ ನಾಡಗೀರರು ಬಂದಿದ್ದರು. ಬಸವರಾಜರ ಸಂಗೀತವನ್ನು ಕೇಳಿದ ಅವರು 'ಇಂಥ ಸಂಗೀತವನ್ನು ನಾನು ಕೇಳಿಯೇ ಇಲ್ಲ, ನೀವು ನಮ್ಮೂರಿಗೆ ಬರಬೇಕು ನನಗೆ ಸಂಗೀತವನ್ನು ಕಲಿಸಬೇಕು' ಎಂದು ಹೇಳಿ ಕುಂದಗೋಳಕ್ಕೆ ಕರೆದುಕೊಂಡು ಹೋದರು. ತಮ್ಮ ವಾಡೆಯಲ್ಲಿಯೇ ಒಂದು ಮನೆಯನ್ನು ಅವರಿಗೆ ಕೊಟ್ಟರು. ತುಂಬಾ ಸಹೃದಯರಾದ ನಾನಾಸಾಹೇಬರು ರಾಜಗುರುಗಳಿಂದ ಸಂಗೀತ ಪಾಠವನ್ನು ಹೇಳಿಸಿಕೊಳ್ಳತೊಡಗಿದರು. ಬಸವರಾಜರಿಗೆ ಹಾಲಿನ ಮೇಲಿರುವ ಪ್ರೀತಿಯನ್ನು ಕಂಡು ಅವರಿಗಾಗಿಯೇ ಒಂದು ಆಕಳನ್ನು ಮೀಸಲಾಗಿರಿಸಿದ್ದರು. ನಿತ್ಯವೂ ಎರಡು ಹೊತ್ತು ಒಬ್ಬ ಆಳುಮಗ ಹಾಲನ್ನು ಕರೆದು ರಾಜಗುರುಗಳಿಗೆ ಹೋಗಿ ಕೊಡುತ್ತಿದ್ದ. ಬಸವರಾಜರಿಗೆ ದೇಶದ ನಾನಾ ಭಾಗಗಳಿಂದ ಕಾರ್ಯಕ್ರಮಗಳಿಗಾಗಿ ಆಹ್ವಾನ ಬರುತ್ತಿದ್ದವು. ಅವರು ಹೋಗಿ ಕಾರ್ಯಕ್ರಮ ನೀಡಿ ಮರಳಿ ಕುಂದಗೋಳಕ್ಕೆ ಬರುತ್ತಿದ್ದರು. ಕುಂದಗೋಳದ ನಾನಾಸಾಹೇಬರ ವಾಡೆಯಲ್ಲಿ ನಿತ್ಯವು ರಾಜಗುರುಗಳ ಸಂಗೀತ ಸುಧೆ ಹರಿಯುತ್ತಿತ್ತು. ನಾಡಗೀರರು ತುಂಬಾ ಪ್ರೀತಿಯಿಂದ ಸಂಗೀತವನ್ನು ಕೇಳುತ್ತಿದ್ದರು ಹಾಗೂ ಕಲಿಯುತ್ತಿದ್ದರು. ರಾಜಗುರುಗಳ ಬಗ್ಗೆ ಅಪಾರವಾದ ಅಭಿಮಾನ ಗೌರವ ಅವರಲ್ಲಿತ್ತು. ಅಂದು ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮ ಇಂದು ಸಹ ಸವಾಯಿ ಗಂಧರ್ವರ ಸ್ಮರಣೆಯಲ್ಲಿ ಪ್ರತಿ ವರ್ಷವು ವಾಡೆಯಲ್ಲಿ ನಡೆದುಕೊಂಡು ಬರುತ್ತಿದೆ.

ಧಾರವಾಡದಲ್ಲಿ ಖಾಯಂ ವಾಸ

೧೯೫೦ರಲ್ಲಿ ಧಾರವಾಡದಲ್ಲಿ ಆಕಾಶವಾಣಿ ಕೇಂದ್ರದ ಸ್ಥಾಪನೆಯಾಯಿತು. ಹೆಸರಾಂತ ಕಲಾವಿದರಾದ ಪಂಡಿತ ಭೀಮಸೇನ ಜೋಶಿ, ಪಂಡಿತ ರಾಜಗುರು, ಪಂಡಿತ ಮಲ್ಲಿಕಾರ್ಜುನ ಮನ್ಸೂರ್, ಡಾ|| ಗಂಗೂಬಾಯಿ ಹಾನಗಲ್, ಕೃಷ್ಣಾ ಹಾನಗಲ್, ಗುರುರಾವ ದೇಶಪಾಂಡೆ ಮುಂತಾದ ಕಲಾವಿದರು ಉದ್ಘಾಟನಾ ಸಮಾರಂಭದಲ್ಲಿ ಹಾಡಿದರು. ಬಸವರಾಜರು ರಾಗ



ಕೌಂಸಿಕಾನಾಡಾ ರಾಗವನ್ನು ಹಾಡಿದರು. (ಆ ಉದ್ಘಾಟನಾ ಸಮಾರಂಭಕ್ಕಾಗಿ ಆಕಾಶವಾಣಿಯವರು ಎಲ್ಲಾ ಕಲಾವಿದರ ಭಾವಚಿತ್ರ ಸಮೇತ ಮುದ್ರಿಸಿದ ಆಮಂತ್ರಣ ಪತ್ರಿಕೆಯನ್ನು ನಾನು ಇನ್ನೂ ಕಾಯ್ದಿರಿಸಿದ್ದೇನೆ).

ಧಾರವಾಡ ಆಕಾಶವಾಣಿಯಲ್ಲಿ ಆಗ ದೊಡ್ಡ ಕಲಾವಿದರಿಗೆ ತಿಂಗಳಿಗೆ ೪-೫ ಕಾರ್ಯಕ್ರಮಗಳನ್ನು ಕೊಡುತ್ತಿದ್ದರು. ಹೀಗಾಗಿ ಮೇಲಿಂದ ಮೇಲೆ ಧಾರವಾಡಕ್ಕೆ ಹೋಗಿ ಬರುವುದನ್ನು ತಪ್ಪಿಸಲು ಬಸವರಾಜರು ಧಾರವಾಡದಲ್ಲಿಯೇ ನೆಲೆಸಬೇಕೆಂದು ನಿರ್ಧರಿಸಿ ಧಾರವಾಡಕ್ಕೆ ಬಂದು ನೆಲೆ ನಿಂತರು. ನಾನಾಸಾಹೇಬರು ತುಂಬಾ ಭಾರವಾದ ಹೃದಯದಿಂದ ರಾಜಗುರುಗಳನ್ನು ಬೀಳ್ಕೊಟ್ಟರು. ಅಲ್ಲದೇ ಬೀಳ್ಕೊಡುವಾಗ 'ನಿಮಗೆ ಬಿಡುವು ಸಿಕ್ಕಾಗ ಖಂಡಿತವಾಗಿ ಕುಂದಗೋಳಕ್ಕೆ ಬಂದು ಹಾಡಬೇಕು' ಎಂದು ವಿನಂತಿಸಿಕೊಂಡರು. ಅಂದಿನಿಂದ ರಾಜಗುರುಗಳು ತಮ್ಮ ಕೊನೆಯವರೆಗೂ ಧಾರವಾಡದಲ್ಲಿಯೇ ಖಾಯಂ ಆಗಿ ವಾಸವಾಗಿದ್ದರು.

ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

೧೯೫೩ ಆಗಸ್ಟ್ ೧೫ರಂದು ಅವರ ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಆಕಾಶವಾಣಿ ದಿಲ್ಲಿ ಕೇಂದ್ರದಿಂದ ರಾಷ್ಟ್ರವ್ಯಾಪಿ ಪ್ರಸಾರವಾಯಿತು. ರಾಗ ಪೂರಿಯಾ ಮತ್ತು ಮೋಳಿಗೆಯ ಮಾರಯ್ಯನವರ "ತಾವು ಸತ್ಯವಂತರೆಂದು ಹೇಳದಿರುವುದೇ ವ್ರತ" ಎಂಬ ವಚನವನ್ನು ಹಾಡಿದರು. ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಕನ್ನಡದ ವಚನವನ್ನು ಪ್ರಥಮವಾಗಿ ಹಾಡಿದ ಕೀರ್ತಿ ಇವರದು. ಈ ಕಾರ್ಯಕ್ರಮವನ್ನು ಮೆಚ್ಚಿ ದೇಶದ ಅನೇಕರು ಮತ್ತು ಪತ್ರಿಕೆಯವರು ತುಂಬಾ ಪ್ರಶಂಸೆ ಮಾಡಿ ಬರೆದರು. ಮುಂದೆ ಸಾಕಷ್ಟು ಬಾರಿ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಮತ್ತು ಆಕಾಶವಾಣಿ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿದರು.

ಹುಕುಮಿ ಎಕ್ಕಾ

೧೯೫೫ರಲ್ಲಿ ನಾಂದೇಡದಲ್ಲಿ ಸಂಗೀತ ಸಮ್ಮೇಳನ ಏರ್ಪಾಡಾಗಿತ್ತು. ಅದರಲ್ಲಿ ಭಾಗವಹಿಸಲು ರಾಜಗುರುಗಳಿಗೆ ಆಹ್ವಾನ ನೀಡಲಾಗಿತ್ತು. ಆ ಸಮ್ಮೇಳನದಲ್ಲಿ ಗಾಯಕ ಪಂಡಿತ ಡಿ.ವಿ. ಪಲೂಸ್ಕರ್‌ರ ಗಾಯನವಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಅವರು ಬಂದಿರಲಿಲ್ಲ. ಸಂಘಟಕರಿಗೆ ಏನು ಮಾಡಬೇಕೆಂದು ತಿಳಿಯದಾಯಿತು. ಮುಂಜಾನೆ ಯಾರನ್ನು ಹಾಡಿಸುವುದು ಎಂದು ಚಿಂತಿತರಾದರು. ರಾತ್ರಿ ಇಡೀ ಪ್ರವಾಸ ಮಾಡಿ ರಾಜಗುರುಗಳು ಆಗ ತಾನೇ ನಾಂದೇಡಕ್ಕೆ ಬಂದಿಳಿದಿದ್ದರು. ಅವರ ಗಾಯನ ರಾತ್ರಿಗೆ ಇತ್ತು. ಅವರನ್ನು ಕಂಡ ಸಂಘಟಕರು ಕೈಮುಗಿದು "ತಾವು ದಯವಿಟ್ಟು ಈಗಲೇ ಹಾಡಬೇಕು' ಎಂದು ವಿನಂತಿಸಿಕೊಂಡರು. ಅಲ್ಲದೇ ಅಲ್ಲಿ ಸೇರಿದ್ದ ಜನರು ಕೂಡ ಹಾಡಬೇಕೆಂದು ಕೇಳಿಕೊಂಡರು. ಅವರಿಗೆ ನಿರಾಶೆಯನ್ನು



ಮಾಡಲು ಮನಸ್ಸಿಲ್ಲದೇ ರಾಜಗುರುಗಳು ಹಾಡಲು ಒಪ್ಪಿ ವೇದಿಕೆಗೆ ಆಗಮಿಸಿದರು. ಪ್ರಯಾಣದ ಆಯಾಸವಾಗಿದ್ದರೂ ಕೂಡಾ ಅದನ್ನು ಲೆಕ್ಕಿಸದೇ ಗಾಯನವನ್ನು ಆರಂಭಿಸಿದರು. ಅಂದಿನ ಅವರ ಗಾಯನ ಅಮೋಘವಾಗಿತ್ತು. ಅದನ್ನು ಕೇಳಿದ ಜನರು ಒನ್ಸಮೋರ್ ಎನ್ನುತ್ತಾ ಮತ್ತೆ ಮಧ್ಯಾಹ್ನದ ವರೆಗೂ ಹಾಡಿಸಿದರು.

ಆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಅಂದಿನ ಆಕಾಶವಾಣಿ ಮಂತ್ರಿಗಳಾಗಿದ್ದ ಶ್ರೀ ಬಿ.ವಿ. ಕೇಸ್ಕರ್‌ರವರು ಒಂದು ಭಾಷಣವನ್ನೇ ಮಾಡಿ ರಾಜಗುರು ಎಂದರೆ "ಹುಕುಮಿ ಎಕ್ಕಾ" ಇದ್ದಂತೆ ಯಾವಾಗ ಬೇಕಾದರೂ ಹಾಡಿಸಬಹುದು. ಅವರ ಹಾಡಿಗೆ ಹುಸಿಯೇ ಇಲ್ಲ ಎಂದು ಹೇಳಿದರು. ಸಂಘಟಕರು ರಾಜಗುರುಗಳ ಅಭೂತಪೂರ್ವ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ಅಂದು ಟಿಕೇಟ್ ಮಾರಿ ಸಂಗ್ರಹವಾಗಿದ್ದ ಏಳು ಸಾವಿರ ರೂಪಾಯಿಗಳು ಇದ್ದ ದೊಡ್ಡ ತಟ್ಟೆಯನ್ನೇ ಅವರ ಮುಂದೆ ಹಿಡಿದು ಪಂಡಿತಜೀ ನಿಮಗೆಷ್ಟುಬೇಕು ಅಷ್ಟನ್ನು ತೆಗೆದುಕೊಳ್ಳಿರಿ ಎಂದು ಹೇಳಿದಾಗ ರಾಜಗುರುಗಳು ನನಗೆ ಎಷ್ಟು ಸಂಭಾವನೆ ಕೊಡಲು ನಿಗದಿಮಾಡಿದ್ದೀರೋ ಅಷ್ಟೇ ಕೊಡಿ ಸಾಕು ಎಂದರು. ಸಂಘಟಕರು ಕೇಳದೇ ಮತ್ತೆ ೧೦೦೦/- ರೂ.ನ್ನು ಹೆಚ್ಚಿಗೆಯಾಗಿ ನೀಡಿದರು.

ದಿಲ್ಲೆಯಲ್ಲಿ ಜಯಭೇರಿ

೧೯೫೫ರಲ್ಲಿ ದಿಲ್ಲಿಯ ನಗರಭವನದಲ್ಲಿ ಪಂ. ವಿಷ್ಣು ದಿಗಂಬರ ಪಲೂಸ್ಕರರ ಸ್ಮರಣೆಯಲ್ಲಿ ಸಂಗೀತ ಸಮ್ಮೇಳನ ನಡೆದಿತ್ತು. ದೇಶದ ಕಲಾವಿದರೆಲ್ಲರೂ ಅಲ್ಲಿಗೆ ಆಗಮಿಸಿದ್ದರು. ಹಿರಿಯ ಗಾಯಕ ಪಂ. ಓಂಕಾರನಾಥ ಠಾಕೂರರ ಗಾಯನವಾಯಿತು. ಅವರ ಅಮೋಘವಾದ ಸಂಗೀತ ಕಛೇರಿಯ ನಂತರ ಯಾರು ಹಾಡುತ್ತಾರೆ? ಯಾರೂ ಮುಂದೆ ಬರಲಿಲ್ಲ. ಸಂಘಟಕರು ಹುಡುಕಾಟ ನಡೆಸಿದರು. ಆಗ ನಾನು ಹಾಡುತ್ತೇನೆ ಎಂದು ಒಬ್ಬ ತರುಣ ಗಾಯಕ ಮುಂದೆ ಬಂದ. ಆಗ ಸಂಘಟಕರು ಯಾರು? ಎಂದು ಕೇಳಿದಾಗ ನಾನೂ ಒಬ್ಬ ಗಾಯಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದೇನೆ ಎಂದಾಗ ಸಂಘಟಕರು ನಿರುಪಾಯವಾಗಿ "ಆಯಿತು, ನಿಮ್ಮ ಸಾಧನೆ ಏನಿದೆ ನೋಡೋಣ" ಎಂದು ಉಪೇಕ್ಷೆಯಿಂದ ಒಪ್ಪಿಕೊಂಡರು. ತರುಣ ಕಲಾವಿದರು ವೇದಿಕೆಯ ಮೇಲೆ ಕುಳಿತು ತನ್ನ ಸುಮಧುರ ಧ್ವನಿಯಿಂದ ನಾಯಕಿ ಕಾನಡಾ ರಾಗವನ್ನು ಆರಂಭಿಸಿದಾಗ ಕೇಳುಗರೆಲ್ಲ ಸನ್ಮೋಹಿನಿಗೆ ಒಳಗಾದವರಂತೆ ಮಂತ್ರಮುಗ್ಧರಾಗಿ ಆಲಿಸ ತೊಡಗಿದರು. ಕರ್ಣರಸಾಯನ ಮಧುರ ಧ್ವನಿ ಹಾಗೂ ವಿಶಿಷ್ಟ ಶೈಲಿಯ ಗಾಯನ ಅವರನ್ನು ಗಂಧರ್ವ ಲೋಕಕ್ಕೆ ಕರೆದೊಯ್ದಿತ್ತು. ಓಂಕಾರನಾಥರನ್ನು ಮರೆಯಿಸಿ ಕೇಳುಗರನ್ನು ತನ್ನತ್ತ ಸೆಳೆದುಕೊಂಡ ಆ ಗಾನಗಾರುಡಿಗ ಬೇರಾರು ಅಲ್ಲ, ಪಂ. ಬಸವರಾಜ ರಾಜಗುರು. ಆ ಬೈಠಕನಿಂದ ದೇಶದ ಸಂಗೀತ ಕಲಾವಿದರೆಲ್ಲರ ಗಮನ ಸೆಳೆದು ಮೆಚ್ಚುಗೆಗೆ



ಪಾತ್ರರಾದರು. ಅವರ ಕಂಠಸಿರಿಯನ್ನು ಮೆಚ್ಚಿಕೊಂಡ ಗಜಲ್ ರಾಣಿ ಬೇಗಂ ಅಖ್ತರ "ರಾಜಗುರು" ಯಾನೆ "ಸೂರಕಾ ಬಾದಶಹಾ" ಎಂದು ಕರೆದರು.

ಅಹಂಕಾರಿಗೆ ತಕ್ಕಪಾಠ

ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಗೋಳವಲಕರ ಎಂಬ ಒಬ್ಬ ವಕೀಲರು ಪಂ. ಬಸವರಾಜ ರಾಜಗುರು ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಅವರೊಂದಿಗೆ ತಬಲಾ ಸಾಥ್ ನೀಡಲು ಆ ಭಾಗದ ಪ್ರಸಿದ್ಧ ತಬಲಾವಾದಕ ಟೀಕಾರಾಮರನ್ನು ಕರೆಸಿದ್ದರು. ಆತನು ತುಂಬಾ ಸೊಕ್ಕಿನವನಾಗಿದ್ದ. ಆತನನ್ನು ಕಂಡ ಕೂಡಲೇ ರಾಜಗುರುಗಳು ಶಿಷ್ಟಾಚಾರದಂತೆ ಕೈಮುಗಿದರು. ಆದರೆ ಆತ ಪ್ರತಿ ನಮಸ್ಕಾರ ಎನ್ನದೆ ತಿರಸ್ಕಾರದ ದೃಷ್ಟಿಯಿಂದ ನೋಡುತ್ತಾ ಕುಳಿತ. ರಾಜಗುರುಗಳ ಮನಸ್ಸಿಗೆ ಇದು ಕುಟುಕಿತು. ಇವನಿಗೆ ಒಂದು ಕೈ ತೋರಿಸಿಯೇ ಬಿಡುವಾ ಎಂದುಕೊಂಡು ವೇದಿಕೆಯನ್ನೇರಿದರು. ಚಂಪಕ ಸವಾರಿ ತಾಳದಲ್ಲಿ ಖ್ಯಾಲ ಆರಂಭಿಸಿದರು. ಆ ತಾಳದ ಪರಿಚಯವೇ ಅವನಿಗೆ ಇರಲಿಲ್ಲ. ಅವನ ಮುಖ ಬಿಳುಚಿಕೊಂಡಿತು. ರಾಜಗುರುಗಳು ಅವನಿಗೆ ಕಲಿಸುವ ರೀತಿಯಲ್ಲಿ ಕೈಯಿಂದ ತಾಳಹಾಕಿ ತೋರಿಸಿದರು, ಆದರೂ ತಾಳ ಅವನ ಕೈಗೆ ಹತ್ತಲಿಲ್ಲ. ಆಗ ಅವನನ್ನು ಬದಿಗೆ ಸರಿಸಿ ಸಂಗೀತ ಕೇಳಲು ಬಂದಿದ್ದ ಇನ್ನೊಬ್ಬ ತಬಲಜೀಯನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಆರಂಭಿಸಿದರು. ಅಮೋಘವಾದ ಗಾಯನವಾಯಿತು. ಸಂಘಟಕರಾದ ಗೋಳವಲಕರ ವಕೀಲರು ಪಂ. ರಾಜಗುರುಗಳ ಬಳಿಗೆ ಬಂದು ದಯವಿಟ್ಟು ಟೀಕಾರಾಮನನ್ನು ತೆಗೆದುಕೊಂಡು ಒಂದು ಹಾಡಿರಿ ಅವನನ್ನು ತಮ್ಮ ಸಲುವಾಗಿಯೇ ಕರೆಸಿದ್ದೇವೆ ಎಂದು ವಿನಂತಿಸಿಕೊಂಡರು. ಒಬ್ಬ ಕಲಾವಿದನನ್ನು ಅವಮಾನಿಸುವುದು ಬೇಡ ಎಂದು ಆತನನ್ನು ತೆಗೆದುಕೊಂಡು ತೀನ್‌ತಾಲದಲ್ಲಿ ಖ್ಯಾಲ್ ಆರಂಭಿಸಿದರು. ಆಗ ಟೀಕಾರಾಮನು ಇವರನ್ನು ಏನಾದರೂ ಮಾಡಿ ಗಾಬರಿಗೊಳಿಸಬೇಕೆಂದು ಸಮ್ ತೋರದೆ ಒಂದೇ ಸವನೆ ಬೋಲ್‌ಗಳನ್ನು ಬಾರಿಸತೊಡಗಿದ. ಆದರೆ ಎಳ್ಳಷ್ಟು ಅಳುಕದೆ ಸರಿಯಾಗಿ ಸಮ್‌ಗೆ ಬರುತ್ತಿರುವುದನ್ನು ಕಂಡು ತನ್ನ ಕಸರತ್ತನ್ನು ನಿಲ್ಲಿಸಿದ. ಕಾರ್ಯಕ್ರಮ ಮುಗಿದ ನಂತರ ಚಿಕ್ಕಭಾಷಣವನ್ನು ಮಾಡಿ "ನನ್ನ ತಬಲಾದೊಂದಿಗೆ ಹಾಡಲಾಗದೆ ಅನೇಕರು ಓಡಿ ಹೋಗಿದ್ದಾರೆ. ನನ್ನನ್ನು ಗೆದ್ದವರು ರಾಜಗುರುಗಳೊಬ್ಬರೇ" ಎಂದು ಕೈ ಮುಗಿದನಂತೆ. ಅವರಿಗೆ ಲಯದ ಮೇಲೆ ಹಿಡಿತ ಬರಲು ಗುರು ಪಂಚಾಕ್ಷರಿ ಗವಾಯಿಗಳೇ ಕಾರಣ. ಅವರು ತಾವೇ ಸ್ವತಃ ತಬಲಾ ನುಡಿಸುತ್ತಾ ಅಭ್ಯಾಸ ಮಾಡಿಸುತ್ತಿದ್ದರಲ್ಲದೇ ಒಂದೇ ರಾಗವನ್ನು ಅನೇಕ ತಾಳಗಳಲ್ಲಿ ಹಾಡುವ ಕ್ರಮವನ್ನು ರೂಢಿ ಮಾಡಿಸಿದ್ದರು. ಹೀಗಾಗಿ ರಾಜಗುರುಗಳು ಅದ್ಭುತವಾಗಿ ಲಯಕಾರಿ ಕೆಲಸಗಳನ್ನು ಮಾಡುತ್ತಿದ್ದರು.



ಆತ್ಮೀಯ ಮಿತ್ರರು

ಭಾರತರತ್ನ ಪಂ. ಭೀಮಸೇನ ಜೋಶಿ ಹಾಗೂ ಪಂ. ಬಸವರಾಜ ರಾಜಗುರುಗಳು ಆತ್ಮೀಯ ಮಿತ್ರರಾಗಿದ್ದರು. ಏಕವಚನದಲ್ಲಿಯೇ ಇವರ ಸಂಭಾಷಣೆ. ಹಿಂದೆ ಆಕಾಶವಾಣಿಯಲ್ಲಿ ಹಾಡುವುದರ ಸಲುವಾಗಿ ಕೆಲ ತಿಂಗಳುಕಾಲ ಔರಂಗಬಾದನಲ್ಲಿ ಇಬ್ಬರೂ ಒಂದೇ ಕೋಣೆಯಲ್ಲಿದ್ದು ಸಾಧನೆ ಮಾಡಿದವರು. ಆವಾಗ ಇಬ್ಬರೂ ತಾವೇ ಸ್ವತಃ ಅಡುಗೆ ಮಾಡಿಕೊಳ್ಳುತ್ತಿದ್ದರು. ಖರ್ಚುವೆಚ್ಚವನ್ನು 'ಓನ್-ಬೈ-ಟೂ', ಮಾಡಿ ವಹಿಸಿಕೊಳ್ಳುತ್ತಿದ್ದರಂತೆ. ಅದೊಂದು ಮೋಜಿನ ಕಾಲವಾಗಿತ್ತು ಎಂದು ಇಬ್ಬರೂ ಮಹಾನ್‌ಗಾಯಕರು ನೆನಪಿಸಿಕೊಳ್ಳುತ್ತಿದ್ದುದುಂಟು. ಪಂ. ಜೋಶಿಯವರು ಪುಣೆಯಿಂದ ಕುಂದಗೋಳಕ್ಕೆ ಹೋಗುವಾಗ ಧಾರವಾಡದಲ್ಲಿದ್ದ ತಮ್ಮ ಗೆಳೆಯ ಪಂ. ಬಸವರಾಜ ರಾಜಗುರುಗಳ ಮನೆಗೆ ಕಾರನ್ನು ಹೊರಳಿಸಿಕೊಂಡು ಹೋಗಿ ಭೆಟ್ಟಿಯಾಗಿ ಕುಶಲ ವಿಚಾರಿಸಿ ತಾಸುಗಟ್ಟಲೇ ಆತ್ಮೀಯ ಹರಟೆ, ಹಳೆಯ ನೆನಪುಗಳನ್ನು ಮೆಲಕು ಹಾಕುತ್ತಿದ್ದರು. ಎಷ್ಟೋ ಸಾರಿ ಬೇರೆ ಗಾಯಕ ಗಾಯಕಿಯರ ನಕಲು ಕೂಡಾ ಮಾಡುತ್ತಿದ್ದುದುಂಟು. ಒಮ್ಮೆ ಬಂದಾಗ ಅಲ್ಲಿಯೇ ನಿಂತಿದ್ದ ನನ್ನನ್ನು ಕಂಡು "ಪರೀಕ್ಷಾ ಪಾಸ್ ಆಗಿಯೋ ಇಲ್ಲೋ?" ಎಂದು ಕೇಳಿದರು. ನಾನು 'ಪಾಸ ಆಗೇನ್ರಿ' ಎಂದು ಹೇಳಿದಾಗ ತಮ್ಮ ಜಾಕೇಟಿನ ಕಿಸೆಯಿಂದ ಹತ್ತು ರೂಪಾಯಿ ತೆಗೆದು ಚಾಕಲೇಟ ತಿನ್ನು ಎಂದು ಕೊಟ್ಟಿದ್ದು ಇನ್ನೂ ನನಗೆ ನೆನಪಿದೆ. ರಾಜಗುರು ಅವರನ್ನು ಎಲ್ಲಿಯೇ ಭೆಟ್ಟಿಯಾಗಲಿ ಪಂ. ಜೋಶಿಯವರು ಗಟ್ಟಿಯಾಗಿ ಹಿಡಿದುಕೊಂಡು ಅಲ್ಲಿಯೇ ನಿಲ್ಲಿಸಿ ಬಿಡುತ್ತಿದ್ದರು.

೧೯೫೨ರಲ್ಲಿ ಎಚ್.ಎಂ.ವಿ. ಕಂಪನಿ ಪಂ. ಬಸವರಾಜ ರಾಜಗುರುಗಳು ಹಾಡಿದ "ಜಾರುತಿದೆ ಜೀವನದ ನಶ್ವರದ ಕಾಲನದಿ" ಮತ್ತು "ದೇವರ ಮನೆ ಕಡೆ ನೋಡುತ್ತಿರೇನಾ" ಹಾಗೂ ಪಂ. ಭೀಮಸೇನ ಜೋಶಿಯವರು ಹಾಡಿದ "ಹರಿಭಜನೆ ಮಾಡೋ ನಿರಂತರ" ಮತ್ತು "ಎಂದಿಗಾಹುದು ನಿನ್ನ ದರುಶನ" ಎಂಬ ಹಾಡುಗಳ ಡಿಸ್ಕಗಳನ್ನು ಒಂದೆ ಬಾರಿ ಬಿಡುಗಡೆ ಮಾಡಿತು. ಇಬ್ಬರೂ ಕಲಾವಿದರ ಪೋಟೋಗಳನ್ನು ವಿವರಗಳನ್ನು ಮುದ್ರಿಸಿದ "ನ್ಯೂ ಕನ್ನಡಾ ರಿಕಾರ್ಡಿಂಗ್ಸ್" ಎಂಬ ಜಾಹೀರಾತಿನ ಪ್ರತಿ ಇನ್ನೂ ನನ್ನ ಸಂಗ್ರಹದಲ್ಲಿದೆ.

೧೯೯೩ರಲ್ಲಿ ನಾನು ಪಂ. ರಾಜಗುರುಗಳ ಸ್ಮರಣೆಯ ಕಾರ್ಯಕ್ರಮವನ್ನು ಧಾರವಾಡದಲ್ಲಿ ಆಯೋಜನೆ ಮಾಡಿದಾಗ ಪಂ. ಜೋಶಿಯವರು ಯಾವ ಸಂಭಾವನೆಯನ್ನು ಅಪೇಕ್ಷಿಸದೆ ಇಂದು ನನ್ನ ಗೆಳೆಯನ ಸಲುವಾಗಿ ಹಾಡುತ್ತಿದ್ದೇನೆ ಎಂದು ಹೇಳಿ ಅಮೋಘವಾದ ಕಾರ್ಯಕ್ರಮವನ್ನು ನೀಡಿದರು. ೨೦೧೦ ಮೇ ತಿಂಗಳಿನಲ್ಲಿ ನಾವು ಪಂ. ರಾಜಗುರುಗಳ ಸ್ಮರಣೆಯ ಕಾರ್ಯಕ್ರಮವನ್ನು ಪುಣೆಯಲ್ಲಿ ಮಾಡಿದಾಗ ನಾನು ಅವರನ್ನು ಭೇಟಿಯಾದಾಗ ತಮ್ಮ ಗೆಳೆಯನನ್ನು ನೆನಪಿಸಿಕೊಂಡು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.



ಗ್ವಾಲಿಯರ್‌ದಲ್ಲಿ ಗಾಯನ

ಗ್ವಾಲಿಯರ್‌ದಲ್ಲಿ ನಡೆಯುವ ತಾನ್‌ಸೇನ್ ಸಂಗೀತ ಸಮಾರೋಹ ನಮ್ಮ ದೇಶದಲ್ಲಿಯೇ ಅತೀ ದೊಡ್ಡ ಸಂಗೀತ ಸಮ್ಮೇಳನ. ಅದರಲ್ಲಿ ಭಾಗವಹಿಸುವುದೆಂದರೆ, ಸಂಗೀತಗಾರರಿಗೆ ದೊಡ್ಡ ಹೆಮ್ಮೆಯ ವಿಷಯ. ೧೯೬೧ರಲ್ಲಿ ರಾಜಗುರು ಅವರಿಗೆ ಆಮಂತ್ರಣ ಬಂದಿತು. ಅನೇಕ ಹಿರಿಯ ಸಂಗೀತಗಾರರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ದಿಗ್ಗಜ ಕಲಾಕಾರರ ನಂತರ ರಾಜಗುರುಗಳ ಸರದಿ ಬಂದಿತು. ರಾಗ ಶಂಕರಾ ಹಾಡಲು ಆರಂಭಿಸಿದರು. ಅದಕ್ಕೂ ಮೊದಲು ಆ ರಾಗದ ಬಗ್ಗೆ ತಿಳಿಸಿದ ಅವರು "ನಾನು ಹಾಡುವ ಚೀಜ್ ತುಂಬಾ ಅಪರೂಪವಾದುದು. ಗ್ವಾಲಿಯರ್ ಘರಾಣೆಯ ವೈಶಿಷ್ಟ್ಯವನ್ನು ಒಳಗೊಂಡಿರುವ ಇದನ್ನು ಗ್ವಾಲಿಯರ್‌ನಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ಹಾಡುವ ಅವಕಾಶ ನನಗೆ ದೊರತಿದೆ. ಇದು ನನ್ನ ಭಾಗ್ಯವೆಂದು ತಿಳಿಯುತ್ತೇನೆ" ಎಂದು ಹಿಂದಿಯಲ್ಲಿ ಹೇಳಿ ಶಂಕರಾ ರಾಗದ "ಆದ ಮಹಾದೇವ" ಎಂಬ ಚೀಜನ್ನು ಪ್ರಸ್ತುತಪಡಿಸಲು ಆರಂಭಿಸಿದರು. ಅದು ಅಲ್ಲಿನ ಕೇಳುಗರ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ ಎಲ್ಲರೂ ಆ ರಾಗವನ್ನು ಕೇಳುತ್ತಾ ತಲ್ಲೀನರಾಗಿ ಗಾನಲೋಕದಲ್ಲಿ ವಿಹರಿಸುತ್ತಿದ್ದರು. ಕಾರ್ಯಕ್ರಮ ಮುಗಿದ ಮೇಲೆ ಗ್ವಾಲಿಯರ್ ಘರಾಣೆಯ ಹಿರಿಯ ಗಾಯಕರಾಗಿದ್ದ ಕೃಷ್ಣರಾವ್ ಪಂಡಿತ ಅವರು ವೇದಿಕೆಯ ಮೇಲೆ ಬಂದು "ಗ್ವಾಲಿಯರ್ ಘರಾಣೆ ಅಷ್ಟಾಂಗ ಪ್ರಧಾನವಾಗಿದೆ. ಆ ಎಲ್ಲಾ ಅಂಗಗಳು ನಿಮ್ಮ ಗಾಯನದಲ್ಲಿ ಮೂಡಿಬಂದವು. ಗಮಕ್‌ಗಳ ಪ್ರಯೋಗ, ಅಪ್ರತಿಮವಾಗಿತ್ತು" ಎಂದು ಬಸವರಾಜರಿಗೆ ಹೇಳಿ ತಬ್ಬಿಕೊಂಡು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆ ಕಾರ್ಯಕ್ರಮಕ್ಕೆ ಗ್ವಾಲಿಯರ್‌ನ ಮಹಾರಾಣಿಯವರು ಕೂಡ ಆಗಮಿಸಿದ್ದರು. ಅವರೂ ಕೂಡ ರಾಜಗುರು ಅವರನ್ನು ತುಂಬು ಹೃದಯದಿಂದ ಅಭಿನಂದಿಸಿದ್ದರು.

ಜುಗಲ್‌ಬಂದಿ ಅವಿಸ್ಮರಣೀಯ

೧೯೬೮ರ ಮಾರ್ಚ್ ತಿಂಗಳಿನಲ್ಲಿ ಮುಂಬೈಯ ಬಿರ್ಲಾ ಮಾತೋಶ್ರೀ ಭವನದಲ್ಲಿ ಸ್ವಾಮಿಹರಿದಾಸ ಜಯಂತಿ ನಿಮಿತ್ತ ಸಂಗೀತ ಉತ್ಸವವನ್ನು ನಡೆಸಲಾಯಿತು. ಅದರಲ್ಲಿ ಒಂದು ವಿಶೇಷವೇನೆಂದರೆ ಪಂಡಿತ ಬಸವರಾಜ ರಾಜಗುರು ಹಾಗೂ ಉಸ್ತಾದ ನಸೀರ ಅಹಮದ್ ಅವರ ಜುಗಲ್ ಬಂದಿ ಕಾರ್ಯಕ್ರಮ ಎಷ್ಟೊಂದು ರೋಚಕವಾಗಿತ್ತೆಂದರೆ ಶ್ರೋತೃಗಳು ತುಂಬಾ ಕುತೂಹಲದಿಂದ ತನ್ಮಯರಾಗಿ ಕೇಳುತ್ತಿದ್ದರು. ಇಬ್ಬರು ದೊಡ್ಡ ಕಲಾವಿದರು. ಅವರು ಆರಿಸಿಕೊಂಡಿದ್ದು ರಾಗ-ಶುದ್ಧ ಕಲ್ಯಾಣ. ಇದು ರಾಜಗುರುಗಳಿಗೆ ಅತ್ಯಂತ ಪ್ರಿಯವಾದ ರಾಗ. ಇಬ್ಬರೂ ಅತ್ಯುತ್ತಮವಾಗಿ ರಾಗವನ್ನು ನಿರೂಪಿಸುತ್ತಾ ಬಂದರು. ಆದರೆ ರಾಜಗುರುಗಳ ವೈಶಿಷ್ಟ್ಯಪೂರ್ಣ ಶೈಲಿ ಹಾಗೂ ಇಂಪಾದ ಧ್ವನಿಯ ಮುಂದೆ ನಸೀರ್ ಅಹಮದ್ ಸಪ್ಪೆ ಎನಿಸತೊಡಗಿದರು. ಅವರು ತಾನ್‌ಗಳನ್ನು ಒಂದರ ಮೇಲೊಂದರಂತೆ



ಗಿರಕಿಹೊಡೆದಂತೆ ನಿರೂಪಿಸತೊಡಗಿದರು. ಇದು ಶ್ರೋತೃಗಳ ಮೇಲೆ ಅಷ್ಟೊಂದು ಪರಿಣಾಮ ಬೀರಲಿಲ್ಲ. ರಾಜಗುರುಗಳು ರಾಗದ ವಿಸ್ತಾರ, ಲಯಕಾರಿ, ಮೀಂಡ, ಗಮಕ್ ವಿವಿಧ ಬಗೆಯ ತಾನ್‌ಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸತೊಡಗಿದರು. ಅದು ಶ್ರೋತೃಗಳ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಪ್ರಭಾವ ಬೀರಿತು. ಕಚೇರಿ ಮುಗಿದ ಮೇಲೆ ಉಸ್ತಾದ ಅಮೀರ್‌ಖಾನರು ರಾಜಗುರುಗಳ ಬಳಿಗೆ ಬಂದು ಬೆನ್ನು ಚಪ್ಪರಿಸಿ "ಕ್ಯಾ ಖೂಬ್ ಗಾಯಾ" ಎಂದು ಹೊಗಳಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇದೊಂದು ಅವಿಸ್ಮರಣೀಯ ಸಂಗತಿ. ಏಕೆಂದರೆ ಅಮೀರಖಾನ್ ಸಾಹೇಬರು ಯಾರನ್ನೂ ಸುಮ್ಮನೆ ಹೊಗಳುತ್ತಿರಲಿಲ್ಲ. ಕೇಳುಗರ ಉತ್ಸಾಹವಂತೂ ಹೇಳತೀರದು. ಎಲ್ಲರೂ ಬಂದು ನಮಸ್ಕಾರ ಮಾಡಿ, ಕೈಕುಲಕಿ ಅಭಿನಂದಿಸಿದರು.

ಸ್ವಾಮಿಗಳ ಆಶೀರ್ವಾದ

ಚಿಕ್ಕಂದಿನಿಂದಲೂ ಶಿವಯೋಗ ಮಂದಿರದ ಪವಿತ್ರ ವಾತಾವರಣದಲ್ಲಿ ಬೆಳೆದ ರಾಜಗುರುಗಳಿಗೆ ಸ್ವಾಮಿಗಳೆಂದರೆ ತುಂಬಾ ಭಕ್ತಿ ಗೌರವ. ಅವರ ಆಶೀರ್ವಾದವೇ ತನ್ನ ಉನ್ನತಿಗೆ ಕಾರಣವೆಂದು ತಿಳಿದುಕೊಂಡಿದ್ದರು. ಮಠಮಾನ್ಯಗಳಲ್ಲಿ ಸಂಗೀತ ಸೇವೆಯನ್ನು ಸಲ್ಲಿಸುವುದು ತನ್ನ ಕರ್ತವ್ಯವೆಂದು ತಿಳಿದುಕೊಂಡು ಶಿವಯೋಗ ಮಂದಿರ, ಗದಗಿನ ವೀರೇಶ್ವರ ಪುಣ್ಯಾಶ್ರಮ, ಧಾರವಾಡದ ಮುರುಘಾಮಠಗಳಲ್ಲಿ ಪ್ರತಿ ವರ್ಷವು ತಪ್ಪದೇ ಅವರು ಭಕ್ತಿಯಿಂದ ಸಂಗೀತ ಸೇವೆಯನ್ನು ನೀಡುತ್ತಿದ್ದರು. ಬೆಂಗಳೂರಿನ ಸರ್ಪಭೂಷಣ ಮಠದಲ್ಲಿಯೂ ಕೂಡ ಅವರ ಗಾಯನವಿರುತ್ತಿತ್ತು.

ಅವರು ವಿದ್ಯಾರ್ಥಿಯಾಗಿದ್ದಾಗ ಶಿವಯೋಗ ಮಂದಿರದ ಆಶ್ರಮದಲ್ಲಿ ಹಾವೇರಿಯ ಶಿವಬಸವ ಸ್ವಾಮಿಗಳು ಕೂಡಾ ಇದ್ದರು. ಅವರು ಮಹಾ ತಪಸ್ವಿಗಳು, ಸಿದ್ಧಿಪುರುಷರು, ಅವರ ಸೇವೆಯನ್ನು ಮಾಡುವ ಭಾಗ್ಯ ಬಸವರಾಜರಿಗೆ ದೊರಕಿತ್ತು. ಅವರನ್ನು ಕರೆದುಕೊಂಡು ಆಗಾಗ ಸಂಚಾರಕ್ಕೆಂದು ಊರ ಹೊರಗೆ ಹೋಗುತ್ತಿದ್ದರು. ಒಂದು ದಿನ ಸಾಯಂಕಾಲ ಸಂಚಾರಕ್ಕೆಂದು ಬಹಳ ದೂರ ಊರ ಹೊರಗೆ ಹೋದರು. ಆಗ ಸ್ವಾಮಿಗಳು ಇವರ ಕೈಯಲ್ಲಿ ತಮ್ಮ ಬೆತ್ತ ಶಾಲನ್ನು ನೀಡಿ ನೀನು ಇಲ್ಲೇ ಇರು ನಾನು ದೂರ ಹೋಗಿ ಬರುತ್ತೇನೆಂದು ಮುಂದೆ ಹೋದರು. ರಾಜಗುರುಗಳು ಬೆತ್ತವನ್ನು ಹಿಡಿದುಕೊಂಡು ಸುತ್ತಲೂ ಕಣ್ಣುಹಾಯಿಸಿ ನೋಡಿದಾಗ ಅಲ್ಲೊಂದು ಸ್ಮಶಾನವಿತ್ತು. ಮುಸ್ಸಂಜೆಯ ಹೊತ್ತು ನಸುಗತ್ತಲು. ರಾಜಗುರುಗಳ ಮನದಲ್ಲಿ ಭೀತಿ ಆವರಿಸಿ ಕಣ್ಣುಮುಚ್ಚಿ ಅಲ್ಲಿಯೇ ನಡುಗುತ್ತಾ ಕುಳಿತರು. ಸ್ವಲ್ಪ ಹೊತ್ತಿನ ಮೇಲೆ ಸ್ವಾಮಿಗಳು ಬಂದು ಇವರು ನಡುಗುತ್ತಿರುವುದನ್ನು ಕಂಡು 'ಯಾಕೆ ಹೆದರಿದ್ದಿ ಏನು ಆಗುವುದಿಲ್ಲ ದೆವ್ವಗಿವ್ವ ಏನೂ ಇಲ್ಲ' ಎಂದು ಹೇಳಿ ಕೈ ಹಿಡಿದು ಕರೆದುಕೊಂಡು ಹೋದರು. ಆಶ್ರಮಕ್ಕೆ ಹೋದ ಮೇಲೆ ಬಸವರಾಜರನ್ನು ಕರೆದು 'ಇನ್ನು



ಮುಂದೆ ನಿನಗೆ ಹೆದರಿಕೆ ಆಗದಂತೆ ಮಾಡುತ್ತೇನೆ ಬಾ' ಎಂದು ಅವರ ತಲೆ ಮೇಲೆ ಕೈ ಇಟ್ಟು ಮಂತ್ರ ಹೇಳಿ ಆಶೀರ್ವಾದ ಮಾಡಿದರಂತೆ. ಆಗ ಅವರ ಮನಸ್ಸಿನಲ್ಲಿದ್ದ ಹೆದರಿಕೆ ಮಾಯವಾಯಿತು. ಮುಂದೆ ಆ ತರಹದ ಹೆದರಿಕೆಯೇ ಆಗಲಿಲ್ಲವಂತೆ.

ಧಾರವಾಡಕ್ಕೆ ಬಂದ ಮೇಲೆ ಮುರುಘಾಮಠದ ಪೂಜ್ಯ ಶ್ರೀ ಮೃತ್ಯುಂಜಯಪ್ಪಗಳವರ ಸನ್ನಿಧಿಯಲ್ಲಿ ಹಲವಾರು ಬಾರಿ ಸಂಗೀತ ಕಾರ್ಯಕ್ರಮಗಳನ್ನು ನೀಡಿ ಅವರ ಕೃಪೆಗೆ ಪಾತ್ರರಾದರು. ರಾಜಗುರುಗಳ ಗಾಯನವೆಂದರೆ ಅವರಿಗೆ ಅಚ್ಚುಮೆಚ್ಚು. ಇವರ ಗಾಯನ ಮುಗಿಯುವ ವರೆಗೂ ಪೂಜೆ, ಪ್ರಸಾದ ಮಾಡುತ್ತಿರಲಿಲ್ಲ. ಮೃತ್ಯುಂಜಯಪ್ಪಗಳವರ ಕೊನೆಯ ಅವಧಿಯಲ್ಲಿ ರಾಜಗುರುಗಳು ಅವರನ್ನು ನೋಡಲು ಹೋಗಿದ್ದರು. ಇವರನ್ನು ಕಂಡ ತಕ್ಷಣ ಅಪ್ಪಗಳು ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು. ಅಸ್ಪಷ್ಟವಾಗಿ ಮಾತನಾಡಿ ಒಂದು ವಚನವನ್ನು ಹಾಡಲು ತಿಳಿಸಿದರು. ಇವರು "ನಂಬಿ ಕರೆದೊಡೆ ಓ ಎನ್ನನೇ ಶಿವನು" ಎಂಬ ವಚನವನ್ನು ಹಾಡಿದಾಗ ಕೇಳುತ್ತಾ ಸಂತೋಷಗೊಂಡು ನಿದ್ರೆ ಮಾಡತೊಡಗಿದರು. ಇದಾದ ಮರುದಿನವೇ ಅವರ ಇಹಲೋಕವನ್ನು ತ್ಯಜಿಸಿದರು.

ನಿನ್ನ ಸಂಗೀತಕ್ಕೆ ನಮ್ಮ ನಮಸ್ಕಾರ

ವಿಜಾಪುರದಲ್ಲಿ ಶಂಭುಲಿಂಗ ಶಿವಚಾರ್ಯ ಮಹಾಸ್ವಾಮಿಗಳು ತಮ್ಮ ಮಠಕ್ಕೆ ರಾಜಗುರುಗಳನ್ನು ಕರೆಸಿದ್ದರು. ಬಸವರಾಜರು ಹಾಡಲು ಕುಳಿತಾಗ ಶ್ರೀಗಳು ಅವರಿಗೆ "ಯಾವ ರಾಗವನ್ನು ಹಾಡುತ್ತೀ?" ಎಂದು ಕೇಳಿದರು. ಆಗ ಇವರು "ಕೇದಾರ ರಾಗವನ್ನು ಹಾಡುತ್ತೇನೆ" ಎಂದರು. ಸ್ವಾಮಿಗಳು ಆಗ "ನೀನು ಕೇದಾರ ರಾಗವನ್ನು ಹಾಡಿದರೆ ಅದನ್ನು ಕೇಳಿದ ನಮಗೆ ಕೇದಾರನಾಥನ ದರ್ಶನವಾಗಬೇಕು" ಎಂದು ಹೇಳಿದರು. ಬಸವರಾಜರು 'ಆಗಲಿ ಗುರುವಿನ ಅನುಗ್ರಹ ನನ್ನ ಮೇಲಿದ್ದರೆ ಹಾಗೆಯೇ ಆಗಲಿ' ಎಂದು ತಮ್ಮ ಗುರುಗಳಾದ ಪಂಚಾಕ್ಷರಿ ಗುರುಗಳನ್ನು ನೆನಸಿಕೊಂಡು ಕೇದಾರರಾಗವನ್ನು ಹಾಡಿದರು. ಅವರು ಹಾಡಿದ ಆ ರಾಗ ಒಂದು ಅಪರೂಪವಾದ ರಸಲೋಕವನ್ನು ನಿರ್ಮಿಸಿತ್ತು. ಅವರು ಎಷ್ಟೊಂದು ತಲ್ಲೀನರಾಗಿ ಹಾಡಿದರೆಂದರೆ ಶ್ರೋತೃಗಳು ಕೂಡ ಸಂಗೀತಲೋಕದಲ್ಲಿ ತನ್ಮಯರಾಗಿ ಹೋಗಿದ್ದರು. ರಾಗ ಮುಗಿದ ತಕ್ಷಣ ಶಂಭುಲಿಂಗ ಮಹಾಸ್ವಾಮಿಗಳು ಎದ್ದು ನಿಂತು 'ನಮಗೆಲ್ಲಾ ಕೇದಾರನಾಥನ ದರ್ಶನ ಮಾಡಿಸಿದ ನಿನ್ನ ಸಂಗೀತಕ್ಕೆ ನಮ್ಮ ಮನಃಪೂರ್ವಕ ನಮಸ್ಕಾರಗಳು' ಎಂದಾಗ ರಾಜಗುರುಗಳಿಗೆ ಒಂದು ಕ್ಷಣ ತಮ್ಮನ್ನೇ ನಂಬದಂತಾಗಿತ್ತು.

ಸಂಗೀತ ಸಾಮ್ರಾಟ್

ಬಾಗಲಕೋಟೆಯ ಹುನಗುಂದ ತಾಲ್ಲೂಕಿನಲ್ಲಿರುವ ಸಿದ್ಧನಕೊಳ್ಳ ಒಂದು ಪವಿತ್ರ ಕ್ಷೇತ್ರ. ಅದರ ಸ್ವಾಮಿಗಳು ಸಿದ್ಧನಕೊಳ್ಳದ ಪೂಜ್ಯ ಶ್ರೀ ಅಜ್ಜನವರು ತುಂಬಾ ಸಂಗೀತ



ಪ್ರಿಯರು. ರಾಜಗುರುಗಳ ಸಂಗೀತವೆಂದರೆ ಪಂಚಪ್ರಾಣ. ಅವರು ಹಾಡಿದ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ಪುರಂದರದಾಸರ ಹಾಡನ್ನು ಬಹಳವಾಗಿ ಮೆಚ್ಚಿಕೊಂಡು ಅವರು "ಅಂದು ಮಹಾನ್ ಗುರುವಿನ ಗುಲಾಮನಾಗಿದ್ದರಿಂದಲೇ ನೀನು ಇಂದು ಸಂಗೀತ ಸಾಮ್ರಾಜ್ಯದ ಸಾಮ್ರಾಟನಾಗಿ ಮೆರೆಯುತ್ತಿರುವೆ, ನೀನು ನಿಜಕ್ಕೂ 'ಸಂಗೀತ ಸಾಮ್ರಾಟ್'ನೇ ಸರಿ ಎಂದು ಹೇಳಿ ಸನ್ಮಾನ ಮಾಡಿ ಆಶೀರ್ವದಿಸಿದರು.

ಇಂಚರ : ಅಭಿನಂದನಾ ಗ್ರಂಥ

ರಾಜಗುರುಗಳನ್ನು ಬಹಳವಾಗಿ ಮೆಚ್ಚಿಕೊಂಡು ಅವರನ್ನು ಆದರಿಸಿ ಗೌರವಿಸಿದವರಲ್ಲಿ ಹೊಸಪೇಟೆಯ ಕೊಟ್ಟೂರು ಮಠದ ಶ್ರೀ ಸಂಗನಬಸವ ಮಹಾಸ್ವಾಮಿಗಳು ಒಬ್ಬರು. ಅವರು "ಸಂಗೀತ ಶಾಸ್ತ್ರದ ಬಗ್ಗೆ ಏನೂ ಗೊತ್ತಿಲ್ಲದ ನಮಗೆ ಅದನ್ನು ಕೇಳುವ, ಅನುಭವಿಸುವ ಹವ್ಯಾಸವನ್ನು ಬಸವರಾಜರು ಹಚ್ಚಿದರು. ಎಂತೆಂಥಹ ಗಾಯಕರ ಸಂಗೀತವನ್ನು ಕೇಳಿದ್ದೇವೆ. ಆದರೆ ರಾಜಗುರುಗಳ ಸಂಗೀತದ ರಸಾನಂದ ಬೇರೆ ಯಾರಲ್ಲೂ ಕಾಣುವುದಿಲ್ಲ. ಅವರ ಗಾಯನ ಕೇಳುತ್ತಿದ್ದರೆ ಇನ್ನೂ ಕೇಳಬೇಕೆಂಬ ಆಸೆ ಬೆಳೆಯುತ್ತಲೇ ಹೋಗುತ್ತದೆ. ದೊಡ್ಡ ಕಲಾವಿದರಾದರೂ ತುಂಬಾ ಸರಳ ವ್ಯಕ್ತಿಗಳು. ಒಮ್ಮೆ ಬಳ್ಳಾರಿಯ ನಮ್ಮ ಮಠಕ್ಕೆ ಬಂದಾಗ ತಾವೇ ಸ್ವತಃ ಕೆಂಪು ಮೆಣಸಿನಕಾಯಿ ಚಟ್ನಿಯನ್ನು ಮಾಡಿಕೊಟ್ಟಿದ್ದರು. ಅಂತಹ ಚಟ್ನಿಯ ರುಚಿ ನಾನು ಕಂಡಿಲ್ಲ" ಎಂದು ಹೇಳುತ್ತಾರೆ. ಪಂ. ಬಸವರಾಜ ರಾಜಗುರುಗಳ ಕುರಿತು ಇಂಚರವೆಂಬ ಅಭಿನಂದನಾ ಗ್ರಂಥವನ್ನು ಬರೆಯಿಸಿ ಶ್ರೀಮಠದಿಂದ ಪ್ರಕಟಣೆ ಮಾಡಿಸಿದ್ದಾರೆ.

ಪಕ್ಷಿಪ್ರೇಮ

ಮೂಕ ಪ್ರಾಣಿ ಪಕ್ಷಿಗಳನ್ನು ಕಂಡರೆ ರಾಜಗುರುಗಳಿಗೆ ತುಂಬಾ ಪ್ರೀತಿ. ಒಮ್ಮೆ ಕೋಲ್ಕತ್ತಾಕ್ಕೆ ಹೋದಾಗ, ಶಿಷ್ಯನೊಬ್ಬನನ್ನು ಕರೆದುಕೊಂಡು ಅಲ್ಲಿರುವ ಕಾಳಿಕಾದೇವಿ ಮಂದಿರಕ್ಕೆ ಹೋಗಿದ್ದರು. ಮುಂಜಾನೆ ದರ್ಶನ ಪಡೆದು ಹೊರಗೆ ಬಂದಾಗ ತುಂಬಾ ವೇಳೆಯಾಗಿತ್ತು. ಉಪಾಹಾರ ಸೇವಿಸದೇ ಇದ್ದುದರಿಂದ ಹೊಟ್ಟೆ ಚುರುಗುಟ್ಟುತ್ತಿತ್ತು. ಅಲ್ಲಿಯೇ ಒಂದು ಅಂಗಡಿಯಲ್ಲಿ ಬ್ರೆಡ್ ಹಾಗೂ ಜಾಮ್ ಡಬ್ಬಿಯನ್ನು ತೆಗೆದುಕೊಂಡು ಎದುರಿಗಿದ್ದ ಪಾರ್ಕ್‌ನಲ್ಲಿ ಕುಳಿತರು. ಜಾಮ್ ಡಬ್ಬಿಯ ಮುಚ್ಚಳ ತೆಗೆಯಲು ಬರಲಿಲ್ಲ. ಅದರ ಮುಚ್ಚಳ ತೆಗೆಸಿಕೊಂಡು ಬರಲು ಜೊತೆಯಲ್ಲಿದ್ದ ಶಿಷ್ಯನನ್ನು ಕಳಿಸಿದರು. ಶಿಷ್ಯ ಮತ್ತೆ ಅಂಗಡಿಗೆ ಹೋಗಿ ಮುಚ್ಚಳ ತೆಗೆಸಿಕೊಂಡು ಬಂದು ನೋಡುತ್ತಾನೆ. ಗುರುಗಳು ತಮ್ಮ ಕೈಯಲ್ಲಿದ್ದ ಎಲ್ಲ ಬ್ರೆಡ್ಡನ್ನು ಅಲ್ಲಿದ್ದ ಕಾಗೆ ಪಾರಿವಾಳಗಳಿಗೆ ಹಾಕಿ ಅವುಗಳು ತಿನ್ನುವುದನ್ನು ನೋಡುತ್ತಾ ಕುಳಿತಿದ್ದಾರೆ. ಎಲ್ಲ ಬ್ರೆಡ್ಡನ್ನು ಅವುಗಳಿಗೆ ಹಾಕಿಬಿಟ್ಟಿರಲ್ಲಾ ಎಂದು ಶಿಷ್ಯ ಕೇಳಿದಾಗ ಗುರುಗಳು "ಈ ಬ್ರೆಡ್ಡಗಳ ಮೇಲೆ ಅವುಗಳ ಹೆಸರೇ ಬರೆದಿತ್ತು. ನಾನೇನು ಮಾಡಲಿ"



ಎಂದು ಹೇಳಿ ಮರಳಿ ತಾವು ಉಳಿದುಕೊಂಡಿದ್ದ ಹೊಟೇಲಿಗೆ ಬಂದು ಶಿಷ್ಯನಿಗೆ ಹೊಟ್ಟೆ ತುಂಬಾ ತಿನ್ನಿಸಿದರಂತೆ. ಅಂದು ಗುರುಗಳು ಹೇಳಿದ ಮಾತು ಎಷ್ಟೊಂದು ಅರ್ಥಗರ್ಭಿತವಾಗಿತ್ತು ಎಂದು ಶಿಷ್ಯರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಮನೋಜ್ಞ ಸಂಗೀತ - ಮೆಹೆಫಿಲ್

೧೯೫೮ರಲ್ಲಿ ಠಾಣೆ ಕಲ್ಯಾ ಕರ್ನಾಟಕ ಸಂಘದ ವತಿಯಿಂದ ಪಂ. ಬಸವರಾಜರನ್ನು ಆಮಂತ್ರಿಸಲಾಗಿತ್ತು. ಠಾಣೆಯ ಟೌನಹಾಲನಲ್ಲಿ ಅವರ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿತ್ತು. ಠಾಣೆಯಲ್ಲಿ ಎಲ್ಲ ಕನ್ನಡಿಗರಿಂದ ಸಭಾಭವನ ತುಂಬಿ ಜನರಿಗೆ ಕುಳಿತುಕೊಳ್ಳಲು ಜಾಗ ಇರಲಿಲ್ಲ. ರಾತ್ರಿ ೯ ಗಂಟೆಗೆ ಕಾರ್ಯಕ್ರಮ ಇದ್ದ ಕಾರಣ ೮-೩೦ರ ವರೆಗೆ ಸರಿಯಾಗಿ ಎಲ್ಲರೂ ಬಂದು ಕಲಾವಿದರ ದಾರಿ ನೋಡುತ್ತಿದ್ದರು. ಕೆಲವು ಮಹಾರಾಷ್ಟ್ರೀಯ ಜನರೂ ವೇದಿಕೆಯ ಸನಿಹದಲ್ಲಿ ಕುಳಿತಿದ್ದರು. ಟಿಕೇಟುಗಳು ಎಲ್ಲವೂ ತೀರಿದ ಕಾರಣ ರಸಿಕರು ಹಾಗೆಯೇ ನುಗ್ಗಿ ಒಳಗೆ ಬಂದು ನಿಂತುಕೊಂಡಿದ್ದರು. ಕೆಲವರು ಹೊರಗೆ ಕುಳಿತಿದ್ದರು. ರಾತ್ರಿ ೧೦ ಗಂಟೆ ಆಯಿತು. ಪಂ. ರಾಜಗುರುಗಳ ಪತ್ತೆ ಇರಲಿಲ್ಲ. ಅವರು ಎಲ್ಲಿ ಇಳಿದುಕೊಂಡಿದ್ದಾರೆ, ಅದೂ ಸಹ ಕರ್ನಾಟಕ ಸಂಘದ ಜನರಿಗೆ ಗೊತ್ತೇ ಇರಲಿಲ್ಲ. ಹೀಗಾಗಿ ಜನರಿಗೆ ಏನು ಹೇಳಬೇಕೆಂಬುದೆ ಗೊತ್ತಾಗಲಿಲ್ಲ. ಕೆಲವು ಜನರು ಸಿಟ್ಟಿನಿಂದ ಹಣ ತಿರುಗಿಕೊಡಲು ಕೇಳಹತ್ತಿದ್ದರು. ಇನ್ನು ಕೆಲವು ಜನ ಸಮಾಧಾನದಿಂದ ಹಾಗೆಯೇ ಕುಳಿತಿದ್ದರು. ಇನ್ನು ಕೆಲವು ಜನ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳಿಗೆ ಹೊಡೆಯಲು ಹೋದರು. ರಾತ್ರಿ ೧೦-೩೦ರ ಸುಮಾರಿಗೆ ಎಲ್ಲ ಜನರೂ ಸಭಾಭವನದಿಂದ ಹೊರಬಿದ್ದು ಮನೆಯ ಕಡೆಗೆ ನಡೆಯತೊಡಗಿದರು. ರಾತ್ರಿ ೧೧ರ ಸುಮಾರಿಗೆ ಪಂ. ರಾಜಗುರುಗಳು ಹಾಗೂ ಅವರ ಸಂಗಡಿಗರು ಸಭಾಭವನದ ಮುಂದೆ ಟಾಂಗಾಗಳಿಂದ ಇಳಿಯತೊಡಗಿದರು. ರಸಿಕರ ಮನಸ್ಸನ್ನು ಸೆಳೆಯಲು ಭಾಸ್ಕರ ಮುಳಗುಂದ ಅವರು ಹಾಲಿನಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದರು. ಅಷ್ಟರಲ್ಲಿಯೇ ಪಂ. ರಾಜಗುರುಗಳು ಬಂದ ಸುದ್ದಿ ರಸ್ತೆಯಲ್ಲಿ ಮರಳಿ ಹೊರಟ ಜನರಿಗೆ ತಲುಪಿತು. ಅವರೆಲ್ಲರೂ ಮತ್ತೆ ಸಭಾಭವನದಲ್ಲಿ ಬಂದು ಕೂಡ ತೊಡಗಿದರು. ಸಭಾಭವನ ಮತ್ತೆ ರಸಿಕರಿಂದ ತುಂಬಿತು. ಪಂ. ರಾಜಗುರುಗಳು ವೇದಿಕೆಯ ಮೇಲೆ ಕುಳಿತುಕೊಂಡು ನಗುತ್ತ ಎಲ್ಲರಿಗೂ ನಮಸ್ಕರಿಸಿದರು. ಅವರ ನಸುನಗೆಯಲ್ಲಿ ಜನರ ಸಿಟ್ಟು ಮರೆಯಾಯಿತು. ಪಂ. ರಾಜಗುರುಗಳು, ರಾಗ ಮಾರುಬಿಹಾಗವನ್ನು ಪ್ರಾರಂಭಿಸಿದರು. 'ರಸೀಯಾ... ಹೊನಜಾ'- ಎಂಬ ಚೀಜ್ ರಸಿಕರೆಲ್ಲರಿಗೂ ತಮ್ಮನ್ನು ಉದ್ದೇಶಿಸಿ ಪಂ. ರಾಜಗುರುಗಳು ಹಾಡುತ್ತಿದ್ದಾರೆನೋ ಅನ್ನುವಂತಹ ವಾತಾವರಣ ಹುಟ್ಟಲು ಪ್ರಾರಂಭವಾಯಿತು. ಅವರ ಸಾಥಿದಾರರಾಗಿ ಧಾರವಾಡದ ಪ್ರಸಿದ್ದ ತಬಲಾ ವಾದಕ ಪಂ. ಬಸವರಾಜ ಬೆಂಡಿಗೇರಿ (ತಬಲಾ) ಹಾಗೂ ಬೆಳಗಾವಿಯ ಸುಪ್ರಸಿದ್ಧ ಹಾರ್ಮೋನಿಯಮ್ ವಾದಕ ದಿ. ವಿಠ್ಠಲರಾವ ಕೊರಗಾಂವಕರ



ಬಹಳ ಉತ್ತಮ ರೀತಿಯಲ್ಲಿ ತಬಲಾ ಹಾರ್ಮೋನಿಯಮ್ ನುಡಿಸುತ್ತಿದ್ದರು. ಮಧ್ಯದಲ್ಲಿ ಪಂ. ಬಸವರಾಜರು ಹಾರ್ಮೋನಿಯಮ್ ಹಾಗೂ ತಬಲಾ ವಾದನ ಕಲಾವಿದರಿಗೆ ಬಾರಿಸಲು ಹೇಳಿ ಮಿಂಚಿನಂತೆ ಸರಿಗಮ ತಾನಗಳ್ನು ಬಿತ್ತರಿಸುತ್ತಿದ್ದರು. ಆ ದಿನದ ಅವರ ಮನೋಜ್ಞವಾದ ಸಂಗೀತ ಮೆಹೆಫಿಲ್ ಠಾಣೆಯ ರಸಿಕರ ಮನದಲ್ಲಿ ಇನ್ನೂ ಅಚ್ಚಳಿಯದೇ ನಿಂತಿದೆ.

ಕ್ಷೀರಪಾನ

ಕೋಲ್ಕತ್ತಾದಲ್ಲಿ ಪಂ. ಬಸವರಾಜ ರಾಜಗುರು ಅವರನ್ನು ಒಂದು ಸಂಗೀತ ಕಚೇರಿಗೆ ಆಮಂತ್ರಿಸಲಾಗಿತ್ತು. ಸಾಯಂಕಾಲ ಸಂಗೀತ ಸಭೆಯಲ್ಲಿ ಮೊದಲು ಹಾಡುವವರೇ ಪಂ. ರಾಜಗುರುಗಳಾಗಿದ್ದರು. ಅಂದು ಅವರಿಗೆ ಹಾಲು ಕುಡಿಯುವುದು ಆಗಿರಲೇ ಇಲ್ಲ. ಯಾಕೆಂದರೆ ಹಾಲಿನ ಅಂಗಡಿಗಳಾಗಲಿ, ಅಥವಾ ಚಹಾದ ಅಂಗಡಿಗಳಾಗಲಿ ಕೊಲ್ಕತ್ತಾದಲ್ಲಿ ಇರುವುದು ಕಡಿಮೆ. ರಸ್ತೆಯಲ್ಲಿ ನಿಂತುಕೊಂಡು ಚಹಾ ಮಾಡುತ್ತಾರೆ. ಹೀಗಾಗಿ ಹಾಲು ದೊರೆಯುವುದು ಬಹಳ ಕಠಿಣವಾಗಿತ್ತು. ಕಾರ್ಯಕ್ರಮದ ಮೊದಲು ಹಾಲು ಕುಡಿಯುವುದು ಪಂ. ರಾಜಗುರುಗಳಿಗೆ ರೂಢಿಯಾಗಿತ್ತು. ಅಲ್ಲಿಯ ಸಂಗೀತ ಸಭೆಯ ಕಾರ್ಯದರ್ಶಿಗಳಿಗೆ ಹಾಲು ತರಿಸಲು ಹೇಳಿದರು. ಅವರು ಇಲ್ಲಿ ಈ ಸಮಯದಲ್ಲಿ ಹಾಲು ದೊರೆಯುವುದಿಲ್ಲ. ಚಹಾ ಬೇಕಾದರೆ ತರಿಸಿಕೊಡುತ್ತೇವೆ ಅಂತಾ ಹೇಳಿದರು. ಆಗ್ಗೆ ಪಂ. ರಾಜಗುರುಗಳು ಹಾಲು ಮುಂದಿನ ಗಲ್ಲಿಯಲ್ಲಿ ಸಿಗುತ್ತದೆ ಅಂತಾ ಕೇಳಿದ್ದೇನೆ, ನಾನೇ ಹೋಗಿ ಹಾಲು ಕುಡಿದು ಬರುತ್ತೇನೆ ಅಂತಾ ಹೊರಟರು. ಸಭಾಗೃಹವು ರಸಿಕರಿಂದ ತುಂಬ ತೊಡಗಿತ್ತು.ಅರ್ಧ ತಾಸಿನಲ್ಲಿ ಕಾರ್ಯಕ್ರಮ ಪ್ರಾರಂಭವಾಗಬೇಕಾಗಿದೆ. ಆದರೆ ಪಂ. ರಾಜಗುರುಗಳು ಎಲ್ಲಿ ಹೋಗಿದ್ದಾರೆ ಅಂತಾ ಯಾರಿಗೂ ತಿಳಿಯದಾಯಿತು. ಅವರ ಸಾಥಿದಾರರೂ ಸಹ, ವೇದಿಕೆಯ ಮೇಲೆ ಕೂಡ ತೊಡಗಿದರು. ೧೦ ನಿಮಿಷಗಳಲ್ಲಿ ಬರುತ್ತಾರೆ ಅಂತಾ ಜನರಿಗೆ ಸ್ಪೀಕರಿನಲ್ಲಿ ಹೇಳಿ ಜನತೆಯನ್ನು ಶಾಂತಗೊಳಿಸಿದರು. ಒಂದು ತಾಸಾದರೂ ಪಂ. ಬಸವರಾಜರು ಬರುವ ಲಕ್ಷಣವೆ ಇಲ್ಲದಾಯಿತು. ೪-೫ ಟ್ಯಾಕ್ಸಿಗಳನ್ನು ೪-೫ ರಸ್ತೆಯಲ್ಲಿ ಪಂ. ಬಸವರಾಜರನ್ನು ಹುಡುಕಲು ಕಳಿಸಲಾಯಿತು. ಆದರೆ ಬಹಳ ಉದ್ದವಾದ ರಸ್ತೆಯಲ್ಲಿ ೧ ಕಿ.ಮೀ. ದೂರದಲ್ಲಿರುವ ಒಂದು ಅಂಗಡಿಯಲ್ಲಿ ಪಂ. ಬಸವರಾಜರು ಹಾಲನ್ನು ಕುಡಿಯುತ್ತ ಕುಳಿತಿದ್ದರು. ತಕ್ಷಣ ಅಲ್ಲಿಯೇ ಟ್ಯಾಕ್ಸಿ ನಿಲ್ಲಿಸಿ ಕಾರ್ಯದರ್ಶಿಗಳು ಪಂ. ರಾಜಗುರುಗಳನ್ನು ಬೇಗನೆ ಬರ ಹೇಳಿದರು.

ಆಗ್ಗೆ ಪಂ. ರಾಜಗುರುಗಳು ನಗುತ್ತ ಕಾರ್ಯದರ್ಶಿಗೆ ಹೇಳಿದರು. "ನೀವೇಕೆ ಹುಡುಕುತ್ತಾ ಬಂದಿರಿ? ನಾನೇ ೫ ನಿಮಿಷಗಳಲ್ಲಿ ಬರುತ್ತಿದ್ದೆ". ಆಗ ಕಾರ್ಯದರ್ಶಿಯು ಹೇಳಿದರು "ನಿಮ್ಮ ಸಂಗೀತ ಕಚೇರಿಯು ರಾತ್ರಿ ೮ ಗಂಟೆ ಒಳಗೆ ಮುಗಿಯಲೇಬೇಕು. ಇಲ್ಲದಿದ್ದರೆ ಸಭಾಭವನದಲ್ಲಿ ವಿದ್ಯುತ್ ಸಂಪರ್ಕ ತೆಗೆಯುತ್ತಾರೆ" ಅಂದಾಗ ಪಂ. ರಾಜಗುರುಗಳು ಅವನಿಗೆ



ಬೇಗನೆ ಉತ್ತರ ಕೊಟ್ಟರು. ಸಭಾದವರು ನನ್ನ ಗಾಯನವನ್ನು ಕೇಳಿ ಲೈಟ್ ತೆಗೆಯಲಾರರು ಹಾಗೂ ನಿಮಗೂ ಏನೂ ಅನ್ನಲಾರರು. ಕಾಳಜಿ ಮಾಡಬೇಡಿರಿ ಎನ್ನುತ್ತಾ ಟ್ಯಾಕ್ಸಿಯಲ್ಲಿ ಕುಳಿತು ಸಭಾಭವನಕ್ಕೆ ಬಂದರು ಹಾಗೂ ತಡ ಮಾಡದೆ ವೇದಿಕೆಯನ್ನು ಹತ್ತಿ ಹಾಡಲು ಪ್ರಾರಂಭಿಸಿದರು. ಹಾಡು, ಮುಂದುವರೆಯುತ್ತ ಠುಮ್ರಿ, ದಾದರಾ, ಇತ್ಯಾದಿಗಳು ಪ್ರಾರಂಭವಾದವು. ರಾತ್ರಿ ೯ ಆಗಿ ಹೋಯಿತು. ಅಲ್ಲಿಯ ಕಾರ್ಯದರ್ಶಿ ಲೈಟ್ ಎಲ್ಲಿ ತೆಗೆಯುತ್ತಾರೆಯೊ ಎಂಬ ಹೆದರಿಕೆಯಿಂದ ಪಂ. ರಾಜಗುರುಗಳಿಗೆ ಕಾರ್ಯಕ್ರಮ ನಿಲ್ಲಿಸಲು ಕೈಗಳಿಂದ ಸನ್ನೆ ಮಾಡುತ್ತಿದ್ದನು. ಆದರೆ ಸಭಾಭವನದ ಮಾಲಕರು ಅಲ್ಲಿಯ ಕುರ್ಚಿಯ ಮೇಲೆ ಕುಳಿತುಕೊಂಡು ಪಂ. ರಾಜಗುರುಗಳಿಗೆ ತಮ್ಮ ಆನಂದವನ್ನು ವ್ಯಕ್ತಮಾಡುತ್ತಿದ್ದರು. ಮುಂದೆ ಇನ್ನೊಂದು ಠುಮರಿ ಹಾಡಲು ಸೂಚಿಸಿದರು. ಕಾರ್ಯದರ್ಶಿಗೆ ಆಶ್ಚರ್ಯವಾಯಿತು. ಠುಮರಿ ಆದ ಮೇಲೆ ಭೈರವಿ "ರಂಗ ದೇಖೆ ಜೀಯಾ ಲಲಚಾಯೆ" ಹಾಡುವಾಗ್ಗೆ ಸಭಾಭವನದ ಮಾಲಕರು ಮೈಮರೆತು ಕುಳಿತಿದ್ದರು. ಅವರ ಕಣ್ಣುಗಳಿಗೆ ಆನಂದ ತುಂಬಿ ತುಳುಕುತ್ತಿತ್ತು. ಬಹಳ ಕರತಾಡನದಿಂದ ಕಾರ್ಯಕ್ರಮ ಸಮಾಪ್ತಿ ಆಯಿತು. ಹೀಗೆ ಸಂಗೀತದಲ್ಲಿ ಎಲ್ಲರನ್ನೂ ತೇಲಿಸಿ ಆನಂದದ ಮೇರೆಯನ್ನು ಮೀರಿಸುತ್ತಿದ್ದರು ಪಂಡಿತ ರಾಜಗುರುಗಳು.

ಕೊಲ್ಕತ್ತಾ ಪ್ರವಾಸದ ಅನುಭವ

೧೯೭೩ರಲ್ಲಿ ಉಸ್ತಾದ ಹಫೀಸ್ ಅಲೀ ಖಾನ ಸಂಗೀತ ಸಮಾರೋಹ ಕೋಲ್ಕತ್ತಾದಲ್ಲಿ ೧೫ ದಿನಗಳ ಕಾಲ ನಡೆಯಿತು. ದೇಶ ವಿದೇಶಗಳಿಂದ ಆಗಮಿಸಿದ ಅನೇಕ ಖ್ಯಾತ ಕಲಾವಿದರು ಅದರಲ್ಲಿ ಭಾಗವಹಿಸಿದ್ದರು. ಪಂ. ರಾಜಗುರುಗಳ ಕಾರ್ಯಕ್ರಮ ಕೂಡಾ ಅಲ್ಲಿ ನಡೆಯಿತು.

೧೯೭೩ರ ಡಿಸೆಂಬರ್. ನಾನಿನ್ನೂ ಚಿಕ್ಕ ಹುಡುಗ. ತಂದೆಯವರ ಕಾರ್ಯಕ್ರಮ ಕೋಲ್ಕತ್ತಾದಲ್ಲಿ ಇದೆ, ಅವರು ಹೋಗುತ್ತಿದ್ದಾರೆ ಎಂದು ತಿಳಿಯಿತು. ನಾನು ಕೂಡ ನಿಮ್ಮೊಂದಿಗೆ ಬರುತ್ತೇನೆ ಎಂದು ಹಠ ಹಿಡಿದೆ. ಶಾಲೆಯನ್ನು ತಪ್ಪಿಸಿ ಅವರೊಂದಿಗೆ ಊರಿಗೆ ಹೋಗುವುದೆಂದರೆ ನನಗೆ ತುಂಬಾ ಖುಷಿ. ಮೊದಲು ಬೇಡವೆಂದ ಅವರು ನಂತರ ಆಗಲಿ ನಡಿ ಎಂದರು. ನನ್ನನ್ನು ಕರೆದುಕೊಂಡು ಹೋದರು. ಧಾರವಾಡದಿಂದ ಮುಂಬೈ, ಮುಂಬೈದಿಂದ ನಾವು ಹೋಗಿದ್ದು ಬನಾರಸಕ್ಕೆ. ಅಲ್ಲಿರುವ ಜಂಗಮವಾಡಿ ಮಠದಲ್ಲಿ ನಮ್ಮ ವಸತಿ. ಆ ಮಠಕ್ಕೆ ಅಪ್ಪಾ ಅವರು ಆಗಾಗ ಹೋಗುತ್ತಿದ್ದರು. ಬನಾರಸದಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದರು. ನಾವು ಹೋದನಂತರ ಅಲ್ಲಿ ಅಪ್ಪಾ ಅವರ ಅಭಿಮಾನಿ ಶಿಷ್ಯರಂತಿದ್ದ ಸಿದ್ರಾಮಸ್ವಾಮಿ ಕೋರವಾರ ಅವರು ಬಂದರು. ಅವರ ಮಡದಿಯ ತಂದೆಯವರು ಜಂಗಮವಾಡಿ ಮಠದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಸಿದ್ದರಾಮಸ್ವಾಮಿ ಕೂಡ ಕಲಾವಿದರಾಗಿದ್ದು ಆಕಾಶವಾಣಿ ಭೂಪಾಲದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸಹ ನಮ್ಮ ಸಂಗಡ ಕಲ್ಕತ್ತಾಕ್ಕೆ ಬರುವವರಿದ್ದರು. ಹೀಗಾಗಿ ನಾವು



ಬನಾರಸಕ್ಕೆ ಹೋಗಿದ್ದೆವು.

ಮರುದಿನ ಮುಂಜಾನೆ ನಾವು ಗಂಗಾತೀರಕ್ಕೆ ಹೋಗಿ ಒಂದು ಚಿಕ್ಕ ನಾವೆಯಲ್ಲಿ ಕುಳಿತು ನದಿಯಲ್ಲಿ ವಿಹರಿಸಿ ಬಂದೆವು. ಅನಂತರ ಅಲ್ಲಿಯೇ ಮುಖ ತೊಳೆದುಕೊಂಡು ಕಾಶಿ ವಿಶ್ವನಾಥ ದೇವಾಲಯಕ್ಕೆ ಹೋಗಿ ದೇವರ ದರುಶನ ಮಾಡಿಕೊಂಡು ಬಂದು ಅಂದೇ ಮೂವರು ಕೋಲ್ಕತ್ತಕ್ಕೆ ಪ್ರಯಾಣ ಬೆಳೆಸಿದೆವು. ಮರುದಿನ ಕೋಲ್ಕತ್ತಾ ತಲುಪಿದೆವು. ಹೌರಾ ಸ್ಟೇಶನನಲ್ಲಿ ಇಳಿದೆವು. ತುಂಬಾ ದೊಡ್ಡದಾದ ರೇಲ್ವೆ ಸ್ಟೇಶನ್ ಹಾಗೂ ಪ್ಲಾಟಫಾರ್ಮಗಳು. ಕಾರು, ಟ್ಯಾಕ್ಸಿಗಳು, ಪ್ಲಾಟಫಾರ್ಮ್‌ಗಳ ಮೇಲೆಯೇ ಬಂದು ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತವೆ. ನಾವು ಒಂದು ಟ್ಯಾಕ್ಸಿಯಲ್ಲಿ ಕುಳಿತು ನಮಗೆ ವ್ಯವಸ್ಥೆ ಮಾಡಲಾದ "ಮಹಾರಾಷ್ಟ್ರ ನಿವಾಸ" ಹೋಟೆಲಗೆ ಹೊರಟೆವು. ಟ್ಯಾಕ್ಸಿ ಹೌರಾಬ್ರಿಜ್ ಮೇಲೆ ಹೋಗುತ್ತಿದ್ದಾಗ ಅದು ಅಲುಗಾಡಿದಂತೆ ಭಾಸವಾಗುತ್ತಿತ್ತು. ತುಂಬಾ ದೊಡ್ಡದಾದ ಸೇತುವೆಯದು. ಹೋಟೆಲಗೆ ಬಂದು ಸ್ನಾನತಿಂಡಿಗಳನ್ನು ಮುಗಿಸಿಕೊಂಡು ಹೊರಗೆ ಹೋದೆವು. ಅಪ್ಪಾ ಅವರಿಗೆ ಒಂದು ಪತ್ರವನ್ನು ಬೆಂಗಳೂರಿಗೆ ಕಳಿಸುವುದಿತ್ತು. ಪತ್ರವನ್ನು ಕಳಿಸಿ ದಾರಿಯಲ್ಲಿ ರುಚಿಕರವಾದ ರಸಗುಲ್ಲಾ ತಿಂದೆವು. ಅಲ್ಲಿ ರಸಗುಲ್ಲಾಗಳನ್ನು ಮಣ್ಣಿನ ಪಾತ್ರೆಯಲ್ಲಿ ಕೊಡುತ್ತಿದ್ದರು. ಚಹಾ, ಹಾಲನ್ನು ಸಹ ಮಣ್ಣಿನ ಪಾತ್ರೆಯಲ್ಲಿ ಕೊಡುತ್ತಿದ್ದರು. ಮರಳಿ ಹೋಟೆಲಿಗೆ ಬಂದು ಕುಳಿತುಕೊಂಡಿದ್ದಾಗ ಬಾಗಿಲು ಬಡಿದ ಶಬ್ದವಾಯಿತು. ನಾನು ಬಾಗಿಲನ್ನು ತೆರೆದೆ, ಒಳಗೆ ಬಂದ ವ್ಯಕ್ತಿ "ಏ ಬಸವರಾಜ ಯಾವಾಗ ಬಂದಿ" ಎನ್ನುತ್ತಾ ಅಪ್ಪಾ ಅವರನ್ನು ಆಲಿಂಗಿಸಿ ಕೊಂಡರು. ಅಪ್ಪಾ ಅವರು ಕೂಡ ಸಂತೋಷದಿಂದ "ಓ ಏನಪ್ಪಾ ಭೀಮಸೇನಾ, ನೀನು ಯಾವಾಗ ಬಂದಿ" ಎಂದು ಕೈಹಿಡಿದುಕೊಂಡು ಮಾತನಾಡತೊಡಗಿದರು. ನನಗೆ ಏನು ತಿಳಿಯದೆ ಸುಮ್ಮನೆ ನೋಡುತ್ತಾ ನಿಂತಿದ್ದೆ. ನಂತರ ತಿಳಿಯಿತು ಅವರು ಸುಪ್ರಸಿದ್ಧ ಗಾಯಕ ಪಂಡಿತ ಭೀಮಸೇನ್ ಜೋಶಿ ಎಂದು, ನಮಗಿಂತ ಎರಡು ದಿನ ಮೊದಲೇ ಅವರು ಬಂದಿದ್ದರು. ಅದೇ ಹೋಟಲ್‌ನಲ್ಲಿ ಇಳಿದು ಕೊಂಡಿದ್ದರು. ಅವರು ಅಪ್ಪಾ ಅವರ ಆತ್ಮೀಯ ಗೆಳೆಯರು. ಇಬ್ಬರು ಬಹಳ ಹೊತ್ತಿನ ತನಕ ಮಾತನಾಡುತ್ತಾ ಕುಳಿತರು. ನಂತರ ಅಪ್ಪಾ ಮಧ್ಯಾಹ್ನ ಅವರ ಕೋಣೆಗೆ ಹೋದರು. ನಾನು ಸಹ ಮೆಲ್ಲಗೆ ಹೋಗಿ ಇಣುಕಿ ನೋಡಿದೆ. ಅಲ್ಲಿ ಇನ್ನು ೩,೪ ಜನ ಕಲಾವಿದರು ಕುಳಿತಿದ್ದರು. ಖ್ಯಾತ ಗಾಯಕಿ ಡಾ. ಗಂಗೂಬಾಯಿ ಹಾನಗಲ್ ಕೂಡ ಅಲ್ಲಿದ್ದರು. ಕಲಾವಿದರೆಲ್ಲಾ ತುಂಬಾ ಆತ್ಮೀಯತೆಯಿಂದ ಮಾತನಾಡುತ್ತಾ ಕುಳಿತಿದ್ದರು.

ಅಂದು ಸಂಜೆ ಕಾರ್ಯಕ್ರಮಕ್ಕೆ ಹೋದೆವು. ಅಪ್ಪಾ ಅವರ ಗಾಯನ ಆರಂಭವಾಯಿತು. ಅನೇಕ ದಿಗ್ಗಜ ಕಲಾವಿದರು ಕುಳಿತು ಸಂಗೀತವನ್ನು ಕೇಳುತ್ತಿದ್ದರು. ಪಂಡಿತ ಭೀಮಸೇನ ಜೋಶಿ ಕೂಡ ಬಂದು ಎದುರಿಗೆ ಕುಳಿತರು. ನನಗೆ ಈಗಲೂ ಆ ಸಮ್ಮೇಳನದ ಕಾರ್ಯಕ್ರಮ ನೆನಪಿಗೆ ಬರುತ್ತದೆ. ಏಕೆಂದರೆ ಕಲಾವಿದರು ಮತ್ತೊಬ್ಬ ಕಲಾವಿದನ ಸಂಗೀತವನ್ನು ಕೇಳಿ ಚೆನ್ನಾಗಿದ್ದರೆ ಹೊಗಳಿ ಅಭಿನಂದಿಸುತ್ತಿದ್ದರು. ಆ ಸಮ್ಮೇಳನದಲ್ಲಿ ಕಲಾವಿದರಿಗಾಗಿಯೇ



ಒಂದೆರಡು ಸಾಲುಗಳನ್ನು ಮೀಸಲಾಗಿಟ್ಟಿದ್ದರು. ಇತ್ತೀಚಿನ ದಿನಗಳಲ್ಲಿ ಇಂತಹ ಆತ್ಮೀಯತೆ ಕಲಾವಿದರಲ್ಲಿ ಕಾಣಸಿಗುವುದು ವಿರಳವಾಗಿದೆ ಎನ್ನಬಹುದು. ಅವರ ಕಾರ್ಯಕ್ರಮಕ್ಕೆ ಹಾರ್ಮೋನಿಯಮ್ ಸಾಥಿ ಇರಲಿಲ್ಲ. ಅದರ ಬದಲಾಗಿ ಸಾರಂಗಿ ಇತ್ತು. ತಂಬೂರಿಗೆ ಸಿದ್ರಾಮಸ್ವಾಮಿ ಇದ್ದರು.

ಅಪ್ಪಾ ಅವರ ಕಾರ್ಯಕ್ರಮ ತುಂಬಾ ಚೆನ್ನಾಗಿ ಆಯಿತು. ಒಳ್ಳೆಯ ಮೂಡಿನಲ್ಲಿದ್ದರು. ಅವರ ಗಾಯನ ಮುಗಿದ ನಂತರ ಬಹಳಷ್ಟು ಜನ ವೇದಿಕೆಯ ಮೇಲೆ ಬಂದು ಅವರನ್ನು ಹೊಗಳಿ ಅಭಿನಂದಿಸಿದರು. ಪಂಡಿತ ಭೀಮಸೇನ ಜೋಶಿಯವರು ಕೂಡಾ ಅಭಿನಂದಿಸಿ "ಚಲೋ ಹಾಡಿದಿ ಬಹಳ ರಂಗಾಯಿತು" ಎಂದರು. ಅದಕ್ಕೆ ಅಪ್ಪಾ ಅವರು "ನಿನ್ನಂತಹ ದೊಡ್ಡ ಕಲಾವಿದ ಮುಂದೆ ಕುಳಿತಿರುವಾಗ ಚಲೋನ ಹಾಡಬೇಕಾಲ್ಲಪ್ಪಾ" ಎಂದು ಹೇಳಿದರು. ಅಷ್ಟೊಂದು ಪ್ರೀತಿವಿಶ್ವಾಸ ಅವರಲ್ಲಿತ್ತು. ಇದೇ ಕಾರ್ಯಕ್ರಮದಲ್ಲಿ ನಾನು ಉಸ್ತಾದ ಅಮ್ಜದ್ ಅಲೀಖಾನ ಮತ್ತು ಜಾಕೀರಹುಸೇನ್ ಅವರುಗಳನ್ನು ಮೊದಲ ಬಾರಿಗೆ ನೋಡಿದ್ದು. ಮರುದಿನ ನಾವು ಕಾಳಿಕಾದೇವಿ ಮಂದಿರಕ್ಕೆ ಹೋಗಿ ಬಂದೆವು. ಅಲ್ಲಿಂದ ಮರಳಿ ನಮ್ಮ ಪ್ರಯಾಣ ಧಾರವಾಡಕ್ಕೆ. ಸಿದ್ರಾಮಸ್ವಾಮಿ ಭೂಪಾಲಕ್ಕೆ ಹೋದರು.

ವಿಶಿಷ್ಟತೆಗಳ ರಾಜ

ತಮ್ಮದೇ ಆದ ವಿಶಿಷ್ಟ ಶೈಲಿಗಳಿಂದ ವೈಶಿಷ್ಟ್ಯಪೂರ್ಣವಾಗಿ ಬಾಳಿ ಬದುಕಿದ ಪಂಡಿತ ಬಸವರಾಜ ರಾಜಗುರು ಅವರ ಜೀವನ ಒಂದು ರೋಚಕ ಯಶೋಗಾಥೆಯಾಗಿದೆ. ತಮ್ಮ ವಿಶಿಷ್ಟ ಶೈಲಿಯಿಂದ ರಾಜಗುರು ಸಂಗೀತ ಪರಂಪರೆಯನ್ನೇ ರೂಪಿಸಿದವರು. ಸದಾ ಹಸನ್ಮುಖಿ, ಹಾಸ್ಯಪ್ರವೃತ್ತಿ. ವ್ಯಕ್ತಿತ್ವ ಕೂಡಾ ತುಂಬಾ ಆಕರ್ಷಕ, ಸ್ಪುರದ್ರೂಪ, ಇಂಪಾದ ಕಂಠ, ಶ್ರೋತೃಗಳ ನಾಡಿಮಿಡಿತ ಅರಿತು ಮರುಳು ಮಾಡುತ್ತಿದ್ದ ರೀತಿ ಎಲ್ಲವೂ ವಿಶಿಷ್ಟ. ಸಂಗೀತದಲ್ಲಷ್ಟೇ ಅಲ್ಲ, ಊಟ ಉಡುಗೆ, ತೊಡುಗೆ ನಿತ್ಯ ಜೀವನದಲ್ಲಿಯೂ ಕೂಡಾ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡವರು. ಅವರದು ರಾಜಶೈಲಿಯ ಜೀವನ. ನಾಳೆಯ ಬಗ್ಗೆ, ಜೀವನದ ಭದ್ರತೆಯ ಬಗ್ಗೆ ಅವರು ಎಂದೂ ಯೋಚಿಸುತ್ತಿರಲಿಲ್ಲ. ಶಿಷ್ಯಂದಿರನ್ನು, ಸಾಥಿದಾರರನ್ನು ತುಂಬಾ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದ ಅವರು ಧಾರಾಳವಾಗಿ ಖರ್ಚು ಮಾಡುತ್ತಿದ್ದರು. ಬಹುಭಾಷಾ ಪಂಡಿತರಾದ ಅವರು ಎಲ್ಲರನ್ನು ತಮ್ಮ ಮಾತಿನ ಮೋಡಿಗೆ ಸಿಲುಕಿಸುತ್ತಿದ್ದರು. ಅವರ ವೈಶಿಷ್ಟ್ಯಗಳ ಬಗ್ಗೆ ಯಾರಾದರೂ ಕೇಳಿದರೆ "ಇಂಡಿಯಾಗೆ ರಾಜಗುರು ಒಬ್ಬನೇ" ಎಂದು ಹಾಸ್ಯಮಯವಾಗಿ ಹೇಳಿ ನಕ್ಕು ಸುಮ್ಮನಾಗಿ ಬಿಡುತ್ತಿದ್ದರು.

ಅವರಿಗೆ ಕೋಪ ಬರುವದು ಕಡಿಮೆ, ಬಂದರೆ ತುಂಬಾ ಖಡಕ್ ಆಗಿ ಬಿಡುತ್ತಿದ್ದರು. ಸಂಗೀತದ ಪಾಠ ಹೇಳಿಕೊಡುವಾಗ ಶಿಷ್ಯಂದಿರು ಎಷ್ಟೇ ತಪ್ಪಿದರೂ ಮತ್ತೆ ಮತ್ತೆ



ಹೇಳಿಕೊಡುತ್ತಿದ್ದರು. ಆದರೆ ವೇದಿಕೆಯ ಮೇಲೆ ಕುಳಿತು ಹಾಡುವಾಗ ಅವರ ಹಿಂದೆ ಸ್ವರಹಚ್ಚುವದು ಒಂದಿನಿತೂ ಹೆಚ್ಚು ಕಡಿಮೆಯಾದರೂ ಅವರನ್ನು ಅಲ್ಲಿಯೇ ಬೈದು ಬಿಡುತ್ತಿದ್ದರು.

ಕೆಲವು ಶಿಷ್ಯರನ್ನು ಮನೆಯಲ್ಲಿಯೇ ಇಟ್ಟುಕೊಂಡು ಸಂಗೀತ ಹೇಳಿಕೊಡುತ್ತಿದ್ದರು. ಮನೆಯಲ್ಲಿ ನಿತ್ಯದಾಸೋಹ. ಯಾವುದೇ ಭೇದ-ಭಾವವಿಲ್ಲದೇ ಎಷ್ಟೋ ಸಾರಿ ತಾವೇ ಅಡಿಗೆ ಮಾಡಿ ಉಣಬಡಿಸುತ್ತಿದ್ದರು. ಕೀರ್ತಿ ಪ್ರಾಪ್ತಿಗಳಿಗೆ ಒಳದಾರಿ ಹುಡುಕುವದು ಅವರಿಗಾಗದ ಮಾತು. ಅನೇಕ ಗಣ್ಯರು ಅವರ ಭೆಟ್ಟಿಗಾಗಿ ಬರುತ್ತಿದ್ದರು. ಆದರೆ ಯಾರಲ್ಲೂ ತಮಗಾಗಿ ಏನನ್ನು ಕೇಳುತ್ತಿರಲಿಲ್ಲ. ಯಾವದಕ್ಕೂ ಆಸೆಪಡದೆ ತಮ್ಮ ವಿದ್ಯೆಯನ್ನು ಪ್ರೀತಿಯಿಂದ ಹಂಚಿ ಸಂಸಾರಿಯಾಗಿದ್ದರೂ ಕೂಡಾ ಓರ್ವ ಸಂತನಂತೆ ಬದುಕಿದವರು.

ರೊಕ್ಕ ಕಡಿಮೆ ಕೊಡ್ರಿ

ತುಂಬಾ ವಿರಳ ಹಾಗೂ ಮುಗ್ದರಾಗಿದ್ದ ಅಪ್ಪಾ ಅವರು ಅಷ್ಟೇ ಸ್ವಾಭಿಮಾನಿಗಳಾಗಿದ್ದರು. ಕಾರ್ಯಕ್ರಮಗಳಿಗೆ, ಕೀರ್ತಿ ಪ್ರಾಪ್ತಿಗಳಿಗೆ ಹಲ್ಲುಗಿಂಜುವುದು ಇವರಿಂದಾಗುತ್ತಿರಲಿಲ್ಲ. ಒಮ್ಮೆ ನಮ್ಮ ಮನೆಗೆ ಒಬ್ಬ ಸಂಘಟಕ ಬಂದು "ಏನ್ರಿ ನಮ್ಮೂರಿನ ಸರ್ಕಲ್‌ನಲ್ಲಿ ಹಾಡಿತಿರೇನ್ರಿ, ಎಷ್ಟು ನಿಮ್ಮ ಚಾರ್ಜು" ಎಂದು ಧಿಮಾಕಿನಿಂದ ಮಾತನಾಡಿದ. ಇವರು ಒಮ್ಮೆ ಅವನನ್ನು ತಲೆಯೆತ್ತಿ ನೋಡಿ "ಇಲ್ಲ ನಾನು ಸರ್ಕಲ್‌ನಲ್ಲಿ ಹಾಡುವುದಿಲ್ಲ" ಎಂದರು. ಅವನು ೧೦,೦೦೦/- ರೂಪಾಯಿ (ಅವಾಗಿನ ಕಾಲದಲ್ಲಿ) ಕೊಡಲು ಮುಂದಾದರೂ ಇವರು ಒಪ್ಪದೇ ಆತನನ್ನು ಕಳಿಸಿಬಿಟ್ಟರು. ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯುಂಟಾಗುವ ಯಾವುದೇ ಕಾರ್ಯಕ್ರಮವನ್ನು ಅವರು ನಿಷ್ಠುರವಾಗಿ ನಿರಾಕರಿಸುತ್ತಿದ್ದರು. "ಕಲಾವಿದರಿಗೆ ರೊಕ್ಕ ಕಡಿಮೆ ಕೊಡ್ರಿ ಏನಸಾಕ ತ್ರಾಸ ಆಗತೈತಿ, ಆದ್ರ ಮನಸಾರೆ ಗೌರವ ಕೊಡ್ರಿ" ಎಂದು ಹೇಳುತ್ತಿದ್ದರು.

ಇಂದು ಯಾವುದೇ ವಿದ್ವತ್ತು ಇಲ್ಲದೆ ಎಷ್ಟೋ ಜನ ಹಲ್ಲುಗಿಂಜಿ, ವಶೀಲಿ ಮಾಡಿ ದೇಶ, ವಿದೇಶಗಳಲ್ಲಿ ಕಾರ್ಯಕ್ರಮ ಗಿಟ್ಟಿಸುವುದನ್ನು ಕಂಡಾಗ ಅಪ್ಪಾ ಅವರು ಹೇಳುತ್ತಿದ್ದ ಮಾತುಗಳು ನೆನಪಾಗುತ್ತವೆ. "ಕಲಾವಿದನಿಗೆ ಯಾರ ಮುಂದೆಯೂ ಕೈಯೊಡ್ಡುವ ಅವಶ್ಯಕತೆ ಇಲ್ಲ ಸಂಗೀತಾರಾಧನೆಯೊಂದೇ ಪರಮಧ್ಯೇಯವಾಗಿರಬೇಕು. ಒಳ್ಳೆಯ ಮನಸ್ಸಿನಿಂದ ಯಾರು ಸಂಗೀತ ಸೇವೆ ಮಾಡುತ್ತಾರೋ ಅವರಿಗೆ ಎಲ್ಲವೂ ತಾನೇ ಹುಡುಕಿಕೊಂಡು ಬರುತ್ತದೆ" ಎಂದು ಹೇಳಿ ಹಾಗೆಯೇ ಬದುಕಿದರವರು.

ಯಾರ ಸಂಗೀತ ಎದುರಿಗಿರುವವರ ಮನಸ್ಸಿಗೆ ಮುಟ್ಟಿ ಇನ್ನೂ ಕೇಳಬೇಕು ಎಂದೆನಿಸುವಂತೆ ಮಾಡುತ್ತದೆಯೋ ಅವನೇ ನಿಜವಾದ ಕಲಾವಿದ. ಕೇಳುಗರನ್ನು ಸಂತೋಷಪಡಿಸಲು ಯಾರಿಗೆ ಬರುವುದಿಲ್ಲವೋ ಅವನು ಎಷ್ಟೇ ದೊಡ್ಡ ಪಂಡಿತನಾಗಿದ್ದರು ವ್ಯರ್ಥ ಎಂದವರು ಹೇಳುತ್ತಿದ್ದರು.



3 ರೂಪಾಯಿ ಹಾಲಿಗಾಗಿ 35 ರೂ. ಟ್ಯಾಕ್ಸಿ

ಮೊದಲ ಬಾರಿಗೆ ಅವರೊಂದಿಗೆ ಮುಂಬೈಗೆ ಹೋದಾಗ ನನಗೆ ಎಲ್ಲವೂ ಅಪರಿಚಿತ. ನಾವು ದಾದರ ರೇಲ್ವೆ ಸ್ಟೇಶನನಲ್ಲಿ ಇಳಿದಾಗ ಅಲ್ಲಿದ್ದ ಕೂಲಿಯವರು ಮಾಸ್ಟರಜೀ, ಮಾಸ್ಟರಜೀ ಎಂದು ಇವರನ್ನು ಸುತ್ತುವರೆದು ಸಾಮಾನುಗಳನ್ನು ಸಾಗಿಸಲು ನಾ ಮುಂದು, ತಾ ಮುಂದು ಎಂದು ನುಗ್ಗ ತೊಡಗಿದರು. ಅಲ್ಲಿ ಅಷ್ಟೊಂದು ಅಪ್ಪಾ ಅವರು ಪರಿಚಿತರಾಗಿದ್ದರು. ರಾನಡೆ ರೋಡಿನಲ್ಲಿರುವ ಶ್ರೀ ಕೃಷ್ಣಭವನಕ್ಕೆ ಹೋದೆವು. ಅದರ ಮಾಲೀಕ ಶ್ರೀ ವಿ ವಿ ಗೋಖಲೆ ಇವರನ್ನು ನೋಡಿ ಎದ್ದು ಬಂದು ತಾವೇ ಸ್ವತಃ ರೂಮಿನ ವ್ಯವಸ್ಥೆ ಮಾಡಿಸಿಕೊಟ್ಟರು. ಅಲ್ಲಿ ಊಟ, ಚಹಾ, ಹಾಲು ಎಲ್ಲವು ಉತ್ತಮವಾಗಿ ದೊರೆಯುತ್ತಿತ್ತು. ಅಂದು ಸಾಯಂಕಾಲ "ನಡೀ, ಹಾಲು ಕುಡಿದು ಬರೋಣ" ಎಂದರು. ನಾನು "ಹಾಲು ಇಲ್ಲಿಯೇ ಸಿಗುತ್ತದೆಯಲ್ಲಾ" ಎಂದೆ. ಏನೂ ಮಾತನಾಡದೆ ಸುಮ್ಮನೆ ಕರೆದುಕೊಂಡು ಕೆಳಗೆ ಬಂದು ಒಂದು ಟ್ಯಾಕ್ಸಿ ನಿಲ್ಲಿಸಿ, ಕುಳಿತು "ಪ್ರಿನ್ಸಿಸ್ ಸ್ಟ್ರೀಟ್ ಚಲೋ" ಎಂದರು. ತಾವು ಹಿಂದೆ ಮುಂಬೈನಲ್ಲಿದ್ದಾಗ ಹೋಗುತ್ತಿದ್ದ ಬನಾರಸಿ ಭೈಯ್ಯಾನ ಅಂಗಡಿಗೆ ಕರೆದೊಯ್ದರು. ಅಲ್ಲಿ ಮೂರು ರೂಪಾಯಿ ಕೊಟ್ಟು ಒಂದು ಗ್ಲಾಸ್ ಹಾಲು ಕುಡಿದರು. ನನಗೂ ಕುಡಿಸಿದರು. ಅಲ್ಲಿಂದ ಮತ್ತೆ ಒಂದು ಟ್ಯಾಕ್ಸಿ ಮಾಡಿಕೊಂಡು ಮರಳಿ ದಾದರಕ್ಕೆ ಬಂದೆವು. ಒಂದು ಗ್ಲಾಸ್ ಹಾಲು ಕುಡಿಯುವ ಸಲುವಾಗಿ ೩೫ ರೂ. (ಆಗಿನ ಕಾಲದಲ್ಲಿ) ಟ್ಯಾಕ್ಸಿಗೆ ಖರ್ಚು ಮಾಡುವ ಅಪ್ಪಾ ಅವರನ್ನು ಕಂಡು ಆಶ್ಚರ್ಯಚಕಿತನಾದೆ. ಆದರೆ ಅಲ್ಲಿಗೆ ಹೋಗಿ ಹಾಲು ಕುಡಿದು ಬಂದರೆ ಅವರ ಮುಖದ ತುಂಬಾ ತೃಪ್ತಿ ಎದ್ದು ಕಾಣುತ್ತಿತ್ತು.

ಪದ್ಮಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ

ಪದ್ಮಭೂಷಣ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ದಿಲ್ಲಿಗೆ ಹೋಗಲು, ಹೇಗಿದ್ದರೂ ವಿಮಾನ ಚಾರ್ಜ ಕೊಡುತ್ತಾರೆ, ಅದರಲ್ಲಿಯೇ ಹೋಗೋಣವೆಂದು ನಾವೆಲ್ಲ ಹೇಳಿದಾಗ ಅವರು ಸುತರಾಂ ಒಪ್ಪಲಿಲ್ಲ. ಕೊನೆಗೆ ನಿಜಾಮುದ್ದಿನ್ ಎಕ್ಸ್‌ಪ್ರೆಸ್ ಮೂಲಕ ಹೊರಡಲು ನಿರ್ಧಾರವಾಯಿತು. "ಎರಡು ದಿನದ ಪ್ರವಾಸ ಊಟದ ತೊಂದರೆ ಆಗುತ್ತದೆ ನೀನು ಮೊದಲಿನ ಗಾಡಿಗೆ ಪುಣೆಗೆ ಹೋಗಿ ಬಾದಶಹ ಹೋಟೆಲಿನಿಂದ ಹಾಲು, ಊಟವನ್ನು ತೆಗೆದುಕೊಂಡು ಬಂದು ಪುಣೆ ಸ್ಟೇಶನನಲ್ಲಿ ನಮ್ಮ ಗಾಡಿ ಹತ್ತು" ಎಂದು ನನಗೆ ಹೇಳಿದರು. ಪ್ರತಿಸಾರಿ ದೆಹಲಿಗೆ ಹೋಗುವಾಗ ನಾನು ಮೊದಲೇ ಪುಣೆಗೆ ಹೋಗಿ ಬಾದಶಹ ಹೋಟೆಲಿನಿಂದ ಊಟ, ಹಾಲು ತೆಗೆದುಕೊಂಡು ಅವರು ಪ್ರಯಾಣಿಸುತ್ತಿದ್ದ ದಿಲ್ಲಿ ಟ್ರೇನ್ ಏರುತ್ತಿದ್ದೆ, ಬಾದಶಹ ಹೋಟೆಲಿನ ಊಟವೆಂದರೆ ಅವರಿಗೆ ತುಂಬಾ ಪ್ರೀತಿ ೩೦/೪೦ ವರ್ಷಗಳಿಂದ ಅವರು ಅಲ್ಲಿಗೆ ಹೋಗುತ್ತಿದ್ದರು. ಟ್ರೇನನಲ್ಲಿ ಬಾದಶಹ ಊಟ ಮಾಡಿ ಹಾಲು ಕುಡಿದ ಮೇಲೆ ತುಂಬಾ



ಹುರುಪುಗೊಳ್ಳುತ್ತಿದ್ದರು. ಎಷ್ಟೋ ಸಾರೆ ಮುಂಬೈದಿಂದ, ದಿಲ್ಲಿಯಿಂದ ನೇರವಾಗಿ ಧಾರವಾಡಕ್ಕೆ ಬರದೇ ಪುಣೆಯಲ್ಲಿ ಇಳಿದು ಬಾದಶಹ ಹೋಟೆಲಿನಲ್ಲಿ ಒಂದೆರಡು ದಿನ ಇದ್ದು ಧಾರವಾಡಕ್ಕೆ ಬರುತ್ತಿದ್ದರು.

೨೩ ಮಾರ್ಚ್ ೧೯೯೧ರಂದು ಮುಂಜಾನೆ ಪ್ರಶಸ್ತಿ ತೆಗೆದುಕೊಳ್ಳಲು ರಾಷ್ಟ್ರಪತಿ ಭವನಕ್ಕೆ ಹೋದಾಗ ಅಲ್ಲಿಗೆ ಮೊದಲೇ ಬಂದಿದ್ದ ಉಸ್ತಾದ ಅಮ್ಜದ್ ಅಲೀಖಾನ್ ಅವರು ಬಂದು ಅಪ್ಪಾ ಅವರಿಗೆ ನಮಸ್ಕರಿಸಿ ಕೈಹಿಡಿದುಕೊಂಡು ಹೋಗಿ ತಮ್ಮ ಪಕ್ಕಕ್ಕೆ ಕುಳ್ಳಿರಿಸಿಕೊಂಡರು. ಅಂದಿನ ಪ್ರಶಸ್ತಿ ವಿಜೇತರಾದ ಡಾ. ಬಾಲಮುರಳಿಕೃಷ್ಣ, ಕಪಿಲದೇವ,ನಟ ಅಶೋಕ ಕುಮಾರ ಮುಂತಾದವರು ಇದ್ದರು. ಅನಂತರ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ಕಾಂಗ್ರೆಸ್ ನಾಯಕ ರಾಜೀವಗಾಂಧಿ ಮುಂತಾದ ಅನೇಕ ಗಣ್ಯರೊಂದಿಗೆ ಉಪಾಹಾರ ಸೇವಿಸಿದೆವು. ಅಲ್ಲಿ ನಮಗೆ ವಿಮಾನದ ಚಾರ್ಜು ಕೊಡಲು ಬಂದಾಗ "ಇಲ್ಲ ನಾವು ಟ್ರೇನಿಗೆ ಬಂದಿದ್ದೇವೆ" ಎಂದು ಹೇಳಿ ಟ್ರೇನ್ ಚಾರ್ಜು ಮಾತ್ರ ತೆಗೆದುಕೊಂಡರು. ಮರುದಿನ ಟಿ.ವ್ಹಿ. ನ್ಯಾಶನಲ್ ಪ್ರೋಗ್ರಾಮ್ ರೆಕಾರ್ಡಿಂಗ್ ಇತ್ತು. ನಾನೇ ತಂಬೂರಿ ನುಡಿಸುತ್ತಿದ್ದೆ. ರಾಗ ಪೂರಿಯಾ ಕಲ್ಯಾಣದ "ಜಿಯೋ ಕರೋ ಕೋಟ ಕೋಟ ಬರಸದಿನ" ಎಂಬ ಚೀಜ್ ಹಾಡಿದ್ದು ನನ್ನ ಸ್ಮೃತಿಪಟಲದಲ್ಲಿ ಇನ್ನೂ ಅಚ್ಚಳಿಯದೇ ಉಳಿದಿದೆ. ಆದರೆ ಆ ನ್ಯಾಶನಲ್ ಪ್ರೋಗ್ರಾಮ್ ನೋಡಲು ಅವರು ಇರಲಿಲ್ಲ, ಜುಲೈ ೨೧ ರಂದು ಅವರು ವಿಧಿವಶರಾದರು. ಮುಂದೆ ೩-೪ ದಿನಗಳ ನಂತರ "ರಾಜಗುರುಜೀ ಕೊ ಶ್ರದ್ಧಾಂಜಲಿ" ಎಂದು ಹೇಳಿ ಆ ಕಾರ್ಯಕ್ರಮವನ್ನು ಭಾರತದಾದ್ಯಂತ ಪ್ರಸಾರ ಮಾಡಲಾಯಿತು.

ಪಂಚತಾರ ಹೋಟೆಲನಲ್ಲಿ ಉಪ್ಪಿಟ್ಟು ತಯಾರಿ

ತಮ್ಮ ಧ್ವನಿಯನ್ನು ಕಾಯ್ದುಕೊಳ್ಳಲು ಅವರಷ್ಟು ಕಾಳಜಿ ತೆಗೆದುಕೊಳ್ಳುವವರನ್ನು ನಾನೆಲ್ಲಿಯೂ ನೋಡಿಲ್ಲ. ಧಾರವಾಡದಿಂದಲೇ ನೀರನ್ನು ಹೊತ್ತೊಯ್ಯುತ್ತಿದ್ದ ಅವರು ಅದರ ಜೊತೆಗೆ ಒಂದು ಪೆಟ್ಟಿಗೆಯಲ್ಲಿ ಸ್ಟೌವ್ ಹಾಗೂ ಇನ್ನೊಂದು ದೊಡ್ಡ ತಗಡಿನ ಡಬ್ಬಿಯಲ್ಲಿ ಪಾತ್ರೆ, ಅಡಿಗೆ ಸಾಮಾನುಗಳನ್ನು ಒಯ್ಯುತ್ತಿದ್ದರು.

ಕಾರ್ಯಕ್ರಮಗಳಿಗೆ ಹೋದಾಗ ಅಲ್ಲಿಯ ದೊಡ್ಡ ದೊಡ್ಡ ತಾರಾ ಹೋಟೆಲಗಳಲ್ಲಿ ನಮಗೆ ವ್ಯವಸ್ಥೆ ಮಾಡಿರುತ್ತಿದ್ದರು. ಇವರಿಗೆ ಅಲ್ಲಿನ ಊಟ ಸರಿಬರುತ್ತಿರಲಿಲ್ಲ. ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿದ್ದ ಸ್ಟೌವನ್ನು ಹಚ್ಚಿ ಉಪ್ಪಿಟ್ಟು, ಬಾಸುಮತಿ ಅಕ್ಕಿಯ ಅನ್ನ ಮಾಡಿಕೊಳ್ಳುತ್ತಿದ್ದರು. ಆದರೆ ತಾರಾ ಹೋಟೆಲಗಳಲ್ಲಿ ಇಂತಹದಕ್ಕೆಲ್ಲ ಅನುಮತಿ ಇರುವುದಿಲ್ಲ. ಅದಕ್ಕಾಗಿ ಒಂದು ಉಪಾಯ ಮಾಡಿದ್ದರು. ಹೊರಗಿನ ಬಾಗಿಲಿಗೆ Don't disturb ಎಂಬ ಕಾರ್ಡನ್ನು ಹಾಕಿ ಸ್ಟೌವ ಸಪ್ಪಳ ಹೊರಗೆ ಕೇಳಬಾರದೆಂದು ಜೊತೆಯಲ್ಲಿರುತ್ತಿದ್ದ ತಬಲಾ ಸಾಥಿದಾರರಿಗೆ ತಬಲಾ ಬಾರಿಸಲು ಹೇಳುತ್ತಿದ್ದರು. ಎಷ್ಟೋ ಸಲ ಪಂ. ರಘುನಾಥ



ನಾಕೋಡ ಜತೆಯಲ್ಲಿರುತ್ತಿದ್ದರು. ಇವರ ಅಡುಗೆ ಮುಗಿಯುವ ವರೆಗೂ ತಬಲಾ ವಾದನ ನಡೆಯುತ್ತಿತ್ತು. ತಮ್ಮಲ್ಲಿರುತ್ತಿದ್ದ ಗೋಡಂಬಿ ಚಟ್ನಿ, ಬಳ್ಳೊಳ್ಳಿ ಚಟ್ನಿ, ತುಪ್ಪ ಹಾಕಿಕೊಂಡು ಊಟ ಮಾಡುವಾಗ ಅದರ ಸುವಾಸನೆಗೆ ಎಂತವರ ಬಾಯಿಯಲ್ಲೂ ನೀರು ಬರುತ್ತಿತ್ತು.

ಅತ್ತರಿನ ವ್ಯಾಮೋಹ

ಪ್ರತಿ ಕಾರ್ಯಕ್ರಮಕ್ಕೆ ಹೋಗುವಾಗಲೂ ಅಪ್ಪಾ ಅವರಿಗೆ ಒಂದು ಅತ್ತರ ಬಾಟಲ್ ಬೇಕಾಗುತ್ತಿತ್ತು. ಒಮ್ಮೆ ಮುಂಬೈ ಹತ್ತಿರದ ಒಂದು ಕಾರ್ಯಕ್ರಮಕ್ಕೆ ಹೋದಾಗ ಅವರಲ್ಲಿದ್ದ ಅತ್ತರ ಖಾಲಿಯಾಗಿತ್ತು. ಸಾಥಿದಾರರನ್ನು ಮುಂದೆ ಕಳಿಸಿ "ನಾನು ಈಗ ಬರುತ್ತೇನೆ ಮುಂದೆ ನಡೆಯಿರಿ" ಎಂದು ಹೇಳಿ ತಾವು ತಮಗೆ ಬೇಕಾದ ಅತ್ತರ ಬಾಟಲ್ ಶೋಧಿಸುತ್ತಾ ಮಾರ್ಕೆಟಿಗೆ ಹೋದರು. ಕಾರ್ಯಕ್ರಮದ ವೇಳೆ ಮೀರಿದಾಗ ಸಂಘಟಕರು ಗಾಬರಿಯಾಗಿ ಮಾರ್ಕೆಟ್ ತುಂಬೆಲ್ಲಾ ಹುಡುಕಾಡಿ ಇವರನ್ನು ಕರೆದುಕೊಂಡು ಬರಬೇಕಾಯಿತು. ಲೇಟಾದರೂ ಸಹಿತ ಅಪಾರ ಕೇಳುಗರು ಕಾಯುತ್ತಿದ್ದರು. ಅಂದು ಅವರು "ಮಿತಭಾಷಿಣಿ ಹೀಚ್ ಕುಲಕಾಮಿನಿ" ಎಂಬ ಮರಾಠಿ ನಾಟ್ಯ ಗೀತೆಯಲ್ಲಿ ಕರ್ನಾಟಕಿ ಸಂಗೀತವನ್ನು ಮಿಶ್ರಣ ಮಾಡಿ ರಂಜನೀಯವಾಗಿ ಹಾಡಿದಾಗ ಕೇಳುಗರು ಹುಚ್ಚೆದ್ದು ಕುಣಿದರು. ಅಷ್ಟೊಂದು ಅಮೋಘವಾದ ಕಾರ್ಯಕ್ರಮವಾಯಿತು. ಅತ್ತರನ್ನು ತಾವು ಹಚ್ಚುಕೊಳ್ಳುವುದಲ್ಲದೇ ಹತ್ತಿರವಿದ್ದವರಿಗೆಲ್ಲ ಹಚ್ಚಿ, ಸಂತೋಷಪಡುತ್ತಿದ್ದರು. ಹೈದರಾಬಾದ, ಲಖನೌಗಳಿಂದ ಅತ್ತರ ಬಾಟಲಗಳನ್ನು ತರಿಸುತ್ತಿದ್ದರು.

ಕೌಟುಂಬಿಕ

ಬಸವರಾಜರು ೧೯೩೨ರಲ್ಲಿ ವಿಜಾಪುರ ಜಿಲ್ಲೆಯ ಆನಂದಯ್ಯಾ ಬೆಳಗಾಂವಮಠರ ಮಗಳಾದ ಮಹಾದೇವಿಯವರನ್ನು ಮದುವೆಯಾದರು. ಆದರೆ ಅವರು ಸೂಕ್ಷ್ಮ ಪ್ರಕೃತಿಯವರಾಗಿದ್ದರು. ಮದುವೆಯಾದ ಕೆಲವೇ ವರ್ಷದಲ್ಲಿ ತೀರಿಹೋದರು. ಅವರಿಗೆ ಮೂವರು ಪುಟ್ಟ ಮಕ್ಕಳು ರಾಜಶೇಖರ, ಸರ್ವಮಂಗಳಾ, ಹೇಮಾವತಿಯರು. ಮಕ್ಕಳು ತಮ್ಮ ಚಿಕ್ಕಮ್ಮ, ಮಹಾದೇವಿಯವರ ತಂಗಿ ಭಾರತಿದೇವಿಯರನ್ನು ತುಂಬಾ ಹಚ್ಚಿಕೊಂಡಿದ್ದವು. ಹೀಗಾಗಿ ಹಿರಿಯರು ಬಂಧುಗಳೆಲ್ಲ ಸೇರಿ ೧೯೬೨ ರಲ್ಲಿ ಅವರೊಂದಿಗೆ ವಿವಾಹ ಮಾಡಿದರು. ರಾಜಗುರುಗಳ ಧರ್ಮಪತ್ನಿಯಾದ ಭಾರತಿದೇವಿ ಪತಿಯ ಅಪ್ರತಿಮ ಸಂಗೀತ ಸಾಧನೆ, ಅನುಪಮ ಕೀರ್ತಿಗಳಿಗೆ ಸ್ಫೂರ್ತಿಯ ಸೆಲೆಯಾಗಿ ನಿಂತು ಜೀವನದುದ್ದಕ್ಕೂ ಪತಿಯ ರಸಯಾತ್ರೆಯಲ್ಲಿ ಜೊತೆಯಲ್ಲಿದ್ದವರು. ಅವರಿಗೆ ನಿಜಗುಣ, ಜಯಾನಂದ, ಶಿವಾನಂದ ಎಂಬ ಪುತ್ರರಿದ್ದಾರೆ. ಮೊಮ್ಮಗ ವಿಶ್ವರಾಜ (ನಿಜಗುಣರ ಪುತ್ರ) ಬಾಲಕಲಾವಿದನಾಗಿದ್ದು



ತನ್ನ ಅಜ್ಜನ ಸಂಗೀತವನ್ನು ಮುಂದುವರೆಸಿಕೊಂಡು ಹೋಗುವ ಪ್ರತಿಭೆಯನ್ನು ಹೊಂದಿದ್ದಾನೆ. ಸೊಸೆ ಮಂಜುಳಾ ನಿಜಗುಣ ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕಾರ್ಯನಿರತರಾಗಿದ್ದಾರೆ.


ರಾಜಗುರು ಎಂಬ ಹೆಸರು

ಬಸವರಾಜರ ಪೂರ್ವಜರು ಸಾಗರ ತಾಲೂಕಿನಲ್ಲಿದ್ದ ಕೆಳದಿ ಸಂಸ್ಥಾನದ ರಾಜಮನೆತನಕ್ಕೆ ವೈದಿಕ ಗುರುಗಳಾಗಿದ್ದರು. ಕೆಳದಿ ಸಂಸ್ಥಾನದ ರಾಜ ಶಿವಪ್ಪ ನಾಯಕ ಹಾಗೂ ಕೆಳದಿ ಚನ್ನಮ್ಮಾ ತುಂಬಾ ಪ್ರಸಿದ್ಧ ರಾಜ ವಂಶಿಕರಾಗಿದ್ದರು. ಮುಂದೆ ಪರಕೀಯರ ದಾಳಿಯಿಂದ ಆಳ್ವಿಕೆಯಲ್ಲಿ ತೊಂದರೆ ಆದಾಗ ರಾಜರು ಇವರ ಪೂರ್ವಜರಿಗೆ ಧನ ಕಾಣಿಕೆಗಳನ್ನು ನೀಡಿ ಬೇರೆ ಸುರಕ್ಷಿತ ಜಾಗದಲ್ಲಿ ನೆಲೆಸುವಂತೆ ಹೇಳಿ ಕಳಿಸಿಕೊಟ್ಟರು. ಆಗ ಅವರೆಲ್ಲರೂ ಯಲಿವಾಳ ಗ್ರಾಮಕ್ಕೆ ಬಂದು ಅಲ್ಲಿಯೇ ಭೂಮಿಯನ್ನು ತೆಗೆದುಕೊಂಡು ನೆಲೆಯೂರಿದರು. ಹೀಗಾಗಿ ಜನರು ಅವರನ್ನು ಕೆಳದಿ ಮಠದವರು ಎಂದು ಕರೆಯುತ್ತಿದ್ದರು. ಬಸವರಾಜರು ಪುಣೆ, ಮುಂಬೈಗೆ ಹೋಗಿದ್ದಾಗ ತಮ್ಮ ಹೆಸರಿನ ಮುಂದೆ ಕೆಳದಿಮಠ ಎನ್ನುವುದನ್ನು ತೆಗೆದು ರಾಜಗುರು ಎಂದು ಅಡ್ಡ ಹೆಸರನ್ನು ಮಾಡಿಕೊಂಡರು. ಬಸವರಾಜ ರಾಜಗುರು ಎಂದೇ ಜಗತ್ಪ್ರಸಿದ್ಧರಾದರು.

ಧಾರವಾಡದ ನೀರು

ರಾಜಗುರು ಅವರಿಗೆ ತಮ್ಮ ಕಂಠದ ಬಗ್ಗೆ ಇರುವಷ್ಟು ಕಾಳಜಿ ಬೇರೆ ಯಾರಿಗೂ ಇರಲಿಕ್ಕಿಲ್ಲ. 'ತಮ್ಮದೇನಿದ್ದರೂ ಈ ಕಂಠದಲ್ಲಿಯೇ' ಎಂದು ಅವರು ಅದಕ್ಕಾಗಿ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳುತ್ತಿದ್ದರು. ಅಂಥ ಇಂಥಹದನ್ನು ತಿಂದು ಕಂಠವನ್ನು ಕೆಡಿಸಿಕೊಂಡವರಲ್ಲ. ಎಲ್ಲಿಯೇ ಹೋಗಲಿ ಅವರಿಗೆ ಕುಡಿಯಲು ಧಾರವಾಡದ ನೀರೇ ಬೇಕು. ಊಟದಲ್ಲಿ ಮೊಸರು, ಮಜ್ಜಿಗೆ ಕರಿದ ವಸ್ತುಗಳು ಯಾವುದೂ ಬೇಡ. ಅವೆಲ್ಲ ತಮ್ಮ ಧ್ವನಿಯ ವೈರಿಗಳು ಎಂದು ಹೇಳುತ್ತಿದ್ದರು. ವ್ರತ ಹಿಡಿದವರಂತೆ ತಮ್ಮ ಧ್ವನಿಗೋಸ್ಕರ ಬಹಳಷ್ಟು ತ್ಯಾಗವನ್ನು ಮಾಡಿ ಅದನ್ನು ನಡೆಸಿಕೊಂಡು ಬಂದಿದ್ದರು. ದಿಲ್ಲಿಗೆ ಹೋಗಲಿ, ಕಲ್ಕತ್ತಾಕ್ಕೆ ಹೋಗಲಿ ತಿರುಗಿ ಬರುವ ತನಕ ನೀರು ಸಾಲಬೇಕೆಂದು ದೊಡ್ಡಕೊಡದಂತಹ ತಿರುಪಣಿ ತಂಬಿಗೆಯಲ್ಲಿ ಕಾದು ಆರಿಸಿದ ಧಾರವಾಡದ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು. ಯಾರಿಗಾದರೂ ಏನು ಬೇಕಾದರೂ ಕೊಟ್ಟಾರು ಆದರೆ ತಮ್ಮ ನೀರನ್ನು ಮಾತ್ರ ಕೊಡುತ್ತಿರಲಿಲ್ಲ. ಸ್ವಲ್ಪ ನೀರನ್ನು ಕೊಡಿ ಎಂದು ಪ್ರಯಾಣದಲ್ಲಿ ಕೇಳಿದರೆ ಸ್ಟೇಶನನಲ್ಲಿ ರೈಲು ನಿಂತಾಗ ತಾವೇ ಹೋಗಿ ನಳದಿಂದ ನೀರು ತುಂಬಿ ತಂದು ಕೊಡುತ್ತಿದ್ದರು. 'ನಮ್ಮ ನೀರನ್ನು ಮಾತ್ರ ಕೇಳಬೇಡಿ' ಎನ್ನುತ್ತಿದ್ದರು.

ಎಷ್ಟೋ ಸಾರೆ ಪ್ರಯಾಣದಲ್ಲಿ ತಾವು ಹಾಲು ಅಥವಾ ನೀರನ್ನು ಕುಡಿದು ಇದ್ದು ತಮ್ಮ



ಶಿಷ್ಯರಿಗೆ ಬೇಡಿದ್ದನ್ನೆಲ್ಲಾ ತಿನ್ನಿಸುತ್ತಿದ್ದರಂತೆ. ಅವರು ಅಷ್ಟು ಕಟ್ಟುನಿಟ್ಟಿನಿಂದ ಇರುತ್ತಿದ್ದರಿಂದಲೇ ಕೊನೆಯವರೆಗೂ ಅವರ ಧ್ವನಿ ಮಾಧುರ್ಯ ಹಾಗೆಯೇ ಇತ್ತು. ಅಂತಹ ಧ್ವನಿ ಮಾಧುರ್ಯವುಳ್ಳವರನ್ನು ನೋಡಿಯೇ ಇಲ್ಲ ಎಂದು ಖ್ಯಾತ ಗಾಯಕ ಮತ್ತು ರಾಜಗುರುಗಳ ಹಿರಿಯ ಶಿಷ್ಯರಾದ ಪಂ. ಸೋಮನಾಥ ಮರಡೂರ ಹೇಳುತ್ತಾರೆ.

ಭಾಷಾಜ್ಞಾನ

ಸಂಗೀತದೊಂದಿಗೆ ಸಂಸ್ಕೃತವನ್ನು ಅಭ್ಯಾಸ ಮಾಡಿದ ಬಸವರಾಜರು ತಮ್ಮ ಸಂಗೀತದ ಚೀಜುಗಳು ಹೆಚ್ಚಾಗಿ ಹಿಂದಿ ಭಾಷೆಯಲ್ಲಿರುವುದನ್ನು ಕಂಡು ಹಿಂದಿ ಭಾಷೆಯನ್ನು ಕೂಡಾ ಅಭ್ಯಾಸ ಮಾಡಿದರು. ಕೆಲ ಪರೀಕ್ಷೆಗಳನ್ನು ಪಾಸು ಮಾಡಿದರು. ಹಿಂದಿಯಲ್ಲಿರುವ ಚೀಜಗಳ ಅರ್ಥವನ್ನು ಕನ್ನಡದಲ್ಲಿ ಸುಂದರವಾಗಿ ಭಾಷಾಂತರಿಸಿ ಹೇಳುತ್ತಿದ್ದರು. ಪುಣೆಯಲ್ಲಿದ್ದಾಗ ಮರಾಠಿ ಭಾಷೆಯನ್ನು ಕಲಿಯಬೇಕಾಯಿತು. ಒಂದೇ ವರ್ಷದಲ್ಲಿ ಮರಾಠಿಯನ್ನು ಕಲಿತು ಅಲ್ಲಿನ ಮರಾಠಿ ಜನರಿಗೆ ಅಚ್ಚರಿಯಾಗುವಂತೆ ಮಾತನಾಡತೊಡಗಿದರು. ಅವರು ಹಿಂದಿಯನ್ನಾಗಲಿ, ಮರಾಠಿಯನ್ನಾಗಲಿ ಮಾತನಾಡತೊಡಗಿದರೆ ಅದು ಅವರ ಮಾತೃಭಾಷೆಯೇ ಎನ್ನುವಂತೆ ಸುಲಲಿತವಾಗಿ ಮಾತನಾಡುತ್ತಿದ್ದರು. ರೈಲಿನಲ್ಲಿ ಪ್ರಯಾಣ ಮಾಡುವಾಗ ಅವರು ಹಿಂದಿ ಮಾತನಾಡುವುದನ್ನು ಕೇಳಿದ ಉತ್ತರ ಭಾರತದ ಪ್ರಯಾಣಿಕರು ತಮ್ಮದು ಯಾವೂರು ತಾವು ಏನು ಮಾಡುತ್ತೀರಿ ? ಎಂದು ಕೇಳಿದಾಗ "ಹಿಂದೂಸ್ತಾನ ಮೇರಾ ಗಾಂವ್ ಹಿಂದೂಸ್ತಾನಿ ಸಂಗೀತ ಗಾನಾ ಮೇರಾ ಕಾಮ್ ಹೈ" ಎಂದು ಹೇಳಿ ತಮ್ಮ ತಂಬೂರಿಯನ್ನು ತೋರಿಸುತ್ತಿದ್ದರು.

ರಾಜಗುರು ಪ್ರಯಾಣ

ಯಾವ ಪ್ರಭಾವವೂ ಇಲ್ಲದೇ ಯಾವ ಶಿಫಾರಸೂ ಇಲ್ಲದೇ ತಮ್ಮ ಸ್ವರತ್ರಾಣದಿಂದಲೇ ಬೆಳೆದು ಸಂಗೀತ ದಿಗ್ಗಜರಾದ ಪಂಡಿತ ಬಸವರಾಜ ರಾಜಗುರು ಅವರು ಸಂಗೀತದಲ್ಲಷ್ಟೇ ಅಲ್ಲ ಪ್ರಯಾಣ ನಿತ್ಯ ಜೀವನದಲ್ಲಿಯೂ ಕೂಡಾ ತಮ್ಮದೇ ಆದ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಮನೆಯಲ್ಲಲ್ಲದೇ ಕಾರ್ಯಕ್ರಮಗಳಿಗೆ ತಂಬೂರಿ ಸಾಥ ನೀಡುತ್ತಾ ದೇಶದಾದ್ಯಂತ ನಾನು ಅವರೊಂದಿಗೆ ಸಂಚರಿಸಿದ್ದೇನೆ. ಅವರ ಪ್ರಯಾಣ, ಸಂಗೀತ ಕಾರ್ಯಕ್ರಮದ ರಸ ಪ್ರಸಂಗಗಳು ನನ್ನ ಸ್ಮೃತಿಪಟಲದ ಮೇಲೆ ಅಚ್ಚಳಿಯದೆ ಉಳಿದಿವೆ.

ಅವರ ಶಿಷ್ಯ ಪರಂಪರೆ ಬಲು ದೊಡ್ಡದು. ತಮ್ಮ ಶಿಷ್ಯರಿಗೆ ಕಾರ್ಯಕ್ರಮಗಳಲ್ಲಿ ಹಾಡುವ ಅನುಭವ ದೊರೆಯಲಿ ಎಂಬ ಉದ್ದೇಶದಿಂದ ಅವರನ್ನು ತಮ್ಮೊಂದಿಗೆ ಬೇರೆ ಬೇರೆ ಊರುಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ತಬಲಾ, ಹಾರ್ಮೋನಿಯಮ್ ನುಡಿಸುವವರನ್ನು ಕೂಡಾ ಧಾರವಾಡದಿಂದಲೇ ಕರೆದೊಯ್ಯುತ್ತಿದ್ದರು. ಅವರ ಎಲ್ಲಾ ವೆಚ್ಚಗಳನ್ನು ತಾವೇ



ನೋಡಿಕೊಳ್ಳುತ್ತಿದ್ದರು.

ಉತ್ತರ ಭಾರತದ ಕಾರ್ಯಕ್ರಮಗಳಿಗೆ ಹೋಗುವುದೆಂದರೆ ನಮಗೆ ಬಿಡುವಿಲ್ಲದ ಕೆಲಸ, ಯಾವಾಗಲೂ ರೇಲ್ವೆಯಲ್ಲಿಯೇ ಅವರ ಪಯಣ. ಕಾರ್ಯಕ್ರಮಕ್ಕಿಂತ ಒಂದು ದಿನ ಮೊದಲೇ ಆ ಊರನ್ನು ತಲುಪಬೇಕು. ಪ್ರಯಾಣಕ್ಕೆ ಹೊರಡುವಾಗ ೩-೪ ಮರದ ಪೆಟ್ಟಿಗೆಗಳು, ಧಾರವಾಡದ ನೀರನ್ನು ತುಂಬಿಕೊಂಡ ಕೊಡದಂತಹ ತಿರುಪಣಿ ತಂಬಿಗೆಗಳು, ಒಂದು ಸಣ್ಣ ತಂಬಿಗೆಯಲ್ಲಿ ಹಾಲು, ಡಬ್ಬಿಗಳಲ್ಲಿ ಬೇಸನ್‌ಉಂಡಿ, ಚಕ್ಕುಲಿ, ಧಾರವಾಡಪೇಡೆ, ದಶಮಿ, ಚಟ್ನಿಪುಡಿ, ಉಪ್ಪಿನಕಾಯಿ ಮುಂತಾದವು. ಒಂದು ಪೆಟ್ಟಿಗೆಯಲ್ಲಿ ಸ್ಟೋವ್, ಚಿಕ್ಕ ಪುಟ್ಟ ಪಾತ್ರೆಗಳು, ಹಾರ್ಮೋನಿಯಮ್ ಪೆಟ್ಟಿಗೆ, ತಂಬೂರಿಗಳು (ತಂಬೂರಿಗಳನ್ನು ಇಡುವ ಸಲುವಾಗಿ ಒಂದು ಬೇರೆ ಬರ್ಥ ರಿಜರ್ವೇಶನ್ ಮಾಡಿಸುತ್ತಿದ್ದರು) ಮತ್ತೊಂದು ಮರದ ಪೆಟ್ಟಿಗೆಯಲ್ಲಿ ಇಸ್ತ್ರೀ ಅಂಗಿಗಳು, ಧೋತರ, ಕೋಟು, ರುಮಾಲು ಗಳಿರುತ್ತಿದ್ದವು. ಇವುಗಳನ್ನೆಲ್ಲಾ ಹೇರಿಕೊಂಡು ಟಾಂಗಾ ಇಲ್ಲವೇ ರಿಕ್ಷಾಗಳಲ್ಲಿ ನಾವು ಮುಂದೆ ಹೋಗಬೇಕು. ನಂತರ ಬಾಯಿತುಂಬಾ ಎಲೆ ಅಡಿಕೆ ಹಾಕಿಕೊಂಡು ಮತ್ತೊಂದು ಟಾಂಗಾದಲ್ಲಿ ಅವರು ಬರಬೇಕು. ಹೀಗೆ ಮಾಳಮಡ್ಡಿ ರಾಜಗುರು ನಿವಾಸದಿಂದ ಹೊರಟ ಅವರ ಸವಾರಿ ಸ್ಟೇಶನ್ ತಲುಪುತ್ತಿತ್ತು. ಗಾಡಿ ಬಂದ ಮೇಲೆ ಶಿಷ್ಯರು ಸಾಮಾನುಗಳನ್ನು ಒಳಗೆ ಸಾಗಿಸಬೇಕು. ಎಲ್ಲಾ ಸಾಮಾನುಗಳನ್ನು ಹೋಗಿವೆಯೇ ಇಲ್ಲವೋ ಎಂದು ನೋಡುತ್ತಾ ಇನ್ನೂ ಪ್ಲಾಟಫಾರ್ಮ ಮೇಲೆಯೇ ನಿಂತಿರುತ್ತಿದ್ದ ಅವರನ್ನು ನಾವೆಲ್ಲ ಬೇಗನೆ ಹತ್ತಿರಿ ಗಾಡಿ ಬಿಡುತ್ತದೆ ಎಂದು ಕೂಗಿ ಕರೆಯುವಷ್ಟರಲ್ಲಿ ಗಾಡಿ ಚಲಿಸಲಾರಂಭಿಸುತ್ತಿತ್ತು. ಆಗ ಅವರು ಅವಸರದಿಂದ ಹತ್ತಬೇಕು. ಇಲ್ಲವೇ ನಾವೇ ಯಾರಾದರೂ ಅವರನ್ನು ಕೈಹಿಡಿದು ಮೇಲೆ ಎಳೆದುಕೊಳ್ಳಬೇಕು. ಆ ದೃಶ್ಯ ನಮಗೆಲ್ಲ ಸಾಮಾನ್ಯ ಎನಿಸಿದರೆ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಪುಣೆ, ಮುಂಬೈದವರಿಗೆ ವಿಡಿಯೋ ಶೂಟಿಂಗ್ ಮಾಡುವಂತಹ ದೃಶ್ಯವಾಗಿರುತ್ತಿತ್ತು.

ಎಲ್ಲ ಸಾಮಾನುಗಳು ಸರಿಯಾಗಿವೆಯೇ ಎಂದು ಕೇಳುತ್ತಾ ಬಂದು ಸೀಟಿನ ಮೇಲೆ ಕುಳಿತು ನಗುತ್ತಾ ಶಿಷ್ಯರ, ಸಾಥಿದಾರರ ಕುಶಲವನ್ನು ವಿಚಾರಿಸುತ್ತಿದ್ದರು. ಸಾಮಾನುಗಳನ್ನು ಹೊತ್ತು ಸುಸ್ತಾಗಿದ್ದ ಶಿಷ್ಯರಿಗೆ ಚೇಷ್ಟೇ ಮಾಡುತ್ತಾ ತಮ್ಮ ಹಾಸ್ಯ ಚಟಾಕೆಯಿಂದ ನಗುವಂತೆ ಮಾಡಿ ಒಂದೊಂದೆ ಡಬ್ಬಿಗಳನ್ನು ತೆರೆದು ಉಂಡಿ ಚಕ್ಕುಲಿಗಳನ್ನು ಕೊಟ್ಟು ಹುರುಪುಗೊಳಿಸುತ್ತಿದ್ದರು. ಅನಂತರ ಸಂಗೀತದ ಬಗ್ಗೆ ಚರ್ಚೆ, ರಾಗಗಳನ್ನು ಹಾಡುವುದು, ಈ ರಾಗವನ್ನು ಬೇರೆ ಬೇರೆ ಗಾಯಕರು ಹೇಗೆ ಹಾಡುತ್ತಾರೆ ಎಂದು ಅವರಂತೆಯೇ ಹಾಡಿ ತೋರಿಸುವುದು. ಇದೆಲ್ಲ ನಿದ್ರೆ ಬರುವವರೆಗೂ ನಡೆದೇ ಇರುತ್ತಿತ್ತು. ಬೋಗಿಯಲ್ಲಿರುತ್ತಿದ್ದ ಸಹ ಪ್ರಯಾಣಿಕರು ಇದನ್ನೆಲ್ಲಾ ಕುತುಹಲದಿಂದ ನೋಡುತ್ತಾ ಕೇಳುತ್ತ ಸುತ್ತಲು ನೆರೆಯುತ್ತಿದ್ದರು. ಹೀಗಿತ್ತು ಅವರ ಸಂಗೀತ ಯಾತ್ರೆ.



ಸಂಗೀತ ಹಾಗೂ ಕಾರ್ಯಕ್ರಮದ ಸೊಬಗು

ಶಾಸ್ತ್ರೀಯ ಸಂಗೀತದಲ್ಲಿ ಪ್ರಸಿದ್ಧರಾದ ಕಲಾವಿದರನ್ನು ಗಮನಿಸಿದಾಗ ಅವರಲ್ಲಿ ಅವರದ್ದೇ ಆದ ವಿಶೇಷತೆಯನ್ನು ನಾವು ಕಾಣುತ್ತೇವೆ. ಅವರ ಘರಾಣೆ ವಿದ್ಯೆ ಹಾಗೂ ಧ್ವನಿಗೆ ಅನುಗುಣವಾಗಿ ಗಾಯನವನ್ನು ರೂಪಿಸಿಕೊಂಡಿರುತ್ತಾರೆ. ಕೆಲವರಲ್ಲಿ ಗಂಭೀರ ಶೈಲಿಯ ಪರಾಕ್ರಮಿಯ ಗಾಯನ ಕಂಡು ಬಂದರೆ ಮತ್ತೊಬ್ಬರಲ್ಲಿ ಬುದ್ಧಿಶಕ್ತಿಯ ಚಮತ್ಕಾರಿಕ ಗಾಯನವಿರುತ್ತದೆ. ಮತ್ತೆ ಕೆಲವರು ರಂಜನೀಯ, ಭಾವನಾ ಪ್ರಧಾನ ಗಾಯನವನ್ನು ತಮ್ಮದಾಗಿಸಿಕೊಂಡಿರುತ್ತಾರೆ.

ಗ್ವಾಲಿಯರ, ಕಿರಾಣಾ, ಪತಿಯಾಲಾ ಘರಾಣೆಗಳಲ್ಲಿ ಸಾಧನೆಗೈದು ಹಲವು ಗುರುಗಳಲ್ಲಿ ಅಭ್ಯಾಸವನ್ನು ಮಾಡಿದ ರಾಜಗುರುಗಳು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದರು. ಸುಮಧುರ ಕಂಠವನ್ನು ಹೊಂದಿದ ಅವರು ಶಾಸ್ತ್ರೀಯ ಸಂಗೀತದಲ್ಲಿ ನವರಸಗಳಿಂದ ಕೂಡಿದ ಭಾವನಾಪ್ರಧಾನ ಲಾಲಿತ್ಯ ಪೂರ್ಣ, ರಂಜನೀಯ ಗಾಯನಕ್ಕೆ ಹೆಚ್ಚು ಒತ್ತು ನೀಡಿದ್ದರು ಎನ್ನಬಹುದು. ಅವರ ಗಾಯನದಲ್ಲಿ ಮೂರೂ ಘರಾಣೆಯ ವಿಶೇಷತೆಗಳು ಎದ್ದು ಕಾಣುತ್ತಿದ್ದವು. ಪಾಮರರಿಂದ ಪಂಡಿತರವರೆಗೂ ಅವರ ಗಾಯನ ಮೆಚ್ಚುಗೆಯಾಗುತ್ತಿತ್ತು. ಶಾಸ್ತ್ರೀಯ ಸಂಗೀತ ತಿಳಿಯದವರಿಗೂ ಸಹ ಇವರ ಗಾಯನವನ್ನು ಕೇಳಬೇಕು ಎನ್ನಿಸುವಷ್ಟು ಆಕರ್ಷಕ ಶೈಲಿಯನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದರು. "ಅದು ರಾಜಗುರು ಶೈಲಿ" ಎಂದೇ ಪ್ರಸಿದ್ಧವಾಗಿದೆ. "ನಮ್ಮ ಗಾಯನದಿಂದ ನಮಗೂ ಆನಂದವಾಗಬೇಕು, ಕೇಳುಗರು ಆನಂದಪಡಬೇಕು, ತನ್ನ ಸಂಗೀತದಿಂದ ಶ್ರೋತೃಗಳ ಮೇಲೆ ಪ್ರಭಾವ ಬೀರಿ ಅವರಲ್ಲಿ ಇನ್ನೂ ಹೆಚ್ಚು ಕೇಳಬೇಕು ಎಂಬ ಭಾವನೆಯನ್ನು ಮೂಡಿಸುವವನೇ ನಿಜವಾದ ಕಲಾವಿದ. ತನ್ನ ಕಲೆಯಿಂದ ಕೇಳುಗರನ್ನು ಸಂತೋಷಪಡಿಸ ಲಾಗದಿದ್ದರೆ ಎಷ್ಟೇ ದೊಡ್ಡ ಪಂಡಿತನಾಗಿದ್ದರೂ ವ್ಯರ್ಥ" ಎಂದು ಅವರು ಹೇಳುತ್ತಿದ್ದರು. ವೈವಿಧ್ಯತೆಯಿಂದ ಕೂಡಿದ ಅವರ ಸಂಗೀತದಲ್ಲಿ ಮೀಂಡ್, ಖಟಕಾ, ಮುರ್ಕಿ ಘಸೀಟ್, ಸರಗಮ್, ಬೋಲ್, ಬೋಲ್‌ತಾನಗಳ ನಳಪಾಕವೇ ಇರುತ್ತಿತ್ತು. ಖ್ಯಾಲ್, ಧ್ರುಪದ, ಧಮಾರ, ಠುಮರಿ, ಮರಾಠಿ ನಾಟ್ಯಗೀತೆ, ರಂಗಗೀತೆ, ವಚನ, ದಾಸರಪದ, ಭಾವಗೀತೆ ಎಲ್ಲವೂ ಕರ್ಣ ಮಧುರವಾಗಿ ಮೂಡಿ ಬರುತ್ತಿದ್ದವು.

ಸಂಗೀತ ಸಭೆಗೆ ಹೋಗುವಾಗ ಬಿಳಿಧೋತರ, ನಿಲುವಂಗಿ, ಉದ್ದನೆಯ ಕರಿಕೋಟು, ತಲೆಗೆ ಕೆಂಪು ಜರಿಯ ರುಮಾಲು ಇಲ್ಲವೆ ಕಸೂತಿ ಮಾಡಿದ ಟೊಪ್ಪಿಗೆ, ಕಾಲಲ್ಲಿ ಮಿಂಚುವ ತೆರೆದ ಬೂಟುಗಳು, ಹೆಗಲ ಮೇಲೆ ಶಾಲು ಹಾಕಿಕೊಂಡು ತಾಂಬೂಲ ಮೆಲ್ಲುತ್ತ ಮೆಲ್ಲಗೆ ರಾಜಠೀವಿಯಿಂದ ಬರುತ್ತಿದ್ದರೆ ಸಭೆಯಲ್ಲಿರುವವರು ತಾವಾಗಿಯೇ ಗೌರವ ಸೂಚಿಸುತ್ತಿದ್ದರು. ವೇದಿಕೆಯ ಮೇಲೆ ಕುಳಿತು ಶರೀರದ ಹೆಚ್ಚಿನ ಚಲನೆಗಳಿಲ್ಲದೆ, ಶಾಂತವಾಗಿ ಎರಡು ತಂಬೂರಿಗಳ ಮಧ್ಯದಲ್ಲಿ ರಾಗವನ್ನು ಆರಂಭಿಸುತ್ತಿದ್ದರು. 'ಸುಮುದ್ರಾ-ಸುವಾಣಿ' ಎಂಬಂತೆ ಮುಖವನ್ನು



ಕೆಡಿಸದೇ ಪ್ರಸನ್ನತೆಯಿಂದ ಸ್ಪಷ್ಟವಾಗಿ ಉಚ್ಚಾರಣೆ ಮಾಡುತ್ತಾ ಹಾಡುತ್ತಿದ್ದರು. ಯಾವುದೇ ಒಂದು ರಾಗವನ್ನು ಪ್ರಾರಂಭಿಸಿದರೆ ಗಂಟೆಗಟ್ಟಲೇ ಆ ರಾಗದ ಎಲ್ಲ ಸಾಧ್ಯ ಮಗ್ಗಲುಗಳನ್ನು ಕಾಣುತ್ತ ಒಂದು ರೀತಿಯ ವಾತಾವರಣ ನಿರ್ಮಾಣ ಮಾಡುತ್ತಿದ್ದರು.

ಅವರ ಹಾಡುಗಾರಿಕೆ ಎಂದರೆ ಅದೊಂದು ಮಾಂತ್ರಿಕನ ಆಟದಂತೆ, ತಬಲಾ ನುಡಿಸುವವರಿಗೆ ಹುರಿದುಂಬಿಸಿ ಚೆನ್ನಾಗಿ ನುಡಿಸುವಂತೆ ಮಾಡುವುದು. ಶಿಷ್ಯರಿಗೆ ಸ್ವರ ಹಚ್ಚಲು ಹೇಳಿ ಹಾಡಿಸುವುದು. ಹಾರ್ಮೋನಿಯಂದವರು ಯಾವಾಗಲೂ ಅವರ ಮುಖವನ್ನು ನೋಡುತ್ತಾ ನುಡಿಸುತ್ತಿದ್ದರು. ಯಾಕೆಂದರೆ ಅವರ ಗಾಯನ ಮಧ್ಯಸಪ್ತಕದಿಂದ ತಾರಸಪ್ತಕ ಮುಟ್ಟಿ ಮಿಂಚಿನಂತೆ ಮಂದ್ರ ಸಪ್ತಕದ ಷಡ್ಜಕ್ಕೆ ಇಳಿಯುತ್ತಿತ್ತು. ಹಾರ್ಮೋನಿಯಂದವರು ಮಂದ್ರ ಸಪ್ತಕದಲ್ಲಿ ನುಡಿಸಲು ಪ್ರಾರಂಭಿಸಿದರೆ ಅವರು ತಾರಸಪ್ತಕ ಮುಟ್ಟಿ ತಾನಗಳ ಪ್ರಕಾರವನ್ನು ಪ್ರಾರಂಭಿಸುತ್ತಿದ್ದರು. ಬೋಲ್‌ತಾನ್, ಗಮಕತಾನ್, ಸಪಾಟ್‌ತಾನ್, ವೆಟುಳಿತಾನ್, ಬಂದರ್‌ಖುದಿತಾನ್, ಘಸೀಟ್‌ತಾನ್, ತಲವಾರ್‌ಖಾಟ್‌ತಾನ್ ಮುಂತಾದವುಗಳು ಅವರ ವಿಶೇಷ ತಾನ್‌ಗಳಾಗಿದ್ದವು. ಅನಂತರ ಸರ್‌ಗಮ್‌ಗಳ ಸುರಿಮಳೆ ಸುರಿಸುತ್ತಿದ್ದರು. ಸರ್‌ಗಮ್‌ಗಳನ್ನು ಹೇಳುತ್ತಾ ತಾನ್‌ಗಳನ್ನು ಹೊಡೆಯುತ್ತಾ ವಾದ್ಯಗಾರರು, ಲಯಕಾರಿ ಮಾಡುವಂತೆ ಲಯಕಾರಿ ಮಾಡಿ ಸಮ್ಮಿಗೆ ಬರುವ ಅವರ ಆಕರ್ಷಕ ಶೈಲಿಗೆ ಸಂಗೀತ ತಿಳಿಯದ ಪಾಮರರು ಕೂಡಾ ಮನಸೋತು ಹುರುಪಿನಿಂದ ಅವರ ಗಾಯನವನ್ನು ಕೇಳುತ್ತಿದ್ದರು.

ಸ್ಕೇಲ್ ಬದಲಿ ಮಾಡುವದರಲ್ಲಿ (ಪಟ್ಟಿ) ಸಿದ್ಧಹಸ್ತರಾಗಿದ್ದ ಅವರು ಹಾಡುತ್ತಾ ಹಾಡುತ್ತಾ ರಾಗದ ಷಡ್ಜವನ್ನು ಬದಲಿಸಿ ಹಾಡ ತೊಡಗಿದಾಗ ಹಾರ್ಮೋನಿಯಂ ನುಡಿಸುವವರು ಏನು ಬಾರಿಸಬೇಕೆಂದು ತಿಳಿಯದೆ ಕಕ್ಕಾಬಿಕ್ಕಿಯಾಗುತ್ತಿದ್ದರು. (ಸ್ಕೇಲ್ ಬದಲಿಸುವುದೆಂದರೆ ಹಾಡುತ್ತಿರುವ ರಾಗಕ್ಕೆ ಚ್ಯುತಿಯಾಗದಂತೆ ಆ ರಾಗದಲ್ಲಿನ ಬೇರೆ ಸ್ವರಗಳನ್ನು ಷಡ್ಜ್ ಮಾಡಿಕೊಂಡು ಹಾಡುವುದು. ಉದಾ : ರಿಷಭ ಷಡ್ಜ್ ಮಾಡುವುದು ಇಲ್ಲವೇ ಗಾಂಧಾರ ಷಡ್ಜ್ ಮಾಡಿ ಹಾಡುತ್ತಾ ಹೋಗುವುದು. ಮತ್ತೆ ಮರಳಿ ಮೊದಲಿನ ಷಡ್ಜ್‌ಕ್ಕೆ ಬರುವುದು. ಇದಕ್ಕೆ ಮೂರ್ಚನಾ ಪದ್ಧತಿ ಎನ್ನುತ್ತಾರೆ). ಹೀಗೆ ವಿವಿಧ ಪ್ರಕಾರಗಳಿಂದ ಕೇಳುಗರನ್ನು ತಮ್ಮತ್ತ ಸೆಳೆದುಕೊಳ್ಳುತ್ತಿದ್ದರು. ತರಾನಾ ಹಾಡುವಾಗಲಂತೂ ಶ್ರೋತೃಗಳು ಉತ್ಸಾಹದಿಂದ ಚಪ್ಪಾಳೆಯನ್ನು ತಟ್ಟಿದ್ದೇ ತಟ್ಟಿದ್ದು. ಮರಾಠಿ ನಾಟ್ಯಗೀತೆ, ದಾಸರ ಪದಗಳನ್ನು ಹಾಡುವಾಗ ಕರ್ನಾಟಕ ಸಂಗೀತವನ್ನು ಮಿಶ್ರಣ ಮಾಡಿ ಅಪ್ಪಟ ಕರ್ನಾಟಕಿ ಕಲಾವಿದರಂತೆ ಸುಶ್ರಾವ್ಯವಾಗಿ ಹಾಡತೊಡಗಿದಾಗ ಕೇಳುಗರು ಆನಂದದಿಂದ ಮತ್ತೆ ಹಾಗೆಯೇ ಹಾಡುವಂತೆ ಒತ್ತಾಯಿಸುತ್ತಿದ್ದರು.

ಎದುರಿಗೆ ಕುಳಿತ ಶ್ರೋತೃಗಳಲ್ಲಿ ತುಂಬಾ ತಿಳಿದವರು, ಕಲಾವಿದರು ಇದ್ದು ಅವರು ಅಪ್ರಚಲಿತ ರಾಗಗಳನ್ನು ಹಾಡಲು ಕೇಳಿಕೊಂಡಾಗ ಬತ್ತಳಿಕೆಯಿಂದ ಬಾಣವನ್ನು ತೆಗೆದಂತೆ ಒಂದೊಂದೆ ರಾಗಗಳನ್ನು ಹೊರತೆಗೆದು ಹಾಡುತ್ತಿದ್ದರು. ಶಿವಕಲಿ, ಶಿವಶಂಕರಾ, ದೀಪರಂಜನಿ, ಪಟರಂಜನಿ, ಲಾಜವಂತಿ, ಮಾಂಡಕೇದಾರ, ಕೇದಾರಕೌಂಸ, ಹೇಮಕಲ್ಯಾಣ, ಕ್ಷೇಮಕಲ್ಯಾಣ,



ಹಂಸಕಿಂಕಿಣೀ, ಸುಹಾಕಾನಡಾ, ರಾಯಸಾಕಾನಡಾ, ಮಾಲಗುಂಜಿ ಮುಂತಾದ ಅಪ್ರಚಲಿತ ರಾಗಗಳನ್ನು ಅವರ ಧ್ವನಿಯಿಂದಲೇ ಕೇಳಬೇಕು. ಇಂತಹ ನೂರಾರು ರಾಗಗಳು ಅವರ ಸಂಗ್ರಹದಲ್ಲಿದ್ದವು. ಹೀಗೆ ನವರಸದಿಂದ ತುಂಬಿದ ಗಾಯನದಿಂದ ಕಾರ್ಯಕ್ರಮಕ್ಕೆ ಕಳೆ ಏರಿಸಿ ಊರಿನಿಂದ ಊರಿಗೆ ಸಂಚರಿಸುತ್ತಾ ದೇಶದಾದ್ಯಂತ ಸುತ್ತಿ ಅಸಂಖ್ಯ ಕೇಳುಗರಿಗೆ ಸಂಗೀತದ ಗುಂಗು ಹಿಡಿಸಿದ ಸಂಗೀತದ ಮಾಂತ್ರಿಕ ರಾಜಗುರು.

ವಚನ ಸಂಗೀತದ ಪ್ರಸಾರಕ

ಶಾಸ್ತ್ರೀಯ ಸಂಗೀತದ ಜೊತೆಗೆ ವಚನ ಸಂಗೀತವನ್ನು ಹಳ್ಳಿಯಿಂದ ದಿಲ್ಲಿಗೆ ಮುಟ್ಟಿಸಿ ದೇಶದ ತುಂಬಾ ಪ್ರಸಿದ್ಧಿಗೊಳಿಸಿದ ಕೀರ್ತಿ ರಾಜಗುರು ಅವರದು. ಬಸವಣ್ಣನವರ ವಚನ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರ ಸಾಕಷ್ಟು ವಚನಗಳನ್ನು ಸಂಗೀತಕ್ಕೆ ಮೊದಲು ಅಳವಡಿಸಿದವರು ಪಂಚಾಕ್ಷರಿ ಗವಾಯಿಗಳವರು. ಅವರು ಮೊಟ್ಟ ಮೊದಲು ಸಂಯೋಜಿಸಿದ್ದ "ನಾದಪ್ರಿಯ ಶಿವನೆಂಬರು" ಎಂಬ ವಚನ ಪೂರಿಯಾ ಧನಾಶ್ರೀರಾಗದಲ್ಲಿ ಇದ್ದು ಅದನ್ನು ತಮ್ಮ ಎಲ್ಲಾ ಶಿಷ್ಯರಿಗೂ ಕಲಿಸಿ ಕೊಟ್ಟಿದ್ದರು. ೧೯೫೩ರಲ್ಲಿ ರಾಜಗುರುಗಳ ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಲ್ಲಿ ರಾಗದ ಜೊತೆಗೆ ಮೋಳಿಗೆ ಮಾರಯ್ಯನವರ ವಚನವನ್ನು ಹಾಡಿದ್ದು ದೇಶವ್ಯಾಪಿ ಪ್ರಸಾರವಾಯಿತು. ತಾವು ಸಹ ತಮ್ಮ ಗುರುಗಳಂತೆ ಅನೇಕ ವಚನಗಳನ್ನು ಸಂಗೀತಕ್ಕೆ ಅಳವಡಿಸಿ ಜನಪ್ರಿಯವಾಗುವಂತೆ ಮಾಡಿದರು. ೧೯೫೦ ರಿಂದ ೬೦ ರವರೆಗಿನ ಅವಧಿಯಲ್ಲಿ ಇವರ ಹಲವಾರು ವಚನ ಸಂಗೀತದ ಧ್ವನಿ ಮುದ್ರಿಕೆಗಳು ಎಚ್.ಎಂ.ವಿ. ಕಂಪನಿಯಿಂದ ಬಿಡುಗಡೆಗೊಂಡವು. ಅವು ಬಿಡುಗಡೆಯಾದ ಕೆಲವೆ ದಿನಗಳಲ್ಲಿ ಬಿಸಿಕೇಕ್‌ಗಳಂತೆ ಖರ್ಚಾಗಿ ಹೋಗುತ್ತಿದ್ದವಂತೆ. ಅಷ್ಟೊಂದು ಬೇಡಿಕೆಯನ್ನು ಹೊಂದಿದ್ದವು. ಅವುಗಳನ್ನು ಕೇಳಿದ ಜನರು ಮುಂದಿನವು ಯಾವಾಗ ಬರುತ್ತವೆ ಎಂದು ಕಾಯುತ್ತಿದ್ದರಂತೆ. ಆವಾಗ ೭೮ ಆರ್.ಪಿ.ಎಂ. ಧ್ವನಿ ಮುದ್ರಿಕೆಗಳು ಮತ್ತು ಈಪಿಯಲ್ಲಿ ಬಂದ ವಚನಗಳು ಈ ಕೆಳಗಿನವಂತಿವೆ :

೧. ಪರಚಿಂತೆ ಎಮಗೇ ಏಕೆ ಅಯ್ಯಾ
೨. ಮಡಕೆಯ ಮಾಡುವರೆ
೩. ಜಗವ ಸುತ್ತಿಹುದು ನಿನ್ನ
೪. ಎನ್ನ ಕಾಯದ ಕತ್ತಲೆಯ
೫. ಅತ್ತಲಿತ್ತ ಹೋಗದಂತೆ
೬. ವಚನದಲ್ಲಿ ನಾಮಾಮೃತ
೭. ಎನ್ನ ಕಾಯವ ದಂಡಿಗೆಯ
೮. ಮಾಡಿ ಮಾಡಿ ಕೆಟ್ಟರು



೯. ಚಂದ್ರೋದಯಕೆ ಅಂಬುಧಿ
೧೦. ಎಮಗಿಂತ ಕಿರಿಯರಿಲ್ಲ
೧೧. ಸ್ವಾಮಿ ನೀನು ಶಾಶ್ವತ ನೀನು
೧೨. ನಂಬರು ನೆಚ್ಚರು
೧೩. ಕಲ್ಯಾಣವೆಂಬ ಪಣತೆಯಲ್ಲಿ
೧೪. ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ

ಮುಂತಾದವುಗಳು.

ಎಚ್.ಎಂ.ವಿ. ಕಂಪನಿಯಿಂದ ಇಷ್ಟೊಂದು ಸಂಖ್ಯೆಯಲ್ಲಿ ಧ್ವನಿಮುದ್ರಿಕೆಗಳು ಬಿಡುಗಡೆಗೊಂಡಿದ್ದು ರಾಜಗುರುಗಳದ್ದೇ ಎಂದು ಕಂಪನಿಯವರು ಹೇಳುತ್ತಾರೆ. ತಮ್ಮಲ್ಲಿ ಕಲಿಯಲು ಬರುತ್ತಿದ್ದ ವಿದ್ಯಾರ್ಥಿಗಳಿಗೂ ವಚನ ಸಂಗೀತವನ್ನು ಕಲಿಸಿ ಅವರು ಕೂಡ ಸುಂದರವಾಗಿ ವಚನಗಳನ್ನು ಹಾಡುವಂತೆ ಮಾಡಿದ್ದಾರೆ. ಅವರ ಶಿಷ್ಯರು ಎಲ್ಲ ಧರ್ಮದವರಿದ್ದು ಅವರೆಲ್ಲ ವಚನಗಳನ್ನು ಅಷ್ಟೇ ಪ್ರೀತಿಯಿಂದ ಭಕ್ತಿಯಿಂದ ಹಾಡುತ್ತಾರೆ. ಬೆಂಗಳೂರಿನ ಬಸವ ಸಮಿತಿಯಲ್ಲಿ ಪ್ರತಿವರ್ಷ ಇವರ ವಚನ ಸಂಗೀತದ ಕಾರ್ಯಕ್ರಮವಾಗಲೇಬೇಕು. ಅದರ ಅಧ್ಯಕ್ಷರಾಗಿದ್ದ ಮಾಜಿ ಉಪರಾಷ್ಟ್ರಪತಿ ಡಾ. ಬಿ.ಡಿ. ಜತ್ತಿಯವರು ಇವರ ವಚನ ಸಂಗೀತವನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. "ವಚನಗಳನ್ನು ರಾಜಗುರುಗಳಿಂದಲೇ ಕೇಳಬೇಕು. ಬೇರೆ ಯಾರೇ ಹಾಡಿದರೂ ಅದು ರಾಜಗುರುಗಳು ಹಾಡಿದಂತೆ ಆಗುವುದಿಲ್ಲ" ಎಂದು ಹೇಳುತ್ತಿದ್ದರು. ಬೆಂಗಳೂರಿನಲ್ಲಿ ರಾಜಗುರುಗಳಿಗೆ ಸನ್ಮಾನ ಮಾಡಿ "ಸಂಗೀತ ಸುಧಾಕರ" ಎಂಬ ಬಿರುದನ್ನು ಬಂಗಾರದ ಪದಕದಲ್ಲಿ ಬರೆಸಿ ನೀಡಿದ್ದರು. ರಾಜಗುರುಗಳು ತಮ್ಮ ಕಾರ್ಯಕ್ರಮ ಮುಕ್ತಾಯಗೊಳಿಸುವಾಗ ಹೆಚ್ಚಾಗಿ ಭೈರವಿ ರಾಗದ ವಚನಗಳಾದ "ಚಕೋರಂಗೆ ಚಂದ್ರಮನ", "ಕಳಬೇಡ ಕೊಲಬೇಡ", "ಎನ್ನ ಕಾಯದ ಕತ್ತಲೆಯ" ಇವುಗಳನ್ನು ಹಾಡುತ್ತಿದ್ದರು. ಕೇಳುಗರಂತೂ ವಚನಗಳನ್ನು ಹಾಡುವಂತೆ ಬೇಡಿಕೆಯನ್ನು ಮುಂದಿಡುತ್ತಿದ್ದರು. ೧೯೮೬ರಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ ಇವರ ಗಾಯನವಿದ್ದಾಗ ಶ್ರೋತೃಗಳು ವಚನವನ್ನು ಹಾಡುವಂತೆ ಒತ್ತಾಯಿಸಿದರು. ಆಗ ರಾಜಗುರುಗಳು "ಕಳಬೇಡ ಕೊಲಬೇಡ" ಎಂಬ ಬಸವಣ್ಣನವರ ವಚನವನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿ ಮುಗಿಸಿದಾಗ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಶ್ರೋತೃಗಳು ಎದ್ದು ನಿಂತು ಕರತಾಡನ ಮಾಡಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದನ್ನು ಕಂಡಾಗ ಅವರ ವಚನ ಸಂಗೀತದ ಜನಪ್ರಿಯತೆಯ ಅರಿವಾಗುತ್ತದೆ. ಲಹರಿ ಕಂಪನಿಯವರು ಮತ್ತು ಎಚ್.ಎಂ.ವಿ. ಕಂಪನಿಯವರು ಅವರು ಹಾಡಿದ ಹಳೆಯ ವಚನಗಳನ್ನು ಮರುಮುದ್ರಿಸಿ ಸಿಡಿ ರೂಪದಲ್ಲಿ ಹೊರತಂದಿದ್ದಾರೆ.



ಸ್ವಭಾವ - ಅಭಿರುಚಿ

ಯಾರು ಯಾವ ವಯಸ್ಸಿನವರಿರುತ್ತಾರೋ ತಾವು ಅದೇ ವಯಸ್ಸಿನವರಾಗಿ ಅವರೊಂದಿಗೆ ವ್ಯವಹರಿಸುವ, ಮಾತನಾಡುವ ಕಲೆ, ಮುಖ ನೋಡಿ ಅವರ ಮನಸ್ಸಿನಲ್ಲೇನಿದೆ ಎಂದು ತಿಳಿದುಕೊಳ್ಳುವಷ್ಟು ಬುದ್ಧಿ ಚಾತುರ್ಯ ಅವರಲ್ಲಿತ್ತು. ಹೀಗಾಗಿ ಅವರು ಎಲ್ಲರಿಗೂ ಬೇಕಾದವರಾಗಿದ್ದರು. ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಸಾದವರು ಕೂಡಾ ಅವರ ಅಭಿಮಾನಿಗಳಾಗಿದ್ದಾರೆ. ಪ್ರಾಣಿಗಳ ಬಗ್ಗೆಯೂ ಕೂಡಾ ಅತಿಯಾದ ಪ್ರೀತಿ, ದಯೆ. ಮನೆಯಲ್ಲಿ ಬೆಕ್ಕು ಇದ್ದರೆ ಅದಕ್ಕೂ ಹಾಲು ಹಾಕಿ ಪೇಡೆ ತಂದು ತಿನ್ನಿಸುತ್ತಿದ್ದರು. ನಾಯಿಗೆ ಬ್ರೆಡ್, ಆಕಳಿಗೆ ಟೋಸ್ಟ ಹಾಕುತ್ತಿದ್ದರು. ನಾನು ಚಿಕ್ಕವನಿದ್ದಾಗ ಅವರು ಬಹಳ ಮೂಡಿ ಎಂದು ಕೇಳಿದ್ದೆ. ಮನೆಯಲ್ಲಿ ತುಂಬಾ ಕಟ್ಟುನಿಟ್ಟು. ಮುಂದೆ ನಾನು ಶಾಲೆಯ ಶಿಕ್ಷಣ ಮುಗಿಸಿ ಕಾಲೇಜಿಗೆ ಹೋಗಲಾರಂಭಿಸಿದಾಗ ನನ್ನೊಂದಿಗೆ ಆತ್ಮೀಯರಾಗಿ ಬಿಟ್ಟಿದ್ದರು. ಒಬ್ಬ ಕಲಾವಿದನಿಗಿರುವ ಸಾಮಾನ್ಯ ಅನಿಸುವಂತಹ ಯಾವ ವ್ಯಸನಗಳೂ ಅವರಿಗಿರಲಿಲ್ಲ. ಎಲ್ಲ ದೃಷ್ಟಿಯಿಂದಲೂ ಅವರು ಇತರರಿಗಿಂತ ಭಿನ್ನವಾಗಿದ್ದರು. ಅವರ ಪ್ರತಿಯೊಂದು ಕೆಲಸಕ್ಕೂ ನಾನು ಬೇಕಾಗುತ್ತಿತ್ತು. ಪತ್ರ ಬರೆಯುವುದಕ್ಕೆ, ರಿಜರ್ವೇಶನ್ ಮಾಡಿಸಲು, ಬ್ಯಾಂಕಿಗೆ ಹೋಗಲು, ಬೇರೆ ಊರಿನ ಕಾರ್ಯಕ್ರಮಗಳಿಗೆ ಎಷ್ಟೋ ಸಾರೆ ಶಿಷ್ಯರು ಇದ್ದಾಗಲೂ ಕೂಡಾ ನನ್ನನ್ನು ತಮ್ಮ ಜೊತೆಗೆ ಕರೆದೊಯ್ಯುತ್ತಿದ್ದರು. ಹೀಗಾಗಿ ಅವರೊಂದಿಗೆ ದೇಶದಾದ್ಯಂತ ನೂರಾರು ಕಾರ್ಯಕ್ರಮಗಳಿಗೆ ಹೋಗುವ ಭಾಗ್ಯ ನನ್ನದಾಗಿತ್ತು. ನಾವು ಟ್ರೇನಿನಲ್ಲಿ ಪ್ರಯಾಣಿಸುತ್ತಿದ್ದಾಗ, ಊರಿಗೆ ಹೋದಲ್ಲಿ ಶಿಷ್ಯ, ಸಾಥಿದಾರರೊಂದಿಗೆ ಏನಾದರೂ ಮಾತು, ಹರಟೆ ನಡೆದೇ ಇರುತ್ತಿತ್ತು. ಕೆಲ ಬಾರಿ ಸಮಯ ಕಳೆಯಲು ಇಸ್ಪೇಟ್ ಆಡುತ್ತಿದ್ದೆವು. ಯಾರೋ ಒಬ್ಬರು ಅವರಿಗೆ "ಗುರುಗಳೇ ನೋಡ್ರಿ ನಿಮ್ಮ ಅಪ್ಪಿ ಕಾರ್ಡ್ಸ್ ಆಡುತ್ತಿದ್ದಾನೆ." (ನಾನು ಚಿಕ್ಕವನಿದ್ದಾಗ ಅವರು ಹಾಗೂ ಅವ್ವಾ ಅವರು ಪ್ರೀತಿಯಿಂದ ಅಪ್ಪಿ ಎಂದು ಕರೆಯುತ್ತಿದ್ದರು. ಹಾಗಾಗಿ ತೀರ ಪರಿಚಿತರಾದವರೆಲ್ಲ ಈಗಲೂ ಅಪ್ಪಿ ಎಂದೇ ಕರೆಯುತ್ತಾರೆ) ಎಂದು ಹೇಳಿದಾಗ ಅವರು ನಗುತ್ತಾ "ಯಾವಾಗ ಮಗ ಅಪ್ಪನ ಅಂಗಿ, ಚಪ್ಪಲಿಗಳನ್ನು ತೊಟ್ಟುಕೊಳ್ಳುವಷ್ಟು ದೊಡ್ಡವನಾಗುತ್ತಾನೋ ಆವಾಗ ಅವನ್ನ ಗೆಳೆಯಾ ಅಂತ ತಿಳಿಯಬೇಕು" ಎಂದು ಬಿಟ್ಟರು. ಊರಿಗೆ ಹೋದಲ್ಲಿ ಅವರ ಬಟ್ಟೆ ಒಗೆಯುವುದು, ಎಲೆ ಅಡಿಕೆ ಪುಡಿ ಮಾಡಿಕೊಡು ವುದು ಕಾರ್ಯಕ್ರಮಗಳಿಗೆ ತಯಾರಾಗುವಂತೆ ಅವಸರ ಮಾಡುವುದು ನನ್ನ ಕೆಲಸವಾಗಿತ್ತು. ಯಾವಾಗಲೂ ಸಂಗೀತದ ಗುಂಗಿನಲ್ಲಿಯೇ ಇರುತ್ತಿದ್ದ ಅವರು ಕಾರ್ಯಕ್ರಮಗಳಿಗೆ ಹೊರಡಲು ತುಂಬಾ ತಡವಾಗುತ್ತಿತ್ತು. ತಮಗೆ ಬೇಕಾದ ವಸ್ತುಗಳನ್ನು ನಿಧಾನವಾಗಿ ತಾವೇ ತೆಗೆದುಕೊಂಡು ಇಟ್ಟುಕೊಳ್ಳು ವುದು. ಇಂತಹದ್ದೆ ಬಟ್ಟೆಗಳನ್ನು ತೊಟ್ಟುಕೊಳ್ಳುವುದು, ಎಲ್ಲವೂ ಅತ್ಯಂತ ಅಚ್ಚುಕಟ್ಟಾಗಿ ಇರಬೇಕಾಗಿತ್ತು. ಯಾರಾದರೂ ಅವರ ವಸ್ತುಗಳನ್ನು ಮುಟ್ಟಿದರೆ ಆಗುತ್ತಿರಲಿಲ್ಲ.



ಯಾವ ವಸ್ತುಗಳು ಎಲ್ಲಿ ಇರುತ್ತವೆಯೋ ಅಲ್ಲಿಯೇ ಇರಬೇಕು. ಹೀಗಾಗಿ ಯಾರೂ ಅವರ ವಸ್ತುಗಳನ್ನು ಮುಟ್ಟುತ್ತಿರಲಿಲ್ಲ. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಕ್ಕೆ ತಯಾರು ಮಾಡಿ ಕರೆದುಕೊಂಡು ಹೋಗುವುದೇ ನಮಗೆ ಸಾಹಸ ಮಾಡಿದಂತೆ ಆಗುತ್ತಿತ್ತು.

ಮೈಗೆಲ್ಲ ಅತ್ತರ ಇಲ್ಲವೇ ಸೇಂಟ್ ಹಾಕಿಕೊಂಡು ತಮಗೆ ಅವಶ್ಯವಿರುವ ಎಲ್ಲ ವಸ್ತುಗಳನ್ನು ಒಂದೊಂದಾಗಿ ಕಿಸೆಗಳಲ್ಲಿ ಇಟ್ಟುಕೊಳ್ಳುತ್ತಾ ಪೆಟ್ಟಿಗೆಗಳಿಗೆ ಕೀಲಿಗಳನ್ನು ಹಾಕುವುದು, ತೆಗೆಯುವುದು ಅವುಗಳನ್ನು ಇಟ್ಟುಕೊಳ್ಳುವುದು, ಹೆಗಲಿಗೆ ಚೀಲವನ್ನು ಹಾಕಿಕೊಂಡು ಬರುವಷ್ಟರಲ್ಲಿ ತಡವಾಗಿ ಬಿಟ್ಟಿರುತ್ತಿತ್ತು. ನಾವು "ತಡವಾಯಿತು" ಎಂದರೆ, 'ಹೌದು ಏನೂ ಮಾಡುವುದು ದೇವರು ದಿನಕ್ಕೆ ೨೪ ಗಂಟೆಗಳನ್ನು ಮಾತ್ರ ಮಾಡಿದ್ದಾನೆ. ನಮಗಾಗಿ ೪೮ ಗಂಟೆಗಳನ್ನು ಮಾಡಿದ್ದರೆ ಸರಿಯಾಗುತ್ತಿತ್ತು' ಎನ್ನುತ್ತಿದ್ದರು. ಆದರೆ ಕಾರ್ಯಕ್ರಮಕ್ಕಾಗಿ ವೇದಿಕೆಯನ್ನೇರಿದಾಗ ಎಳ್ಳಷ್ಟು ತಡಮಾಡದೆ ಗಾಯನವನ್ನು ಪ್ರಾರಂಭಿಸಿ ಬಿಡುತ್ತಿದ್ದರು. ಅವರು ಕಾರ್ಯಕ್ರಮಗಳಿಗೆ ತಡವಾಗಬಾರದೆಂದು ನಾನು ಪದೇ ಪದೇ ಅವಸರ ಮಾಡಿ ಬೈಯಿಸಿಕೊಂಡಿದ್ದು ಇದೆ. ಆದರೆ ಕೊನೆಯ ಒಂದೆರಡು ವರ್ಷಗಳಲ್ಲಿ ಅವರ ಎಲ್ಲ ವಸ್ತುಗಳನ್ನು ನಾವೇ ಇಡುವುದು ಕೊಡುವುದು ಮಾಡುತ್ತಿದ್ದೆವು. ಅವರ ಯಾವುದೇ ಕೆಲಸವನ್ನು ಮಾಡುವುದೆಂದರೆ ನನಗೆ ತುಂಬಾ ಖುಷಿಯಾಗುತ್ತಿತ್ತು. ಅವರಿಗೂ ಕೂಡಾ ನಾನು ಕೆಲಸ ಮಾಡುವುದನ್ನು ಕಂಡು ಸಂತೋಷವಾಗುತ್ತಿತ್ತು. ತಮಗೆ ಸರಿ ಅನ್ನಿಸಿದ್ದನ್ನು ನಿಷ್ಠುರವಾಗಿ ಹೇಳಿಬಿಡುತ್ತಿದ್ದರು. ಯಾವುದನ್ನು ಮುಚ್ಚುಮರೆ ಮಾಡಿದವರಲ್ಲ.

ಹಿತವಚನ

"ಗಾಯನದಲ್ಲಿ ಸ್ವಂತಿಕೆ ಇರಬೇಕು. ಕಲಿತದ್ದಕ್ಕೆ ನಿಮ್ಮತನ ಸೇರಿಸಿ ಹಾಡಿದರೆ ಬಂಗಾರಕ್ಕೆ ಕುಂದಣ ಸೇರಿದಂಗ ಇರಬೇಕು. ಸಂಗೀತವೆಂದರೆ ಸುಲಲಿತವಾದ ಶಬ್ದಗಳೆಂಬ ಭಕ್ಷ್ಯಗಳನ್ನು ಸುಸ್ವರಗಳೆಂಬ ಜೇನು ತುಪ್ಪದಲ್ಲಿ ಅದ್ದಿ ಸಭಿಕರಿಗೆ ಉಣಬಡಿಸಿದಂತೆ ಇರಬೇಕು. ಸಂಗೀತವೆನ್ನುವುದು ಒಂದು ದೊಡ್ಡ ಸಾಗರವಿದ್ದಂತೆ, ಅದನ್ನು ತಲೆಯಲ್ಲಿ ತುಂಬಿಕೊಳ್ಳಬೇಕೆಂದರೆ "ಗಾಗರ ಮೆ ಸಾಗರ ಭರನಾ" ಎಂಬಂತೆ ಅಭ್ಯಾಸ ಮಾಡಿ ತಿಳಿದುಕೊಳ್ಳಬೇಕು ಎನ್ನುತ್ತಿದ್ದರು.

"ಕಲಾವಿದನಾದವನು ಒಂದು ದಿನಾ ಬಿಟ್ಟು ಮತ್ತೊಂದು ದಿವಸ ತಂಬೂರಿ ಹಿಡಿದರ ಸಂಗೀತ ಸರಸ್ವತಿ ಯಾರ ನೀನು? ಎಂದು ಕೇಳತಾಳ. ಅದಕ ತಪಸ್ಸು ಮಾಡಿದಂಗ ದಿನಾಲು ಸಾಧನಾ ಮಾಡಬೇಕು. ದಿನಕ್ಕೆ ೪ ತಾಸ ರಿಯಾಜ ಮಾಡಿದರ ೧ ತಾಸ ಹಾಡಲಿಕ್ಕೆ ಬರತದ" ಎಂದು ತಮ್ಮ ಶಿಷ್ಯರಿಗೆ ಹೇಳತಾ ಇದ್ದರು. "ಯಾಂವ ದುಡಿತಾನ ಅಂವ ಪಡಿತಾನ" ಎನ್ನುವುದು ಅವರ ವಾದವಾಗಿತ್ತು.



ಪಂ. ರಾಜಗುರು ನುಡಿಮುತ್ತುಗಳು

"ನನ್ನ ಜೀವನದ ಮುಖ್ಯ ಕೆಲಸವೆಂದರೆ ಸಂಗೀತವನ್ನು ಹಾಡುವುದು ಮತ್ತು ಕಲಿಸುವುದು. ಇದನ್ನೇ ನಾನು ದೇವರ ಪೂಜೆ" ಎಂದು ತಿಳಿದಿದ್ದೇನೆ. ನನ್ನ ದೃಷ್ಟಿಯಲ್ಲಿ ಗುರು-ಶಿಷ್ಯ ಪರಂಪರೆ ಸಂಗೀತದ ಸಾಧನೆಗೆ ಅತಿ ಮಹತ್ವವಾದುದು. "ನನಗೆ ಪೂಜ್ಯ ಪಂಚಾಕ್ಷರಿ ಗವಾಯಿಗಳು ಗುರುವಾಗಿ ದೊರಕಿದ್ದರಿಂದಲೇ ನಾನು ಕಲಾವಿದನಾಗಿದ್ದು, ಈ ಮಟ್ಟಕ್ಕೆ ಬಂದಿದ್ದು. ನನ್ನಿಂದ ಕೂಡಾ ಒಳ್ಳೆಯ ಶಿಷ್ಯರು ರೂಪಗೊಂಡರೆ ಗುರುವಿನ ಋಣ ಸ್ವಲ್ಪವಾದರೂ ತೀರಿಸಿದಂತಹ ಸಾರ್ಥಕತೆ ಬರುತ್ತದೆ" ಎಂದು ಅವರು ಯಾವಾಗಲೂ ಹೇಳುತ್ತಿದ್ದರು.

ಹಲವಾರು ಪ್ರಶಸ್ತಿಗಳು ಬಂದಿರಬಹುದು. ಆದರೆ ನಾನು ಇನ್ನೂ, ಸಂಗೀತದ ವಿದ್ಯಾರ್ಥಿಯೆಂದೇ ಭಾವಿಸುವೆ. ಸಂಗೀತಸಾಗರ ಅಪಾರವಾದುದು. ಹಿಮಾಲಯವನ್ನು ಇನ್ನೂ ಏರಬೇಕು ಎನ್ನುವ ಧ್ಯೇಯವಿರಬೇಕು. ಆದರೆ ಹಿಮಾಲಯ ಏರಿಬಿಟ್ಟಿದ್ದೇನೆ ಎಂದು ಯಾವನಿಗೆ ಅನಿಸುವದೋ ಅವನು ಅದೇ ಕ್ಷಣ ಪ್ರಪಾತಕ್ಕೆ ಬಿದ್ದಿರುತ್ತಾನೆ. (ಪದ್ಮಭೂಷಣ ಪ್ರಶಸ್ತಿ ಬಂದಾಗ)

ಧಾರವಾಡ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಶಿಷ್ಯರಿಗೆ ಗಂಡಾ ಕಟ್ಟುವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ "ಈ ಪುಣ್ಯಭೂಮಿಯಲ್ಲಿ ಹುಟ್ಟಿದ ವಿದ್ವನ್ಮಣಿಗಳಾದ ಮಲ್ಲಣ್ಣ (ಪಂ. ಮಲ್ಲಿಕಾರ್ಜುನ ಮನ್ಸೂರ) ಭೀಮಣ್ಣ (ಪಂ. ಭೀಮಸೇನ ಜೋಶಿ), ಗಂಗಮ್ಮ (ಡಾ. ಗಂಗೂಬಾಯಿ ಹಾನಗಲ್), ಕುಮಾರ, (ಪಂ. ಕುಮಾರ ಗಂಧರ್ವ) ನಾನು, ಹೀಗೆ ನಾವೆಲ್ಲರೂ ಒಂದೇ ಕುಟುಂಬದವರು. ನಮ್ಮ ಗುರಿ ಒಂದೇ. ಈ ಗುರಿಯ ಸಾಧನೆಗಾಗಿ ನಾವು ನೇರವಾಗಿ (ಗಂಧರ್ವ ಲೋಕದಿಂದ) ಇಲ್ಲಿಗೆ ಬಂದವರು ಎಂದು ಭಾವುಕರಾಗಿ ಹೇಳಿದ್ದಾರೆ. ಇದು ಇವರ ಭಾವೈಕ್ಯತೆ ಮತ್ತು ವಿಶ್ವ ಕುಟುಂಬ ಭಾವನೆಗೆ ನಿದರ್ಶನವಾಗಿದೆ.

ಅಡುಗೆ ಮತ್ತು ಹುಬ್ಬಳ್ಳಿ ಹಾಲು

ಸಂಗೀತದ ಜೊತೆಗೆ ಉತ್ತಮವಾದ ಅಡುಗೆಯನ್ನು ಮಾಡುತ್ತಿದ್ದರು. ತಮಗೆ ಬೇಕಾದ ದಿನಸುಗಳನ್ನು ತಾವೇ ಆರಿಸಿ ತೆಗೆದುಕೊಂಡು ಬರುತ್ತಿದ್ದರು. ಒಳ್ಳೆಯ ಮಸಾಲೆಯನ್ನು ಹಾಕಿ ಘಮಘಮಿಸುವ ಸಾರನ್ನು ಮಾಡಿದರೆ ಅದರ ವಾಸನೆಗೆ ಬಾಯಿಯಲ್ಲಿ ನೀರು ಬರುತ್ತಿತ್ತು. ಬಾಸುಮತಿ ಅಕ್ಕಿ ಅನ್ನ, ಪರೋಟಾ, ಬದನೆಕಾಯಿ ಪಲ್ಲೆ, ಕೆಂಪು ಮೆಣಸಿನಕಾಯಿ ಚಟ್ನಿ, ಉಪ್ಪಿಟ್ಟು ಅವರು ಮಾಡುವ ಅಡುಗೆಯಾಗಿದ್ದವು. ತುಪ್ಪದಲ್ಲಿ ತಯಾರಿಸಿದ ಬೆಸನ್‌ಉಂಡಿ, ಬೆಣ್ಣೆ ಹಾಕಿದ ಚಕ್ಕುಲಿಗಳನ್ನು ಮಾಡಿಕೊಂಡು ಊರಿಗೆ ತೆಗೆದುಕೊಂಡು ಹೋಗುತ್ತಿದ್ದರು. ಶಿಷ್ಯರಿಗೆ ಅತಿಥಿಗಳಿಗೆ ನೀಡಿ ಸಂತಸಪಡುತ್ತಿದ್ದರು. ಇವರ ಅಡುಗೆಯ ಬಗ್ಗೆ ತಿಳಿದವರೆಲ್ಲ ಅವುಗಳನ್ನು ಬೇಡಿ ತಿಂದು ಖುಷಿಯನ್ನು ವ್ಯಕ್ತಪಡಿಸುತ್ತಿದ್ದರು.



ಇವರ ಮತ್ತೊಂದು ಖಯಾಲಿಯೆಂದರೆ ಧಾರವಾಡದಲ್ಲಿದ್ದಾಗ ಹುಬ್ಬಳ್ಳಿಗೆ ಹೋಗಿ ಹಾಲು ತರುವದು. ಬೆಳಿಗ್ಗೆ ಎದ್ದು ಒಂದು ತಿರುಪಣಿ ತಂಬಿಗೆಯನ್ನು ತೆಗೆದುಕೊಂಡು ಧಾರವಾಡ-ಹುಬ್ಬಳ್ಳಿ ಲೋಕಲ್ ಟ್ರೇನಿಗೆ ಹುಬ್ಬಳ್ಳಿಗೆ ಹೋಗಿ ಅಲ್ಲಿ ಬಂಡಿವಾಡ ಅಗಸಿಯ ಗೌಳಿಗಳಿಂದ ಎದುರಿಗೆ ನಿಂತು ಹಾಲನ್ನು ಹಿಂಡಿಸಿಕೊಂಡು ಗಟ್ಟಿಯಾದ ಹಾಲನ್ನು ತೆಗೆದುಕೊಂಡು ಮತ್ತೊಂದು ಟ್ರೇನಿನ ಮೂಲಕ ಧಾರವಾಡಕ್ಕೆ ಮರಳಿ ಬರುತ್ತಿದ್ದರು. ಬಂದ ಅನಂತರವೇ ಮುಂಜಾನೆಯ ತಿಂಡಿಯಾಗುತ್ತಿತ್ತು. ಈ ಖಯಾಲಿ ಅವರ ಖ್ಯಾಲ ಗಾಯನದಷ್ಟೇ ಪ್ರಸಿದ್ಧಿಯಾಗಿತ್ತು. ನಾದೋಪಾಸನೆಯನ್ನು ಮಾಡಿ ಸಿದ್ಧಿಯನ್ನು ಪಡೆದುಕೊಂಡ ಕಲಾವಿದ ಸ್ವರಗಳೊಂದಿಗೆ ಮಾತನಾಡಬಲ್ಲ ಎಂಬ ಮಾತಿದೆ. ಬಲ್ಲವರಿಂದ ಒಳ್ಳೆಯದನ್ನು ಪಡೆದುಕೊಂಡು ತಮ್ಮ ಸಂಗೀತದಲ್ಲಿ ಅಳವಡಿಸಿಕೊಂಡು ಸ್ವಂತಿಕೆಯನ್ನು ಬೆಳೆಸಿಕೊಂಡ ರಾಜಗುರು ತಾವು ಹಾಡುವ ಒಂದೊಂದು ಸ್ವರಗಳನ್ನು ಅದರಲ್ಲಿ ಮಾಡುವ ಕೆಲಸಗಳನ್ನು ಸ್ವತಃ ಅನುಭವಿಸಿ ಅದನ್ನು ಕೇಳುಗರಿಗೆ ಉಣಬಡಿಸುತ್ತಿದ್ದರು. ಕಾರ್ಯಕ್ರಮವೆಂದರೆ ಕೇವಲ ಪಾಂಡಿತ್ಯ ಪ್ರದರ್ಶನವಲ್ಲ. ತಾನೂ ಅನುಭವಿಸಿ ಕೇಳುವವರಿಗೂ ರಸಾಸ್ವಾದನೆ ಮಾಡಿಸುವ ಕಲೆ ಅವರಿಗೆ ಕರಗತವಾಗಿತ್ತು.

ರಾಜಗುರುಗಳ ಜೀವನದಲ್ಲಿ ಗುರುವಿನ ಅನುಗ್ರಹ

ನಮ್ಮ ಸಂಸ್ಕೃತಿಯಲ್ಲಿ ಗುರುವನ್ನು ದೇವರೆಂದೆ ಬಿಂಬಿಸಲಾಗಿದೆ. ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರಹ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೇ ಶ್ರೀ ಗುರುವೇ ನಮಃ ಎಂದು ಸನಾತನ ಕಾಲದಿಂದಲೂ ಹೇಳುತ್ತಾ ಬಂದಿದ್ದೇವೆ. ಸರಸ್ವತಿಯ ಮಾನಸಪುತ್ರನೆಂದೆ ಕರೆಯಲ್ಪಡುವ ಗುರುವಿನಿಂದ ಶಿಷ್ಯನಾದವನು ವಿದ್ಯೆಯನ್ನು ಪಡೆಯಬೇಕಾದರೆ ಗುರುಭಕ್ತಿಯನ್ನು ಬೆಳೆಸಿಕೊಳ್ಳಬೇಕು ನಿಸ್ವಾರ್ಥವಾಗಿ ಗುರುಸೇವೆ ಮಾಡಿ ಗುರುವಿನ ಮನಗೆದ್ದು ವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕು. ಗುರು ಇಲ್ಲದೇ ಹೋದರೆ ನಮ್ಮ ಅಸಹಜ ಬದುಕು ಸಹಜಗೊಳ್ಳುವದಿಲ್ಲ. ಅವಾಸ್ತವದಿಂದ ವಾಸ್ತವದತ್ತ, ಅಂಧತ್ವದಿಂದ ಬೆಳಕಿನತ್ತ, ಮೃತ್ಯುವಿನಿಂದ ಅಮೃತತ್ವದತ್ತ ಗುರು ನಮ್ಮನ್ನು ಕೊಂಡೊಯ್ಯುತ್ತಾನೆ. ಜ್ಞಾನದ ಬೆಳಕನ್ನು ನೀಡುತ್ತಾನೆ. ಸಾಧನೆಯ ಮಾರ್ಗವನ್ನು ತೋರುತ್ತಾನೆ. ಗುರುವಿನಲ್ಲಿ ಅಪಾರ ಶಕ್ತಿಯಿದೆ. "ಹರಮುನಿದರೆ ಗುರು ಕಾಯ್ವನು" ಎಂಬ ಮಾತಿದೆ. ಹೀಗಾಗಿ ವಿದ್ಯಾದಾಹಿಗಳು ಗುರುವಿನ ಮನಗೆದ್ದು ಅವನ ಕೃಪೆಗೆ ಪಾತ್ರರಾಗಿ ವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕು. ಗುರು ಸ್ಮರಣೆಯಿಂದ ಒಳ್ಳೆಯದಾಗುತ್ತದೆ. ಸನ್ಮಾರ್ಗದತ್ತ ಗುರು ನಮ್ಮನ್ನು ನಡೆಸುತ್ತಾನೆ. ಹೀಗಾಗಿ ಜೀವನದಲ್ಲಿ ಗುರುವಿನ ಮಹತ್ವವನ್ನು ಅರಿಯಬೇಕಾದ ಅವಶ್ಯಕತೆಯಿದೆ.

ಸಂಗೀತಕ್ಷೇತ್ರದಲ್ಲಂತೂ ಗುರುವಿಗೆ ತುಂಬಾ ಮಹತ್ವದ ಸ್ಥಾನವಿದೆ. ವಿದ್ಯೆಯನ್ನು ಕಲಿಯುವವರಿಗೆ ಯೋಗ್ಯ ವಿದ್ವಾನ್‌ಗುರು ದೊರಕುವದು. ಅವರ ಪುಣ್ಯವೆಂದೇ ಹೇಳಬೇಕು.



ಯಾರು ನಿಸ್ವಾರ್ಥವಾಗಿ ಗುರು ಸೇವೆಯನ್ನು ಮಾಡಿ ವಿದ್ಯೆಯನ್ನು ಸಂಪಾದಿಸಿ ಗುರುವಿನ ಆಶೀರ್ವಾದ ಪಡೆಯುತ್ತಾರೋ ಅವರು ವಿದ್ಯಾಪಾರಂಗತರಾಗಿ ಕೀರ್ತಿ ಶಿಖರವನ್ನೇರುವದರಲ್ಲಿ ಸಂಶಯವಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಬಸವರಾಜ ರಾಜಗುರುಗಳೇ. ತಂದೆ -ತಾಯಿ ಇಲ್ಲದೇ ಅನಾಥರಾಗಿದ್ದ ಅವರಿಗೆ ಗಾನಯೋಗಿ ಪಂಚಾಕ್ಷರಿ ಗವಾಯಿಗಳಂತಹ ಮಹಾನ್ ಗುರು ದೊರೆತುದರಿಂದಲೇ ಹಳ್ಳಿಯಲ್ಲಿ ಹುಟ್ಟಿದ ಬಾಲಕ ದಿಲ್ಲಿಯನ್ನು ಮುಟ್ಟಿ ಸ್ವರಸಾಮ್ರಾಟ್‌ನಾಗಿ ಹಿಮಾಲಯದೆತ್ತರಕ್ಕೆ ಬೆಳೆದಿದ್ದು. ಮುಂಬೈ, ದಿಲ್ಲಿ, ಕೋಲ್ಕತ್ತಾ, ಪಾಟ್ನಾಗಳಲ್ಲಿ ರಾಜಗುರುಗಳ ಗಾಯನವಿದೆ ಎಂದರೆ ಕೇಳಲು ಸಾಮಾನ್ಯ ಜನರಷ್ಟೇ ಅಲ್ಲ ದೊಡ್ಡ ದೊಡ್ಡ ಪಂಡಿತರು, ಕಲಾವಿದರೂ ಜಮಾಯಿಸುತ್ತಿದ್ದರು. ಇವರ ಅಸಾಧಾರಣ ಪಾಂಡಿತ್ಯಪೂರ್ಣ ಗಾಯನವನ್ನು ಕೇಳಿ ತಲೆದೂಗುತ್ತಿದ್ದ ಪಂಡಿತರು "ತುಮ್ ಕಿಸಕೆ ಶಾಗಿರ್ದ ಹೈ" ಎಂದು ಕೇಳಿದಾಗ ರಾಜಗುರುಗಳು "ಮೈ ಗುರು ಪಂಚಾಕ್ಷರಿ ಕೆ ಶಾಗಿರ್ದ ಹೂಂ" ಎಂದು ಹೆಮ್ಮೆಯಿಂದ ಹೇಳುತ್ತಿದ್ದರಂತೆ. ಇದೆಲ್ಲವೂ ಆ ಗುರುವಿನ ಕೃಪೆ. "ತಂದೆತಾಯಿ ಇಲ್ಲದೇ ಅನಾಥನಾಗಿದ್ದ ನನಗೆ ತಂದೆಯಾಗಿ ಕೈ ಹಿಡಿದು ನಡೆಸಿ ತಾಯಿಯಾಗಿ ಆರೈಕೆ ಮಾಡಿ ಗುರುವಾಗಿ ವಿದ್ಯೆಯನ್ನು ಕಲಿಸಿ ನನ್ನ ಜೀವನವನ್ನು ರೂಡಿಸಿದ ದೇವರು ಪಂಚಾಕ್ಷರಿ ಗವಾಯಿಗಳು" ಎಂದು ವಿನಮ್ರರಾಗಿ ಹೇಳುತ್ತಿದ್ದರು ರಾಜಗುರುಗಳು. ಇದು ನೂರಾಣೆ ಸತ್ಯ. ಯಾರಿಗೆ ಗುರುವಿನ ಸಂಪೂರ್ಣ ಅನುಗ್ರಹವಾಗುತ್ತದೆಯೋ ಅವರು ವಿದ್ಯಾಪಾರಂಗತರಾಗಿ ಪ್ರಸಿದ್ಧ ಕಲಾವಿದರಾಗಿ ಬಾಳಿ ಬದುಕುವದರಲ್ಲಿ ಸಂಶಯವಿಲ್ಲ.

ರಾಜಗುರುಗಳು ಪಂಚಾಕ್ಷರಿ ಗವಾಯಿಗಳ ಜೀವಿತದ ಅವಧಿಯಲ್ಲಿಯೇ ಪ್ರಸಿದ್ಧರಾದವರು. ಸಣ್ಣವಯಸ್ಸಿನಲ್ಲಿಯೇ ದೇಶದ ಅಗ್ರಶ್ರೇಣಿಯ ಗಾಯಕರಾಗಿ, ವಿದ್ಯೆಯನ್ನು ಕಲಿಸಿದ ಗುರುವಿಗೆ ಗೌರವ ತಂದವರು. ಗದಗಿನ ಆಶ್ರಮದಲ್ಲಿರುವಾಗಲೇ ಪುಣೆ, ಮುಂಬೈಗಳಲ್ಲಿ ಕಾರ್ಯಕ್ರಮ ನೀಡಿ ಗೌರವ ಹಾಗೂ ಉತ್ತಮ ಸಂಭಾವನೆಯನ್ನು ಪಡೆದು ಮರಳಿ ಗದಗಿಗೆ ಬರುತ್ತಿದ್ದಾಗ ಗುರು ಪಂಚಾಕ್ಷರಿಗವಾಯಿಗಳಿಗೆ ಎಲ್ಲಿಲ್ಲದ ಆನಂದ. ದಿನವೀಡಿ ಶಿಷ್ಯನನ್ನು ಪಕ್ಕದಲ್ಲಿ ಕುಳ್ಳರಿಸಿಕೊಂಡು ಮೈದಡವುತ್ತಾ ಎಲ್ಲ ಸಂಗತಿಗಳನ್ನು ವಿಚಾರಿಸುತ್ತಿದ್ದರಂತೆ. ರಾಜಗುರುಗಳು ತಾನು ಯಾವ ರಾಗಗಳನ್ನು ಹಾಡಿದೆ, ಯಾರು ಏನೆಂದರು, ಹೇಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು, ಹೇಗೆ ತಮ್ಮನ್ನು ಗೌರವಿಸಿದರು ಎಂದು ಚಾಚುತಪ್ಪದೇ ಹೇಳುವುದನ್ನು ಕೇಳಿ ಗುರುಗಳು ಸಂತೋಷದಿಂದ ಆನಂದದ ಕಣ್ಣೀರನ್ನು ಸುರಿಸುತ್ತಿದ್ದರಂತೆ. ಮಹಾನ್ ಗುರು -ಸಮರ್ಥ ಶಿಷ್ಯನ ನಡುವಿನ ಅವಿನಾಭಾವ ಸಂಬಂಧವೆಂದರೆ ಇದೆ. ಶಿಷ್ಯನ ಮೇಲೆ ತಂದೆ ತಾಯಿಗೂ ಇರದ ಮಮತೆ ಪ್ರೀತಿ ಗುರುವಿಗೆ, ಗುರುವಿನ ಮೇಲೆ ಅಪಾರ ಭಕ್ತಿ, ವಿಶ್ವಾಸ ಶಿಷ್ಯನಿಗೆ ಬಹುಶಃ ಇವು ಯಾರ ಕಲ್ಪನೆಗೂ ನಿಲುಕದ ಸಂಬಂಧಗಳು. ಒಂದು ಕಲ್ಲನ್ನು ಕೆತ್ತಿ ಸಕಲ ರೀತಿಯಿಂದಲೂ ತಿದ್ದಿ ತೀಡಿ ಸುಂದರ ವಿಗ್ರಹವನ್ನಾಗಿಸಿ ಎಲ್ಲರ ದೃಷ್ಟಿ ಅದರ ಮೇಲೆ ಬೀಳುವಂತೆ ಮಾಡಿದ ನನ್ನ ಗುರುಗಳ ಬಗ್ಗೆ ಹೇಳಲು ನನ್ನ ಬಳಿ ಶಬ್ದಗಳಿಲ್ಲ



ಎನ್ನುತ್ತಿದ್ದರು ರಾಜಗುರುಗಳು.

ಇಲ್ಲಿ ಮತ್ತೊಂದು ಮಾತು ಹೇಳಬೇಕೆಂದರೆ, ಸಂಗೀತದಲ್ಲಿ ದಿಗ್ಗಜರಾಗಿರುವವರೆಲ್ಲ ಉತ್ತಮ ಗುರು ಗಳಾಗಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಖ್ಯಾತಗಾಯಕರಾಗಿರುವ ಅನೇಕರಿಗೆ ತಕ್ಕ ಶಿಷ್ಯರೇ ಇಲ್ಲ ಅಂತಹವರ ವಿದ್ಯೆ ಅವರ ಸಂಗಡವೇ ಹೋಗಿ ಬಿಡುತ್ತದೆ. ತನ್ನಲ್ಲಿರುವ ವಿದ್ಯೆಯನ್ನು ನಾಲ್ಕು ಜನರಿಗೆ ನೀಡಿ ಅವರ ಜೀವನಕ್ಕೆ ದಾರಿಯನ್ನು ತೋರುವ ಮನೋಭಾವವಿರುವ ಗುರುಗಳು ವಿರಳ. ಗುರುವಾದವನಿಗೆ ತಾನು ಕಲಿತ ವಿದ್ಯೆ ಉಳಿಯಬೇಕು ಇತರರಿಗೂ ಅದರಿಂದ ಪ್ರಯೋಜನವಾಗಬೇಕು ಎಂಬ ಉದಾತ್ತ ಮನಸ್ಸಿರಬೇಕಾಗುತ್ತದೆ. ವಿದ್ಯಾದಾನದ ಗುಣವಿರುವವರು ತಮ್ಮ ಪರಂಪರೆ ಉಳಿಯಬೇಕು ಬೆಳೆಯಬೇಕು ಎಂಬ ಹಂಬಲವಿರುವವರು ಶಿಷ್ಯರಿಗೆ ವಿದ್ಯೆಯನ್ನು ನೀಡಿ ತಯಾರು ಮಾಡುತ್ತಾರೆ ಅವರ ಬಾಳಿನಲ್ಲಿ ಬೆಳಕನ್ನು ತೋರಿಸುತ್ತಾರೆ.

ಖ್ಯಾತ ಸರೋದವಾದಕ ಪಂ. ರಾಜೀವ ತಾರಾನಾಥರು ನಮ್ಮ ಸಮಾರಂಭಕ್ಕೆ ಬಂದಾಗ "ಹಿಂದುಸ್ಥಾನಿ ಸಂಗೀತಕ್ಕೆ ಕನ್ನಡದ ಛಾಪನ್ನು ಮೂಡಿಸಿದವರಲ್ಲಿ ಪಂ. ಬಸವರಾಜ ರಾಜಗುರುಗಳು ಅಗ್ರಗಣ್ಯರು ಅವರದು ಹಾಡುವ ಮತ್ತು ಕಲಿಸುವ ಪರಂಪರೆ ಶಿಷ್ಯರಿಗೆ ಸಂಗೀತ ಬರುವವರೆಗೂ ಪಟ್ಟು ಬಿಡದೆ ಕಲಿಸಿ ರಾಜಗುರು ಪರಂಪರೆಯನ್ನೇ ತಯಾರು ಮಾಡಿದ್ದಾರೆ. ಇಂದು ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತ ಈ ಪರಂಪರೆಯವರಿಂದಲೇ ಹೆಚ್ಚಾಗಿ ಮುಂದುವರೆದಿದೆ" ಅಂತಾ ಹೇಳಿದರು. ಈ ಮಾತು ಅತಿಶಯೋಕ್ತಿಯಲ್ಲ. ಏಕೆಂದರೆ ಗಾನಯೋಗಿ ಪಂಚಾಕ್ಷರಿ ಗವಾಯಿಗಳಂತೆ, ಗಾನಯೋಗಿ ಪುಟ್ಟರಾಜ ಗವಾಯಿಗಳಂತೆ ವಿದ್ಯಾದಾನಿಗಳಾದ ಪಂ. ಬಸವರಾಜ ರಾಜಗುರುಗಳು ಅನೇಕ ಜನ ಸಮರ್ಥ ಶಿಷ್ಯರನ್ನು ತಯಾರು ಮಾಡಿ ಸಂಗೀತ ಕ್ಷೇತ್ರಕ್ಕೆ ನೀಡಿದ್ದಾರೆ. ಅವರೆಲ್ಲ ಉತ್ತಮ ಕಲಾವಿದರಾಗಿ ಪ್ರಸಿದ್ಧಿ ಪಡೆದು ತಾವು ಸಹ ಸಂಗೀತವನ್ನು ಶಿಷ್ಯರಿಗೆ ಕಲಿಸುವ ಕೆಲಸ ಮಾಡುತ್ತಿದ್ದು ಈ ಪರಂಪರೆಯನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿದ್ದಾರೆ. "ಕಲಿಯುವುದು ಕಲಿಸುವುದು ನಿರಂತರವಾಗಿ ನಡೆಯಬೇಕಾದ ಕ್ರಿಯೆ ಇದಕ್ಕೆ ಕೊನೆ ಎಂಬುದೇ ಇಲ್ಲ!! ತಾವು ಕಲಿತ ಕಲೆ ನಿಂತ ನೀರಾಗದೆ ನಿತ್ಯ ಹರಿಯುವ ಜೀವ ವಾಹಿನಿಯಾಗಿ ಪ್ರವಹಿಸುವಂತೆ ಮಾಡಬೇಕಾದುದು ಪ್ರತಿಯೊಬ್ಬ ಕಲಾವಿದನ ಕರ್ತವ್ಯ" ಎಂದು ನಾವು ತಿಳಿಯಬೇಕು.

ತಲೆಸುತ್ತ ಬೆಕ್ಕಿನಾಂಗ

ಮುಂಬೈನ ಖ್ಯಾತಗಾಯಕ ಪಂ. ಶಿವಾನಂದ ಪಾಟೀಲರು ರಾಜಗುರುಗಳ ಶಿಷ್ಯರಲ್ಲೊಬ್ಬರು. ರಂಗಭೂಮಿ ಕುಟುಂಬದಿಂದ ಬಂದ ಈ ಗಾಯಕ ಕಠಿಣ ಪರಿಸ್ಥಿತಿಯಲ್ಲೂ ಧೈರ್ಯಗೆಡದೆ ಸಂಗೀತದ ಬೆನ್ನು ಹತ್ತಿ ಸಿದ್ಧಿ-ಪ್ರಸಿದ್ಧಿ ಪಡೆದವರು. 1983ನೇ ಇಸ್ವಿ ಇರಬಹುದು ಮುಂಬೈನಲ್ಲಿ ಅವರ ಜೀವನದ ಆರಂಭಿಕ ಕಾಲ ಅದಾಗಿತ್ತು. ಯಾವುದೋ ಕಾರ್ಯಕ್ರಮದ



ನಿಮಿತ್ತ ಮುಂಬೈಗೆ ಹೋಗಿದ್ದ ರಾಜಗುರುಗಳು ಮಾಮೂಲಿನಂತೆ ಉಳಿದುಕೊಂಡಿದ್ದ ದಾದರದ ಶ್ರೀಕೃಷ್ಣ ಭವನದಲ್ಲಿ ಜೊತೆಯಲ್ಲಿ ನಾನೂ ಇದ್ದೆ. ಅಂದು ಸಾಯಂಕಾಲ ನಾವು ನಡೆದುಕೊಂಡೆ ಶಿವಾನಂದ ಪಾಟೀಲರು ಇರುತ್ತಿದ್ದ ಶಿವಾಜಿ ಮಂದಿರಕ್ಕೆ ಹೋದೆವು. ಆಗ ಅವರು ಹೊರಗಡೆ ಎಲ್ಲಿಯೋ ಹೋಗಿದ್ದರು. ಅಲ್ಲಿಯೇ ಇದ್ದ ಜವಾನನಿಗೆ "ಶಿವಾನಂದ ಬಂದ ನಂತರ ಧಾರವಾಡದಿಂದ ನಿನ್ನ ಗುರುಗಳು ಬಂದಿದ್ದಾರೆ ಶ್ರೀ ಕೃಷ್ಣಭವನಕ್ಕೆ ಬಂದು ಭೆಟ್ಟಿಯಾಗುವಂತೆ ತಿಳಿಸು" ಎಂದು ಹೇಳಿ ನಾವು ಮರಳಿ ಬಂದೆವು. ರಾತ್ರಿ ಊಟ ಮಾಡಿ ಮಲಗುವ ವೇಳೆಗೆ ಶಿವಾನಂದ ಗಡಿಬಿಡಿಯಿಂದ ಶ್ರೀ ಕೃಷ್ಣ ಭವನಕ್ಕೆ ಬಂದು ರಾಜಗುರುಗಳಿಗೆ ನಮಸ್ಕಾರ ಮಾಡಿ "ನೀವು ಬಂದಾಗ ನಾನು ವಿ.ಟಿ.ಗೆ ಹೋಗಿದ್ದೆ" ಎಂದು ಹೇಳುತ್ತಾ ಕುಳಿತರು ತುಂಬಾ ಬಳಲಿ. ಸೊರಗಿದಂತೆ ಕಾಣುತ್ತಿದ್ದ ಶಿಷ್ಯನನ್ನು ಕಂಡು ಗುರುಗಳು "ಏನಪಾಃ ಮುಂಬೈಗೆ ಬಂದು ಇಷ್ಟು ದಿನಾ ಆದವು ಇನ್ನೂ ತಳಸುಟ್ಟ ಬೆಕ್ಕಿನಾಂಗ ಅಡ್ಡಾಡುತ್ತಾ ಇದ್ದಿಯೋ, ಇಲ್ಲಾ ಏಲ್ಲಿಯಾದರೂ ದಾರಿಗೆ ಹತ್ತಿಯೋ?" ಎಂದು ಕೇಳಿದಾಗ ತುಂಬಾ ಮೃದು ಹಾಗೂ ಸೌಮ್ಯ ಸ್ವಭಾವದವರಾಗಿದ್ದ ಶಿವಾನಂದ ಏನನ್ನು ಮಾತನಾಡದೇ ಸಂಕೋಚದಿಂದ ತಲೆತಗ್ಗಿಸಿ ಕುಳಿತುಬಿಟ್ಟರು. ಆಗ ಶಿಷ್ಯನ ಮನಸ್ಥಿತಿಯನ್ನು ಅರ್ಥಮಾಡಿಕೊಂಡಂತಹ ರಾಜಗುರುಗಳು ತಟ್ಟನೆ ಎದ್ದು ತಮ್ಮ ಕೋಟಿನ ಕಿಸೆಯಿಂದ ನೂರು ರೂಪಾಯಿಯ ನೋಟನ್ನು ತೆಗೆದು ಶಿಷ್ಯನ ಕೈಯಲ್ಲಿ ಇಟ್ಟು "ಈಗ ಮೊದಲು ಹೋಗಿ ಊಟ ಮಾಡು. ನಾಳೆ ಮುಂಜಾನೆ ಬಾ" ಎಂದು ಹೇಳಿ ಕಳುಹಿಸಿದರು.

ಮರುದಿನ ಬಂದ ಶಿವಾನಂದರಿಗೆ ಮೊದಲೂ ಏರಡು ತಾಸು ಸಂಗೀತದ ಪಾಠ ಮಾಡಿ ನಂತರ ಸಮಾಧಾನದಿಂದ ಶಿಷ್ಯನಿಗೆ "ನೀನು ಏನೂ ಕಾಳಜಿ ಮಾಡಬೇಡ ಕಲಾವಿದರ ಜೀವನದಲ್ಲಿ ಇವೆಲ್ಲಾ ಇರೋವಃ, ನಿನ್ನ ಧ್ವನಿ, ಗಾಯಕಿ ಎಲ್ಲಾ ಚಲೋ ಅದಾವ. ಸಾಧನೆ ಬಿಡಬೇಡ. ಇಂದಲ್ಲಾ ನಾಳೆ ಅವಕಾಶಗಳು ಸಿಕ್ಕ ಸಿಗತಾವ" ಅಂತಾ ಧೈರ್ಯಹೇಳಿ ತಮ್ಮ ಸಂಗಡವೇ ಊಟ ಮಾಡಿಸಿ ಕಳುಹಿಸಿ ಕೊಟ್ಟರು. ಮುಂದೆ ಹಲವಾರು ಸಾರೆ ರಾಜಗುರುಗಳು ಮುಂಬೈಗೆ ಹೋದಾಗ ಶಿವಾನಂದ ಯಾವಾಗಲೂ ಅವರ ಜೊತೆಯಲ್ಲಿಯೇ ಇದ್ದು ಕಾರ್ಯಕ್ರಮಗಳಿಗೆ ತಂಬೂರಿ ನುಡಿಸುತ್ತಾ ಸಾಥ ನೀಡುತ್ತಿದ್ದರು ಪಾಠ ಹೇಳಿಸಿಕೊಳ್ಳುತ್ತಿದ್ದರು. ಅವರು ಗುರುಗಳ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು. "ನನಗೆ ಅತ್ಯಂತ ಅವಶ್ಯಕವಾಗಿದ್ದ ಸಂದರ್ಭದಲ್ಲಿ ತಾವೇ ತಿಳಿದು ಸಹಾಯ ಮಾಡಿ ನನ್ನಿಂದ ಒಂದು ಪೈಸೆಯನ್ನು ನೀರಿಕ್ಷಿಸದೇ ವಿದ್ಯೆಯನ್ನು ಕಲಿಸಿದ ಮಹಾನ್ ಗುರುವಿಗೆ ಶರಣೆಂಬೆ ಅವರಿಂದ ವಿದ್ಯೆಯನ್ನು ಪಡೆದ, ಅವರ ಅಂತಃಕರಣದ ಸವಿಯುಂಡ ನಾನೇ ಧನ್ಯನು ಎಂದು ಶಿವಾನಂದ ಪಾಟೀಲರು ಭಾವುಕರಾಗಿ ಹೇಳುತ್ತಿದ್ದರು. ಮುಂಬೈನಲ್ಲಿ ಯೋಜನಾ ಪ್ರತಿಷ್ಠಾನದ ವತಿಯಿಂದ ಅವರು ಆರಂಭಿಸಿದ ಪಂ. ಬಸವರಾಜ ರಾಜಗುರು ಸ್ಮರಣೆಯ ಸಂಗೀತ ಸಮಾರೋಪ ಇಂದಿಗೂ ತಪ್ಪದೇ ಪ್ರತಿವರ್ಷ ನಡೆಯುತ್ತಲಿದೆ.



ವೀರಭದ್ರಯ್ಯ : ಮುಂಬೈನಲ್ಲಿ ರಾಜಗುರುಗಳ ಮತ್ತೊಬ್ಬ ಶಿಷ್ಯ ವೀರಭದ್ರಯ್ಯನವರು ಕೂಡಾ ಗುರುಗಳ ಆತ್ಮೀಯರಲ್ಲೊಬ್ಬರಾಗಿದ್ದರು. ವೃತ್ತಿಯಲ್ಲಿ ಸಿವ್ಹಿಲ್ ಇಂಜಿನೀಯರ್ ಆಗಿದ್ದ ವೀರಭದ್ರಯ್ಯ ರಾಜಗುರುಗಳ ಗಾಯನಕ್ಕೆ ಮಾರು ಹೋಗಿ ಅವರಿಂದಲೇ ಸಂಗೀತ ಕಲಿಯಬೇಕೆಂದುಕೊಂಡು ಶಿಷ್ಯರಾದವರು. ಗುರುಗಳು ಮುಂಬೈಗೆ ಹೋದರೆ ಸಾಕು. ಅವರ ಎಲ್ಲ ಕೆಲಸ ಕಾರ್ಯಗಳನ್ನು ಮಾಡಿಕೊಡುವುದು ತಮ್ಮ ಮನೆಗೆ ಕರೆದುಕೊಂಡು ಹೋಗಿ ಊಟಮಾಡಿಸುವುದು ಮತ್ತು ಸಂಗೀತದ ಪಾಠ ಹೇಳಿಸಿಕೊಳ್ಳುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಗುರುಗಳಿಗೆ ಮರಳಿ ಧಾರವಾಡಕ್ಕೆ ಟ್ರೇನ್ ಹತ್ತಿಸುವ ವರೆಗೂ ಅವರ ಸಂಗಡವೇ ಇದ್ದು ಎಲ್ಲವನ್ನು ನೋಡಿಕೊಳ್ಳುತ್ತಿದ್ದರು.

ಅಭಿಷೇಕದ ಹಾಲು ಬಸವರಾಜರಿಗೆ

ಗಾನಯೋಗಿ ಪಂಚಾಕ್ಷರಿ ಗವಾಯಿಗಳಿಗೆ ಹಲವಾರು ಶಿಷ್ಯರು; ಎಲ್ಲರನ್ನು ಮಕ್ಕಳಂತೆ ನೋಡಿಕೊಳ್ಳುವ ಕರುಣಾಮಯಿ ಅವರಾಗಿದ್ದರು. ತಮ್ಮ ಶಿಷ್ಯವೃಂದದಲ್ಲಿ ಬಸವರಾಜರ ಮೇಲೆ ವಿಶೇಷ ಅಕ್ಕರೆ. ಬಸವರಾಜರು ಗವಾಯಿಗಳ ಅತ್ಯಂತ ಪ್ರೀತಿಯ ಶಿಷ್ಯರಾಗಿದ್ದರು. ಬಾಲಕನ ಕಂಠಸಿರಿ ಹಾಗೂ ಚುರುಕು ಬುದ್ಧಿಯನ್ನು ಕಂಡು ನಿತ್ಯವೂ ಕೆಲ ತಾಸುಗಳಾದರೂ ತಾವೇ ಸ್ವತಃ ತಬಲಾ ನುಡಿಸುತ್ತಾ ಬಸವರಾಜರಿಗೆ ಸಂಗೀತ ಪಾಠವನ್ನು ಹೇಳಿಕೊಡುತ್ತಿದ್ದರು. ಒಮ್ಮೆ ಒಂದು ಊರಿನಲ್ಲಿ ಗವಾಯಿಗಳ ಸಂಚಾರಿ ಸಂಗೀತ ಪಾಠಶಾಲೆಯ ಮುಕ್ಕಾಂ ಇತ್ತು. ಆ ದಿನ ಸಂಜೆ ಬಹಳ ಹೊತ್ತಿನ ತನಕ ಬಸವರಾಜರಿಗೆ ಸಂಗೀತ ಪಾಠ ನಡೆಯಿತು. ನಂತರ ಗವಾಯಿಗಳು ಎದ್ದು ತಮ್ಮ ಸಂಜೆಯ ಸ್ನಾನ ಪೂಜಾದಿಗಳಿಗೆ ಹೊರಟರು. ಅಲ್ಲಿಯೇ ಇದ್ದ ಕಾರಕೂನರಿಗೆ "ಹುಡುಗರಿಗೆ ಪ್ರಸಾದದ ವ್ಯವಸ್ಥೆ ಆಗಿದೆಯೇ?" ಎಂದು ಕೇಳಿದರು. ಆಗ ಕಾರಕೂನರು "ಇಲ್ಲ, ಇನ್ನೂ ಆಗಿಲ್ಲ, ಸ್ವಲ್ಪ ತಡವಾಗಬಹುದು, ತಾವು ದಯಮಾಡಿಸಿ, ಪೂಜೆಗೆ ಹಾಲು ಬಂದಿದೆ" ಎಂದು ಹೇಳಿದರು. (ಗವಾಯಿಗಳು ಪ್ರತಿದಿನ ಆಕಳ ಹಾಲಿನಿಂದ ಲಿಂಗಾಭಿಷೇಕ ಮಾಡಿಕೊಳ್ಳುತ್ತಿದ್ದರು. ಎಷ್ಟೋ ಸಾರಿ ಗುರು ಪಂಚಾಕ್ಷರಿ ಗವಾಯಿಗಳು ಶಿವಪೂಜೆಗೆ ಕುಳಿತಾಗ ಶಿಷ್ಯ ಬಸವರಾಜರು ರುದ್ರ ಪಠಣ ಮಾಡಬೇಕು.) ಆಗ ಗವಾಯಿಗಳು ಒಂದು ಕ್ಷಣ ಹಾಗೆಯೇ ನಿಂತು ಕಾರಕೂನರಿಗೆ "ಆ ಹಾಲನ್ನು ಬಸವರಾಜನಿಗೆ ಕೊಡಿ, ಇಂದು ನಾವು ಹಾಗೆಯೇ ಪೂಜೆ ಮಾಡಿಕೊಳ್ಳುತ್ತೇವೆ" ಎಂದು ಹೇಳಿದರು. ಏಕೆಂದರೆ ಅವರಿಗೆ ಗೊತ್ತಿತ್ತು. ಹಾಡಿದ ನಂತರ ಬಸವರಾಜರಿಗೆ ತುಂಬಾ ಹಸಿವೆಯಾಗುತ್ತದೆ ಎಂದು. ಎಂತಹ ಮಾತೃ ಹೃದಯದ ಮಮತೆ ಆ ಗುರುವಿನದ್ದು, ಆ ಘಟನೆಯನ್ನು ಬಸವರಾಜರು ಮನತುಂಬಿ ನೆನಪಿಸಿಕೊಳ್ಳುತ್ತಿದ್ದರು. ಅವರು ತನ್ನ ಪಾಲಿನ ಸಾಕ್ಷಾತ್ ದೇವರು ಎಂದು ಉದ್ಘರಿಸುತ್ತಿದ್ದರು.

"ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ" ಎಂಬ ದಾಸರ ಹಾಡನ್ನು



ಯಾವಾಗಲೂ ಹಾಡುತ್ತಿದ್ದ ರಾಜಗುರು ಅವರು ಅಂತಹ ಶ್ರೇಷ್ಠ ಗುರುವಿನ ಸೇವೆಯನ್ನು ಭಕ್ತಿಯಿಂದ ಮಾಡಿ ಸಂಗೀತ ಲೋಕದ ಅನರ್ಘ್ಯ ರತ್ನವಾಗಿ ಬೆಳೆದು ತಾವು ಸಹ ಮಹಾನ್ ಗುರುವಾಗಿ ಅನೇಕ ಶಿಷ್ಯೋತ್ತಮರನ್ನು ಸಂಗೀತ ಕ್ಷೇತ್ರಕ್ಕೆ ನೀಡಿದರು.

ಪಿಕುದಾನಿ

ಸುಮಾರು ವರ್ಷಗಳ ಹಿಂದೆ ಗುಲಬರ್ಗಾದಲ್ಲಿ ರಾಜಗುರುಗಳ ಕಾರ್ಯಕ್ರಮವಿತ್ತು. ಅವರ ಕೀರ್ತಿ ಹಾಗೂ ಹೆಸರನ್ನು ಕೇಳಿದ್ದ ಮುಸಲ್ಮಾನ್ ಅಭಿಮಾನಿಗಳು ಆ ಕಾರ್ಯಕ್ರಮವನ್ನು ಆಯೋಜಿಸಿದ್ದರು. ದೊಡ್ಡ ಶ್ರೀಮಂತರಾಗಿದ್ದ ಅವರು ತಮ್ಮ ಮನೆಯ ದಿವಾನಖಾನೆಯಲ್ಲಿ ಗಾಯನದ ವ್ಯವಸ್ಥೆಯನ್ನು ಮಾಡಿದ್ದರು. ಕಾರ್ಯಕ್ರಮಕ್ಕೆ ಜರೀಪೇಟಾ ರೇಶ್ಮೆ ಅಂಗಿ, ಉದ್ದನೆಯ ಶೆರ್ವಾಣಿಕೋಟು ಧರಿಸಿ ತಾಂಬೂಲವನ್ನು ಮೆಲ್ಲುತ್ತಾ ಮದುಮಗನಂತೆ ಕಂಗೊಳಿಸುತ್ತಾ ಆಗಮಿಸಿದ ರಾಜಗುರುಗಳನ್ನು ಎಲ್ಲರೂ ಕುತೂಹಲದಿಂದ ನೋಡುತ್ತಿದ್ದರು. ವೇದಿಕೆಯ ಮೇಲೆ ಆಸೀನರಾಗಿ ತಮ್ಮ ರಸವತ್ತಾದ ಗಾಯನವನ್ನು ಆರಂಭಿಸಿದಾಗ ಕೇಳುಗರೆಲ್ಲ ಭಾವಪರವಶರಾಗಿ ಅವರ ಗಾಯನವನ್ನು ಕೇಳುತ್ತಿದ್ದರು. ಗಾಯನದ ನಡುವೆ ರಾಜಗುರುಗಳಿಗೆ ತಮ್ಮ ಬಾಯಿಯಲ್ಲಿದ್ದ ತಾಂಬೂಲವನ್ನು ಉಗುಳಬೇಕಾಗಿ ಬಂತು. ಕಾರ್ಯಕ್ರಮವನ್ನು ಮಧ್ಯದಲ್ಲಿ ನಿಲ್ಲಿಸಿ ತಾಂಬೂಲವನ್ನು ಉಗುಳಿ ಬರಬೇಕು ಎನ್ನುವಷ್ಟರಲ್ಲಿ ಅದನ್ನು ಗಮನಿಸಿದ ಒಬ್ಬ ಹೆಣ್ಣು ಮಗಳು ಅವರು ಎದ್ದರೆ ಕಾರ್ಯಕ್ರಮಕ್ಕೆ ರಸಭಂಗವಾಗುತ್ತದೆ ಎಂದು ತಟ್ಟನೇ ಕೈಯಲ್ಲಿ ಒಂದು ಪಿಕುದಾನಿ ಹಿಡಿಕೊಂಡು ಬಂದು ಅವರ ಮುಂದೆ ಹಿಡಿದಳು. ಅಂದರೆ ಅವರ ಗಾಯನ ಅಲ್ಲಿರುವವರ ಮೇಲೆ ಎಷ್ಟೊಂದು ಮೋಡಿ ಮಾಡಿತ್ತು ಎನ್ನುವುದಕ್ಕೆ ಒಂದು ನಿದರ್ಶನ. ಅಲ್ಲಿರುವವರು ಒಂದು ಕ್ಷಣವು ಅದನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ತಲ್ಲೀನರಾಗಿ ಕೇಳುತ್ತಿದ್ದರು ಎಂದು ಆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಖ್ಯಾತ ಸಾಹಿತಿ ಡಾ|| ಪಂಚಾಕ್ಷರಿ ಹಿರೇಮಠ ಅವರು ಇಂದಿಗೂ ತಮ್ಮ ಭಾಷಣಗಳಲ್ಲಿ ಹೇಳುತ್ತಿರುತ್ತಾರೆ.

ಟಾಂಗಾ ಸವಾರಿ

ನಾನು ಚಿಕ್ಕ ಹುಡುಗನಿರುವಾಗ ಧಾರವಾಡದಲ್ಲಿ ರಿಕ್ಷಾಗಳೇ ಇರಲಿಲ್ಲ. ಎಲ್ಲಿ ನೋಡಿದರಲ್ಲಿ ಟಾಂಗಾಗಳೇ. ಟಾಂಗಾ ಕುದುರೆಗಳಿಗೆ ಸಿಂಗಾರ ಮಾಡಿ ಅಲ್ಲಲ್ಲಿ ನಿಲ್ಲಿಸಿರುತ್ತಿದ್ದರು. ಅಪ್ಪಾ ಅವರು ರೈಲ್ವೆ ಸ್ಟೇಶನ್‌ಗೆ, ಮಾರ್ಕೆಟ್‌ಗೆ, ಆಕಾಶವಾಣಿಗೆ ಟಾಂಗಾದಲ್ಲಿಯೇ ಹೋಗುತ್ತಿದ್ದರು. ಅವರೊಂದಿಗೆ ಟಾಂಗಾದಲ್ಲಿ ಹೋಗುವದೆಂದರೆ ನನಗೆ ಖುಷಿಯೋ ಖುಷಿ. ಅವರು ಹಿಂದೆ ಕುಳಿತುಕೊಳ್ಳುತ್ತಿದ್ದರು. ನಾನು ಮುಂದಿನ ಸೀಟಿನಲ್ಲಿ ಕುದುರೆಯ ಮೇಲೆ ಕುಳಿತುಕೊಳ್ಳುವವನ ತರಹ ಕುಳಿತುಕೊಳ್ಳುತ್ತಿದ್ದೆ. ಅಪ್ಪಾ ಅವರು ಹೊರಗೆ ಹೋಗುವಾಗ ತುಂಬಾ ನೀಟಾಗಿ




ಬಟ್ಟೆಯನ್ನು ಧರಿಸುತ್ತಿದ್ದರು. ಗರಿಗರಿ ದೋತರ, ರೇಶಿಮೆ ಅಂಗಿ, ಕಸೂತಿ ಮಾಡಿದ ಟೊಪ್ಪಿಗೆ, ಕ್ಲೋಸ್ಡ್ ಕಾಲರ್ ಕೋಟು ಪಾಲೀಶ್ ಮಾಡಿದ ಬೂಟುಗಳು ಅವರಿಗೆ ಬೇಕೇ ಬೇಕು. ಅಂಗಿಗೆ ಬಂಗಾರದಂತೆ ಹೊಳೆಯುವ ಚೈನಿನಲ್ಲಿ ಜೋಡಿಸಿದ ಗುಂಡಿಗಳನ್ನು ಹಾಕಿಕೊಂಡು ಯಾವುದೋ ಸಂಸ್ಥಾನದ ನವಾಬರಂತೆ ಟಾಂಗಾದಲ್ಲಿ ಕುಳಿತುಕೊಳ್ಳುತ್ತಿದ್ದರು. ಯಾರಾದರೂ ಭೆಟ್ಟಿಯಾದರೆ ಟಾಂಗಾದಲ್ಲಿ ಕುಳಿತುಕೊಂಡೆ ಸಂಭಾಷಣೆ, ಸಾಮಾನುಗಳ ಖರೀದಿ ಸಹ ನಡೆಯುತ್ತಿತ್ತು. ಅವರ ಎಲ್ಲ ಕೆಲಸ ಮುಗಿಸಿಕೊಂಡು ಬರುವ ವರೆಗೂ ಟಾಂಗಾದವರು ಕಾಯಬೇಕು. ಬೇಸಿಗೆಯಲ್ಲಿ ಕೂಡಾ ಕೋಟು ಧರಿಸುತ್ತಿದ್ದ ಅವರಿಗೆ ತುಂಬಾ ಬೆವರು ಬರುತ್ತಿತ್ತು. ಗುಂಡಿಗಳನ್ನು ತೆಗೆದು ಒರೆಸಿಕೊಳ್ಳುತ್ತಾ ಟಾಂಗಾದ ಲಯಕ್ಕೆ ಮಿಡಿಯುವವರಂತೆ ಹೋಗುತ್ತಿದ್ದರು.

ಹಾಡುವಾಗಲೂ ಹಾಗೆಯೇ, ಕಾರ್ಯಕ್ರಮಕ್ಕೆ ಲಾಂಗ್ ಕೋಟು ಧರಿಸಿ ಅಲಂಕೃತವಾಗಿ ಹೋಗುತ್ತಿದ್ದ ಅವರು ರಾಗದ ರಂಗು ಏರುತ್ತಿದ್ದಂತೆ ತಮ್ಮ ಸದೃಢವಾದ ಶರೀರ ಹಾಗೂ ಶಾರೀರದೊಂದಿಗೆ ಸ್ವರ-ಲಯಗಳ ತಳ ಮುಟ್ಟದೇ ಬಿಡುವುದಿಲ್ಲ ಎನ್ನುವ ಛಲದೊಂದಿಗೆ (ಕುಸ್ತಿಯಲ್ಲಿ ಪಟ್ಟು ಹಾಕಿ ಗೆಲ್ಲುವ ಪೈಲ್ವಾನರಂತೆ) ಮೊದಲು ಕೋಟಿನ ಗುಂಡಿಗಳನ್ನು ಬಿಚ್ಚಿಕೊಳ್ಳುವದು ಆಮೇಲೆ ಹಾಡುತ್ತಲೇ ಕೋಟನ್ನು ತೆಗೆದು ಸಂಗೀತ ಸಾಗರದ ವಿಸ್ತಾರ-ಆಳದಲ್ಲಿ ಮುಳುಗೆದ್ದು ಕೇಳುಗರನ್ನು ಕೂಡಾ ಮಧುರ ಕಂಪನದ ಅಲೆಗಳಲ್ಲಿ ತೇಲಿಸಿಬಿಡುತ್ತಿದ್ದರು.

ಈ ಪ್ರಕೃತಿಯಲ್ಲಿ ಅದರದ್ದೇಯಾದ ಒಂದು ಲಯವಿದೆ. ಅದು ಹರಿಯುವ ನೀರಾಗಿರಬಹುದು. ಬೀಸುವ ಗಾಳಿಯಾಗಿರಬಹುದು, ಸುರಿಯುವ ಮಳೆಯಾಗಿರಬಹುದು. ಎಲ್ಲದರಲ್ಲೂ ಒಂದೊಂದು ಲಯವನ್ನು ಕಾಣಬಹುದು. ಅದೇ ತರಹ ರಾಜಗುರುಗಳು ರೈಲಿನಲ್ಲಿ ಪ್ರಯಾಣಿಸುವಾಗ, ವಾಹನದಲ್ಲಿ ಹೋಗುವಾಗ ಅಷ್ಟೇ ಅಲ್ಲ ಟಾಂಗಾದಲ್ಲಿ ಹೋಗುವಾಗಲೂ ಸಹ ಅದರ ಲಯಕ್ಕೆ ಸ್ಪಂದಿಸುವಂತೆ ತಮ್ಮ ಸಂಗೀತವನ್ನು ಸಮ್ಮಿಳಿಸಿಕೊಂಡು ತಮ್ಮದೇ ಆದ ಲೋಕದಲ್ಲಿರುತ್ತಿದ್ದರು. ಅವರು ಈ ಜಗತ್ತನ್ನು ಕಾಣುವ ರೀತಿಯೇ ಬೇರೆಯಾಗಿತ್ತು. ರಾಗ-ತಾಳಗಳ ಜೊತೆಯಲ್ಲಿ ಆನಂದ-ಅನುರಾಗ ಭಕ್ತಿ-ಮುಕ್ತಿ-ಪೂಜೆ ಎಲ್ಲವು ಸಂಗೀತದಲ್ಲಿಯೇ ಇದೆ ಎಂದು ಅವರು ಹೇಳುತ್ತಿದ್ದರು. ತಮಗೆ ಹೇಗೆ ಬೇಕೊ ಹಾಗೆ ಇರುವುದು ಅವರ ಜಾಯಮಾನವಾಗಿತ್ತು. ಎಲ್ಲೂ ಹೊಂದಾಣಿಕೆಯ ಪ್ರಶ್ನೆಯೇ ಇಲ್ಲ. ಅವರು ನಡೆದದ್ದೇ ರಾಜಮಾರ್ಗ.

ಕಟ್ಟಿಗೆ ಪೆಟ್ಟಿಗೆಗಳು

ರಾಜಗುರುಗಳಿಗೆ ಕಟ್ಟಿಗೆ ಪೆಟ್ಟಿಗೆಗಳೆಂದರೆ ಏನೋ ಒಂದು ತರಹದ ಆಕರ್ಷಣೆ. ಊರಿಗೆ ಹೋಗುವಾಗ ಅವರ ಸಂಗಡ ನಾಲ್ಕಾರು ಪೆಟ್ಟಿಗೆಗಳು ಇರಲೇಬೇಕು. ಅರಿವೆಗಳನ್ನು ಇಡಲು,



ಪುಸ್ತಕ ಪೆನ್ನುಗಳಿಗಾಗಿ, ಹಾರ್ಮೋನಿಯಂ, ತಬಲಾ, ಡಗ್ಗಾಗಳಿಗೆ, ಸ್ಟೋ ಇಡಲು, ಹಾಲಿನ ತಂಬಿಗೆಗಳನ್ನು ಇಡಲು ಔಷಧಿಯ ಬಾಟಲುಗಳನ್ನು ಇಡಲು ಹೀಗೆ ನಾನಾ ತರಹದ ಪೆಟ್ಟಿಗೆಗಳು ಅವರ ಬಳಿ ಇದ್ದವು. ಅದಕ್ಕಾಗಿ ಒಬ್ಬ ಬಡಿಗನನ್ನು ಖಾಯಂ ಆಗಿ ಕೆಲಸ ಮಾಡಲು ಇಟ್ಟುಕೊಂಡಿದ್ದರು. ಅವನ ಹೆಸರು ಮಕ್ತೂಮ್ ಸಾಬ್. ಪೆಟ್ಟಿಗೆಗಳನ್ನು ತಯಾರಿಸಲು ಬೇಕಾಗುವ ಕಟ್ಟಿಗೆ, ಮೊಳೆ, ಸ್ಕ್ರೂ, ಪಾಲೀಷ್ ಎಣ್ಣೆಗಳನ್ನು ತಾವೇ ಸ್ವತಃ ಬಡಿಗನನ್ನು ಕರೆದುಕೊಂಡು ಹೋಗಿ ತೆಗೆದುಕೊಂಡು ಬರುತ್ತಿದ್ದರು. ಅವರು ಹೇಳುವ ರೀತಿಯಲ್ಲಿ ಮತ್ತು ಸೈಜಿನಲ್ಲಿ ಪೆಟ್ಟಿಗೆಗಳನ್ನು ತಯಾರು ಮಾಡಿಕೊಡಬೇಕು. ಒಂದು ವೇಳೆ ಅವನು ತಯಾರು ಮಾಡಿದ ಪೆಟ್ಟಿಗೆ ಅವರಿಗೆ ಸರಿಬರದಿದ್ದರೆ ಅದನ್ನು ಕೊರೆಯಿಸಿ ನೀರು ಕಾಯಿಸಲು ಉಪಯೋಗಿಸಲು ಹೇಳುತ್ತಿದ್ದರು. ಆ ಬಡಿಗನಂತೂ ತುಂಬಾ ನಿಧಾನಿಯಾಗಿದ್ದನು. ಆರಾಮವಾಗಿ, ಸಾವಕಾಶವಾಗಿ ಕೆಲಸ ಮಾಡುತ್ತಿದ್ದ. ಇದರ ಬಗ್ಗೆ ನಾವು ಅವರಿಗೆ ಹೇಳಿದಾಗ 'ಏನೋ ಬಡವ ಮಾಡಲಿ, ಅವನ ಹೊಟ್ಟೆ ಕೂಡ ತುಂಬಬೇಕಲ್ಲ' ಎಂದು ಹೇಳುತ್ತಿದ್ದರು ನಾವು ನಿರುತ್ತರರಾಗುತ್ತಿದ್ದೆವು. ಎಷ್ಟೋ ಸಾರಿ ಏನೂ ಕೆಲಸವಿಲ್ಲದಾಗ್ಯೂ ಕೂಡ ಸುಮ್ಮನೆ ಏನಾದರೂ ಒಂದು ಕೆಲಸ ಮಾಡಿಸಿ ಹಣ ಕೊಟ್ಟು ಕಳಿಸುತ್ತಿದ್ದರು.

ದೂರದ ಊರಿಗೆ ಹೋಗುವಾಗ ಕಟ್ಟಿಗೆ ಪೆಟ್ಟಿಗೆಗಳನ್ನು ಕಂಡು ಯಾರಾದರೂ "ಏನೂ ಗುರುಗಳೇ ಇಷ್ಟೊಂದು ಕಟ್ಟಿಗೆ ಪೆಟ್ಟಿಗೆಗಳು ಏಕೆ ಬೇಕು" ಎಂದು ಕೇಳಿದರೆ 'ಇರಲಿ ಬಿಡಪ್ಪಾ, ಒಂದು ವೇಳೆ ರೈಲಿನಲ್ಲಿ ರಿಸರ್ವೇಶನ್ ದೊರೆಯದೆ ಇದ್ದರೆ, ಜಾಗ ಸಿಗದೇ ಹೋದರೆ ಇವುಗಳ ಮೇಲೆ ಕುಳಿತುಕೊಂಡು ಹೋಗಬಹುದು' ಎಂದು ಹೇಳಿಬಿಡುತ್ತಿದ್ದರು. ಊರಿಗೆ ಹೋಗುವಾಗ ಏರ್‌ಬ್ಯಾಗ್ ಇಲ್ಲವೇ ಸೂಟ್‌ಕೇಸ್‌ಗಳನ್ನು ತೆಗೆದುಕೊಂಡು ಹೋಗಲು ಹೇಳಿದರೆ ಅವರು ಸುತರಾಂ ಒಪ್ಪುತ್ತಿರಲಿಲ್ಲ. ಒಂದು ಸಾರಿ ITC ಕಂಪನಿಯವರು ಒಂದು VIP ಸೂಟ್‌ಕೇಸನ್ನು ಕಾಣಿಕೆಯಾಗಿ ನೀಡಿದ್ದರು. ಅದು ತುಂಬಾ ಸುಂದರವಾಗಿತ್ತು. ಅದನ್ನು ಉಪಯೋಗಿಸದೇ ಹಾಗೆ ಒಂದು ಮೂಲೆಯಲ್ಲಿ ಇಟ್ಟಿದ್ದರು. ನಾನು ಪದೇ ಪದೇ ಅದನ್ನು ಪ್ರಯಾಣಕ್ಕೆ ತೆಗೆದುಕೊಂಡು ಹೋಗಲು ಒತ್ತಾಯ ಮಾಡುತ್ತಿದ್ದೆ. ಅಂತೂ ಕೊನೆಗೆ ಒಪ್ಪಿದರು. ಮರುದಿನ ಬಡಿಗನನ್ನು ಕರೆದು ಆ ಸೂಟ್‌ಕೇಸ್ ಇಡುವುದಕ್ಕಾಗಿ ಒಂದು ಕಟ್ಟಿಗೆ ಪೆಟ್ಟಿಗೆಯನ್ನು ತಯಾರಿಸಲು ಹೇಳಿದರು. ಅವನು ಪೆಟ್ಟಿಗೆ ತಯಾರಿಸಿದ ಮೇಲೆ ಸೂಟ್‌ಕೇಸಿನಲ್ಲಿ ಸಾಮಾನುಗಳನ್ನು ಇಟ್ಟುಕೊಂಡು ಅದನ್ನು ಕಟ್ಟಿಗೆ ಪೆಟ್ಟಿಗೆಯಲ್ಲಿ ಇಟ್ಟು ಬೀಗ ಹಾಕಿ ಊರಿಗೆ ತೆಗೆದುಕೊಂಡು ಹೊರಟಾಗ ಎಲ್ಲರಿಗೂ ನಗು ಬಂತು. ಆದರೆ ಅವರ ಕಟ್ಟಿಗೆ ಪೆಟ್ಟಿಗೆ ಮೇಲಿರುವ ಪ್ರೀತಿಯನ್ನು ಕಂಡು ಸಂತೋಷವಾಯಿತು. ನಮ್ಮ ಮನೆಯಲ್ಲಿ ತುಂಬಾ ವರ್ಷಗಳಿಂದ ದೊಡ್ಡದಾದ ಒಂದು ರೇಡಿಯೋ ಇತ್ತು. ಅದು ನ್ಯಾಶನಲ್ ಕಂಪೆನಿ ರೇಡಿಯೋ ಅಲ್ಲದೇ ಗ್ರಾಮೋಫೋನ್ ಕೂಡಾ ಇತ್ತು. ಆ ಗ್ರಾಮೋಫೋನ್ ಪ್ಲೇಟುಗಳನ್ನು ಇಡಲು ಕಟ್ಟಿಗೆ ಪೆಟ್ಟಿಗೆಗಳಿದ್ದವು. ಆದರೆ ಟೇಪ್



ರಿಕಾರ್ಡರ್ ಇರಲಿಲ್ಲ. ಟೇಪ್‌ರಿಕಾರ್ಡರ್‌ಗಳು ಬಂದ ಮೇಲೆ ಅವರಿಗೆ ಗಂಟುಬಿದ್ದು ಒಂದು ಟೇಪ್‌ರಿಕಾರ್ಡರ್ ತೆಗೆದುಕೊಂಡೆ ಅವರು ಮನೆಯಲ್ಲಿದ್ದಾಗ ದಿನರಾತ್ರಿ ಸಂಗೀತದ ಕ್ಯಾಸೆಟ್‌ಗಳನ್ನು ಹಾಕಿ ಕೇಳುತ್ತಿದ್ದರು. ಅದರಲ್ಲಿ ಅನೂಪ ಜಲೋಟಾನ ಭಜನೆಗಳು ಅವರಿಗೆ ತುಂಬಾ ಹಿಡಿಸಿದ್ದವು. ಟೇಪ್‌ರಿಕಾರ್ಡರನ್ನು ಒಂದು ಟೇಬಲ್ ಮೇಲೆ ಇಟ್ಟಿರುತ್ತಿದ್ದೆವು. ಒಂದು ದಿನ ಆ ಬಡಿಗ ಬಂದ. ಅವನಿಗೆ ಏನಾದರೂ ಒಂದು ಕೆಲಸ ಕೊಡಬೇಕು ಏನು ಕೊಡಬೇಕು ಎಂದು ವಿಚಾರ ಮಾಡಿದರು. ಅವರ ದೃಷ್ಟಿ ಟೇಬಲ್ ಮೇಲಿದ್ದ ಟೇಪ್‌ರಿಕಾರ್ಡರ್‌ನತ್ತ ಹೊರಳಿತು. 'ಆಯಿತು ಇದನ್ನು ಇಡಲು ಒಂದು ಪೆಟ್ಟಿಗೆ ತಯಾರು ಮಾಡು' ಎಂದು ಹೇಳಿಯೇಬಿಟ್ಟರು. ಊರಿಗೆ ಒಯ್ಯುತ್ತಿದ್ದ ಪೆಟ್ಟಿಗೆಗಳಿಗೆ ಸ್ವಲ್ಪ ಗೀರು ಬಿದ್ದರೆ ಸಾಕು ಧಾರವಾಡಕ್ಕೆ ಬಂದ ನಂತರ ಅವುಗಳನ್ನು ಚೆನ್ನಾಗಿ ಪಾಲೀಷ್ ಮಾಡಿಸುತ್ತಿದ್ದರು. ಪೆಟ್ಟಿಗೆಗಳಲ್ಲಿ ಒಂದು ಚಿಕ್ಕಪೆಟ್ಟಿಗೆ, ಅದರಲ್ಲಿ ಎರಡು ಖಾನೆಗಳನ್ನು ಮಾಡಿಸಿ ಒಂದರಲ್ಲಿ ಹಾಲಿನ ತಿರುಪಣಿ ತಂಬಿಗೆ ಹಾಗೂ ಮತ್ತೊಂದರಲ್ಲಿ ಚಿಕ್ಕ ನೀರಿನ ತಿರುಪಣಿ ತಂಬಿಗೆಗಳನ್ನು ಇಟ್ಟು ಬೀಗ ಹಾಕುತ್ತಿದ್ದರು. ಹೀಗೆ ಎಲ್ಲಾ ಪೆಟ್ಟಿಗೆಗಳ ಬೀಗಗಳು ಸೇರಿ ಒಂದು ದೊಡ್ಡ ಬೀಗದ ಕೈಗೊಂಚಲು ಸದಾ ಅವರ ಬಳಿ ಇರುತ್ತಿತ್ತು. ಬಡಿಗನ ಮಗಳ ಲಗ್ನ ನಿಶ್ಚಯವಾಗಿತ್ತು. ಅವನು ಬಂದು "ಸ್ವಾಮೇರ ನನ್ನ ಮಗಳ ನಿಖಾಃ ಇದೆ. ಸ್ವಲ್ಪ ಮದತ್ ಮಾಡ್ರಿ" ಎಂದು ಕೇಳಿಕೊಂಡ. ಇಲ್ಲ ಎನ್ನದೇ ಅವನಿಗೆ ಹಣ ಕೊಟ್ಟು ಕಳಿಸಿದ್ದರು. ಪೆಟ್ಟಿಗೆಗಳನ್ನು ತಯಾರಿಸುವ ಗರಗಸ, ಸುತ್ತಿಗೆ, ಪಕ್ಕಡ್, ಡ್ರಿಲ್ ಮಶೀನ್ ಇವುಗಳನ್ನು ಖರೀದಿ ಮಾಡಿ ಮನೆಯಲ್ಲಿ ಇಟ್ಟಿದ್ದರು. ಆ ಸಾಮಾನುಗಳನ್ನೇ ತೆಗೆದುಕೊಂಡು ಬಡಿಗ ಕೆಲಸ ಮಾಡಬೇಕಿತ್ತು. ಕಟ್ಟಿಗೆ ಪೆಟ್ಟಿಗೆಯ ಪ್ರೀತಿ ಕೊನೆಯವರೆಗೂ ಅವರಿಗೆ ಹಾಗೆಯೇ ಇತ್ತು.

ಪಂ. ಜೋಷಿಯವರೊಂದಿಗೆ ಗಾಯನ

ಹಿಂದೆ ಔರಂಗಾಬಾದನಲ್ಲಿ ಒಂದೇ ಕೋಣೆಯಲ್ಲಿದ್ದು ಸಂಗೀತ ಸಾಧನೆ ಮಾಡಿದ ಪಂ. ಬಸವರಾಜ ರಾಜಗುರು ಹಾಗೂ ಪಂ. ಬೀಮಸೇನ ಜೋಶಿಯವರ ಎಷ್ಟೋ ಕಾರ್ಯಕ್ರಮಗಳನ್ನು ಜೊತೆ ಜೊತೆಗಾಗಿ ಹಾಡಿ ರಂಜಿಸಿದ್ದನ್ನು ಪುಣೆ ಮುಂಬೈದ ಹಿರಿಯ ಸಂಗೀತ ಪ್ರೇಮಿಗಳು ಈಗಲೂ ನೆನಪಿಸಿಕೊಳ್ಳುತ್ತಾರೆ. ಬಹುವರ್ಷಗಳ ಹಿಂದಿನ ಘಟನೆ. ಕೋಲ್ಕತ್ತಾದಲ್ಲಿ ಸಂಗೀತ ಸಮ್ಮೇಳನ ನಡೆದಿತ್ತು. ಅನೇಕ ದಿಗ್ಗಜ ಕಲಾವಿದರು ಅದರಲ್ಲಿ ಭಾಗವಹಿಸಿದ್ದರು. ಪಂ. ಭೀಮಸೇನಜೋಶಿ, ಪಂ. ಬಸವರಾಜ ರಾಜಗುರುಗಳು ಕೂಡಾ ಆ ಸಮ್ಮೇಳನಕ್ಕೆ ಆಮಂತ್ರಿತರಾಗಿದ್ದರು. ಪಾಕಿಸ್ತಾನದ ಜೋಡಿಗಾಯಕರಾಗಿದ್ದ ಸಲಾಮತ್ ಅಲೀ, ನಜಾಕತ್ ಅಲೀ ಅವರು ಸಮ್ಮೇಳನದಲ್ಲಿ ಹಾಡಿ ಬಹಳ ಪ್ರಭಾವ ಬೀರಿದರು. ಆಗ ಪಾಕಿಸ್ತಾನ ಭಾರತದಿಂದ ಬೇರೆಯಾಗಿ ಕೆಲವೇ ವರ್ಷಗಳಾಗಿದ್ದವು. ವಿಭಜನೆಯ ಬಿಸಿ ಇನ್ನೂ ಆರಿರಲಿಲ್ಲ. ಸಮ್ಮೇಳನದ



ಆಯೋಜಕರು ಈಗ ನಮ್ಮಲ್ಲಿಯ ಯಾರನ್ನಾದರೂ ಜೊತೆಯಾಗಿ ಹಾಡಿಸಬೇಕು ಎಂದು ವಿಚಾರ ಮಾಡಿದರು. ಯಾರು? ಎಂಬ ಪ್ರಶ್ನೆ ಬಂದಾಗ ಅವರ ಮನದಲ್ಲಿ ಬಂದಿದ್ದು ಪಂ. ಭೀಮಸೇನ ಜೋಶಿ ಹಾಗೂ ಪಂ. ಬಸವರಾಜ ರಾಜಗುರು. ಪಂ. ನಿವೃತ್ತಿ ಬುವಾ ಸರನಾಯಕರನ್ನೊಳಗೊಂಡು ಆಯೋಜಕರು ಈ ಇಬ್ಬರೂ ಕಲಾವಿದರಿಗೆ ವಿನಂತಿಸಿಕೊಂಡು ಕಾರ್ಯಕ್ರಮ ನೀಡಲು ಒಪ್ಪಿಸಿದರು. ಇಬ್ಬರು ಮಹಾನ್ ಗಾಯಕರು ಸೇರಿ ಹಾಡ ತೊಡಗಿದರೆ ಕೇಳಬೇಕೆ? ಭೀಮಸೇನ ಜೋಶಿಯವರು ತಮ್ಮ ಗಂಭೀರ ಶೈಲಿಯಿಂದ ಆಲಾಪ ಮಾಡುತ್ತಾ ಭರ್ಜರಿಯಾಗಿ ತಾನುಗಳನ್ನು ಹೊರಹೊಮ್ಮಿಸತೊಡಗಿದರೆ ಬಸವರಾಜ ರಾಜಗುರು ಅವರು ತಮ್ಮ ಇಂಪಾದ ಧ್ವನಿಯಲ್ಲಿ ಲಾಲಿತ್ಯಪೂರ್ಣವಾಗಿ ಚೀಜ್ ಹಾಡುತ್ತಾ ಲಯಕಾರಿ ಕೆಲಸ ಮಾಡತೊಡಗಿದಾಗ ಅಲ್ಲಿ ಒಂದು ಅದ್ಭುತವಾದ ವಾತಾವರಣವೇ ನಿರ್ಮಾಣವಾಯಿತು. ಅದ್ವಿತೀಯವಾದ ಕಾರ್ಯಕ್ರಮ ಮುಗಿದ ಮೇಲೆ ಶ್ರೋತೃಗಳು, ಆಯೋಜಕರು ಈ ಇಬ್ಬರೂ ಕಲಾವಿದರನ್ನು ಎತ್ತಿ ಹಿಡಿದು ಖುಷಿ ಪಟ್ಟರೆ, ಇವರ ಗಾಯನ ಕೇಳಿ ಬೆರಗಾದ ಸಲಾಮತ್ ಅಲೀ ನಜಾಕತ್ ಅಲಿ ಬಂಧುಗಳು ಇವರ ಬಳಿ ಬಂದು "ಆಫ್ ದೊನೋ ಕಮಾಲ್‌ಕೆ ಕಲಾಕಾರ ಹೈ" ಎಂದು ಪ್ರಶಂಸೆ ಮಾಡಿದರು. ಭೀಮಸೇನ ಜೋಶಿ ಹಾಗೂ ಬಸವರಾಜ ರಾಜಗುರು ಹಿಂದುಸ್ತಾನಕ್ಕೆ ಸಲಾಮತ್ ಅಲೀ ನಜಾಕತ್ ಅಲೀ ಎಂದು ಕೇಳುಗರು ಹೊಗಳಿದರು.

ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು

ಗುವಾಹತಿ (ಆಸ್ಸಾಮ್)ಯಲ್ಲಿ ಪಂ. ಬಸವರಾಜ ರಾಜಗುರುಗಳ ಕಾರ್ಯಕ್ರಮವಿತ್ತು. ಅಲ್ಲಿಯೂ ಕೂಡಾ ಅನೇಕ ಹೆಸರಾಂತ ಕಲಾವಿದರು ಸೇರಿದ್ದರು. ಎರಡನೇ ದಿನದ ಸಾಯಂಕಾಲ ಸಿತಾರವಾದನ ಹಾಗೂ ರಾಜಗುರುಗಳ ಗಾಯನ. ರಾತ್ರಿ ಎಂಟು ಗಂಟೆಯಾಗುತ್ತಾ ಬಂದರೂ ರಾಜಗುರುಗಳು ಇನ್ನೂ ಗುವಾಹತಿಯನ್ನು ತಲುಪಿರಲಿಲ್ಲ. ಸಂಘಟಕರಿಗೆ ಆತಂಕ. ಏನು ಮಾಡುವದು ಎಂದು ತಿಳಿಯದೆ ಅಲ್ಲಿಯೇ ಇದ್ದ ಖ್ಯಾತ ವ್ಹಾಯಲಿನ್ ವಾದಕ ಪಂ. ವಿ.ಜಿ. ಜೋಗರಲ್ಲಿ ತಮ್ಮ ಆತಂಕವನ್ನು ಹೇಳಿಕೊಂಡರು. ಆಗ ಜೋಗರು ಸಿತಾರವಾದನವನ್ನು ಹಾಗೆಯೇ ಮುಂದುವರೆಸಿರಿ, ನಾನು ಹೊರಗೆ ನೋಡುತ್ತಿರುತ್ತೇನೆ ಬರಬಹುದು ಎಂದು ಹೇಳಿ ಹೊರಗೆ ಬಂದು ರಸ್ತೆಯ ಬದಿಯಲ್ಲಿ ನಿಂತರು. ಸ್ವಲ್ಪ ಹೊತ್ತಿನ ನಂತರ ಒಂದು ಮಿಲಿಟರಿ ಜೀಪಿನಲ್ಲಿ ರಾಜಗುರುಗಳು ತಮ್ಮ ಸಾಮಾನುಗಳೊಂದಿಗೆ ಬಂದಿಳಿದರು. ಜೋಗರು ಸಂತೋಷದಿಂದ ರಾಜಗುರುಗಳನ್ನು ಬರಮಾಡಿಕೊಂಡು ಒಳಗೆ ಕರೆದುಕೊಂಡು ಹೋದರು. "ಬಸವರಾಜರೇ, ದಿನವಿಡೀ ಪ್ರಯಾಣ ಮಾಡಿ ದಣಿದು ಬಂದಿದ್ದೀರಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಿರಿ, ನಂತರ ಕಾರ್ಯಕ್ರಮ ಮಾಡಿದರಾಯಿತು" ಎಂದು ಹೇಳಿದಾಗ ರಾಜಗುರುಗಳು



"ಜೋಗ ಅವರೇ ನಾನು ಬಂದಿದ್ದು ಕಾರ್ಯಕ್ರಮ ನೀಡಲು ವಿಶ್ರಾಂತಿಗಾಗಿ ಅಲ್ಲ. ನನ್ನ ವಿಶ್ರಾಂತಿ ಏನಿದ್ದರೂ ಆಮೇಲೆ ಎಂದು ಹೇಳಿ ಬಟ್ಟೆಯನ್ನು ಸಹ ಬದಲಾಯಿಸದೆ ನೇರವಾಗಿ ವೇದಿಕೆಗೆ ಹೋಗಿ ಎರಡೇ ನಿಮಿಷಗಳಲ್ಲಿ ತಂಬೂರಿಗಳನ್ನು ಶೃತಿ ಮಾಡಿಕೊಂಡು ತಮ್ಮ ಮನಮೋಹಕ ಶೈಲಿಯಲ್ಲಿ ರಾಗ - ಶುದ್ಧ ಕಲ್ಯಾಣವನ್ನು ಆರಂಭಿಸಿದಾಗ ಸಂಘಟಕರ, ಕೇಳುಗರ ಸಂತಸಕ್ಕೆ ಪಾರವೇ ಇರಲಿಲ್ಲ. ಧ್ವನಿಯಲ್ಲಿ ಎಳ್ಳಷ್ಟು ದಣಿವು ಕಾಣುತ್ತಿರಲಿಲ್ಲ. ಎಲ್ಲವೂ ತಾಜಾತನದಿಂದ ಕೂಡಿತ್ತು.

ಭರ್ಜರಿಯಾಗಿ ಶುದ್ಧ ಕಲ್ಯಾಣವನ್ನು ಹಾಡಿದ ನಂತರ "ಧುಮ ಧುಮಲಿ ಫಂಡರಿ" ಎಂಬ ಭಜನೆ ಮತ್ತು "ಬಾಜು ಬಂದ ಖುಲ ಖುಲ ಜಾ" ಎಂಬ ಭೈರವಿಯೊಂದಿಗೆ ಕಾರ್ಯಕ್ರಮ ಮುಗಿಸಿದಾಗ ಪಂ. ಜೋಗ ಅವರು ವೇದಿಕೆಯ ಮೇಲೆ ಬಂದು "ದಿವಸ ಪೂರ್ತಿ ಪ್ರಯಾಣ ಮಾಡಿ ದಣಿದು ಬಂದು ಸ್ವಲ್ಪವೂ ವಿಶ್ರಾಂತಿ ಪಡೆಯದೆ ಒಂದು ಕ್ಷಣವು ತಡ ಮಾಡದೆ ಹಾಡುವ ಇಂತಹ ಕಲಾವಿದನನ್ನು ನೀವು ನೋಡಿದ್ದಿರಾ? ಎಂತಹ ಅದ್ಭುತವಾದ ಕಂಠ. ಕುಳಿತ ತಕ್ಷಣ ಹತ್ತುತ್ತದೆ. ಎಲ್ಲಿಯೂ ಕೊಸರಿಲ್ಲ, ಸಂಗೀತ ಕ್ಷೇತ್ರದಲ್ಲಿ ಇಂತಹ ಗಾಯಕ ಸಿಗುವದೇ ಅಪರೂಪ, ಇವರ ಹೆಸರನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು. ಅಷ್ಟೆ ಅಲ್ಲ ಅವರು "ದುಮ ದುಮಲಿ ಪಂಡರಿ" ಭಜನೆಯನ್ನು ಹಾಡಿ ಸಾಕ್ಷಾತ್ ಫಂಡರಾಪುರ ವಿಠ್ಠಲನನ್ನೇ ಕಣ್ಣೆದುರಿಗೆ ತಂದು ನಿಲ್ಲಿಸಿದ ಗಂಧರ್ವರು" ಎಂದು ಹೇಳಿದಾಗ ಪ್ರಚಂಡ ಕರತಾಡನವಾಯಿತು.

ಆತ್ಮೀಯ ಸಂವಾದ

ರಾಜಗುರುಗಳಿಗೆ ಒಮ್ಮೆ ಮುಂಬೈದಲ್ಲಿರುವ ಅವರ ಆತ್ಮೀಯ ಅಭಿಮಾನಿ ಜಿ.ಜಿ. ಜೋಶಿ ಕೇಳಿದರು. "ಗುರುಗಳೇ ನೀವು ಹೊಟ್ಟೆ ತುಂಬಾ ಊಟ ಮಾಡಿ ಸಂಗೀತ ಕಛೇರಿ ಹೇಗೆ ನೀಡುತ್ತೀರಿ?" ಎಂದು. ಆಗ ರಾಜಗುರುಗಳು "ನೋಡ್ರಿ ನಾವು ಹೇಗೆ ರೂಢಿ ಇಟ್ಟುಕೊಂಡಿರುತ್ತೇವೆಯೋ ಹಾಗೆ ನಡಿತದೆ. ಹೊಟ್ಟೆ ತುಂಬಾ ಊಟ ಮಾಡದಿದ್ದರೂ ಸ್ವಲ್ಪವಾದರೂ ಊಟ ಮಾಡಿ ಹಾಲು ಕುಡಿದು ಹಾಡಬೇಕು. ಅಂದರೆ ನಮ್ಮ ಹಾಡಿನಲ್ಲಿ ಸಂವರ್ಧನ ಶಕ್ತಿ ಹೆಚ್ಚಾಗುತ್ತದೆ. ಹೊಟ್ಟೆ ಖಾಲಿ ಇಟ್ಟುಕೊಂಡು ಹಾಡಬಾರದು. ಹಾಡುವಾಗ ನಮ್ಮ ಮನಸ್ಸು, ಹೊಟ್ಟೆ ಎರಡು ಶಾಂತವಾಗಿರಬೇಕು ನಮ್ಮ ಲಕ್ಷ್ಯ ಬೇರೆಕಡೆ ಹೋಗಬಾರದು. ಉಸ್ತಾದ ಬಡೇಗುಲಾಮ ಅಲೀ ಖಾನರು ಊಟ ಮಾಡಿ ಮತ್ತೆ ಒಂದು ಇಡೀ ಕೋಳಿಯನ್ನು ತಿಂದು ಹಾಡಿದ್ದಾರೆ. ಅದು ಅವರವರ ರೂಢಿ !

ಜಿ.ಜಿ. ಜೋಶಿ :- ಗುರುಗಳೇ ನಿಮ್ಮ ಹಾಡು ಕೇಳಿದಷ್ಟು ಇಂಪಾಗಿ ಇನ್ನೂ ಕೇಳಬೇಕು ಅಂತಾ ಅನ್ನಿಸುತ್ತದೆ. ಇದರ ಗುಟ್ಟೇನು?

ರಾಜಗುರುಗಳು :- ಇದರಲ್ಲಿ ಗುಟ್ಟೇನು ಇಲ್ಲ ಶುದ್ಧವಾದ ತುಪ್ಪದಲ್ಲಿ ಚಿರೋಟಿಯನ್ನು



ಕರೆದು ಸಿಹಿಯಾದ ಪಾಕದಲ್ಲಿ ಮುಳುಗಿಸಿ ತಿನ್ನಲು ಕೊಟ್ಟರೆ ಯಾರಾದರೂ ಬೇಡ ಎನ್ನುತ್ತಾರೆಯೇ? ನನ್ನ ಗಾಯನವು ಹಾಗೆಯೇ. ನನಗೆ ಅದು ಇದು ಏನನ್ನಾದರೂ ತಿಂದು ಕುಡಿದು ಅಭ್ಯಾಸವಿಲ್ಲ. ಒಳ್ಳೆಯ ಆಹಾರ, ಹಾಲು, ಕಾದು ಆರಿದ ನೀರು ನನಗೆ ಬೇಕು. ಹಾಡಿಗೆ ಒಳ್ಳೆಯ ಧ್ವನಿ ಬೇಕು. ಕಲಾವಿದನಾದವನು ಅದನ್ನು ಯಾವಾಗಲೂ ಕಾಯ್ದು ಕೊಳ್ಳಬೇಕು. ಹಾಡುವವನ ಆಸ್ತಿ ಎಂದರೆ ಅವನ ಧ್ವನಿ. ಒಳ್ಳೆಯ ಧ್ವನಿಯಲ್ಲಿ ತಮ್ಮ ಬುದ್ಧಿಶಕ್ತಿಯಿಂದ ಒಂದೊಂದೆ ಕೆಲಸ ಮಾಡುತ್ತಾ ಹೋದರೆ ಹಾಡಿಗೆ ಒಂದು ಮೆರಗು ಬರುತ್ತದೆ. ಈಗ ಹೇಗೆ ಬಂಗಾರದ ಆಭರಣಗಳನ್ನು ತಯಾರಿಸುವವರು ನವಿರಾದ ಕುಸುರಿನ ಕೆಲಸ ಮಾಡಿ ಅವುಗಳ ಸೌಂದರ್ಯವನ್ನು ಹೆಚ್ಚಿಸುತ್ತಾರೋ ಹಾಗೆ ನಾವು ವಿವಿಧ ಸಂಗತಿಗಳನ್ನು ನಮ್ಮ ಗಾಯನದಲ್ಲಿ ಅಳವಡಿಸಿಕೊಂಡು ಅವುಗಳಿಂದ ಅಲಂಕರಿಸಿ ಹಾಡಿದರೆ ಕೇಳುಗರು ಖಂಡಿತವಾಗಿಯೂ ಮೆಚ್ಚಿಕೊಳ್ಳುತ್ತಾರೆ.

ಜಿ.ಜಿ. ಜೋಶಿ :- ಗುರುಗಳೆ, ಇವೆಲ್ಲಾ ನಿಮಗೆ ಮಾತ್ರ ಸಾಧ್ಯ.

ರಾಜಗುರುಗಳು:- ಹಾಗೇನಿಲ್ಲ, ಯಾರು ನಿಶ್ಚಿತವಾದ ಮನಸ್ಸಿನಿಂದ ಕಟ್ಟುನಿಟ್ಟಾಗಿ ಇವುಗಳನ್ನು ಪಾಲಿಸುತ್ತಾರೋ ಅವರಿಗೆ ಸಾಧ್ಯವಾಗುತ್ತದೆ.

ಜಿ.ಜಿ. ಜೋಶಿ :- ಗುರುಗಳೆ, ನಿಮ್ಮ ಹಾಡು ಎಷ್ಟು ಮಧುರವೋ ಮಾತುಗಳು ಅಷ್ಟೇ ಮೃದುವಾದ ಅನುಭವದ ವಾಣಿಗಳು. ನಿಮ್ಮೊಂದಿಗೆ ಮಾತನಾಡುತ್ತಾ ಕುಳಿತರೆ ಹೊತ್ತು ಹೋಗಿದ್ದೇ ಗೊತ್ತಾಗುವುದಿಲ್ಲ.

ಇದು ಪಂ. ಬಸವರಾಜ ರಾಜಗುರುಗಳ ಆತ್ಮೀಯ ಸಂವಾದದ ಶೈಲಿ.

ಪಕ್ಕವಾದ್ಯಗಾರರಾಗಿ ಸೇವೆ ನೀಡಿದ ಕಲಾವಿದರು

ರಾಜಗುರುಗಳು ಪಂ. ಪಂಚಾಕ್ಷರಿಗವಾಯಿಗಳ ಹತ್ತಿರ ಅಭ್ಯಾಸ ಮಾಡಲು ಆಶ್ರಮದಲ್ಲಿ ಇದ್ದಾಗ ಅವರ ಎಲ್ಲ ಕಾರ್ಯಕ್ರಮಗಳಿಗೆ ಪರಮಪೂಜ್ಯ ಪಂಚಾಕ್ಷರಿ ಗವಾಯಿಗಳು ತಾವೇ ಸ್ವತಃ ತಬಲಾ ನುಡಿಸುತ್ತಿದ್ದರು ಮತ್ತು ಪೂಜ್ಯ ಪುಟ್ಟರಾಜ ಗವಾಯಿಗಳು ಹಾರ್ಮೋನಿಯಂ ನುಡಿಸುತ್ತಿದ್ದರು.



ತಬಲಾ ಸಾಥಿಗಳು :

ಸರ್ವಶ್ರೀ ಪಂ.

ಉಸ್ತಾದ ಕರಾಮತ್‌ವುಲ್ಲಾ ಖಾನ್
ಉಸ್ತಾದ ಅಲ್ಲಾರಖಾಃ
ಪಂ. ಶಾಮ್ತಾ ಪ್ರಸಾದ
ಚತುರಲಾಲ
ಪಂ. ಕಿಶನ್ ಮಹಾರಾಜ
ವಿಭವ ನಾಗೇಶಕರ್
ಉಸ್ತಾದ ಶೇಖ ದಾವೂದ
ಚಂದ್ರಕಾಂತ ಕಾಮತ
ನಿಜಾಮೋದ್ದಿನ್ ಖಾನ್
ಫೈಯ್ಯಾಜ್ ಖಾನ್
ಹಬೀಬ
ಡಿ.ಕೆ. ನೆಹರುರಕರ
ಬಾಜೀರಾವ್ ಸೋನಾವಣೆ
ಟೇಕಾರಾಮ
ಸಲೀಲ ಚಟರ್ಜಿ
ಮನ್ನಾಪುರ ರಾಘುಪ್ಪ
ಗದಿಗಯ್ಯ ಹಿರೇಮಠ
ಮಮ್ಮುಲಾಲ ಸಂಗಾಂವಕರ್
ಶೇಷಗಿರಿ ಹಾನಗಲ್
ಬಸವರಾಜ ಬೇಂಡಿಗೇರಿ
ರಘುನಾಥ ನಾಕೋಡ
ರವೀಂದ್ರ ಯಾವಗಲ್
ಬಾಲಕೃಷ್ಣ ಅಯ್ಯರ್
ಶಶಿ ಬಳ್ಳಾರಿ
ರಂಜಾನ್‌ಖಾನ್
ನಂದಕುಮಾರ
ಸೂರಜ್ ಪುರಂದರ



ನಾಗಮುನಿ
ಶಂಕರ ಕವಡಿಮಟ್ಟಿ
ರಾಚಯ್ಯ ಹಿರೇಮಠ
ವಿಶ್ವನಾಥ ನಾಕೋಡ ಮುಂತಾದವರು

ಹಾರ್ಮೋನಿಯಂ / ಸಾರಂಗಿ / ವಯೋಲಿನ್

ಸರ್ವಶ್ರೀ ಪಂ.
ಹನುಮಾನ ಮಿಶ್ರಾ
ಗೋಪಾಲ ಮಿಶ್ರಾ
ರಾಮಬಾವು ಬಿಜಾಪುರೆ
ಅಪ್ಪಾ ಜಳಗಾಂವಕರ
ಶೇಷಾದ್ರಿ ಗವಾಯಿ
ಅಬ್ದುಲ್ ಲತೀಫಖಾನ್ (ಸಾರಂಗಿ)
ಅನಂತ ಕೇಮಕರ
ರಾಜಾಬಾವು ಕೊಸ್ಕೆ
ಗುಲಾಮ ಜಾಫರ್‌ಖಾನ್ (ಸಾರಂಗಿ)
ವಾಸಂತಿ ಮಾಪ್ಸೆಕರ
ಮಹಮ್ಮದ ಧೋಲಪುರಿ
ವಸಂತ ಕನಕಾಪುರ
ವಿಠ್ಠಲ ಸಾಕಬಾಡಿ
ಶಿವರಾಜ ಗವಾಯಿ
ಎಸ್.ಎ. ಮಹಾಡಕರ
ಅಬ್ದುಲ ಖಾದರ (ಸಾರಂಗಿ)
ಜಿ.ಆರ್. ನಿಂಬರಗಿ
ಜಿ.ಡಿ. ಚರಂತಿಮಠ
ವಿರೇಶ್ವರ ಮದರಿ (ವಯೋಲಿನ್)
ಬಿ.ಎಸ್. ಮಠ (ವಯೋಲಿನ್)
ಸಿರಿಗೆರಿ ನಾಗನಗೌಡ
ವೆಂಕಟೇಶ ಗೊಡಖಿಂಡಿ
ಗದಿಗಯ್ಯ ನಂದಿಮಠ



ಟಿ.ವ್ಹಿ. ಕಬಾಡಿ
ವಿರೇಶ್ವರ ಹಿರೇಮಠ
ಕೆ.ಎನ್. ಕುಲಕರ್ಣಿ
ಡಿ. ಕುಮಾರದಾಸ್
ರವೀಂದ್ರ ಭಾರತಿ
ಮೊಹಮ್ಮದ್ ಅಹ್ಮದ್ ಬನ್ನೆ (ಸಾರಂಗಿ)
ವಿನಾಯಕ ತೊರ್ವಿ
ಸುರೇಂದ್ರ ಸಾ ನಾಕೋಡ
ಶ್ರೀಪಾದ ಹೆಗಡೆ
ಮಾಧವಗುಡಿ

ಮುಂತಾದವರು

ಪಂ. ರಾಜಗುರು ಅವರು ಹಾಡುತ್ತಿದ್ದ ಕೆಲ ರಾಗಗಳು ಮತ್ತು ಚೀಜ್‌ಗಳು

ರಾಗಗಳು	ಚೀಜ್‌ಗಳು
ಕೋಮಲ ರಿಷಭ ಅಸಾವರಿ	ರಬ್ ಮೇರಾ ವಹೀ
ಅಲಯಾ ಬಿಲಾವಲ್	ದೈಯ್ಯಾಕಹಾಂ ಗಯೇ ಲೋಗ : ಬಿನದೇಖೆ ಮೋಹೆ ಚೈನ ನಹೀ ಆವೆ
ರಾಮಕಲಿ	ಆಜ ರಾಧೇ ತೊರೆ
ತೋಡಿ	ಜಾ ಜಾರೆ ಪಥಿಕವಾ
ಜೋಗಿಯಾ	ರಾಮಾ ಹರಿಕಾ ಭೇದನ ಪಾಯೋ
ಮಿಯ್ಯಾಕಿ ತೋಡಿ	ಬೀನಬಜಾಯೇ ಮಾಯಿರಿ ; ಯೇರಿ ಮಾಯಿ ಆಜಶುಭಮಂಗಲ ಗಾವೋ
ಜೋಗಿಯಾ ಅಸಾವರಿ	ಹೋ ರಾಜಾ ಮಥುರಾ ಕಾಹೇಕೋ ಬಿಸಾರೆ
ಭಟಿಯಾರ	ಭರನಿನ ಜಾಯೇ; ಜಾಗೊ ಜಾಗೊ ಪ್ಯಾರೆ
ಗುಣಕಲಿ	ಬಾಜೇ ಡಮರು ಹರಕರ
ಕೌಂಸಿ ಕಾನಡಾ	ರಾಜನ ಕೆ ಸಿರ ತಾಜ; ಸೋ ಘಡಿ ಘಡಿ ಆಯೇ
ಸರಸ್ವತಿ	ಜಾಗೆ ಮೋರೆ ಭಾಗಕುವರ ಕನ್ಹಯ್ಯ ; ಜಾನಿ ಜಾನಿ ರೆ ತೊರೆ ಮನಕಿ
ಮಾಲಕಂಸ್	ಸುಂದರ ಬದನಕೆ; ಕೊಯಲಿಯಾ ಬೋಲೆ



	ಅಂಬುವಾ
ನಾಯಕಿ ಕಾನಡಾ	ಮೋರೆ ಪಿಯಾ ಪಿಯಾ ರಸಿಯಾ
ಶಂಕರಾ	ಅನಾಹತ ಆದ ನಾದ ಕೊ ಪಾರನ ಪಾಯೋ
	ಶಂಕರ ಭಂಡಾರಿ ಬೋಲೆ ; ಆದ ಮಹಾದೇವ ಬೀನಬಜಾಯೆ
ದುರ್ಗಾ	ತುರಸ ಕಾನ್ಹಾರೆ ; ಮನಮೋಹನ ಜಾ ಹೋರಿ ಖೇಲನ
ಯಮನ	ಬನರಾ ಮೋರಾ ಆಯೀಲಾ ಮೋರೆ
	ಪಿಯಾಕಿ ನಜರಿಯಾ ಜಾದು ಭರಿ
ಪೂರಿಯಾ ಕಲ್ಯಾಣ	ಜೀಯೋ ಕರೋ ಕೋಟ ಕೋಟ ಬರಸದಿನ
	ಹೋವನ ಲಾಗಿ ಸಾಂಜ
ಚಾಂದನಿ ಕೇದಾರ	ಜೋಗಿ ರಾವಲಾ ರೋಮಾ ; ನವೇಲಿನಾರ ಬನಠನ ನಿಕಸಿ
ಅಡಾಣಾ	ರಾಮ ಛಡೋ ರಘುವೀರ ರಣಧೀರ
ಹಿಂಡೋಲ	ಏರಿ ಮಾಯೀ ಪಿಯಾಸಂಗ ಖೇಲೊ
	ಬಾಜತ ಮೃದಂಗ ಗಾವತ ಗುನಿ ಸಂಗ
ಹಮೀರ	ದೀಟ್ ಲಂಗರವಾ ಕೈಸೇ ಘರಜಾವೂ
ಶಹಾನಾ ಕಾನಡಾ	ಅವಗುನ ಭರ್ಯೋ
ಜೀವನಪುರಿ	ಕೌನರಿಝೂವನ ಜಾಯೇರಿ ಸಖಿ
ಮಾಲಗುಂಜಿ	ಬನಮೆ ಚರಾವತ
ಶುದ್ಧಕಲ್ಯಾಣ	ನಿಂದನ ಆವತ ಆಲಿ ಮೋಹೆ
ಹಂಸಧ್ವನಿ	ಲಾಯಿರೆ ತಾನ ತಲವಾರ
ಪೂರಿಯಾ ಧನಾಶ್ರೀ	ಅಬತೋ ಋತುಮಾನ ; ಭವನ ಭವನ ಬೋಲೆ
ಮಾರು ಬಿಹಾಗ	ರಸಿಯಾ ಆವೋನಾ ; ಮನ ಮೇ ರಹೋ
ಛಾಯಾನಟ್	ಏರಿಮಾಲನಿಯಾ ದುಂಡಲಾವೋರಿ
	ನೆವರಕಿ ಝುನಕಾರ
ಖಂಭಾವತಿ	ಸಖೀ ಮುಖ ಚಂದ್ರ ;
ಬಸಂತ	ಬರ ಜೋ ನಮಾನೆ



ಶುದ್ಧ ಸಾರಂಗ	ಜಾರೇ ಖಗವಾ
ಗೊರಖ ಕಲ್ಯಾಣ	ಧನಧನ ಭಾಗ ತೋರೊ ;
ಭೈರವ ಬಹಾರ	ಜೊ ಬನಾರೆ
ದೇಶಿ	ಬರನ ಘರ ನ ಜಾವೋ
ಸಾರಂಗ	ಸಗರಿ ಉಮರಿಯಾ ಮೋರಿ
ದೇಸ	ಮಾನತ ನಹೀ ಬರಜೋರಿ
ಶ್ಯಾಮ ಕಲ್ಯಾಣ	ಸಾವನಕಿ ಸಾಂಜ
ಕೇದಾರ	ಕಂಗನವಾ ಮೋರಾ
ಹಂಸಕಲ್ಯಾಣ	ಬಲಮಾ ನ ಜಾವೋ
ಮೇಘ	ಗರಜ ಘರಾ ಘನ
ಕಾಫೀ	ಕೈಸೆ ಕೈಸೆ ಜಾವು ಪನಿಯಾ ಬರನ
ಅಷ್ಟರಾಗ ಮಾಲಿಕಾ	ಭೈರವ ಬಿಭಾಸ ಗುಣಕಲಿ ಗೌರಿ ಪರಭಾತ
ಭೈರವಿ	ಬಾಜು ಬಂದ ಖುಲಖುಲ ಜಾ
	ಚಲುವಾ ನ ಮಾರೋ ಗುಲಾಲ

ಸಂಗೀತ ಪರಂಪರೆ

ಗುರು-ಶಿಷ್ಯಪರಂಪರೆ ಇಂದು ಉಳಿದಿರುವುದು ಸಂಗೀತ ಕ್ಷೇತ್ರದಲ್ಲಿ ಮಾತ್ರ. ಅದರಲ್ಲಿ ಅಪಾರ ನಂಬಿಕೆಯುಳ್ಳ ರಾಜಗುರುಗಳು ಅದನ್ನು ಉಳಿಸಿ ಬೆಳೆಸುವ ಮಹತ್ತರ ಕಾರ್ಯಕೈಗೊಂಡವರು. ಅವರು ಒಬ್ಬ ಮಹಾನ ಗಾಯಕರಷ್ಟೇ ಅಲ್ಲ, ಒಬ್ಬ ಶ್ರೇಷ್ಠ ಗುರು ಕೂಡಾ ಆಗಿದ್ದರು. ಪಂಚಾಕ್ಷರಿ ಗವಾಯಿಗಳಿಗೆ ಮಾತು ಕೊಟ್ಟಂತೆ ತಾವು ಕೂಡ ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿ ಅವರನ್ನು ಉತ್ತಮ ಕಲಾವಿದರನ್ನಾಗಿ ರೂಪಿಸಿ ತಮ್ಮ ಸಂಗೀತ ಪರಂಪರೆ ಜೀವಂತ ವಾಹಿನಿಯಾಗಿ ಹರಿಯುವಂತೆ ಮಾಡಿದ್ದಾರೆ. ಅವರಲ್ಲಿ ಯಾರೇ ಆಗಲಿ ಸಂಗೀತ ಕಲಿಯುವ ಇಚ್ಛೆಯೊಂದಿಗೆ ಬಂದರೆ ಆತನಲ್ಲಿ ನಿಜವಾದ ಪ್ರತಿಭೆ ಇದ್ದಲ್ಲಿ ಯಾವುದೇ ಭೇದಭಾವ ಮಾಡದೇ "ಇವನಾರವ ಇವನಾರವ"ನೆನ್ನದೆ ಇವನಮ್ಮವ ಎಂಬಂತೆ ಸಾಕಷ್ಟು ಜನರಿಗೆ ಸಂಗೀತವನ್ನು ಕಲಿಸಿ ಅವರೆಲ್ಲ ಆ ಕ್ಷೇತ್ರದಲ್ಲಿ ಮುಂದುವರೆಯು ವಂತೆ ಮಾಡಿದ್ದಾರೆ. ಇವರ ಶಿಷ್ಯರು ಅಪ್ಪಟ ಕಲಾವಿದರಾಗಿ ರೂಪುಗೊಂಡು ದೇಶವಿದೇಶಗಳಲ್ಲಿ ಹೆಸರುವಾಸಿಯಾಗಿದ್ದಾರೆ. ಅವರು ಸಹ ತಮ್ಮ ಗುರುಗಳಂತೆ ಅನೇಕ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ನೀಡುವ ಮೂಲಕ ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.



ರಾಜಗುರುಗಳು ಯಾರಲ್ಲಿ ಪ್ರತಿಭೆ ಇದೆಯೋ ಅಂಥವರನ್ನು ಹುಡುಕಿಕೊಂಡು ಹೋಗಿ ಇಲ್ಲವೇ ಕರೆಸಿಕೊಂಡು ಅವರಿಗೆ ವಿದ್ಯೆಯನ್ನು ಧಾರೆ ಎರೆಯುತ್ತಿದ್ದರು. ಹಲವಾರು ಶಿಷ್ಯರನ್ನು ಮನೆಯಲ್ಲಿಯೆ ಇರಿಸಿಕೊಂಡು ಅವರಿಗೆ ವಿದ್ಯೆ ಕಲಿಸಿದರು. ಹೀಗಾಗಿಯೇ ಇಂದು ಸಂಗೀತ ಕ್ಷೇತ್ರದಲ್ಲಿ ಒಳ್ಳೆಯ ಕಲಾವಿದರಾಗಿ ಪ್ರಸಿದ್ಧಿ ಪಡೆದುಕೊಂಡವರಲ್ಲಿ ಇವರ ಶಿಷ್ಯರೆ ಹೆಚ್ಚಾಗಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ಶಿಷ್ಯರಿಗೆ ರಾಗಗಳು ಪಕ್ಕಾ ಆಗುವ ವರೆಗೂ ವಿಸ್ತಾರವಾಗಿ ಕಲಿಸುತ್ತಿದ್ದರು. ಪ್ರಮುಖ ರಾಗಗಳ ಮೇಲೆ ಹಿಡಿತ ಸಿಕ್ಕ ಮೇಲೆ ಉಳಿದ ರಾಗಗಳನ್ನು ಅವನೇ ಕಲಿಯಬಲ್ಲ ಎಂದು ಅವರು ಹೇಳುತ್ತಿದ್ದರು. ಹೇಳುತ್ತಲೇ ಅಪ್ರಚಲಿತ ರಾಗಗಳನ್ನು ಪರಿಚಯಿಸುತ್ತಿದ್ದರು.

ಗಾಯಕಿ ಡಾ. ಗಂಗೂಬಾಯಿ ಹಾನಗಲ್ ನನಗೆ ಹಲವಾರು ಬಾರಿ ಹೇಳುತ್ತಿದ್ದರು. "ನಿಮ್ಮಪ್ಪ ಬಹಳ ಪುಣ್ಯವಂತ ಏಕೆಂದರೆ ಅವನಿಗೆ ಬಹಳ ಛಲೋ ಶಿಷ್ಯರು ಸಿಕ್ಕಾರ. ಎಲ್ಲರೂ ಛಲೋ ಹಾಡ್ತಾರ. ತಮ್ಮ ಗುರುವಿನ ಹೆಸರು ಉಳಿಸ್ಯಾರ" ಅಂತಾ. ಆದರೆ ರಾಜಗುರುಗಳು ಈ ವಿಷಯದಲ್ಲಿ ಹೀಗೆ ಹೇಳುತ್ತಾ ಇದ್ದರು. "ಒಬ್ಬ ಶಿಷ್ಯನಿಗೆ ಉತ್ತಮ ಗುರು ದೊರಕಲು ಪುಣ್ಯ ಮಾಡಿರಬೇಕು ಎನ್ನುವುದು ಖರೆ, ಹಾಗೆಯೇ ಒಬ್ಬ ಗುರುವಿಗೆ ಉತ್ತಮ ಶಿಷ್ಯರು ದೊರಕುವುದು ಸಹ ಅವನ ಸುದೈವ" ಎಂದು. ಅಷ್ಟೊಂದು ಪ್ರೀತಿ, ಅಭಿಮಾನ ಶಿಷ್ಯರ ಮೇಲೆ ಅವರಿಗೆ. ತಮ್ಮ ಸಂಗೀತ ಪರಂಪರೆಯನ್ನು ಬೆಳೆಸುವ ಪ್ರಬಲ ಇಚ್ಛೆ ಇದ್ದುದರಿಂದಲೇ ಅವರ ಶಿಷ್ಯ ಪರಂಪರೆ ಹೆಚ್ಚಾಗಿದೆ ಎಂದು ಹೇಳಬಹುದು.

ಪಂ. ಸೋಮನಾಥ ಮರಡೂರ - ರಾಜಗುರುಗಳ ಹಿರಿಯ ಶಿಷ್ಯರಾದ ಇವರು ಹೆಸರಾಂತ ಕಲಾವಿದರು. ದೇಶದಾದ್ಯಂತ ಅನೇಕ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಇವರು, "ಎ" ಶ್ರೇಣಿಯ ಆಕಾಶವಾಣಿ ಕಲಾವಿದರು. ಇವರ ಪುತ್ರ ಕುಮಾರ ಮರಡೂರ ಹಾಗೂ ಪುತ್ರಿಯರಾದ ವೀಣಾ, ವಾಣಿ ಮರಡೂರ ಇವರುಗಳು ಪ್ರತಿಭಾನ್ವಿತ ಕಲಾವಿದರಾಗಿ ರೂಪುಗೊಂಡಿದ್ದಾರೆ. ಇವರು ಸಹ ತಮ್ಮ ಗುರುಗಳಂತೆ ಗುರು-ಶಿಷ್ಯ ಪರಂಪರೆಯಲ್ಲಿ ವಿಶ್ವಾಸ ಹೊಂದಿದ್ದು ಅದನ್ನು ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಕಾರ್ಯವನ್ನು ಮಾಡುತ್ತಿದ್ದಾರೆ.

ಪಂ. ಗಣಪತಿಭಟ್ ಹಾಸಣಗಿ - ಉತ್ತರ ಕನ್ನಡ ಜಿಲ್ಲೆಯ ಹಾಸಣಗಿಯವರಾದ ಇವರು ೨೫ ವರ್ಷಗಳಿಗಿಂತಲೂ ಹೆಚ್ಚಿನ ಕಾಲ ರಾಜಗುರುಗಳ ಬಳಿ ಸಾಧನೆಗೈದವರು. ತಮ್ಮ ಗುರುಗಳಂತೆ ಮಧುರ ಧ್ವನಿಯನ್ನು ಹೊಂದಿದ ಇವರು ದೇಶ-ವಿದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ತಮ್ಮ ಊರಿನಲ್ಲಿ ಪಂಡಿತ ರಾಜಗುರುಗಳ ಸ್ಮರಣೆಯಲ್ಲಿ ಒಂದು ಭವನವನ್ನು ನಿರ್ಮಿಸಿ ಅಲ್ಲಿ ಸಂಗೀತ ಶಾಲೆಯನ್ನು ಸ್ಥಾಪಿಸಿ ಸಂಗೀತ ಕಲಿಸುತ್ತಿದ್ದಾರೆ. ಅನೇಕ ಪ್ರಶಸ್ತಿಗಳು



ಇವರನ್ನು ಅರಸಿ ಬಂದಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದುಸ್ತಾನಿ ಸಂಗೀತವನ್ನು ಪ್ರಚಾರ ಪಡಿಸಿ ಅನೇಕ ಕಲಾವಿದರು ರೂಪುಗೊಳ್ಳುವಂತೆ ಮಾಡಿದ ಕೀರ್ತಿ ಇವರದು. ಇವರ ಅನೇಕ ಶಿಷ್ಯಂದಿರು ಉತ್ತಮ ಕಲಾವಿದರಾಗಿ ಹೆಸರು ಮಾಡಿದ್ದಾರೆ.

ಪಂ. ಪರಮೇಶ್ವರ ಹೆಗಡೆ - ಪಂಡಿತ ಪರಮೇಶ್ವರ ಹೆಗಡೆ ರಾಜಗುರುಗಳ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಒಬ್ಬರು. ಹಲವಾರು ವರ್ಷಗಳ ಕಾಲ ಗುರುಗಳ ಬಳಿ ಸಂಗೀತಾಭ್ಯಾಸ ಮಾಡಿದವರು. ದೇಶ-ವಿದೇಶಗಳಲ್ಲಿ ಹೆಸರು ವಾಸಿಯಾಗಿರುವ ಇವರು ಬೆಂಗಳೂರಿನಲ್ಲಿ ರಾಜಗುರು ಸ್ಮೃತಿ ಎಂಬ ಸಂಸ್ಥೆಯನ್ನು ಆರಂಭಿಸಿ ಪ್ರತಿವರ್ಷ ತಮ್ಮ ಗುರುಗಳ ಸ್ಮರಣೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಂಗೀತ ಸಮ್ಮೇಳನಗಳನ್ನು ಆಯೋಜಿಸುತ್ತಾರೆ. ಅನೇಕ ಶಿಷ್ಯಂದಿರನ್ನು ತಯಾರು ಮಾಡಿದ್ದಾರೆ. ಹಲವಾರು ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಶಾಸ್ತ್ರೀಯ ಸಂಗೀತದ ಪ್ರಚಾರಕ್ಕಾಗಿ ಅನೇಕ ಪ್ರಯೋಗಗಳನ್ನು ಮಾಡಿ ಧ್ವನಿಮುದ್ರಿಕೆಗಳನ್ನು ಹೊರತಂದಿದ್ದಾರೆ.

ಡಾ. ಹನುಮಣ್ಣ ನಾಯಕ ದೊರೆ - ರಾಜಗುರುಗಳ ಪ್ರೀತಿಯ ಶಿಷ್ಯ ಹಾಗೂ ಕಲಾವಿದ ಹನುಮಣ್ಣ ನಾಯಕ ದೊರೆ ಸಂಗೀತ ವಿಷಯದಲ್ಲಿ ಎಂ.ಎ. ಪಿಎಚ್.ಡಿ. ಮಾಡಿದವರು. ತಮ್ಮ ಗುರುಗಳ ಬಗ್ಗೆ ಅಪಾರವಾದ ಅಭಿಮಾನ, ಭಕ್ತಿ ಹೊಂದಿದವರು. ಗುರು ಶಿಷ್ಯರ ನಡುವಿನ ಅವಿನಾಭಾವ ಸಂಬಂಧಕ್ಕೆ ಉತ್ತಮ ನಿದರ್ಶನವೆಂದರೆ ಡಾ. ಹನುಮಣ್ಣನಾಯಕ ದೊರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ದೇಶದಾದ್ಯಂತ ಕಾರ್ಯಕ್ರಮಗಳನ್ನು ನೀಡಿರುವ ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಮೈಸೂರಿನಲ್ಲಿ ಸ್ಥಾಪಿತವಾದ ಸಂಗೀತ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿ ನೇಮಕಗೊಂಡಿರುವುದು ಕಲಾವಿದರೆಲ್ಲರಿಗೂ ಹೆಮ್ಮೆ ತರುವ ಸಂಗತಿಯಾಗಿದೆ. ಉತ್ತಮ ಕಲಾವಿದ, ದಕ್ಷ ಆಡಳಿತಗಾರ, ಲೇಖಕ, ವಾಗ್ಮಿ ಹೀಗೆ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಇವರು ತುಂಬಾ ಸರಳ ಸ್ನೇಹಶೀಲ ವ್ಯಕ್ತಿ ಎಂದು ಹೆಸರು ಮಾಡಿದ್ದಾರೆ. ಇವರು ಬರೆದ ಅನೇಕ ಪುಸ್ತಕಗಳು ಮುದ್ರಣಗೊಂಡಿವೆ. ಇತ್ತೀಚೆಗೆ ಜರ್ಮನಿ ದೇಶಕ್ಕೆ ಆಮಂತ್ರಿತರಾಗಿ ಹೋಗಿ ಭಾರತೀಯ ಸಂಗೀತದ ಬಗ್ಗೆ ಉಪನ್ಯಾಸ ನೀಡಿ ಬಂದಿದ್ದಾರೆ.

ಪಂ. ಶಿವಾನಂದ ಪಾಟೀಲ - ಮುಂಬೈನಲ್ಲಿ ನೆಲೆಸಿರುವ ಪಂಡಿತ ಶಿವಾನಂದ ಪಾಟೀಲ್ ಒಬ್ಬ ಗಾಯಕ ಹಾಗೂ ನಟ. ರಾಜಗುರುಗಳ ಬಳಿ ಸಂಗೀತಾಭ್ಯಾಸ ಮಾಡಿದ ಇವರು ಸಂಗೀತ ನಿರ್ದೇಶಕರು ಕೂಡಾ ಹೌದು. ಮರಾಠಿ ನಾಟ್ಯಗೀತೆ, ರಂಗಗೀತೆಗಳನ್ನು ಹಾಡುವುದರಲ್ಲಿ ತುಂಬಾ ಪ್ರಸಿದ್ಧಿ ಪಡೆದಿದ್ದಾರೆ. ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಮುಂಬೈ, ಪುಣೆಗಳಲ್ಲಿ ಪಂಡಿತ ರಾಜಗುರುಗಳ ಸ್ಮರಣಾರ್ಥ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಇವರ ಪತ್ನಿ ಶ್ರೀಮತಿ ಯೋಜನಾ ಶಿವಾನಂದ ಕೂಡ ಉತ್ತಮ ಗಾಯಕಿ ಹಾಗೂ ನಟಿಯಾಗಿದ್ದಾರೆ. ಇವರ ಗಾಯನದ ಅನೇಕ ಧ್ವನಿಮುದ್ರಿಕೆಗಳು ಹೊರಬಂದಿವೆ. ನಾಟಕ, ಚಲನಚಿತ್ರಗಳಲ್ಲಿ



ಹಾಡಿರುತ್ತಾರೆ. ಹೊರನಾಡಿನಲ್ಲಿ ಕನ್ನಡದ ಕಂಪು ಬೀರಿದ್ದಾರೆ. ಕಳೆದ ವರ್ಷ ಈಗಾಯಕ ನಮ್ಮನ್ನಗಲಿ ಹೋಗಿರುವದು ದುಃಖದ ಸಂಗತಿಯಾಗಿದೆ.

ಶ್ರೀಮತಿ ಸಂಗೀತಾ ಕಟ್ಟಿ - ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಹಿನ್ನೆಲೆ ಗಾಯನಗಳಲ್ಲಿ ಹೆಸರು ಮಾಡಿರುವ ಗಾಯಕಿ ಸಂಗೀತಾ ಕಟ್ಟಿ ಹತ್ತು ಹಲವು ವರ್ಷಗಳ ಕಾಲ ರಾಜಗುರುಗಳ ಬಳಿ ಸಂಗೀತಾಭ್ಯಾಸವನ್ನು ಮಾಡಿದವರು. ದೇಶ ವಿದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿದ್ದು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರು ಹಾಡಿರುವ ಸಾಕಷ್ಟು ಧ್ವನಿ ಸುರುಳಿಗಳು ಹೊರ ಬಂದಿವೆ. ಎಲ್ಲ ಬಗೆಯ ಸಂಗೀತವನ್ನು ಹಾಡುವುದರ ಮೂಲಕ ಜನಪ್ರಿಯರಾಗಿದ್ದಾರೆ.

ಡಾ. ಮುದ್ದು ಮೋಹನ - ಗಾಯಕರು ಹಾಗೂ ಕೆ.ಎ.ಎಸ್. ನ ಹಿರಿಯ ಅಧಿಕಾರಿಗಳೂ ಆಗಿರುವ ಮುದ್ದುಮೋಹನ ರಾಜಗುರುಗಳ ಆತ್ಮೀಯ ಶಿಷ್ಯರು. ಹಲವಾರು ವರ್ಷ ಸಂಗೀತ ಸಾಧನೆಗೈದ ಇವರು ದೇಶವಿದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗೌರವ ಸನ್ಮಾನಗಳಿಗೆ ಪಾತ್ರರಾಗಿದ್ದಾರೆ. ಸಂಗೀತ ವಿಷಯದಲ್ಲಿ ಡಾಕ್ಟರೇಟ ಪಡೆದಿದ್ದಾರೆ. ದಕ್ಷ ಅಧಿಕಾರಿಯಾದ ಇವರು ಬಿಡುವಿಲ್ಲದ ಕೆಲಸದಲ್ಲೂ ಕೂಡಾ ಸಂಗೀತದ ಸಾಧನೆ ಮಾಡಿ ಕಲಾವಿದರಾಗಿರುವದು ಉಲ್ಲೇಖನೀಯವಾದ ಸಂಗತಿ.

ಪಂ. ಮಹೇಶ ಕುಮಾರ - ಗೋವಾ ಕಲಾ ಅಕಾಡೆಮಿಯ ನಿರ್ದೇಶಕರಾಗಿರುವ ಮಹೇಶಕುಮಾರ ಚಿಂಚಖಂಡಿಮಠ ಸಹ ರಾಜಗುರುಗಳ ಬಳಿ ೨೦ ವರ್ಷಗಳಿಗಿಂತ ಹೆಚ್ಚಿನ ಕಾಲ ಸಂಗೀತಾಭ್ಯಾಸ ಮಾಡಿರುವರು. ಹಲವಾರು ವರ್ಷಗಳಿಂದ ಗೋವಾದ ಪಣಜಿಯಲ್ಲಿ ನೆಲೆಸಿರುವ ಮಹೇಶಕುಮಾರ ಹೆಸರಾಂತ ಕಲಾವಿದರಾಗಿದ್ದಾರೆ. ಗೋವಾದಲ್ಲಿ ರಾಜಗುರುಗಳ ಸ್ಮರಣೆಯ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣವನ್ನು ನೀಡಿದ್ದಾರೆ.

ಪಂ. ಶ್ರೀಪಾದ ಹೆಗಡೆ - ಉತ್ತರ ಕನ್ನಡ ಕಂಪ್ಲಿಯವರಾದ ಶ್ರೀಪಾದ ಹೆಗಡೆ ೧೦ ವರ್ಷಗಳಿಗಿಂತ ಹೆಚ್ಚಿನ ಕಾಲ ರಾಜಗುರುಗಳಲ್ಲಿ ಸಂಗೀತಾಭ್ಯಾಸ ಮಾಡಿದವರು. ಗುರುಗಳೊಂದಿಗೆ ದೇಶದಾದ್ಯಂತ ಸಂಚರಿಸಿದ್ದಾರೆ. ಆಕಾಶವಾಣಿ ಧಾರವಾಡದ ನಿಲಯದ ಕಲಾವಿದರಾಗಿದ್ದಾರೆ. ಉತ್ತಮ ಗಾಯಕರಾಗಿರುವ ಇವರು ಹಲವಾರು ವಿದ್ಯಾರ್ಥಿಗಳಿಗೆ ಸಂಗೀತ ತರಬೇತಿ ನೀಡುತ್ತಿದ್ದಾರೆ.

ಡಾ. ಶಾಂತರಾಮ ಹೆಗಡೆ - ಸಂಗೀತ ವಿಷಯದಲ್ಲಿ ಎಂ.ಎ. ಪಿಎಚ್.ಡಿ. ಮಾಡಿದ ಇವರು ರಾಜಗುರುಗಳ ಶಿಷ್ಯರು. ತಮ್ಮ ಗುರುಗಳ ಸಂಗಡ ನೂರಾರು ಕಾರ್ಯಕ್ರಮಗಳಿಗೆ ಸಾಥ್ ನೀಡಿದ್ದಾರೆ. ಕರ್ನಾಟಕ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕರಾಗಿದ್ದಾರೆ.



ಪ್ರೊ. ಸಿದ್ಧರಾಮಯ್ಯ ಮಠಪತಿ, ಗೋರಟಾ - ಇವರು ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬಾಗಲಕೋಟೆಯ ಬಿ..ವ್ಹಿ.ವ್ಹಿ. ಸಂಘದ ಬಸವೇಶ್ವರ ಕಲಾಮಹಾವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಹಲವಾರು ಶಿಷ್ಯರನ್ನು ತಯಾರಿಸಿದ್ದಾರೆ.

ಕುಮಾರ ವಿಶ್ವರಾಜ (ಪಂ. ರಾಜಗುರುಗಳ ಮೊಮ್ಮಗ) - ಹಿಂದುಸ್ತಾನಿ ಸಂಗೀತದ ಬಾಲ ಪ್ರತಿಭೆ. ರಾಜಗುರು ಸಂಗೀತ ಪರಂಪರೆಯ ಕುಡಿ. ಈಗಾಗಲೇ ಅನೇಕ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿ ಅಜ್ಜನ ಕೀರ್ತಿ ಪತಾಕೆಯನ್ನು ತಾನೂ ಎತ್ತಿ ಹಿಡಿಯುತ್ತೇನೆ ಎಂದು ತೋರಿಸಿಕೊಟ್ಟಿದ್ದಾನೆ.

ಪಂ. ಬಸವರಾಜ ರಾಜಗುರು ಅವರ ಶಿಷ್ಯವರ್ಗವನ್ನು ಹೀಗೆ ಪಟ್ಟಿಮಾಡಬಹುದು :

ಶ್ರೀ ರಘುನಾಥ ಪೋದ್ದಾರ - ಬಡೋದಾ
ಶ್ರೀ ಸಂಗಮೇಶ್ವರ ಸ್ವಾಮಿ ಹಿರೇಮಠ - ಜಮಖಂಡಿ
ಪಂ. ಸೋಮನಾಥ ಮರಡೂರ - ಧಾರವಾಡ
ಪಂ. ಗಣಪತಿಭಟ್ಟ - ಹಾಸಣಗಿ
ಪಂ. ಪರಮೇಶ್ವರ ಹೆಗಡೆ - ಬೆಂಗಳೂರು
ಶ್ರೀ ಎಸ್.ಎಫ್. ಗೊಜನೂರ - ಧಾರವಾಡ
ದಿ. ಹನುಮಂತಸಿಂಗ್ ಹಾನಗಲ್ - ಗದಗ
ಶ್ರೀ ಮಹೇಶಕುಮಾರ - ಗೋವಾ
ಶ್ರೀ ಎಚ್.ಎಂ. ವೀರಭದ್ರ - ಮುಂಬೈ
ಡಾ. ಹನುಮಣ್ಣನಾಯಕ ದೊರೆ - ಮೈಸೂರು
ಶ್ರೀಮತಿ ಸಂಗೀತಾ ಕಟ್ಟಿ - ಬೆಂಗಳೂರು
ಪಂ. ಶಿವಾನಂದ ಪಾಟೀಲ - ಮುಂಬೈ
ಶ್ರೀಪಾದ ಹೆಗಡೆ - ಧಾರವಾಡ
ಶ್ರೀ ನಚಿಕೇತ ಶರ್ಮ - ಅಮೇರಿಕಾ
ಶ್ರೀ ಎಂ.ಎಸ್. ಕಾಮತ್ - ಬೆಂಗಳೂರು
ಶ್ರೀಮತಿ ಪೂರ್ಣಿಮಾ (ಭಟ್) - ಬೆಂಗಳೂರು
ಶ್ರೀ ಎಚ್.ಕೆ. ನಾಗರಾಜ - ಕಿತ್ತೂರ
ಶ್ರೀ ದತ್ತಾತ್ರೇಯ ಜೋಶಿ - ಬೆಳಗಾಂ



ಡಾ. ಶಾಂತರಾಮ ಹೆಗಡೆ - ಧಾರವಾಡ
ಶ್ರೀಮತಿ ರೋಹಿಣಿ ದೇಶಪಾಂಡೆ - ಶಿಗ್ಗಾಂವ
ಡಾ. ಮುದ್ದುಮೋಹನ - ಬೆಂಗಳೂರು
ಶ್ರೀ ಎಸ್.ವಿ. ಮಠಪತಿ - ಬೆಂಗಳೂರು
ಪ್ರೊ. ಸಿದ್ಧರಾಮಯ್ಯ ಮಠಪತಿ ಗೋರಟಾ - ಬಾಗಲಕೋಟ
ಶ್ರೀ ರವೀಂದ್ರ ಹಿರೇಮಠ - ಧಾರವಾಡ
ಶ್ರೀಮತಿ ಯಶೋಧಾ ಭಂಡಿವಾಡ - ಹೈದರಾಬಾದ
ಶ್ರೀ ಮಾಧವ ನಾಯಕ - ಪುತ್ತೂರ
ಶ್ರೀ ಸೋಮಶೇಖರ ಮರಡಿಮಠ - ಧಾರವಾಡ
ಶ್ರೀಮತಿ ಸರಿತಾ ಕಟ್ಟಿ - ಬೆಂಗಳೂರು
ಶ್ರೀಮತಿ ಮೀನಾಕ್ಷಿ ದೇಶಪಾಂಡೆ - ಬೆಂಗಳೂರು
ಡಾ. ಕೃಷ್ಣಮೂರ್ತಿ ಭಟ್ - ಹೊನ್ನಾವರ
ಡಾ. ಅಶೋಕ ಹುಗ್ಗಣ್ಣವರ - ಧಾರವಾಡ
ಡಾ. ನಾನಾಸಾಹೇಬ ದೇಶಪಾಂಡೆ - ಪುಣೆ
ಶ್ರೀಮತಿ ಮೀನಾಕ್ಷಿ ಹೆಬಳಿಕರ
ಶ್ರೀಮತಿ ಸಾಧನಾ ಪಂಡಿತ
ಶ್ರೀ ಕೂಡ್ಲೆಪ್ಪಾ - ಕೆಲೂರ
ಶ್ರೀ ರೇವಯ್ಯಾ ವಸ್ತ್ರದ - ಗುಲಬರ್ಗಾ
ಶ್ರೀ ಹಾಲಯ್ಯ ಸ್ವಾಮಿ - ಹೆಬ್ಬಳ್ಳಿ
ಶ್ರೀ ಪಕೀರೇಶ ಅಗಡಿ - ಗೊರಟಾ

ಖ್ಯಾತ ಗಾಯಕ ಮಾಧವಗುಡಿ "ನಾನು ಕೂಡಾ ಆರಂಭದಲ್ಲಿ ರಾಜಗುರುಗಳಲ್ಲಿ ಸಂಗೀತಾಭ್ಯಾಸ ಮಾಡಿದ್ದೇನೆ. ನನ್ನನ್ನು ಅವರೇ ಪಂಡಿತ ಭೀಮಸೇನ ಜೋಶಿಯವರ ಬಳಿ ಕಳಿಸಿದ್ದು" ಎಂದು ನೆನೆಯುತ್ತಾರೆ. ಪುಣೆಯಲ್ಲಿ ಗಾಯಕಿ ಮಾಣಿಕವರ್ಮಾ ಅವರು ರಾಜಗುರುಗಳಲ್ಲಿ ಅಭ್ಯಾಸ ಮಾಡಿದ್ದವರು. ಖ್ಯಾತ ಗಾಯಕ ಪಂಡಿತ ಪ್ರಭುದೇವ ಸರದಾರ ಕೂಡಾ "ನಾನು ರಾಜಗುರುಗಳ ಮಾರ್ಗದರ್ಶನ ಪಡೆದಿದ್ದೇನೆ. ನನ್ನ ಗಾಯನದಲ್ಲಿ ಅವರ ಪ್ರಭಾವ ಸಾಕಷ್ಟಿದೆ" ಎಂದು ಹೇಳುತ್ತಿದ್ದರು. ಕೊಳಲು ವಾದಕ ಪಂಡಿತ ವೆಂಕಟೇಶ ಗೋಡಖಿಂಡಿಯವರು 'ರಾಜಗುರುಗಳಿಂದ ನಾನು ಬಹಳಷ್ಟು ತಿಳಿದುಕೊಂಡಿದ್ದೇನೆ. ಅವರು ನನ್ನ ಗುರುಗಳು' ಎಂದು ಹೇಳುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಗೌರವ



ಪ್ರಾಧ್ಯಾಪಕರಾಗಿದ್ದಾಗ ರಾಜಗುರುಗಳಿಂದ ಅನೇಕರು ವಿದ್ಯೆಯನ್ನು ಪಡೆದಿದ್ದಾರೆ. ಹೊನ್ನಾವರದ ಡಾ. ಕೃಷ್ಣಮೂರ್ತಿ ಭಟ್, ಡಾ. ಅಶೋಕ ಹುಗ್ಗಣ್ಣವರ್ ಮುಂತಾದವರು ರಾಜಗುರುಗಳ ಶಿಷ್ಯರೆಂದು ಭಕ್ತಿಯಿಂದ ಹೇಳುತ್ತಾರೆ.

ಕೊನೆಯ ಪಯಣ

ದೇಶದ ತುಂಬೆಲ್ಲ ಹಲವಾರು ಬಾರಿ ಸುತ್ತಿ ಸಂಗೀತ ಕಾರ್ಯಕ್ರಮವನ್ನು ನೀಡಿದ ರಾಜಗುರುಗಳು ಪಾಕಿಸ್ತಾನ, ನೇಪಾಳಗಳಲ್ಲಿಯೂ ತಮ್ಮ ಸಂಗೀತ ಸುಧೆಯನ್ನು ಹರಿಸಿದ್ದರು. ಅನೇಕ ಬಾರಿ ಸರಕಾರದಿಂದ ಹಾಗೂ ಖಾಸಗಿ ಸಂಸ್ಥೆಗಳಿಂದ ಇಂಗ್ಲೆಂಡ್, ಅಮೆರಿಕಾಗಳಲ್ಲಿ ಕಾರ್ಯಕ್ರಮಗಳನ್ನು ನೀಡುವುದಕ್ಕಾಗಿ ಆಹ್ವಾನ ಬಂದಿದ್ದರೂ ಕೂಡ ಅಲ್ಲಿಗೆ ಹೋಗುವ ಮನಸ್ಸು ಮಾಡಿರಲಿಲ್ಲ. ನಮ್ಮ ಸಂಗೀತ ತಿಳಿದವರ ಎದುರಿಗೆ ಹಾಡಿ ಸೈ ಎನಿಸಿಕೊಳ್ಳಬೇಕು. ತಿಳಿಯದವರ ಎದುರಿಗೆ ಎಷ್ಟು ಹಾಡಿದರೂ ಅದಕ್ಕೆ ಮಹತ್ವವಿಲ್ಲ ಎನ್ನುವುದು ಅವರ ಅಭಿಮತವಾಗಿತ್ತು.

ಅವರ ಬಳಿ ನಚಿಕೇತ ಎಂಬ ಶಿಷ್ಯನು ಸಂಗೀತ ಪಾಠಕ್ಕಾಗಿ ಬರುತ್ತಿದ್ದನು. ಅವನ ಸಂಬಂಧಿಕರು ಅಮೇರಿಕಾದಲ್ಲಿ ಇದ್ದುದರಿಂದ ಅವನು ತನ್ನ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾಕ್ಕೆ ಹೋಗಿದ್ದನು. ಅವನ ತಂದೆ ತಾಯಿಗಳು ಕೂಡಾ ಆಗಾಗ ಅವನ ಸಂಗಡ ಬರುತ್ತಿದ್ದರು. ಅವರು ಅಮೇರಿಕಾದ ಬಗ್ಗೆ ಸಾಕಷ್ಟು ಹೇಳಿ ಹೊಗಳಿ "ಅಲ್ಲಿಯೂ ಕೂಡ ನಮ್ಮ ಜನ ತುಂಬಾ ಇದ್ದಾರೆ ನಮ್ಮ ಸಂಗೀತ ಕೇಳ್ತಾರೆ. ನೀವೂ ಅಲ್ಲಿಗೆ ಹೋದರಂತೂ ತುಂಬಾ ಜನ ನಿಮ್ಮ ಸಂಗೀತವನ್ನು ಮೆಚ್ಚಿಕೊಳ್ಳುತ್ತಾರೆ. ನೀವು ಒಮ್ಮೆಯಾದರೂ ಅಮೇರಿಕಾಕ್ಕೆ ಹೋಗಿಬರಬೇಕು" ಎಂದು ಅವರಿಗೆ ಹೇಳುತ್ತಿದ್ದರು. ಅಲ್ಲದೇ ಅಲ್ಲಿಗೆ ಹೋಗಲು ಬೇಕಾಗುವ ವೀಸಾದ ವ್ಯವಸ್ಥೆಯನ್ನು ನಮ್ಮ ಸಂಬಂಧಿಕರು ಮಾಡುತ್ತಾರೆ ಎಂದು ಹೇಳಿದ್ದರಿಂದ ರಾಜಗುರುಗಳು 'ಹಾಗಿದ್ದರೆ ಒಮ್ಮೆ ಅಲ್ಲಿಗೆ ಹೋಗಿ ಬರಬಹುದು' ಎಂದು ಅಮೇರಿಕಾಕ್ಕೆ ಹೋಗುವ ಮನಸ್ಸು ಮಾಡಿದರು.

ಜುಲೈ ೧೯೯೧ರಲ್ಲಿ ಪಾಸಪೋರ್ಟ ಹಾಗೂ ವೀಸಾ ಪಡೆಯಲು ಬೇಕಾದ ಕಾಗದಗಳು ಬಂದಿದ್ದವು. ಅಲ್ಲಿ ಸುಮಾರು ೨೦ ಕಾರ್ಯಕ್ರಮಗಳು ಕೂಡಾ ಫಿಕ್ಸ್ ಆಗಿದ್ದವು. ರಾಜಗುರುಗಳು, ಅಪ್ಪಾ ಅವರು ಹಾಗೂ ತಬಲಾವಾದಕ ಪಂ. ರಘುನಾಥ ನಾಕೋಡ ಈ ಮೂವರು ಅಮೇರಿಕಾಕ್ಕೆ ಹೋಗುವುದೆಂದು ನಿಶ್ಚಯವಾಗಿತ್ತು. ವೀಸಾ ಪಡೆಯಲಿಕ್ಕಾಗಿ ಮದ್ರಾಸ್‌ಗೆ ಹೋಗಬೇಕಾಗಿತ್ತು. ಅದಕ್ಕಾಗಿ ಧಾರವಾಡದಿಂದ ಅವರು ಅಪ್ಪಾ ಅವರು ಮತ್ತು ರಘುನಾಥ ನಾಕೋಡ ಸೇರಿ ಬೆಂಗಳೂರಿಗೆ ಹೊರಟರು. ನಾವೆಲ್ಲ ಧಾರವಾಡ ರೇಲ್ವೆ ನಿಲ್ದಾಣಕ್ಕೆ ಹೋಗಿ ಅವರನ್ನು ಬೀಳ್ಕೊಟ್ಟು ಬಂದೆವು. ಅನಿವಾರ್ಯ ಕಾರಣಗಳಿಂದಾಗಿ ನಮಗೆ ಅವರೊಂದಿಗೆ ಹೋಗಲು ಸಾಧ್ಯವಾಗಿರಲಿಲ್ಲ. ಮರುದಿನ ಮುಂಜಾನೆ ಅವರು ಬೆಂಗಳೂರನ್ನು ತಲುಪಿ ಅಂದೇ ರಾತ್ರಿ ಮದ್ರಾಸ್‌ಗೆ ಹೋಗಿ



ವೀಸಾ ಪಡೆದುಕೊಂಡು ಮತ್ತೆ ಅದೇ ದಿನ ರಾತ್ರಿ ಪ್ರಯಾಣ ಮಾಡಿ ಬೆಂಗಳೂರಿನ ರಾಮಕೃಷ್ಣ ಲಾಡ್ಜ್‌ಗೆ ಬಂದಿಳಿದಿದ್ದರು. ಅವರ ಕೋಣೆ ೨ನೇ ಮಹಡಿಯಲ್ಲಿತ್ತು. ದುರ್ದೈವವಶಾತ್ "ಲಿಫ್ಟ್" ಕೆಲಸ ಮಾಡುತ್ತಿರಲಿಲ್ಲ. ಇವರು ಹಾಗೆಯೇ ಮೇಲೆ ಹತ್ತಿ ಹೋದರು. ಸತತವಾದ ಪ್ರಯಾಣ ಮದ್ರಾಸನಲ್ಲಿ ತಾಸುಗಟ್ಟಲೆ ಬಿಸಿಲಲ್ಲಿ ನಿಂತು ವೀಸಾ ಪಡೆದುಕೊಂಡದ್ದು ಎಲ್ಲವು ಸೇರಿ ಅವರಿಗೆ ತುಂಬಾ ಸುಸ್ತಾಗಿತ್ತು. ಆದರೂ ತಮ್ಮ ಗಾಯನದ ಗುಂಗಿನಲ್ಲಿಯೇ ಇದ್ದರು. ಮರುದಿನ ನಚಿಕೇತನಿಗೆ, ಅಲ್ಲಿಯೇ ಇದ್ದ ಇನ್ನೋರ್ವ ಶಿಷ್ಯಳಿಗೆ ಸಂಗೀತ ಪಾಠವನ್ನು ಮಾಡಿದರು. ಅಂದು ಸಾಯಂಕಾಲ ತೀರ ಸುಸ್ತಾಗಿ ರಕ್ತದ ಒತ್ತಡ ಕಡಿಮೆಯಾಗಿ ಅಸ್ವಸ್ಥರಾದ ಅವರನ್ನು ಅವ್ವಾ ಅವರು ನಚಿಕೇತನ ಸಹಾಯದಿಂದ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅವರನ್ನು ತಪಾಸಣೆ ಮಾಡಿದ ವೈದ್ಯರು "ಇವರಿಗೆ ರಕ್ತದ ಒತ್ತಡ ತುಂಬಾ ಕಡಿಮೆಯಾಗಿದೆ, ರಕ್ತದ ಕೊರತೆಯು ಉಂಟಾಗಿದೆ. ಅವರಿಗೆ ರಕ್ತ ಹಾಕಬೇಕು, ನಿಮ್ಮ ಮಕ್ಕಳನ್ನು ಕರೆಸಿ" ಎಂದು ಹೇಳಿದಾಗ ಅವ್ವಾ ಅವರು ಗಾಬರಿಯಿಂದ ಧಾರವಾಡದಲ್ಲಿದ್ದ ಮುದ್ದು ಮೋಹನ್ ಅವರ ಮನೆಗೆ ಫೋನ ಮಾಡಿ ವಿಷಯ ತಿಳಿಸಿದರು. ನಾನು ಮರುದಿನ ಬೆಳಿಗ್ಗೆ ಹೊರಟು ಸಾಯಂಕಾಲ ಬೆಂಗಳೂರನ್ನು ತಲುಪಿದೆನು. ನೇರವಾಗಿ ಆಸ್ಪತ್ರೆಗೆ ಹೋದೆ. ಅಲ್ಲಿ ತುರ್ತು ಚಿಕಿತ್ಸೆಯ ವಿಭಾಗದ ಮುಂದೆ ಅವ್ವಾ ಅವರು ಕುಳಿತಿದ್ದರು. ನನ್ನನ್ನು ಕರೆದುಕೊಂಡು ಒಳಗೆ ಹೋದರು. ಅಲ್ಲಿ ಅಪ್ಪಾ ಅವರು ನಿಸ್ತೇಜವಾಗಿ ಮಲಗಿಕೊಂಡಿದ್ದರು. ಕೈಗಳಿಗೆಲ್ಲಾ ಕಟ್ಟು ಹಾಕಿ ಗ್ಲೂಕೋಸ್ ಕೊಡುತ್ತಿದ್ದರು. ಮೂಗಿನಲ್ಲಿ ಕೊಳವೆ ಹಾಕಿ ಉಸಿರಾಟದ ವ್ಯವಸ್ಥೆಯನ್ನು ಮಾಡಿದ್ದರು. ಅವರನ್ನು ಆ ಸ್ಥಿತಿಯಲ್ಲಿ ಕಂಡ ನನಗೆ ತುಂಬಾ ಕಳವಳವಾಯಿತು. ಆದರೆ ನನ್ನನ್ನು ನೋಡಿದ ಕೂಡಲೇ ಅವರು ತುಸು ಗೆಲುವಾಗಿ ಮಾತನಾಡತೊಡಗಿದರು. ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತುಕೊಂಡಿದ್ದೆ. ರಾತ್ರಿ ನಚಿಕೇತ ಬಂದ ನಂತರ ನೀನು ಊಟ ಮಾಡಿಕೊಡು ಬಾ ಎಂದು ಅವರೆ ನನ್ನನ್ನು ಕಳಿಸಿದರು. ನಾನು, ಅವ್ವಾ ಅವರು ರಾಮಕೃಷ್ಣ ಲಾಡ್ಜ್‌ಗೆ ಬಂದೆವು. ರಾತ್ರಿ ೧೧.೩೦ ಆಗಿರಬಹುದು, ಆಸ್ಪತ್ರೆಯಿಂದ ಫೋನ ಬಂದಿತು. "ತುಂಬಾ ಸಿರಿಯಸ್ಸ್ ಆಗಿದೆ, ಬೇಗ ಬನ್ನಿರಿ" ಎಂದು. ನಾವು ಗಡಬಡಿಸಿ ಆಸ್ಪತ್ರೆಗೆ ಹೋದೆವು. ಅಪ್ಪಾ ಅವರ ಸ್ಥಿತಿ ತುಂಬಾ ಬಿಗಡಾಯಿಸಿತ್ತು. ನಾವೆಲ್ಲ ದುಃಖ ತಡೆಯಲಾರದೆ ಅಳತೊಡಗಿದಾಗ ಅಲ್ಲಿನ ಡಾಕ್ಟರು ನನ್ನನ್ನು ಮಾತ್ರ ಅಲ್ಲಿ ಇರಲು ಬಿಟ್ಟು ಉಳಿದವರನ್ನು ಹೊರಗೆ ಕುಳಿತುಕೊಳ್ಳಲು ಹೇಳಿದರು.

ಎಷ್ಟೇ ಪ್ರಯತ್ನ ಮಾಡಿದರೂ ಅವರ ಬಿ.ಪಿ. ನಾರ್ಮಲ್‌ಗೆ ಬರಲಿಲ್ಲ. ೧೯೯೧ ಜುಲೈ ೨೧ ರಂದು ರಾತ್ರಿ ೧೨.೨೦ ರ ಸುಮಾರಿಗೆ ನಮ್ಮೆಲ್ಲರನ್ನು ಅನಾಥರನ್ನಾಗಿ ಮಾಡಿ ಹೊರಟು ಹೋದರು. ಒಂದು ಟ್ಯಾಕ್ಸಿಯನ್ನು ಮಾಡಿಕೊಂಡು ಮರುದಿನ ಮಧ್ಯಾಹ್ನ ದೇಹವನ್ನು ಧಾರವಾಡಕ್ಕೆ ತೆಗೆದುಕೊಂಡು ಬಂದೆವು. ಅಂತಿಮ ದರ್ಶನಕ್ಕಾಗಿ ಸುರಿಯುತ್ತಿದ್ದ ಮಳೆಯಲ್ಲಿಯೇ ಸಾವಿರಾರು ಜನ ಸೇರಿದ್ದರು. ಪಂ. ಮಲ್ಲಿಕಾರ್ಜುನ ಮನ್ಸೂರ, ಡಾ. ಗಂಗೂಬಾಯಿ ಹಾನಗಲ್ ಮುಂತಾದ ಕಲಾವಿದರ ದಂಡೇ ನೆರೆದಿತ್ತು.



ರಾಜಗುರುಗಳ ಅಭಿಮಾನಿ ಹಾಗೂ ತಬಲಾ ವಾದಕ ಶಾಂತಲಿಂಗ ಹೂಗಾರ ಧಾರವಾಡದ ಹೊಸಯಲ್ಲಾಪುರದ ಹಿರೇಮಠದಲ್ಲಿ ಇರುತ್ತಿದ್ದರು. ಅವರು ರಾಜಗುರುಗಳ ಅಂತ್ಯ ಸಂಸ್ಕಾರ ಹಿರೇಮಠದ ಆವರಣದಲ್ಲಿ ಆಗಬೇಕೆಂದು ಎಲ್ಲ ಹಿರಿಯರಿಗೂ ಹೇಳಿ ವ್ಯವಸ್ಥೆ ಮಾಡಿಸಿದ್ದರು. ಅಂದು ಸಾಯಂಕಾಲ ಸಕಲ ವಿಧಿ ವಿಧಾನಗಳೊಂದಿಗೆ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಯಿತು. ಮುಂದೆ ಕೆಲ ದಿನಗಳ ನಂತರ ಅಲ್ಲಿ ಒಂದು ಸಮಾಧಿಯನ್ನು ಕಟ್ಟಿಸಿದೆ. ರಾಜಗುರುಗಳ ಪುಣ್ಯ ದಿನದಂದು ಅಲ್ಲಿ ಎಲ್ಲ ಅಭಿಮಾನಿಗಳು, ಶಿಷ್ಯರು ಸೇರಿ ನಮನಗಳನ್ನು ಸಲ್ಲಿಸುತ್ತಾರೆ. ಸಂಜೆ ಮನೆಯಲ್ಲಿ ಸಂಗೀತ ಸಮಾರಾಧನೆ ನಡೆಯುತ್ತದೆ.

❒❒❒



ಪಂ. ಬಸವರಾಜ ರಾಜಗುರು ಅವರ ಜೀವನದ ಕೆಲವು ಮಹತ್ವದ ದಿನಗಳು, ಪ್ರಶಸ್ತಿ ಗೌರವಗಳು

೧೯೨೦, ೨೪ ಆಗಸ್ಟ್‌ನಲ್ಲಿ ಜನನ

೧೯೨೯ ವಾಮನರಾವ ಮಾಸ್ತರ ನಾಟಕ ಕಂಪನಿಗೆ ಸೇರ್ಪಡೆ

೧೯೩೦ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಆಶ್ರಮಕ್ಕೆ

೧೯೩೩ ಮೊದಲ ಮುಂಬೈ ಪ್ರವಾಸ, ಮೊದಲ ಎಚ್.ಎಂ.ವಿ. ಧ್ವನಿ ಮುದ್ರಣ

೧೯೩೬ ಹಂಪಿಯ ವಿಜಯನಗರ ಮಹೋತ್ಸವದಲ್ಲಿ ಕಾರ್ಯಕ್ರಮ

೧೯೩೮ ಮೊದಲ ಆಕಾಶವಾಣಿ ಕಾರ್ಯಕ್ರಮ ಮುಂಬೈದಿಂದ
ಗಾನಸುಧಾಕರ, ಗಾನಕೋಕಿಲೆ ಬಿರುದುಗಳು.

೧೯೪೦ ಗುರುವಿನ ಆಶೀರ್ವಾದ, ಮುಂಬೈಗೆ ಪ್ರಯಾಣ.

೧೯೪೩ ಪಾಕಿಸ್ತಾನಕ್ಕೆ ಪ್ರಯಾಣ ; ಬಂಗಾರದ ಕಡಗ ಪ್ರದಾನ.

೧೯೪೬ ಪಾಕಿಸ್ತಾನದಿಂದ ಕುಂದಗೋಳಕ್ಕೆ

೧೯೫೩ ದಿಲ್ಲಿಯಲ್ಲಿ ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ,
ಸೂರ್ ಕಾ ಬಾದಶಹಾ, ಪಂಡಿತ್ ಬಿರುದುಗಳು

೧೯೫೫ ಹುಕುಮೀ ಯಕ್ಕಾ, ಸಂಗೀತ ರತ್ನ, ಸಂಗೀತ ಸುಧಾಕರ ಪ್ರಶಸ್ತಿಗಳು

೧೯೭೧ ಗಾನಗಂಧರ್ವ ಬಿರುದು ಬೆಂಗಳೂರಿನಲ್ಲಿ.

೧೯೭೨ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಅಕಾಡೆಮಿ ಸದಸ್ಯರಾಗಿ ನೇಮಕ.

೧೯೭ ಭೋಪಾಲದಲ್ಲಿ ಸನ್ಮಾನ - ಸನ್ಮಾನ ಪತ್ರ ಸಮರ್ಪಣೆ
ಮುಂಬೈ - ಠಾಣೆಯಲ್ಲಿ ಸನ್ಮಾನ - ಸನ್ಮಾನ ಪತ್ರ ಸಮರ್ಪಣೆ

೧೯೭೫ ಕೇಂದ್ರ ಸರಕಾರದಿಂದ "ಪದ್ಮಶ್ರೀ" ಪ್ರಶಸ್ತಿ ಹಲವಾರು ಸನ್ಮಾನಗಳು
"ಸ್ವರಸಾಮ್ರಾಟ್" ಬಿರುದು.



೧೯೮೧ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 'ಅಭಿನವ ಗಂಧರ್ವ' ಬಿರುದು.

೧೯೮೨ ಷಷ್ಟ್ಯಬ್ಧಿಪೂರ್ತಿಯ ಅದ್ದೂರಿ ಸಮಾರಂಭ, ಬಿರುದು ಸಮರ್ಪಣೆ

೧೯೮೩ ಕೊಟ್ಟೂರು ಮಠದಿಂದ ಗೌರವ ಅಭಿನಂದನಾ ಗ್ರಂಥದ ಬಿಡುಗಡೆ

೧೯೮೯ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್

ರಾಜಗುರು ಸಂಗೀತ ಸಭಾದ ಸ್ಥಾಪನೆ, ೭೦ನೇ ವರ್ಷದ ಅಭಿನಂದನಾ ಸಮಾರಂಭ

೧೯೯೧ ಕೇಂದ್ರ ಸರಕಾರದಿಂದ 'ಪದ್ಮಭೂಷಣ' ಪ್ರಶಸ್ತಿ

೧೯೯೧ ಜುಲೈ ೨೧ ರಂದು ವಿಧಿವಶ

❑❑❑



ಲೇಖಕರ ಕಿರು ಪರಿಚಯ

ಉತ್ತಮ ಸಂಘಟಕ, ಲೇಖಕ, ಸಂಗೀತ ವಿಮರ್ಶಕ ಹೀಗೆ ಬಹುಮುಖ ವ್ಯಕ್ತಿತ್ವವುಳ್ಳ ನಿಜಗುಣ ರಾಜಗುರು ಖ್ಯಾತ ಸಂಗೀತ ದಿಗ್ಗಜ ಪಂ. ಬಸವರಾಜ ರಾಜಗುರುಗಳ ಪುತ್ರರು. ಬಾಲ್ಯದಿಂದಲೂ ಸಂಗೀತ ಸಾಹಿತ್ಯದ ಕಡೆಗೆ ಒಲವು ಹೊಂದಿದ ಇವರು ತಂದೆಯವರಿಂದ ಸಂಗೀತಾಭ್ಯಾಸ ಮಾಡಿದವರು. ತಂದೆಯ ನೂರಾರು ಕಾರ್ಯಕ್ರಮಗಳಿಗೆ ತಾನಪೂರಾ ಸಾಥ ನೀಡುತ್ತಾ ದೇಶದಾದ್ಯಂತ ಸಂಚರಿಸಿದ್ದಾರೆ. ೧೯೮೯ರಲ್ಲಿ ರಾಜಗುರು ಸಂಗೀತ ಸಭಾ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ಕಳೆದ ೨೪ ವರ್ಷಗಳಿಂದ ಧಾರವಾಡದಲ್ಲಿ ರಾಷ್ಟ್ರಮಟ್ಟದ ಸಂಗೀತ ಸಮ್ಮೇಳನಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ಹೆಸರಾಂತ ಯುವ ಕಲಾವಿದರಿಂದ ಹಿಡಿದು ಪಂ. ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್‌ರಂತಹ ದಿಗ್ಗಜರು ಕೂಡಾ ಇವರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇವರು ಆಯೋಜಿಸಿದ ಅಹೋರಾತ್ರಿ ಸಂಗೀತ ಸಮ್ಮೇಳನ, ವಚನ ಸಂಗೀತೋತ್ಸವ, ದಾಸ ಸಂಗೀತೋತ್ಸವ, ಗುರು-ಶಿಷ್ಯ ಪರಂಪರಾ ಸಂಗೀತೋತ್ಸವಗಳು ತುಂಬಾ ಜನಪ್ರಿಯಗೊಂಡಿವೆ. ಅನೇಕ ಖ್ಯಾತ ಕಲಾವಿದರೊಂದಿಗೆ ನಿಕಟ ಸಂಪರ್ಕ ಹೊಂದಿದ ಇವರು ಉತ್ತಮ ವಾಗ್ಮಿಗಳು. ಮುಂಬೈ, ಬೆಂಗಳೂರು, ಗೋವಾಗಳಲ್ಲಿ ಪ್ರತಿವರ್ಷ ಸಂಗೀತ ಸಮಾರೋಹ ನಡೆಸುತ್ತಾರೆ. ಹಲವು ವರ್ಷಗಳ ಕಾಲ ಗೋವಾದ ಕಾಲೇಜಿನಲ್ಲಿ ಕೆಲಸ ಮಾಡಿ ಈಗ ಧಾರವಾಡದಲ್ಲಿ ತಮ್ಮದೇ ಆದ ವ್ಯಾಪಾರೋದ್ಯೋಗವನ್ನು ಹೊಂದಿದ್ದಾರೆ. ಕನ್ನಡಪ್ರಭ ಪತ್ರಿಕೆಯಲ್ಲಿ ಸಾಂದರ್ಭಿಕ ವರದಿಗಾರರಾಗಿ ಕೂಡಾ ಕೆಲಸ ಮಾಡಿದ್ದಾರೆ. ಇವರು ಬರೆದ ಅನೇಕ ಲೇಖನಗಳು ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ರಾಜಗುರು ಸಂಗೀತ ಸಭಾದ ಸಂಸ್ಥಾಪಕ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಇವರು ಬೆಂಗಳೂರಿನ ಬಸವ ಸಮಿತಿಯ ಸಾಂಸ್ಕೃತಿಕ ವಿಭಾಗದ ಸದಸ್ಯ ಕೂಡಾ ಆಗಿದ್ದರು. ತಂದೆಯವರ ನೂರಾರು ಧ್ವನಿ ಸುರುಳಿಗಳ ಸಂಗ್ರಹ ಹೊಂದಿದ ಇವರು ಪ್ರತಿಷ್ಠಿತ ರಿಕಾರ್ಡಿಂಗ್ ಕಂಪನಿಯಾದ ಎಚ್.ಎಮ್.ವಿ. ಹಾಗೂ ಇತರ ಕಂಪನಿಗಳಿಂದ ಅನೇಕ ಸಿ.ಡಿ. ಹಾಗೂ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. "ರಾಜಗುರು ಸಂಗೀತ ಪರಂಪರೆ" ಎಂಬ ಗ್ರಂಥದ ರಚನೆಯಲ್ಲಿ ತೊಡಗಿರುವ ಇವರು ದೇಶ ವಿದೇಶಗಳಲ್ಲಿ ಭಾರತೀಯ ಸಂಗೀತ ಪರಂಪರೆಯ ಸಂಗೀತ ಸಮ್ಮೇಳನಗಳನ್ನು ಆಯೋಜಿಸುವ ಗುರಿಯನ್ನು ಹೊಂದಿದ್ದಾರೆ. ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ ಅಜೀವ ಸದಸ್ಯರಾಗಿ ಸರಕಾರದಿಂದ ನೇಮಕಗೊಂಡಿರುತ್ತಾರೆ. ಮೈಸೂರಿನ ಕೆಎಸ್‌ಜಿಎಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿದ್ದರು. ಇವರ ಪುತ್ರ ಕುಮಾರ ವಿಶ್ವರಾಜ ಹಿಂದುಸ್ತಾನಿ ಸಂಗೀತದ ಪ್ರತಿಭಾನ್ವಿತ ಬಾಲಕಲಾವಿದನಾಗಿದ್ದಾನೆ.

□□□



ರಾಜಗುರುಗಳ ಬಗ್ಗೆ ಗಣ್ಯರ ನುಡಿಗಳು

ಪಂಚಾಕ್ಷರಿ ಗವಾಯಿಗಳಿಗೆ ಬಸವರಾಜರ ಮೇಲೆ ವಿಶೇಷ ಅಕ್ಕರೆ. ತಾಯಿತಂದೆ ಗುರು ಎಲ್ಲಾ ತಾವೇ ಆಗಿ ವಿದ್ಯೆಯನ್ನು ಕಲಿಸಿ ಬೆಳೆಸಿದರು. ಇವನು ಪ್ರಸಿದ್ಧ ಗಾಯಕನಾಗುವನೆಂದು ಪದೇಪದೇ ನುಡಿಯುತ್ತಿದ್ದರು. ಆ ಮಹಾಶಿವಯೋಗಿಗಳ ವಾಣಿ ಸತ್ಯವಾಯಿತು.

- ಪೂಜ್ಯ ಡಾ. ಪುಟ್ಟರಾಜ ಗವಾಯಿಗಳು

ರಾಜಗುರುಗಳ ಸಂಗೀತವೆಂದರೆ ಗಂಗಾನದಿ ಪ್ರವಹಿಸಿದಂತೆ, ಅದರಲ್ಲಿ ಮಿಂದವರೆ ಪಾವನರು.

- ಪೂಜ್ಯ ಮಹಾಂತಪ್ಪಗಳು ಮುರುಘಾಮಠ

ಕೋಗಿಲೆಯ ಧ್ವನಿ ಅದೇಕೆ ಇಂಪಾಗಿದೆಯೆಂದರೆ ಅದು ರಾಜಗುರು ಅವರ ಕಂಠದಲ್ಲಿ ಹಾಯ್ದು ಬಂದಿದೆ, ಅವರ ಕಂಠ ಮಾಧುರ್ಯಕ್ಕೆ ಮಿತಿ ಎಂಬುದೆ ಇಲ್ಲ.

ಹೆಂಗಸರು ತಮ್ಮ ಸೌಂದರ್ಯವನ್ನು ಕಾಯ್ದುಕೊಳ್ಳುವಲ್ಲಿ ತಪ್ಪಬಹುದು ಆದರೆ ರಾಜಗುರು ತಮ್ಮ ಕಂಠಶ್ರೀಯನ್ನು ಕಾಯ್ದುಕೊಳ್ಳುವಲ್ಲಿ ತಪ್ಪಲಾರರು.

- ಡಾ. ಪಾಟೀಲ ಪುಟ್ಟಪ್ಪ

ರಾಜಗುರು ಎಂದರೆ ಹುಕಮೀ ಯಕ್ಕಾ ಇದ್ದಂತೆ.

- ಶ್ರೀ ಬಿ. ವ್ಹಿ. ಕೇಸ್ಕರ ಆಕಾಶವಾಣಿ ಮಂತ್ರಿ

ರಾಜಗುರು ಯಾನೇ ಸೂರ ಕಾ ಬಾದಶಾಹ

- ಬೇಗಮ್ ಅಖ್ತರ

ಬಸವರಾಜ ಒಬ್ಬ ಸರಳ, ಪ್ರಾಮಾಣಿಕ ಗಾಯಕ, ಅವನೊಂದಿಗೆ ಇದ್ದ ಸ್ನೇಹ ಹಾಗೂ ಆ ದಿನಗಳನ್ನು ಮರೆಯಲಾಗದು.

- ಭಾರತರತ್ನ ಪಂ. ಭೀಮಸೇನ ಜೋಶಿ



ಬಸವರಾಜರ ಬಗ್ಗೆ ಹೆಮ್ಮೆ ಅನಸತದ, ಅವರಂಗ ಆವಾಜ್ ಇರೋದ ಅಪರೂಪ ಸಾಕಷ್ಟು ಚೀಜ್ ಸಂಗ್ರಹ ಇತ್ತು, ಸಂಗೀತಕ್ಕೆ ಅಪಾರ ಕೊಡುಗೆಯಾಗಿದ್ದಲ್ಲದೆ ಬಹಳ ಮಂದಿ ಶಿಷ್ಯರನ್ನು ತಯಾರಮಾಡ್ಯಾರ.

-ಡಾ. ಗಂಗೂಬಾಯಿ ಹಾನಗಲ್

Basavaraj Rajguru was gifted with a golden voice soft as wax sweet as honey.

-Sadanand Kanvavalli

ರಾಜಗುರುಗಳು ರಸಿಕರಿಗೆ ಕಂಠಪೂರ್ತಿ ಉಣಬಡಿಸುವ ಗುರಿಯಿಂದ ಬೈಠಕಗೆ ಕೂಡ್ರುತ್ತಾರೆ. ಅವರ ಧ್ವನಿ ಮಾಧುರ್ಯಕ್ಕೆ ಇನ್ನೊಂದು ಹೋಲಿಕೆ ಇಲ್ಲ, ಅದು ಜೇನುತುಪ್ಪದಲ್ಲಿ ಅದ್ದಿದ ಜೀಲೇಬಿಯನ್ನು ಸವಿದಂತೆ.

-ಶ್ರೀ ಎಸ್. ಎ. ಕುಲಕರ್ಣಿ ಸಂಗೀತ ವಿಮರ್ಶಕ, ಮುಂಬೈ

ವಚನಗಳನ್ನು ರಾಜಗುರು ಅವರಿಂದಲೇ ಕೇಳಬೇಕು. ಬೇರೆ ಯಾರೇ ಹಾಡಿದರೂ ಅದು ರಾಜಗುರುಗಳು ಹಾಡಿದಂತೆ ಆಗುವುದಿಲ್ಲ.

-ಶ್ರೀ ಬಿ. ಡಿ. ಜತ್ತಿ, ಮಾಜಿ ಉಪರಾಷ್ಟ್ರಪತಿಗಳು

ರಾಜಗುರುಗಳು ಒಬ್ಬ ತಂದೆಯಾಗಿ, ತಾಯಿಯಾಗಿ, ಗುರುವಾಗಿ ಮತ್ತು ದೇವರಾಗಿ ನನ್ನ ಜೀವನವನ್ನು ರೂಪಿಸಿದವರು.

-ಡಾ. ಹನುಮಣ್ಣ ನಾಯಕ ದೊರೆ

ಕುಲಪತಿಗಳು, ಸಂಗೀತ ವಿಶ್ವವಿದ್ಯಾನಿಲಯ, ಮೈಸೂರು

ಒಬ್ಬ ಶ್ರೇಷ್ಠಗುರುವಾಗಿ ಜನಪ್ರಿಯ ಕಲಾವಿದರಾಗಿ ಅಸಂಖ್ಯ ಸಹೃದಯರ ನೆನಪಿನಂಗಳದಲ್ಲಿ ಸದಾ ಮಿನುಗುವ ನಕ್ಷತ್ರವಾಗಿ ಬಾಳಿ ಬದುಕಿದ ಮಹಾನುಭಾವರು ನನ್ನಂಥಹ ಅನೇಕರಿಗೆ ಪ್ರಾತಃ ಸ್ಮರಣೆಯರು ನನ್ನ ಗುರುಗಳು.

-ಪಂ. ಗಣಪತಿ ಭಟ್ ಹಾಸಣಗಿ

ಈ ಶತಮಾನದ ಮಹಾನ್ ಗಾಯಕರಲ್ಲಿ ಬಸವರಾಜ ರಾಜಗುರುಗಳ ಹೆಸರು ನೆಲೆನಿಂತು ಕನ್ನಡನಾಡಿಗೆ ಗೌರವ ತಂದಿದೆ.

-ಶ್ರೀ ಪಿ. ಬಿ. ದುತ್ತರಗಿ



ರಾಜಗುರುಗಳು ಇತರರಿಗಿಂತ ಭಿನ್ನವಾಗಿದ್ದಾರೆ. ಅವರಲ್ಲಿ ಯಾವುದೇ ಕಪಟವಿಲ್ಲ, ಆಡಂಬರವಿಲ್ಲ, ಜಂಬವಿಲ್ಲ, ಅವರ ಸ್ವಭಾವ ಮತ್ತು ಸಂಗೀತ ಗಂಗಾಜಲದಂತೆ ನಿರ್ಮಲ, ನಿಷ್ಕಲ್ಮಶ.

-ಶ್ರೀ ಗಜೇಂದ್ರ ನಾರಾಯಣಸಿಂಕ್ ಪಾಟ್ನಾ

ನಿನ್ನ ಸಂಗೀತಕ್ಕೆ ನಮ್ಮ ಮನಃಪೂರ್ವಕ ನಮಸ್ಕಾರ

-ಪೂಜ್ಯ ಶಂಭುಲಿಂಗ ಶ್ರೀಗಳು ಬಿಜಾಪುರದಲ್ಲಿ

ಸಂಗೀತ ಬಗ್ಗೆ ಏನೂ ತಿಳಿಯದ ಶ್ರೋತೃಗಳನ್ನು ತಮ್ಮ ಗಾಯನದಿಂದ ತಲೆದೂಗಿಸುವಂತೆ ಮಾಡಿ ಇನ್ನೂ ಕೇಳಬೇಕೆಂಬ ಆಶೆಯನ್ನು ಬೆಳೆಸುತ್ತಾರೆ.

-ಪೂಜ್ಯ ಸಂಗನಬಸವ ಮಹಾಸ್ವಾಮಿಗಳು, ಕೊಟ್ಟೂರು

ರಾಜಗುರುಗಳಂತಹ ಧ್ವನಿ ಇದ್ದ ಸಂಗೀತ ಕಲಾವಿದನನ್ನು ಇಡೀ ದೇಶದಲ್ಲೇ ನಾನು ಎಲ್ಲೂ ನೋಡಿಲ್ಲ. ತಬಲಾದವರ ಕಡೆ ನೋಡದೆ ನಿರ್ಭಯರಾಗಿ ಹಾಡುವವರು ಬೇರೆ ಯಾರೂ ಇರಲಿಲ್ಲ.

-ಪಂ. ಸೋಮನಾಥ ಮರಡೂರ

ನನ್ನ ಮಾವ ರಾಜಗುರುವಿನಂತಹ ಆವಾಜ್ ಇದ್ದ ಗಾಯಕ ಹಿಂದೆ ಹುಟ್ಟಿರಲಿಲ್ಲ. ಮುಂದು ಹುಟ್ಟುವುದು ಅನುಮಾನ.

-ಪಂ. ಪಂಚಾಕ್ಷರಿಸ್ವಾಮಿ ಮತ್ತೀಗಟ್ಟಿ

ರಾಜಗುರು ಅವರಿಂದ ವಚನ ಸಂಗೀತಕ್ಕೆ ಬಹು ದೊಡ್ಡ ಕೊಡುಗೆ ಸಂದಿದೆ.

-ಶ್ರೀ ಚಂದ್ರಕಾಂತ ಬೆಲ್ಲದ, ಶಾಸಕರು

ರಾಜಗುರು ಅವರು ನಿಜವಾದ ಸಂಗೀತರತ್ನ, ಅವರಿಗೆ ಭಾರತರತ್ನ ನೀಡಬೇಕು

-ಶ್ರೀ ಪ್ರಹ್ಲಾದ ಜೋಶಿ, ಸಂಸದರು

ರಾಜಗುರುಗಳು ಸಂಗೀತ ಲೋಕದ ರಂಗೀಲೆ ರಾಜಾ

-ಪಂ. ರಘುನಾಥ್ ನಾಕೋಡ



ರಾಜಗುರು ಶಾಪಗ್ರಸ್ತ ಗಂಧರ್ವರು, ಹಾಡುವದಕ್ಕಾಗಿಯೆ ಇಲ್ಲಿಗೆ ಬಂದವರು. ಹಾಡುತ್ತಾ ಹಾಡುತ್ತಾ ಒಂದು ವಿಚಿತ್ರವಾದ ಗಂಧರ್ವಲೋಕಕ್ಕೆ ಕೊಂಡೊಯ್ಯುತ್ತಿದ್ದರು.

-ಪಂ. ವಸಂತ ಕನಕಾಪುರ

ಕಾರ್ಯಕ್ರಮದಲ್ಲಿ ಹೆದರಿಕೆ ಎನಿಸಿದ್ದ ನನಗೆ ಗುರುಗಳ ಅಂತರಂಗದ ನಿಜವಾದ ದರ್ಶನವಾಯಿತು. ಮಹಾನ್ ಗುರುವಿಗೆ ಸಂಪೂರ್ಣ ಶರಣಾದೆ.

-ಪಂ. ಪರಮೇಶ್ವರ ಹೆಗಡೆ

ರಾಜಗುರುಗಳ ಹಾಡುಗಾರಿಕೆಯೆಂದರೆ ಓರ್ವ ಮಾಂತ್ರಿಕನ ಆಟವೋ ಅಥವಾ ಗಂಧರ್ವಗಾರುಡಿಗನ ನೋಟವೋ ಎನ್ನುವಂತೆ ಇರುತ್ತಿತ್ತು. ಒಂದು ರಾಗದಿಂದ ಮತ್ತೊಂದು ರಾಗಕ್ಕೆ ಸ್ವರ ಹಚ್ಚಲು ೧ ನಿಮಿಷವನ್ನೂ ಕಳೆಯದೆ ಸ್ವರ ಹಚ್ಚುವದು ಎಲ್ಲರನ್ನು ಆಶ್ಚರ್ಯಗೊಳಿಸುತ್ತಿತ್ತು.

- ಶ್ರೀ ಜಿ.ಜಿ. ಜೋಶಿ, ಮುಂಬೈ

ಡಾ. ಬಸವರಾಜ ರಾಜಗುರು ಅವರಿಗೆ ಸಂಗೀತದ ಆತ್ಮರಹಸ್ಯ ಪ್ರಾಪ್ತವಾಗಿತ್ತು. ಅವರ ಪ್ರಥಮ ಸ್ವರವೆ ಒಂದು ದೇವಸ್ಥಾನದ ಗರ್ಭಗುಡಿಯಿಂದ ಉತ್ಪನ್ನವಾದಂತೆ ಭಾಸವಾಗುತ್ತಿತ್ತು. ಅಲ್ಲಿ ಪಾವಿತ್ರ್ಯತೆಯನ್ನು ಪಡೆದುಕೊಂಡು ಬಂದಂತೆ ಕೇಳುತ್ತಿತ್ತು. ಅದನ್ನು ಕೇಳಿದ ಶ್ರೋತೃಗಳನ್ನು ಅಂತರಮುಖಿಯಾಗಿ ಮಾಡುತ್ತಿತ್ತು.

- ಡಾ. ಬಿಂದುಮಾಧವ ಪಾಠಕ, ಬೀನ್ ವಾದಕರು

ಕಂಠದಲ್ಲಿ ಜೇನು, ಧ್ವನಿ ಚಿನ್ನ, ಶಾಸ್ತ್ರದಲ್ಲಿ ಪಾಂಡಿತ್ಯ, ಕಲೆಯಲ್ಲಿ ಲಾಲಿತ್ಯ; ಇದುವೇ ರಾಜಗುರುಗಳ ವೈಶಿಷ್ಟ್ಯ.

ಸಮಾಜದಲ್ಲಿ ಕ್ರಾಂತಿಯನ್ನು ಮಾಡಿದ ಬಸವಣ್ಣ ವಿಶ್ವಮಾನವನಾದ ಸಂಗೀತದ ಕ್ರಾಂತಿ ಮಾಡಿದ ಬಸವರಾಜ ಸಂಗೀತ ಸಾಮ್ರಾಟನಾದ

- ಡಾ. ಬಡಿಗೇರ

ರಾಜಗುರು ಅವರ ಸಂಗೀತವು ಶಾಸ್ತ್ರ, ಕಲೆಗಳಿಂದ ಪರಿಪೂರ್ಣವಾಗಿರುವದಷ್ಟೇ ಅಲ್ಲ ಅವರ ಮೋಹಕ ಮಧುರ ಧ್ವನಿಯು ಹಾಲಿಗೆ ಜೇನು ಬೆರೆತಂತಿದೆ.

-ಎನ್ಕೆ



ರಾಜಗುರು ಅವರ ಧ್ವನಿ ಶೃತಿಗೆ ಒಂದಿಷ್ಟು ಹೆಚ್ಚು ಕಡಿಮೆಯಾಗದಂತೆ ಮೂರು ಸಪ್ತಕಗಳಲ್ಲಿ ಲೀಲಾಜಾಲವಾಗಿ ಸಂಚಾರ ಮಾಡಬಲ್ಲದು. ಅವರ ಅಶು ಚಮತ್ಕಾರಶಕ್ತಿ ಅದ್ಭುತವಾದದ್ದು.

ರಾಜಗುರು ಅವರ ಬಳಿಯಲ್ಲಿ ಒಂದು ತಂಬೂರಿ ಕಂಠದಲ್ಲಿ ಒಂದು ಸ್ವರ ಎರಡು ಸಾಕು ಬಾಳಿನ ಎಂತಹ ವಿಷವನ್ನು ಅಮೃತಮಯವಾಗಿ ಮಾಡಬಲ್ಲರು.

-ಶಂತರ್ಸ ವೀರ್ಲೆ

ಏನು ಮಾಧುರ್ಯ, ಎಂಥ ವಿದ್ವತ್ ಎಷ್ಟು ತಯಾರಿ ಇಂತಹ ಚಿಕ್ಕ ವಯಸ್ಸಿನಲ್ಲಿ ಎಂತಹ ಅದ್ಭುತ ಪ್ರತಿಭೆ ನಾ ನೆಲ್ಲಿಯೂ ಕಾಣೆ

1940ರಲ್ಲಿ **ಪಿಟೀಲು ಚೌಡಯ್ಯನವರು** ಯುವ ಗಾಯಕ ರಾಜಗುರು ಗಾಯನ ಕೇಳಿ ಪಂಚಾಕ್ಷರಿ ಗವಾಯಿಗಳು ಅಪ್ರತಿಮ ಗಾನರತ್ನವನ್ನು ತಯಾರು ಮಾಡಿದ್ದಾರೆ.

-ಗರುಡ ಸದಾಶಿವರಾಯರು

(1938ರಲ್ಲಿ ಗದುಗಿನಲ್ಲಿ ರಾಜಗುರು ಅವರ ಗಾಯನ ಕೇಳಿ)

ರಾಜಗುರು ಭಾರತದಲ್ಲಿ ಹೋಗದ ಸ್ಥಳ ಇಲ್ಲ. ಹಾಡದ ಚೀಜ್ ಇಲ್ಲ ಆ ಕಂಠದಲ್ಲಿ ಯಾವುದು ಹಾಯ್ದು ಬಂದರೂ ಅದು ಕರ್ಣ ಮಧುರವಾಗಿ ಬರುತ್ತದೆ.

ಡಾ. ಪಾಟೀಲ್ ಪುಟ್ಟಪ್ಪ

ಅವರ ಸಂಗೀತವನ್ನು ಜ್ಯೂಲಿಯಸ್ ಸೀಸರ್‌ನ ಶೌರ್ಯಕ್ಕೆ ಹೋಲಿಸಬಹುದು. ಸೀಜರ್‌ನಂತೆ ಅವರು ಬರುತ್ತಾರೆ. ನೋಡುತ್ತಾರೆ. ಮತ್ತು ಜಯಿಸುತ್ತಾರೆ. ಬೇರೆ ಯಾರೇ ಹಾಡಿದರೂ ರಾಜಗುರು ಹಾಡಿದಂತೆ ಆಗುವುದಿಲ್ಲ ಎನ್ನುವ ಅನುಭವವನ್ನು ಶ್ರೋತೃಗಳಿಗೆ ತಂದುಕೊಡುತ್ತಾರೆ.

ಅವರಲ್ಲಿ ಇರುವದು ಗಿಲೀಟಿನ ಹೊಳಪಲ್ಲ ಚೊಕ್ಕ ಚಿನ್ನದ ಬೆಳಕು. ಅವರಿಗೆ ಸಲ್ಲಿಸಿದ ಯಾವ ಮರ್ಯಾದೆಯೂ ಹೆಚ್ಚಿನದೆನಿಸುವುದಿಲ್ಲ, ಯಾಕೆಂದರೆ ಅವರು ಆ ಎಲ್ಲ ಮರ್ಯಾದೆಗಳಿಗಿಂತಲೂ ಮೇಲೆ ಇದ್ದಾರೆ.

-ಡಾ. ಪಾ.ಪು.

ರಾಜಗುರು ಎಂದರೆ ಸಂಗೀತದ ಮೂರ್ಲೆ ಮಾಡಿದರೆ ಹೇಗೆ ಇರುತ್ತದೆಯೋ ಹಾಗೆ ಇದ್ದಾರೆ. ಅವರ ಸಂಗೀತಕ್ಕೆ ಹೋಲಿಕೆ ಆಗಬಲ್ಲಂಥದು ಯಾವದೂ ಇಲ್ಲ. ಅವರ ಸಂಗೀತ ರಾಜಗುರು, ರಾಜಗುರು ಅವರ ಸಂಗೀತದಂತೆಯೇ ಇದೆಯೆಂದು ಹೇಳಬಹುದು.



ರಾಜಗುರು ಅವರು ಯಾರ ಶಿಫಾರಸ್ಸು ಇಲ್ಲದೆ ತಮ್ಮ ಸ್ವರತ್ರಾಣದಿಂದ ಬೆಳೆದು ದೊಡ್ಡವರಾಗಿದ್ದಾರೆ. ಅವರನ್ನು ಮೆಚ್ಚದವರೂ ಕೂಡಾ ಅವರ ಕಂಠಸಿರಿಗೆ ಸೋತು ಶರಣಾಗತರಾಗಿದ್ದಾರೆ.

ರಾಜಗುರುಗಳಂತಹ ಅಪೂರ್ವ ಸಿದ್ಧಿಯ ಸಂಗೀತಗಾರನು ಕರ್ನಾಟಕದವರೆನ್ನುವುದು ಕರ್ನಾಟಕದ ಪುಣ್ಯ ಮತ್ತು ವಿಶೇಷವೆಂದೇ ಹೇಳಬೇಕು. ಅವರು ನಮ್ಮವರು ನಮ್ಮ ಕರ್ನಾಟಕದವರೆನ್ನುವುದು ಕರ್ನಾಟಕದವರ ಹೆಮ್ಮೆಗೆ ಕೋಡುಮೂಡಿಸುವ ಸಂಗತಿಯಾಗಿದೆ.

ಡಾ. ಪಾ. ಪು. (ಇಂಚರದಿಂದ)

ಅಂದು ಸಮರ್ಥ ಗುರುವಿನ ಗುಲಾಮನಾಗಿದ್ದರಿಂದಲೆ ರಾಜಗುರು ಇಂದು ಸಂಗೀತ ಸಾಮ್ರಾಜ್ಯದ ಸಾಮ್ರಾಟನಾಗಿ ಮೆರೆಯುತ್ತಿದ್ದಾನೆ.

-ಸಿದ್ದನಕೊಳ್ಳದ ಅಜ್ಜನವರು

(ಪಂ. ರಾಜಗುರುಗಳ ಗುರುವಿನ ಗುಲಾಮನಾಗುವ ತನಕ ಎಂಬ ದಾಸರ ಹಾಡು ಕೇಳಿ ನುಡಿದ ಮಾತು)

ಆಡು ಮುಟ್ಟದ ಗಿಡವಿಲ್ಲ ರಾಜಗುರು ಅವರು ಹಾಡದ ಸಂಗೀತವಿಲ್ಲ

-ಮೂ.ಜ.ಗಂ.

ಪಂ. ಬಸವರಾಜ ರಾಜಗುರು ಅವರ ಇಂಪು ದನಿಯ ಗಾಯನವೆಂದರೆ ಅಮೃತ ವರ್ಷವಾದಂತೆ. ಗೌರವ ವರ್ಣದ, ಗುಂಗರು ಕೂದಲಿನ, ರಾಗಗಳ ಚೀಟುಗಳ ಅಪಾರ ಸಂಗ್ರಹವಿದ್ದ ಇಂತಹ ಸದ್ಗುಣಿ ಗಾಯಕರ ಸಹವಾಸ ದೊರೆತಿದ್ದು ನನ್ನ ಭಾಗ್ಯ. ಅನೇಕ ಅಪ್ರಚಲಿತ ರಾಗಗಳು ನನಗೆ ಅವರಿಂದಲೇ ದೊರೆತಿದ್ದು. ನನ್ನ ಜೀವನದಲ್ಲಿ ನನ್ನ ಕಾರ್ಯಕ್ರಮ ಯಶಸ್ವಿಯಾಗಲು ಆ ರಾಗಗಳೆಲ್ಲ ಕಾರಣವಾದವು.

-ಪಂ. ಅರವಿಂದ ಗಜೇಂದ್ರಗಡಕರ, ಖ್ಯಾತ ಕೊಳಲುವಾದಕ

ತಬಲಾ ನುಡಿಸುವವರಿಗೆ ತನ್ನ ಪ್ರತಿಭೆ ತೋರಲು ಅವಕಾಶ ನೀಡಿ ಲಯದೊಂದಿಗೆ ಆಟವಾಡುವಂತೆ ಹಾಡುವ, ಸ್ವರ-ಲಯಗಳ ಮೇಲೆ ಅದ್ಭುತ ಪ್ರಭುತ್ವವನ್ನು ಹೊಂದಿದ ಪಂ. ರಾಜಗುರುಗಳಂತಹ ಗಾಯಕರನ್ನು ನಾನು ಬೇರೆಲ್ಲೂ ನೋಡಿಲ್ಲ.

-ಉಸ್ತಾದ ನಿಜಾಮುಪುದ್ದಿನ ಖಾನ್

ಖ್ಯಾತ ತಬಲಾವಾದಕ ಮುಂಬೈದಲ್ಲಿ



ಹಿಂದುಸ್ತಾನಿ ಸಂಗೀತಕ್ಕೆ ಕನ್ನಡದ ಛಾಪನ್ನು ಮೂಡಿಸಿದವರಲ್ಲಿ ಪಂ. ಬಸವರಾಜ ರಾಜಗುರು ಅವರು ಅಗ್ರಗಣ್ಯರು. ಅವರದು ಹಾಡುವ ಮತ್ತು ಕಲಿಸುವ ಪರಂಪರೆ. ಶಿಷ್ಯರಿಗೆ ಸಂಗೀತ ಬರುವವರೆಗೂ ಪಟ್ಟುಬಿಡದೆ ಕಲಿಸಿ ರಾಜಗುರು ಪರಂಪರೆಯನ್ನೇ ತಯಾರು ಮಾಡಿದ್ದಾರೆ.

ಡಾ. ರಾಜೀವ ತಾರಾನಾಥ, ಸರೋದವಾದಕ

ಇವನು ಸಾಮಾನ್ಯ ಆಸಾಮಿಯಲ್ಲ, ಸಂಗೀತದಲ್ಲಿ ದೊಡ್ಡ ಹೆಸರು ಮಾಡತಾನ ನನ್ನ ಹೆಸರು ಉಳಿಸತಾನ

-ಗಾನಯೋಗಿ ಪಂಚಾಕ್ಷರಿ ಗವಾಯಿಗಳು

[ರಾಜಗುರು ಇನ್ನೂ 14 ವರ್ಷದ ಬಾಲಕರಿದ್ದಾಗಲೇ ಹೇಳಿದ ಮಾತು]

ಎಂತಹ ಅದ್ಭುತ ಕಂಠ! ಕುಳಿತ ತಕ್ಷಣ ಹತ್ತುತ್ತದೆ. ಎಲ್ಲಿಯೂ ಕೊಸರಿಲ್ಲ ಸಂಗೀತ ಕ್ಷೇತ್ರದಲ್ಲಿ ಇಂತಹ ಗಾಯಕರು ಸಿಗುವುದೇ ಅಪರೂಪ. ಪಂ. ರಾಜಗುರು ಅವರ ಹೆಸರನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು.

-ಪಂ. ವಿ. ಜಿ. ಜೋಗ

(ಆಸಾಮಿನ ಗವಾಹತಿಯಲ್ಲಿ)

2ದಿನ ಪ್ರಯಾಣ ಮಾಡಿ ಬಂದು ವಿಶ್ರಾಂತಿ ಪಡೆಯದೆ ನೇರವಾಗಿ ವೇದಿಕೆಯನ್ನೇರಿ ಹಾಡಿದ ರಾಜಗುರುಗಳ ಅಮೋಘ ಗಾಯನ ಕೇಳಿ ನುಡಿದಮಾತು

'ದುಮ ದುಮಲಿ ಪಂಡರಿ' ಭಜನೆಯನ್ನು ಹಾಡಿ ಸಾಕ್ಷಾತ್ ಪಂಡರಾಪುರ ವಿಠ್ಠಲನನ್ನೇ ಕಣ್ಣೆದುರಿಗೆ ತಂದು ನಿಲ್ಲಿಸಿದ ರಾಜಗುರುಗಳು ಗಂಧರ್ವರೇ ಹೌದು.

ಪಂ. ವಿ. ಜಿ. ಜೋಗ

ಗವಾಹತಿಯಲ್ಲಿ

Pt. Rajgur was the uncrowned king of melody. His grasp, fertile, imagination & intelligence in fusing the best of the Kirana, Gwaliore & Patiyala Gharanas made his music quite unique.

P. G. Burde, The Independant moment

There have been Gurus, there are Gurus & there will be Gurus



till eternity, but there was only one Raj-Guru. Pt. Basawaraj Rajguru in Karnataka who was realy a king of Gurus.

Subbudu (Economics Times, Mumbai)

[Pt. Basavaraj Rajguru was a great vocalist but his protean artistic genius was not restricted to the realm of music alone, says 'Sabbudu' in this tribute to the versatile man of many arts.]

ಪಂ. ಬಸವರಾಜ ರಾಜಗುರು ಅವರ ಗಾಯನದಲ್ಲಿ ಘುಸೀಟ್, ಖಟಕಾ, ಮುರ್ಕಿ, ಗಮತ್, ಮೀಂಡ್ ಏನೆಲ್ಲಾ ರಂಜಕಾಂಶಗಳಿವೆ! ಅವರು ಖ್ಯಾಲ, ಧ್ರುಪದ, ಧಮಾರ, ಟಪ್ಪಾ, ಠುಮರಿ, ರಂಗಗೀತೆ, ಮರಾಠಿ ನಾಟ್ಯಗೀತೆ, ವಚನ, ದಾಸರ ಪದ, ಭಾವಗೀತೆ; ದೊಡ್ಡಾಟದ ಪದ ಯಾವುದನ್ನು ಅಷ್ಟೇ ಸುಶ್ರಾವ್ಯವಾಗಿ ಹಾಡಬಲ್ಲರು. ರಾಜಗುರುಗಳ ಗಾಯನವೆಂದರೆ ಎಲ್ಲ ರುಚಿಗಳಿಂದೊಡಗೂಡಿದ ನಳಪಾಳ

-ಸದಾನಂದ ಕನವಳ್ಳಿ (ಇಂಚರ)

ಪಂ. ಬಸವರಾಜ ರಾಜಗುರುಗಳು ತಮ್ಮ ಗಾಯನದ ಪೌರುಷ ಮೆರೆದ ಗಾಯಕ. ತಮ್ಮ ಗಾಯನ ಸಾಮಾರ್ಥ್ಯದ ಬಗೆಗೆ ಅವರಿಗೆ ಅಳುಕಿಲ್ಲದ ಆತ್ಮವಿಶ್ವಾಸ. ಅವರೊಬ್ಬ ಜಿದ್ದಿ ಗಾಯಕ. ಸೋಲುವವರೇ ಅಲ್ಲ. ಹಿಂದೆ ಮುಂದೆ ಹಾಡುವವರಿದ್ದರೆ ಎಲ್ಲಿಲ್ಲದ ಉತ್ಸಾಹ, ಅವರನ್ನು ಮೀರುವಂತೆ ಹಾಡುತ್ತಿದ್ದರು.

-ಶ್ರೀ ಸದಾನಂದ ಕನವಳ್ಳಿ

ಎಲ್ಲ ಧರ್ಮಕ್ಕೂ ಧರ್ಮಗುರುಗಳಿರುತ್ತಾರೆ. ಹಾಗೆಯೇ ಸಂಗೀತಕ್ಕೆ ಗುರುಗಳು ರಾಜಗುರು ಅವರು.

-ಮೂಜಗಂ, ಹುಬ್ಬಳ್ಳಿ

ತಮ್ಮ ಅದ್ಭುತಗಾಯನದಿಂದ ಕೇಳುಗರನ್ನು ಮಂತ್ರಮುಗ್ಧ ಮಾಡುವ ಪಂ. ರಾಜಗುರು ಅವರು ಗಾನಗಂಧರ್ವರೇ ಸರಿ. ದೇಶದ ಅಗ್ರಶ್ರೇಣಿಯ ಗಾಯಕರಾಗಿ ಕನ್ನಡನಾಡಿಗೆ ಗೌರವ ತಂದುಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ
ಮಾಜಿ ಮುಖ್ಯಮಂತ್ರಿಗಳು



ನಿಷ್ಕಲ್ಮಶ ಮನಸ್ಸಿನ ನನ್ನ ಗುರುಗಳು ಸರಸ್ವತಿಯ ಮಾನಸಪುತ್ರರು. ಅವರಿಂದ ವಿದ್ಯೆಯನ್ನು ಪಡೆದ, ಅವರ ಅಂತಃಕರಣದ ಸವಿಯನ್ನು ಉಂಡ ನಾನೇ ಧನ್ಯನು. ಅಂತಹ ಮಹಾನ್ ಗುರುವಿನ ಸ್ಮರಣೆ ಮಾಡುವದೆಂದರೆ ಸಂಗೀತ ಸರಸ್ವತಿಗೆ ನಮನ ಸಲ್ಲಿಸಿದಂತೆ.

-ಪಂ. ಶಿವಾನಂದ ಪಾಟೀಲ

(ಮುಂಬೈದಲ್ಲಿ ಪ್ರತಿವರ್ಷ ರಾಜಗುರುಗಳ ಸ್ಮರಣೆಯ ಕಾರ್ಯಕ್ರಮ ಮಾಡುವಾಗ)

"ಪುಟ್ಟರಾಜ ಮತ್ತು ಬಸವರಾಜ ನನ್ನ ಎರಡು ಕಣ್ಣುಗಳಿದ್ದಂತೆ"

-ಗಾನಯೋಗಿ ಪಂಚಾಕ್ಷರಿ ಗವಾಯಿಗಳು

(ತಮ್ಮ ಪ್ರೀತಿಯ ಶಿಷ್ಯರಾದ ಪೂಜ್ಯ ಪುಟ್ಟರಾಜ ಗವಾಯಿಗಳು ಮತ್ತು ಪಂ. ಬಸವರಾಜ ರಾಜಗುರುಗಳಿಗೆ ಹೇಳಿದ್ದು)

ಶಾಪಗ್ರಸ್ತ ಗಂಧರ್ವರು ಭೂಮಿಗೆ ಬರುತ್ತಾರೆ ಎಂಬ ಪುರಾಣ ಕಥೆಗಳನ್ನು ಎಲ್ಲರೂ ಓದಿರಬೇಕು. ಇಂಥವರಲ್ಲಿ ಒಬ್ಬರಾದ ಅಸದೃಶ ಮಧುರಗಾಯಕ ಸಂಗೀತದ ನಾಯಕ ಪಂ. ಬಸವರಾಜ ರಾಜಗುರು. ಸುರತಾ ಬಡೇಬಾದಶಹಾ. ಅವರು ನಾಡಿಗೆ ನೀಡಿದ ಅತಿ ದೊಡ್ಡ ಆಸ್ತಿ ಎಂದರೆ ರಾಜಗುರು ಪರಂಪರೆಯ ಸಮರ್ಥ ಶಿಷ್ಯಕೋಟಿ. ಬಹುಶಃ ಅವರಿಗಿರುವಷ್ಟು ದೊಡ್ಡ ಶಿಷ್ಯವೃಂದ ಬೇರಾವ ಸಮಕಾಲೀನ ಗಾಯಕರಿಗಿರಲಾರದು

-ಶ್ರೀ ಸಂತೋಷಕುಮಾರ ಗುಲ್ವಾಡಿ

ತರಂಗ ಆಗಸ್ಟ್ 1991ರಲ್ಲಿ

ಹಿಂದುಸ್ತಾನಿ ಸಂಗೀತದ ಗುಣಿಗಾಯಕ ಪಂ. ರಾಜಗುರು. ಅವರು ಯಾವದೇ ಸ್ಥಳದಲ್ಲಿ ಹಾಡಲಿ ಕೇಳುಗರ ಮನಸ್ಸಿನ ಮೇಲೆ ತಮ್ಮ ಛಾಪನ್ನು ಮೂಡಿಸಿಬಿಡುತ್ತಿದ್ದರು. ಸಂಗೀತಕ್ಕೆ ಯಾವದೇ ಪ್ರಾಂತ್ಯ ಹಾಗೂ ಭಾಷೆಯ ಬೇಲಿ ಇಲ್ಲ ಎನ್ನುವದನ್ನು ಸಾಬೀತು ಪಡಿಸಿದವರು.

-ಪಂ. ಜಗದೀಶ ಪ್ರಸಾದ ಪಂಡಿತ

ಅತ್ಯಂತ ಸರಳ ಸಜ್ಜನ ವ್ಯಕ್ತಿ ವಿದ್ಯಾದಾನಿ ತಮ್ಮ ವಿದ್ವತ್ತು ಸಾಧನೆಗಳ ಬಗ್ಗೆ ಎಳ್ಳಷ್ಟು ಜಂಬ ಇಲ್ಲದ ಅಸಾಧಾರಣ ತಾಜಾ ಮನುಷ್ಯ ಪಂ. ಬಸವರಾಜ ರಾಜಗುರು

-ಶ್ರೀ ಸಂತೋಷಕುಮಾರ ಗುಲ್ವಾಡಿ

ಸ್ಕೇಲ್ ಬದಲಿಸಿ ಹಾಡುವ ಕಲೆ (ಮೂರ್ಛನಾ ಪದ್ಧತಿ)ಯಲ್ಲಿ ನೀಸ್ಸಿಮರಾಗಿದ್ದ ರಾಜಗುರು ಅವರು ಎಂತಹ ಪಂಡಿತರಿಗೂ ತಿಳಿಯದಂತಹ ಪಾಂಡಿತ್ಯವನ್ನು ತೋರಿಸಿ ಚಕಿತಗೊಳಿಸುತ್ತಿದ್ದರು.

ಸಂಗೀತ ಸಾಮ್ರಾಟ ಪಂ. ಬಸವರಾಜ ರಾಜಗುರು



ಅವರೊಬ್ಬ ಅವತಾರ ಪುರುಷ. ಹಾಡುವದಕ್ಕಾಗಿಯೇ ಅವತರಿಸಿ ಬಂದವರು.

-ಪಂ. ವಸಂತ ಕನಕಾಪುರ

ಅವರೊಬ್ಬ ಮಹಾನ್ ಸಂಗೀತಗಾರರಷ್ಟೇ ಆಗಿರದೆ ಸಿದ್ದಿಪುರುಷರಾಗಿದ್ದರು. ಯಾವುದೇ ಮುಜುಗರವಿಲ್ಲದೆ ವಿದ್ಯೆಯನ್ನು ಶಿಶ್ಯಕೋಟಿಗೆ ಧಾರೆ ಎರೆದವರು. ಹಡದ ಮಕ್ಕಳಿಗಿಂತ ಪಡೆದ ಶಿಷ್ಯರಿಗೆ ಪ್ರೀತಿ ತೋರಿದವರು. ಗುರುಗಳ ಆರ್ಶೀವಾದವೇ ನಮ್ಮೆಲ್ಲರ ಜೀವನದ ಉಸಿರು.

- ಶ್ರೀಮತಿ ಸಂಗೀತಾಕಟ್ಟಿ, ತರಂಗದಲ್ಲಿ

"ರಾಜಗುರುಗಳು ಅಭಿನವ ಗಂಧರ್ವರು"

- ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು, ಗದಗ

ಸ್ವರಸಾಮ್ರಾಟ ಪಂ. ಬಸವರಾಜ ರಾಜಗುರುಗಳ ಹೆಸರಿನ ಪ್ರಶಸ್ತಿ ನನಗೆ ದೊರೆತದ್ದು ನನ್ನ ಜೀವನದ ವಿಶೇಷವಾಗಿದೆ. ಇದು ನನಗೆ ತುಂಬಾ ಹೆಮ್ಮೆಯನ್ನು ತಂದುಕೊಟ್ಟ ಪ್ರಶಸ್ತಿ.

- ಪಂ. ಉಲ್ಲಾಸ ತಶ್ಯಾಳಕರ

(ಪಂ. ರಾಜಗುರು ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿ ಹೇಳಿದ ಮಾತು)

ಹಿಂದೂಸ್ತಾನಿ ಸಂಗೀತ ಪರಂಪರೆಯನ್ನು ತಮ್ಮ ಸ್ಥಿರಸಂಪತ್ತಿನಿಂದ ಶ್ರೀಮಂತಗೊಳಿಸಿದವರು ಪಂ. ಬಸವರಾಜ ರಾಜಗುರುಗಳು. ಹೆಸರಿಗೆ ತಕ್ಕಂತೆ ರಾಜಪಥದಲ್ಲೇ ಮುನ್ನಡೆದು ಸಂಗೀತ ಸಾಮ್ರಾಜ್ಯದ ಸಾಮ್ರಾಟನೆನಿಸಿದರು.

-ಶ್ರೀ ಆರೂರು ಲಕ್ಷ್ಮಣಶೇಟ್

ಶಾಸ್ತ್ರೀಯ ಸಂಗೀತ ಜೊತೆಗೆ ವಚನ ಸಂಗೀತಕ್ಕೂ ಹೊಸರೂಪ ಕೊಟ್ಟು ದೇಶದಾದ್ಯಂತ ಹಾಡಿ ಪ್ರಸಿದ್ದಗೊಳಿಸಿದವರು ರಾಜಗುರು ಅವರು. ಅವರು ಹಾಡಿದ ವಚನಗಳನ್ನು ಎಷ್ಟು ಸಾರಿ ಕೇಳಿದರೂ ಬೇಸರವಾಗುವುದಿಲ್ಲ. ಅವು ಇಂದಿಗೂ ಜನಪ್ರಿಯವಾಗಿವೆ.

-ಶ್ರೀ ಎಂ. ಪಿ. ಪ್ರಕಾಶ್, ಮಾಜಿ ಮಂತ್ರಿಗಳು

ಪಂ. ರಾಜಗುರು ಅವರು ಒಬ್ಬ ಸಂತ ಗಾಯಕ. ಅವರ ನಾಡಿನಲ್ಲಿ ಅವರ ಹೆಸರಿನ ಪ್ರಶಸ್ತಿ ಪಡೆಯುತ್ತಿರುವದು ನಮ್ಮ ಸೌಭಾಗ್ಯ ಇದು ನಮ್ಮ ಜೀವಮಾನದ ಶ್ರೇಷ್ಠ ಪ್ರಶಸ್ತಿಯಾಗಿದೆ. **ಪಂ. ರಾಜ್ಹನ್ ಮತ್ತು ಸಾಜನ್‌ಮಿಶ್ರಾ**

(ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ ಪಡೆದನಂತರ)



ಗುರುಗಳಿಂದ ಕಲಿತ ವಿದ್ಯೆಯ ಋಣವನ್ನು ವಿದ್ಯಾದಾನದ ಮೂಲಕ ತೀರಿಸುವ ಗುರಿಯನ್ನು ಹೊಂದಿದ ಇವರು ಯಾವದೇ ವ್ಯಾಮೋಹಕ್ಕೆ ಬೀಳದೆ ಜೀವನದ ಸಾಫಲ್ಯದ ಮೆಟ್ಟಿಲುಗಳನ್ನೇರಿದ ಮಹಾನುಭಾವರು.

-ಶ್ರೀಮತಿ ಭಾರತಿದೇವಿ ರಾಜಗುರು

(ಪಂ. ರಾಜಗುರು ಧರ್ಮಪತ್ನಿ)

ತಮ್ಮ ವಿಶಿಷ್ಠವಾದ ಜೀವನ ಶೈಲಿಯಿಂದ ಬಾಳಿ ಬದುಕಿದ ನನ್ನ ತಂದೆ ಪಂ. ರಾಜಗುರು ಅವರ ಜೀವನವು ಒಂದು ರೋಚಕ ಯಶೋಗಾಥೆಯಾಗಿದೆ. ಅವರದು ರಾಜಠೀವಿಯ ಜೀವನ. ನಾಳೆಯ ಬಗ್ಗೆ, ಜೀವನದ ಭದ್ರತೆಯ ಬಗ್ಗೆ ಅವರು ಎಂದು ಯೋಚಿಸುತ್ತಿರಲಿಲ್ಲ. ಸದಾ ಸಂಗೀತ ಲೋಕದಲ್ಲಿಯೇ ತಲ್ಲೀನರಾಗಿರುತ್ತಿದ್ದರು. ಅವರಿಗೆ ಸಂಗೀತವೇ ಎಲ್ಲವೂ ಆಗಿತ್ತು.

-ನಿಜಗುಣ ರಾಜಗುರು



ಪಂಡಿತ ಬಸವರಾಜ ರಾಜಗುರುಗಳು ಸಂಗೀತಭ್ಯಾಸ ಮಾಡಿದ ಗುರುಗಳ ಹಾಗೂ ಘರಾಣೆಗಳ ಪರಿಚಯ

ಗಾನಯೋಗಿ ಪಂಚಾಕ್ಷರಿ ಗವಾಯಿಗಳು :

ಪೂಜ್ಯ ಹಾನಗಲ್ ಕುಮಾರಸ್ವಾಮಿಗಳು ವಿಶ್ವಮಾನವರು, ನಾಡುನುಡಿ ಧರ್ಮಕ್ಕಾಗಿ ತಮ್ಮ ಜೀವನವನ್ನೆ ಸವೆಸಿದವರು. ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿ ಅದರ ಮೂಲಕ ಅದ್ವೀತಿಯ ಸೇವೆಯನ್ನು ಮಾಡಿ ಕ್ರಾಂತಿಪುರುಷರಾದವರು. ಅದಲ್ಲದೇ ಅವರು ಮಾಡಿದ ಮಹಾನ್ ಕಾರ್ಯಗಳಲ್ಲಿ ಶಿವಯೋಗಮಂದಿರದ ಸ್ಥಾಪನೆ ಮತ್ತು ಸಂಗೀತ ಲೋಕದ ಶಿಖರ ಸ್ವರೂಪರಾಗಿದ್ದ ಗಾನಯೋಗಿ ಪಂಚಾಕ್ಷರಿಗವಾಯಿಗಳನ್ನು ತಯಾರು ಮಾಡಿದ್ದು. ಇವು ಸುವರ್ಣಾಕ್ಷರಗಳಿಂದ ಬರೆದಿಡುವಂತಹ ಕೊಡುಗೆಗಳಾಗಿವೆ. ಇದರಿಂದಾಗಿ ವೀರಶೈವ ಧರ್ಮ ಹಿಂದುಸ್ತಾನಿ ಸಂಗೀತ ಕ್ಷೇತ್ರಕ್ಕೆ ಅನನ್ಯ ಕೊಡುಗೆಯನ್ನು ನೀಡಿ ಅದು ನಿರಂತರವಾಗಿ ಬೆಳೆಯುವಂತೆ ಮಾಡಲು ಸಾಧ್ಯವಾಯಿತು.

ಬಾದಾಮಿ ತಾಲೂಕಿನ ಮಲಪ್ರಭಾ ನದಿಯ ಬಳಿ ಇರುವ ಪುಣ್ಯಸ್ಥಾನದಲ್ಲಿ ಶಿವಯೋಗ ಮಂದಿರದ ಸ್ಥಾಪನೆಯಾಗಿದೆ. ಸನಿಹದಲ್ಲಿ ಬನಶಂಕರಿಯ ದೇವಾಲಯ, ಮತ್ತೊಂದೆಡೆ ಮಹಾಕೂಟೇಶ್ವರನ ಕ್ಷೇತ್ರ, ಪೂರ್ವ ದಿಕ್ಕಿಗೆ ಮಲಪ್ರಭೆಯ ಪುಣ್ಯ ವಾಹಿನಿ ಮತ್ತು ಪ್ರಸಿದ್ಧ ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯ, ಅದರಾಚೆ ಸಿದ್ದನಕೊಳ್ಳದ ಆಶ್ರಮ, ನಂತರ ಒಂಟೆ ಪಾದದ ಮಂಟೇಶ್ವರ; ಇಂತಹ ಪವಿತ್ರ ಕ್ಷೇತ್ರಗಳಿಂದ ಸುತ್ತುವರೆದ ಶಿವಯೋಗ ಮಂದಿರದ ಆಶ್ರಮದಲ್ಲಿ ಉಭಯ ಗಾಯನ ವಿಶಾರದ ಪೂಜ್ಯ ಪಂಚಾಕ್ಷರಿ ಗವಾಯಿಗಳಿಂದ ರಾಜಗುರುಗಳಿಗೆ ಸಂಗೀತದ ಓಂಕಾರ ನಾಮಕ್ಕೆ ಮೊದಲಾಯಿತು. ಶಿವಯೋಗ ಮಂದಿರದಲ್ಲಿ ಸಂಗೀತದ ಜೊತೆಗೆ ಸಂಸ್ಕೃತ, ಸಾಹಿತ್ಯ ವೈದಿಕ, ಆಯುರ್ವೇದ, ಕೀರ್ತನ ಮುಂತಾದ ವಿಷಯಗಳ ಅಧ್ಯಯನವು ನಡೆಯುತ್ತಿತ್ತು. ಅಂತಹ ದಿವ್ಯ ವಾತಾವರಣದಲ್ಲಿ ಸಂಗೀತದ ಸಾದನೆಗೈದ ರಾಜಗುರುಗಳು ಸಂಗೀತದ ಹಿಮಾಲಯ ಶಿಖರವನ್ನೇ ಏರಿದರು.

ಹಾನಗಲ್ ತಾಲೂಕಿನ ಕಾಡಶೆಟ್ಟಿಹಳ್ಳಿ ಪಂಚಾಕ್ಷರಿಗವಾಯಿಗಳ ಹುಟ್ಟೂರು. ಹುಟ್ಟಿದಾಗಲೇ ಅಂಧರಾಗಿದ್ದ ಅವರನ್ನು ತಂದೆ-ತಾಯಿಗಳು ಹಾನಗಲ್ ಕುಮಾರಸ್ವಾಮಿಗಳ ಮಡಿಲಲ್ಲಿ ಹಾಕಿದರು. ಬಾಲಕ ಗದಿಗೆಯ್ಯನ ಕಂಠದಿಂದ ಮಧುರವಾಗಿ ಭಕ್ತಿರಸ



ಹೊರಹೊಮ್ಮುತ್ತಿದ್ದನ್ನು ಕೇಳಿದ ಕುಮಾರಸ್ವಾಮಿಗಳು ಇವನಿಗೆ ಸಂಗೀತ ಶಿಕ್ಷಣ ಕೊಡಿಸುವ ನಂತರ ಸಮಾಜಸೇವೆಯ ಮಹಾನ್‌ಕಾರ್ಯಕ್ಕೆ ಹಚ್ಚುವೆ ಎಂದು ಹೇಳಿ ಅವರನ್ನು ತಮ್ಮೊಂದಿಗೆ ಕರೆದುಕೊಂಡು ಹೋದರು. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತಗಳೆರಡರಲ್ಲೂ ತರಬೇತಿ ಕೊಡಿಸಿದರು. ೧೯೦೮ರಲ್ಲಿ ಬಾಗಲಕೋಟೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಅಧಿವೇಶನದಲ್ಲಿ ಬಾಲಕ ಗದ್ದಿಗೆಯ್ಯನ ಪಾಂಡಿತ್ಯಪೂರ್ಣ ಗಾಯನವನ್ನು ಕೇಳಿದ ಶ್ರೋತೃಗಳು ಹಾಗೂ ಗುರುಗಳು ಅವರಿಗೆ "ಪಂಚಾಕ್ಷರಿ" ಎಂಬ ಅಭಿದಾನವನ್ನು ನೀಡಿದರು. ಪಂಚಾಕ್ಷರಿಗವಾಯಿಗಳಿಗೆ ಹಿಂದೂಸ್ತಾನಿ ಸಂಗೀತದಲ್ಲಿ ಒಲವಿರುವುದನ್ನು ಕಂಡ ಕುಮಾರಸ್ವಾಮಿಗಳು ಕಿರಣಾ ಘರಾಣೆಯ ಅಧ್ವರ್ಯ ಅಬ್ದುಲ್ ವಹೀದ ಖಾನರನ್ನು ಕರೆಯಿಸಿ ಆಗಿನ ಕಾಲದಲ್ಲಿ ತಿಂಗಳಿಗೆ ೧೫೦ ರೂ.ಗಳ ಸಂಭಾವನೆಯನ್ನು ನೀಡಿ ಪಂಚಾಕ್ಷರಿಗವಾಯಿಗಳಿಗೆ ಸಂಗೀತದ ಶಿಕ್ಷಣವನ್ನು ಕೊಡಿಸಿದರು. ಅದಲ್ಲದೇ ಗ್ವಾಲಿಯರ್ ಘರಾಣೆಯ ನೀಲಕಂಠಬುವಾ ಅವರಲ್ಲಿಯೂ ಕೂಡ ಗವಾಯಿಗಳು ಸಂಗೀತವನ್ನು ಕಲಿತರು. ಸಂಗೀತದ ಎಲ್ಲ ಜ್ಞಾನವನ್ನು ಅರಗಿಸಿಕೊಂಡು ಉಭಯಗಾನ ವಿಶಾರದರಾದರು. ಗುರು ಹಾನಗಲ್ ಕುಮಾರಸ್ವಾಮಿಗಳ ಆಜ್ಞೆಯಂತೆ ಶಿವಯೋಗ ಮಂದಿರದಲ್ಲಿ ಸಂಗೀತ ಶಾಲೆಯನ್ನು ತೆರೆದು ನಾಡಿನ ಅಂಧ, ಅನಾಥ ಮಕ್ಕಳಿಗೆ ದೈವ ಸ್ವರೂಪರಾಗಿ ಸಂಗೀತವನ್ನು ಕಲಿಸತೊಡಗಿದರು. ಉತ್ತರಕರ್ನಾಟಕದ ಬಹಳಷ್ಟು ಸಂಗೀತಗಾರರಿಗೆ ಕಲಾವಿದರಿಗೆಲ್ಲ ಗವಾಯಿಗಳೇ ಗುರುಗಳು. ಅವರ ನಿಷ್ಠೆ, ಸೇವೆ, ತ್ಯಾಗ - ಪರಿಶ್ರಮದ ಫಲವಾಗಿ ದಕ್ಷಿಣಭಾರತದಲ್ಲಿ ಹಿಂದೂಸ್ತಾನಿ ಸಂಗೀತ ಕಲಾವಿದರು ರೂಪಗೊಂಡರು.

ಇಂತಹ ಗುರುವಿನ ಶಿಷ್ಯರಾದ ಪಂಡಿತ ಬಸವರಾಜ ರಾಜಗುರುಗಳ ಸಂಗೀತ ಅಧ್ಯಯನ ನಿರಂತರವಾಗಿ ನಡೆಯಿತು. ರಾಗವೇ ಆಹಾರವಾಗಿ ಲಯವೇ ವಿಹಾರವಾಗಿ ಹಗಲು-ರಾತ್ರಿಗಳು ಗಮನಕ್ಕೆ ಬಾರದೇ ಗುರುವಿನೊಂದಿಗೆ ಸಂಗೀತದಲ್ಲಿ ಮೈಮರೆತ ಶಿಷ್ಯ ಬಸವರಾಜರಿಗೆ ರಾಗ-ಲಯಗಳೆರಡನ್ನು ಅರೆದು ಕುಡಿಸುತ್ತಾ ಅದು ಅವನಲ್ಲಿ ಅರಗುತ್ತಿರುವ ಪರಿಯನ್ನು ಕಂಡು ಗವಾಯಿಗಳು ಪರಮ ಸಂತೋಷಪಡುತ್ತಿದ್ದರು. ಮುಂದೆ ಹಾನಗಲ್ ಕುಮಾರಸ್ವಾಮಿಗಳು ಲಿಂಗೈಕ್ಯರಾದಾಗ ಎದೆಗುಂದದೆ ಕರ್ನಾಟಕದಲ್ಲಿ ಸಂಗೀತ ಕಲೆಯನ್ನು ಬೆಳೆಸಲು ತಮ್ಮನ್ನು ಸಮಾಜಕ್ಕೆ ನೀಡಿದ ವಿಭೂತಿ ಪುರುಷನ ನಾಮಸ್ಮರಣೆ ಮಾಡುತ್ತಾ ಶಿಷ್ಯಪರಿವಾರವನ್ನು ಕಟ್ಟಿಕೊಂಡು ಊರಿನಿಂದ ಊರಿಗೆ ಸಂಚರಿಸುತ್ತಾ ಸಂಚಾರಿ ಸಂಗೀತಶಾಲೆಯನ್ನು ಆರಂಭಿಸಿದರು. ಮುಂಬೈಯ ಎಚ್.ಎಂ.ವಿ. ಕಂಪನಿಯಿಂದ ಧ್ವನಿ ಮುದ್ರಣಕ್ಕಾಗಿ ಆಮಂತ್ರಣ ಬಂದಾಗ ಕನ್ನಡದ ಚೀಜುಗಳನ್ನು ಹಾಡುತ್ತೇನೆಂದು ಹಠ ಹಿಡಿದು ಹಾಡಿ ಕನ್ನಡದ ಕೀರ್ತಿಯನ್ನು ಎತ್ತಿ ಹಿಡಿದರು. ಅನೇಕ ಶರಣರ ವಚನಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿದವರಲ್ಲಿ ಪಂಚಾಕ್ಷರಿ ಗವಾಯಿಗಳು ಮೊದಲಿಗರು.

ಉಭಯಗಾಯನವಿಶಾರದ, ಸಂಗೀತರತ್ನ, ಗಾನಯೋಗಿ, ಗಾನಕಲಾನಿಧಿ, ಸಂಗೀತಸಾಗರ



ಮುಂತಾದ ಪ್ರಶಸ್ತಿಗಳು ಇವರನ್ನು ಅರಸಿಕೊಂಡು ಬಂದವು. ಆಶ್ರಯಕ್ಕೆ ಬಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಆ ಎಲ್ಲಾ ಖರ್ಚುವೆಚ್ಚಗಳನ್ನು ನಿಭಾಯಿಸಲು ಒಂದು ನಾಟಕ ಕಂಪನಿಯನ್ನು ಪ್ರಾರಂಭಿಸಿದರು. ಅದೇ ಕುಮಾರೇಶ್ವರ ಕೃಪಾಪೋಷಿತ ನಾಟಕ ಸಂಘ. ಇದು ಅನೇಕ ಸ್ಥಳಗಳಲ್ಲಿ ಸುತ್ತಾಡಿ ಧಾರ್ಮಿಕ, ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿತು. ಈ ಕಂಪನಿಯ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ತುಂಬಾ ಜನಪ್ರಿಯವಾಗಿ ದಾಖಲೆಯ ಪ್ರದರ್ಶನವನ್ನು ನೀಡಿತು. ಗಾನಯೋಗಿಪಂಚಾಕ್ಷರಿ ಗವಾಯಿಗಳ ಶ್ರದ್ಧೆ, ಲಿಂಗಪೂಜಾನಿಷ್ಠೆ, ಅನಾಥ ಅಂಗವಿಕಲ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಸಲಹುವುದನ್ನು ಕಂಡು ಗದುಗಿನ ದಾನವೀರರಾದ ಬಸರಿಗಿಡದ ವೀರಪ್ಪನವರು ಗದಗಿನಲ್ಲಿ ಒಂದು ಎಕರೆ ಜಮೀನನ್ನು ದಾನವಾಗಿ ನೀಡಿದರು. ಅಲ್ಲಿ ಒಂದು ಆಶ್ರಮ ನಿರ್ಮಾಣವಾಯಿತು. ಅದೇ ವೀರೇಶ್ವರ ಪುಣ್ಯಾಶ್ರಮ. ಅಲ್ಲಿ ನಿರಂತರವಾಗಿ ಸಂಗೀತದ ತರಬೇತಿ ನಡೆಯತೊಡಗಿತು. ಜೂನ್ ೧೧, ೧೯೪೪ ರಂದು ಗವಾಯಿಗಳು ಲಿಂಗದಲ್ಲಿ ಲೀನರಾದಾಗ ಅವರ ಅಂತಿಮ ದರ್ಶನಕ್ಕೆ ಸಹಸ್ರಾರು ಜನ ಹರಿದು ಬಂದರು. ಅವರ ನಂತರ ಡಾ. ಪುಟ್ಟರಾಜ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮದ ಉಸ್ತುವಾರಿ ವಹಿಸಿಕೊಂಡು ಮುನ್ನಡೆಸಿದರು.

ಪಂಡಿತನೀಲಕಂಠಬುವಾ ಮಿರಜಕರರು :-

ಗ್ವಾಲಿಯರ್ ಘರಾಣೆಯ ಪಂಡಿತನೀಲಕಂಠಬುವಾ ಮಿರಜಕರ್ ದಕ್ಷಿಣ ಭಾರತದಲ್ಲಿ ಹಿಂದೂಸ್ತಾನಿ ಸಂಗೀತದ ಬೀಜವನ್ನು ಬಿತ್ತಿದ ಪ್ರಮುಖರಲ್ಲಿ ಒಬ್ಬರು. ನೀಲಕಂಠಬುವಾ ಅವರು ಕರ್ನಾಟಕದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಪಸರಿಸಲು ಅವರು ತಯಾರು ಮಾಡಿದ ಶಿಷ್ಯಂದಿರುಗಳೇ ಕಾರಣ. ಇವರು ಮೂಲತಃ ಹೊಳೆ ಆಲೂರಿನವರು. ಇವರಿಗೆ ಆಲೂರಮಠ ಎಂದೇ ಅಡ್ಡಹೆಸರು ಇತ್ತು. ಆದರೆ ಇವರ ಹಿಂದಿನ ತಲೆಮಾರಿನವರು ಮಿರಜಕ್ಕೆ ಹೋಗಿ ನೆಲೆಸಿದ್ದರಿಂದ ಅವರು ಮಿರಜಕರ್ ಎಂದು ಅಡ್ಡಹೆಸರನ್ನು ಪಡೆದುಕೊಂಡರು. ಇವರು ಗ್ವಾಲಿಯರ್ ಘರಾಣೆಯ ಬಾಲಕೃಷ್ಣಬುವಾ ಇಚಲಕರಂಜೀಕರ್‌ರ ಶಿಷ್ಯರು. ಅಪಾರ ಜ್ಞಾನ ಹಾಗೂ ಚೀಜುಗಳ ಸಂಗ್ರಹ ಇವರಲ್ಲಿತ್ತು. ಇವರು ತುಂಬಾ ಶ್ರೇಷ್ಠ ಗುರುಗಳೆಂದೇ ಹೆಸರು ಪಡೆದವರು. ಉಸ್ತಾದ ಅಬ್ದುಲ್‌ವಹೀಮ್‌ಖಾನ ನಂತರ ಇವರು ಪಂಚಾಕ್ಷರಿಗವಾಯಿಗಳಿಗೆ ಸಂಗೀತ ಕಲಿಸಲು ಬರುತ್ತಿದ್ದರು. ಬಂದರೆ ಅನೇಕ ತಿಂಗಳುಗಟ್ಟಲೇ ಗವಾಯಿಗಳ ಕ್ಯಾಂಪಿನಲ್ಲಿಯೇ ಇದ್ದು ಸಂಗೀತದ ತರಬೇತಿಯನ್ನು ನೀಡುತ್ತಿದ್ದರು. ಪಂಚಾಕ್ಷರಿ ಗವಾಯಿಗಳ ಶಿಷ್ಯವರ್ಗದಲ್ಲಿ ಪಂ. ಬಸವರಾಜ ರಾಜಗುರು ಅವರು ತುಂಬಾ ಮೇಧಾವಿ ಹಾಗೂ ಚುರುಕಿನ ವಿದ್ಯಾರ್ಥಿಯಾಗಿದ್ದರು. ನೀಲಕಂಠಬುವಾ ಅವರು ಆಶ್ರಮಕ್ಕೆ ಬಂದಾಗ ಅವರ ಎಲ್ಲಾ ಕೆಲಸ ಕಾರ್ಯಗಳನ್ನು ಬಸವರಾಜರಿಗೆ ವಹಿಸಲಾಗುತ್ತಿತ್ತು. ಅವರ ಸ್ನಾನ ಪೂಜೆಗಳಿಗೆ ಅಣಿ ಮಾಡುವುದು, ಅವರ ಬಟ್ಟೆಯನ್ನು ಒಗೆದು ಹಾಕುವುದು, ಊಟದ ವ್ಯವಸ್ಥೆ ಮಾಡುವುದು ಇತ್ಯಾದಿ. ಅವರಿಗೂ



ಬಾಲಕನ ಚುರುಕುತನವನ್ನು ಕಂಡು ತುಂಬಾ ಸಂತೋಷವಾಗುತ್ತಿತ್ತು ಅವರು ತುಂಬಾ ಆಜಾನುಬಾಹು ವ್ಯಕ್ತಿಯಾಗಿದ್ದರು. ಅವರ ಊಟವಾದ ಮೇಲೆ ಬಸವರಾಜರು ಅವರ ಕಾಲನ್ನು ಒತ್ತಬೇಕು. ಎದ್ದ ನಂತರ ಬುವಾ ತುಂಬಾ ಹುರುಪಿನಿಂದ ಸಂಗೀತ ಪಾಠವನ್ನು ಹೇಳಿಕೊಡುತ್ತಿದ್ದರು. ಶಿಷ್ಯರ ಮೇಲೆ ತುಂಬಾ ಪ್ರೀತಿ ಇಟ್ಟುಕೊಂಡಿದ್ದ ಪಂಚಾಕ್ಷರಿಗವಾಯಿಗಳು ಬಸವರಾಜರಿಗೆ "ನೀನು ಗುರುಗಳ ಮೂಡು ನೋಡಿಕೊಂಡು ಅವರಿಗೆ ಗಂಟು ಬಿದ್ದು ಒಳ್ಳೆ ಚೀಜುಗಳನ್ನು ಹೇಳಿಸಿಕೋ ನಂತರ ನಾನು ನಿನ್ನಿಂದ ತೆಗೆದುಕೊಳ್ಳುತ್ತೇನೆ" ಎಂದು ಹೇಳಿ ಇಟ್ಟಿರುತ್ತಿದ್ದರು. ಅದರಂತೆ ಬಸವರಾಜರು ನೀಲಕಂಬುವಾ ಅವರನ್ನು ಖುಷಿಗೊಳಿಸಿ ಅವರಿಂದ ಚೀಜುಗಳನ್ನು ಪಡೆದುಕೊಳ್ಳುತ್ತಿದ್ದರು. "ಬಸವಣ್ಣೆ, ಮುತ್ತಿನಂತ ಚೀಜು ಹೇಳುವೆ ಬರೆದುಕೊ ಎಂದು ನೀಲಕಂಠಬುವಾ ಅವರು ಹೇಳಿದರೆ ಬಸವರಾಜರು 'ಛಲೋವು ಹೇಳ್ರಿ' ಎಂದಾಗ ಬುವಾ ಅವರು "ನಿನಗೆ ಛಲೋವೋ ನನಗೆ ಛಲೋವೋ" ಎಂದು ಕೇಳಬೇಕು. "ನೀವು ಹೇಳಿಕೊಂಡ ಹೋಗ್ರಿ ನಾನು ಯಾವು ಛಲೋ ಅನ್ನಸ್ತಾವ ಅಂತ ಹೇಳತೇನಿ" ಎಂದು ಬಸವಾಜರು ಹೇಳಿತ್ತಿದ್ದರಂತೆ. ಹೀಗೆ ಸಾಕಷ್ಟು ಚೀಜುಗಳನ್ನು ಹಾಗು ಗ್ವಾಲಿಯರ್ ಘರಾಣೆಯ ವಿಶೇಷ ಅಂಶಗಳನ್ನು ಬಸವರಾಜರು ಪಡೆದುಕೊಂಡರು.

ರಾಜಗುರುಗಳು ಅಭ್ಯಾಸ ಮಾಡಿದ ಘರಾಣೆಗಳು

ಪಂ. ಬಸವರಾಜ ರಾಜಗುರು ಅವರ ಗಾಯನ ಕಿರಾಣಾ, ಗ್ವಾಲಿಯರ್ ಹಾಗೂ ಪತಿಯಾಳಾ ಘರಾಣೆಗಳ ತ್ರಿವೇಣಿಸಂಗಮ. ಹತ್ತು ಹಲವು ಗುರುಗಳಲ್ಲಿ ಅಭ್ಯಾಸಮಾಡಿ ತಮ್ಮ ಅನುಪಮ ಸಂಗೀತಶೈಲಿಗೆ ಪಾಂಡಿತ್ಯಪೂರ್ಣವಾದ ವಿಶೇಷ ಮೆರಗನ್ನು ತುಂಬಿಕೊಂಡಿದ್ದರು. ಕಿರಾಣಾ ಘರಾಣೆಯನ್ನು ಗಾನಯೋಗಿ ಪಂಚಾಕ್ಷರಿಗವಾಯಿಗಳು, ಸವಾಯಿ ಗಂಧರ್ವರು, ಸುರೇಶ ಬಾಬುಮಾನೆ, ಉಸ್ತಾದ್ ಅಬ್ದುಲ್ ವಹಿದ್ ಖಾನರವರುಗಳಲ್ಲಿ ಅಭ್ಯಾಸಗೈದು ತಮ್ಮ ಗಾಯನಕ್ಕೆ ಸುಭದ್ರ ಬುನಾದಿಯನ್ನು ಹಾಕಿಕೊಂಡಿದ್ದರು. ಅವರ ಭಾವನಾ ಪ್ರಧಾನ ಗಾಯಕಿಯಲ್ಲಿ ಕಿರಣಾ ಘರಾಣೆಯ ಅಂಶಗಳನ್ನು ಕಾಣಬಹುದು. ಅವರ ಧ್ವನಿ ಮಂದ್ರಸಪ್ತಕಕ್ಕಿಂತ ಮಧ್ಯ, ತಾರಸಪ್ತಕಗಳಲ್ಲಿ ಪ್ರಭಾವ ಪೂರ್ಣವಾಗಿ, ಲೀಲಾಜಾಲವಾಗಿ ಸಂಚರಿಸುತ್ತಿರುತ್ತಿತ್ತು. ಹೀಗಾಗಿ ಅವರು ಹೆಚ್ಚಾಗಿ ಉತ್ತರಾಂಗ ಪ್ರಧಾನ ರಾಗಗಳನ್ನೇ ಆಯ್ದುಕೊಳ್ಳುತ್ತಿದ್ದರು. ಪಂಚಾಕ್ಷರಿಗವಾಯಿಗಳಲ್ಲಿ ಅಭ್ಯಾಸ ಮಾಡುತ್ತಿರುವಾಗ ಗ್ವಾಲಿಯರ್ ಘರಾಣೆಯ ನೀಲಕಂಠ ಬುವಾ ಅವರಲ್ಲಿ ವಿದ್ಯಾರ್ಜನೆ ಗೈದರು. ಸ್ಪಷ್ಟವಾಗಿ ಸ್ವರ, ಚೀಜುಗಳ ಉಚ್ಚಾರಣೆ, ಆಲಾಪ, ಬೊಲತಾನ, ಲಯಕಾರಿ ಕೆಲಸಗಳಲ್ಲಿ ಗ್ವಾಲಿಯರ್ ಘರಾಣೆಯು ಕಾಣಸಿಗುತ್ತಿತ್ತು. ಉಸ್ತಾದ ಬಡೆಗುಲಾಮ್ಅಲೀಖಾನರ ಗಾಯನವನ್ನು ಬಹುವಾಗಿ ಮೆಚ್ಚಿಕೊಂಡಿದ್ದ ರಾಜಗುರುಗಳು ಪತಿಯಾಳ ಘರಾಣೆಯ ಬಸೀರಖಾನ್ ಅವರಲ್ಲಿ ಕೂಡಾ ವಿದ್ಯೆಯನ್ನು ಪಡೆದರು. ಸಂಕೀರ್ಣ ಮೇರುಖಂಡ, ತಾಲಿವರ್ಕತ್ ತಾನಗಳು ಮತ್ತು ತೀವ್ರಗತಿಯ ತಾನಗಳ ಜ್ಞಾನವನ್ನು



ಸಂಪಾದಿಸಿದರು. ಹೀಗೆ ಮೂರು ಘರಾಣೆಗಳ ವಿವಿಧ ಶೈಲಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಬುದ್ಧಿ ಚಾತುರ್ಯದಿಂದ ಭಾವನಾ ಪ್ರಧಾನವಾದ ಲಾಲಿತ್ಯಪೂರ್ಣವಾದ ಗಾಯಕಿಯನ್ನು ಅವರು ತಮ್ಮದಾಗಿಸಿಕೊಂಡಿದ್ದರು. ಠುಮರಿ, ಮರಾಠಿ ನಾಟ್ಯಗೀತೆಗಳನ್ನು ಹಾಡುವಾಗ ತಮ್ಮ ಚಮತ್ಕಾರಿಶೈಲಿ, ಮಧುರಧ್ವನಿಯಿಂದ ಒಂದು ಬಗೆಯ ವಾತವರಣವನ್ನೇ ನಿರ್ಮಾಣ ಮಾಡಿ ಶ್ರೋತೃಗಳನ್ನು ತಮ್ಮತ್ತ ಸೆಳೆದುಕೊಳ್ಳುತ್ತಿದ್ದರು. ಕೇಳುಗರ ಬಾಯಲ್ಲಿ ತಾನಾಗಿಯೇ 'ವ್ಹಾ ಕ್ಯಾಬಾತ್ ಹೈ' ಇಲ್ಲವೇ 'ಬಹುತ್ ಅಚ್ಛಾ' ಎಂದು ಶಬ್ದಗಳು ಕೇಳಿಬರುತ್ತಿದ್ದವು.

ಹಿಂದೂಸ್ತಾನಿ ಸಂಗೀತದಲ್ಲಿ ಘರಾಣೆ ಎಂದರೆ ಪರಂಪರೆ ಅಥವಾ ಪಂಥ ಎಂದು ಅರ್ಥ. ಉರ್ದುವಿನಲ್ಲಿ ಅದು ಮನೆತನ ಎಂಬ ಅರ್ಥವನ್ನು ಕೊಡುತ್ತದೆ. ಸಂಗೀತದಲ್ಲಿ ಘರಾಣೆ ಎಂಬ ಪದಕ್ಕೆ ತುಂಬಾ ಮಹತ್ವವಿದೆ. ಹಿಂದೆ ಸಂಗೀತಗಾರರು ತಮ್ಮ ಧ್ವನಿ, ಬುದ್ಧಿಮತ್ತೆ ಇಲ್ಲವೇ ಯಾವುದಾದರೂ ಒಂದು ಪ್ರಭಾವಕ್ಕೆ ಒಳಗಾಗಿ ಸಂಗೀತ ಸಾಧನೆಯನ್ನು ಗೈದವರಾಗಿದ್ದರು. ಕೆಲವರು ಸ್ವರಕ್ಕೆ ಪ್ರಾಧಾನ್ಯ ನೀಡಿದರೆ ಕೆಲವರು ಲಯಕ್ಕೆ ಪ್ರಾಧಾನ್ಯ ನೀಡಿದರು ಮತ್ತೆ ಕೆಲವರು ಸ್ವರ-ಲಯನಗಳೆರಡಕ್ಕೂ ಸಮಾನವಾಗಿ ಆದ್ಯತೆ ನೀಡಿದರು. ಹೀಗೆ ಸ್ವರ ಮತ್ತು ಲಯಗಳ ಬೇರೆ ಬೇರೆ ರೀತಿಯ ವಿಶೇಷ ಪ್ರಯೋಗಗಳಿಂದ ಬೇರೆ ಬೇರೆ ಘರಾಣೆಗಳು ಹುಟ್ಟಿಕೊಂಡವೆಂದು ಹೇಳಲಾಗುತ್ತದೆ. ಹಿಂದೂಸ್ತಾನಿ ಸಂಗೀತದಲ್ಲಿ ಅನೇಕ ಘರಾಣೆಗಳು ಪ್ರಚಾರದಲ್ಲಿವೆ. ಗ್ವಾಲಿಯರ್, ಕಿರಾಣಾ, ಆಗ್ರಾ, ಜೈಪುರ್, ರಾಮ್‌ಪುರ್, ಪತಿಯಾಳಾ, ಮೇವಾತಿ, ಷೆಹಸ್ವಾನ್ ಮುಂತಾದವುಗಳು.

ಗ್ವಾಲಿಯರ್ ಘರಾಣೆ :

ಈ ಘರಾಣೆಯು ಅಷ್ಟಾಂಗ ಪ್ರಧಾನ ಘರಾಣೆಯಾಗಿದೆ. ಆಲಾಪ, ಬೋಲತಾನ, ಮೀಂಡ್ ಹಾಗೂ ಲಯಕಾರಿ ಕೆಲಸಗಳು, ಗಮಕ್, ವಿವಿಧ ಬಗೆಯ ತಾನ್‌ಗಳ ಪ್ರಯೋಗ ಈ ಘರಾಣೆಯ ವೈಶಿಷ್ಟ್ಯವಾಗಿದೆ.

ನತ್ಥನ್ ಫೀರಬಕ್ಷ ಗ್ವಾಲಿಯರ್ ಘರಾಣೆಯ ಪ್ರವರ್ತಕರು ಎಂದು ಹೇಳಲಾಗುತ್ತದೆ. ಅವರ ಮೊಮ್ಮಕ್ಕಳಾದ ಹದ್ದುಖಾನ್ ಹಸ್ಸುಖಾನ್, ನತ್ಥುಖಾನ್ ಒಳ್ಳೆಯ ಗಾಯಕರಾಗಿದ್ದರು. ಇವರು ಅನೇಕ ಶಿಷ್ಯರನ್ನು ತರಬೇತಿಗೊಳಿಸಿದರು. ಬಾಲಕೃಷ್ಣಬುವಾ ಇಚಲಕರಂಜಿಕರ, ಶಂಕರ ಪಂಡಿತ, ರಾಮಕೃಷ್ಣಬುವಾ, ವಿಷ್ಣುದಿಗಂಬರ್ ಪುಲಸ್ಕರ, ಕೃಷ್ಣರಾವ ಪಂಡಿತ, ನೀಲಕಂಠಬುವಾ ಮಿರಜಕರ್ ಮುಂತಾದವರು ಪ್ರಸಿದ್ಧರಾಗಿದ್ದಾರೆ.

ಕಿರಾಣಾ ಘರಾಣಾ

ಉತ್ತರ ಪ್ರದೇಶದಲ್ಲಿ ಕಿರಾಣಾ ಎಂಬ ಗ್ರಾಮವಿದೆ. ಈ ಘರಾಣೆಯ ಹೆಸರನ್ನು ಉಸ್ತಾದ



ಅಬ್ದುಲ್‌ಕರೀಮ್‌ಖಾನರು ಪ್ರಖ್ಯಾತಿಗೊಳಿಸಿದರು. ಕಿರಾಣ ಘರಾಣೆಯ ಗಾಯಕಿಯು ತಂತುವಾದ್ಯದ ಅಂಗವಾಗಿದೆ ಎಂದು ಹೇಳಲಾಗುತ್ತದೆ. ಈ ಘರಾಣದಲ್ಲಿ ಭಾವಪೂರ್ಣವಾಗಿ ಸ್ವರಗಳನ್ನು ಹಚ್ಚುವುದು, ವಿಸ್ತಾರವಾಗಿ ರಾಗದ ಆಲಾಪನೆ ಕಂಡುಬರುತ್ತದೆ.

ಈ ಘರಾಣೆಯಲ್ಲಿ ಉಸ್ತಾದ ಅಬ್ದುಲ್ ಕರೀಮ್ ಖಾನ, ಉಸ್ತಾದ ವಹೀದಖಾನ್, ಪಂಡಿತ ಸವಾಯಿಗಂಧರ್ವ, ಹೀರಾಬಾಯಿ ಬಡೋದೆಕರ್, ಸುರೇಶಬಾಬು ಮಾನೆ, ಪಂಡಿತ ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್, ಪ್ರಭಾ ಆತ್ರೇ ಮುಂತಾದವರು ತುಂಬಾ ಹೆಸರು ಮಾಡಿದ್ದಾರೆ.

ಪತಿಯಾಳಾ ಘರಾಣೆ

ಈ ಘರಾಣೆಯನ್ನು ಕಾಲುಮಿಯ್ಯಾ ಎಂಬವನು ಸ್ಥಾಪಿಸಿದನು ಎಂದು ಹೇಳಲಾಗುತ್ತದೆ. ಅಲೀಭಕ್ಷ ಹಾಗೂ ಫತೇಅಲಿ ಸಹೋದರರು ಇದನ್ನು ಆರಂಭಿಸಿದರು ಎನ್ನುವದು ಕೆಲವರ ಅಭಿಪ್ರಾಯವಾಗಿದೆ. ಈ ಘರಾಣೆ ಕಿರಾಣಾ ಮತ್ತು ಜೈಪುರ ಘರಾಣೆಯ ಮಿಶ್ರಣದಿಂದ ಅಥವಾ ಅಂಶಗಳಿಂದ ಕೂಡಿದ ಘರಾಣೆಯಾಗಿದೆ ಎನ್ನಬಹುದು.

ಈ ಘರಾಣೆಯ ಮೇರು ಗಾಯಕರಾದ ಉಸ್ತಾದ ಬಡೇಗುಲಾಮ ಅಲಿಖಾನರು ತುಂಬಾ ಹೆಸರು ಮಾಡಿ ಇದನ್ನು ಪ್ರಸಿದ್ಧಿಗೆ ತಂದವರು. ಮೇರುಖಂಡ ಮತ್ತು ತಾಲೀವರ್ಕತ್ ತಾನುಗಳು, ಅತಿಧೃತ್‌ಗತಿಯಲ್ಲಿಯ ತಾನುಗಳು ಈ ಘರಾಣೆಯ ವಿಶೇಷತೆಗಳಾಗಿವೆ. ಈ ಘರಾಣೆಯವರು ಸುಂದರವಾಗಿ ಠುಮರಿಗಳನ್ನು ಹಾಡಿ ಪ್ರಸಿದ್ಧಿಗೊಳಿಸಿದ್ದಾರೆ. ಆ ಠುಮರಿಗಳು ಕೋಮಲತೆಯಿಂದ ಕೂಡಿ ಕೇಳುಗರ ಮೇಲೆ ಪ್ರಭಾವ ಬೀರಿವೆ.



ಪಂ. ಬಸವರಾಜ ರಾಜಗುರುಗಳ ಧ್ವನಿಸುರಳಿಗಳು

(ಲೇಖಕ ನಿಜಗುಣ ರಾಜಗುರು ಅವರಲ್ಲಿ ಲಭ್ಯವಿವೆ : ಸಂ.)

ರಾಜಗುರುಗಳು ಹಾಡಿದ ರಾಗ -

ಕೋಮಲ ರಿಷಭ ಅಸಾವರಿಯ ಡಿ.ವಿ.ಡಿ.

ಎಚ್.ಎಂ.ವಿ. (ಇ.ಪಿ) ಧ್ವನಿಮುದ್ರಿಕೆ:

ರಾಗ - ಪೂರಿಯಾ ಕಲ್ಯಾಣ

ರಾಗ - ಕೌಶಿ ಕಾನಡಾ

ಹಳೆಯ ಎಚ್.ಎಂ.ವಿ. ೭೮ ಆರ್.ಪಿ.ಎಂ. ಗ್ರಾಂಫೋನ್ ಧ್ವನಿಮುದ್ರಿಕೆಗಳು:

(ಮೂರು ನಿಮಿಷ ಅವಧಿ)

ಶಾಸ್ತ್ರೀಯ ಸಂಗೀತ:

ಭೈರವ ಬಹಾರ, ಕೇದಾರ, ಮಾರುಬಿಹಾಗ, ಶಂಕರಾ, ದೇಸ್, ಮೇಘ, ದೇಸಿ, ಶ್ಯಾಮಕಲ್ಯಾಣ, ಸಾರಂಗ, ಹಂಸಕಲ್ಯಾಣ, ಕಾಫಿ, ಮಾಲಕಂಸ, ಅಹೀರ ಭೈರವ, ಶುದ್ಧಸಾರಂಗ, ಗಝಲ್, ಮರಾಠಿ ಗೀತೆ.

ಈ ಎಲ್ಲ ಧ್ವನಿಮುದ್ರಿಕೆಗಳು HMVಯ 'Golden Milestones' CDಯಲ್ಲಿ ಲಭ್ಯವಿದೆ.

ಕನ್ನಡದಲ್ಲಿ ವಚನಗಳು (HMV Saregama CDಯಲ್ಲಿ)

೧. ಪರಚಿಂತೆ ಎಮಗೇಕೆ

೨. ಮಡಿಕೆಯ ಮಾಡುವರೆ

೩. ಜಗವ ಸುತ್ತಿಹುದು

೪. ಎನ್ನಕಾಯದ ಕತ್ತಲೆಯ

೫. ಅತ್ತಲಿತ್ತ ಹೋಗದಂತೆ

೬. ವಚನದಲ್ಲಿ ನಾಮಾಮೃತ



೭. ಎನ್ನ ಕಾಯವ ದಂಡಿಗೆಯ
೮. ಮಾಡಿ ಮಾಡಿ ಕೆಟ್ಟರೋ
೯. ಚಂದ್ರೋದಯಕ್ಕೆ ಅಂಬುಧಿ
೧೦. ಎನಗಿಂತ ಕಿರಿಯರಿಲ್ಲ
೧೧. ಸ್ವಾಮಿ ನೀನು ಶಾಶ್ವತ ನೀನು
೧೨. ನಂಬರು ನೆಚ್ಚರು
೧೩. ಕಲ್ಯಾಣವೆಂಬ ಪಣತೆಯಲ್ಲಿ
೧೪. ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ

ಕನ್ನಡದ ಭಾವಗೀತೆಗಳು

೧. ಜಾರುತಿದೆ ಜೀವನದ ನಶ್ವರದ ಕಾಲ ನದಿ
೨. ದೇವರಮನೆ ಕಡೆ ನೋಡುತಿರೆ ನಾನು

HMV 4. Cassette Album and CD Album (SWAR - SMRITI)

Cassette-1. ಅಲ್ಹೈಯ್ಯಾ ಬಿಲಾವಲ ಜೋಗಿಯಾ, ಅಸಾವರಿ
ರಾಗ ಭಟಿಯಾರ

Cassette-2 ಶುದ್ಧ ಸಾರಂಗ
ರಾಗ ಭೂಪಾಲಿ ತೋಡಿ

ಬಿಲಾಸಖಾನಿ ತೋಡಿ
ಅಷ್ಟರಾಗ ಮಾಲಿಕಾ
Cassette-3 ರಾಗ ಪಟದೀಪ
ಗೋರಖ ಕಲ್ಯಾಣ
ಖಂಬಾವತಿ

Cassette-4 ರಾಗ ಮಾಲಕಂಸ
ಬಸಂತ್
ಭೈರವಿ ಠುಮ್ರಿ



ರಾಜಗುರು ಧ್ವನಿಮುದ್ರಿಕೆಗಳು (ಲಹರಿ ಕಂ. ರಿಕಾರ್ಡಿಂಗ್)

ಕ್ಯಾಸೆಟ್ -೧ ರಾಗ -ಕೋಮಲರಿಷಭ ಅಸಾವರಿ
ನಾಯಕಿ ಕಾನಡಾ ಮತ್ತು ಠುಮ್ರಿ

ಕ್ಯಾಸೆಟ್ -೨ ರಾಗ - ಮಾರು ಬಿಹಾಗ
ಶುದ್ಧಸಾರಂಗ

ಕ್ಯಾಸೆಟ್ -೩ ಚಕೋರ ಚಂದ್ರಿಕೆ (ಬಸವಣ್ಣನವರ ವಚನಗಳು)

ಕ್ಯಾಸೆಟ್-೪ ಭಕ್ತಿರಾಗ (ಪುರಂದರದಾಸರ ಪದಗಳು)

೧. ನಾ ನಿನ್ನ ಧ್ಯಾನದೊಳಿರಲು

೨. ರಾಮ ನಾಮ ಪಾಯಸಕ್ಕೆ

೩. ಗುರುವಿನ ಗುಲಾಮನಾಗುವ ತನಕ

೪. ಮೂರುತಿಯನು ನಿಲ್ಲಿಸೋ

೫. ಅಪರಾಧಿ ನಾನಲ್ಲ

೬. ಚಿಂತೆ ಯಾತಕೋ ಮನುಜ

ಲೈವ್ ಕಾನ್ಸರ್ಟ್ ಆಫ್ ಬಸವರಾಜ ರಾಜಗುರು

ಕ್ಯಾಸೆಟ್ - ೧ ರಾಗ - ಸರಸ್ವತಿ ಶಹಾನಾ ಕಾನಡಾ ಮತ್ತು ಭೈರವಿ ಠುಮ್ರಿ

ಕ್ಯಾಸೆಟ್ - ೨ 'ವಚನ ಜ್ಯೋತಿ' ಹಾಗೂ ವಿಜಯ ರಿಕಾರ್ಡಿಂಗ್ ಕಂ.
ಅವರ ೨ ಧ್ವನಿ ಮುದ್ರಿಕೆಗಳು.

ಭಾಗವಹಿಸಿದ ಕೆಲ ಸಂಗೀತ ಸಮ್ಮೇಳನಗಳ ಪರಿಚಯ

೧೯೪೦ -ರಲ್ಲಿ ಆಕಾಶವಾಣಿ ಮುಂಬೈ ಕೇಂದ್ರದಿಂದ ರಾಗ-ತೋಡಿ [ಬಿಳಿ ಐದನೇ ಪಟ್ಟಿಯಲ್ಲಿ]

೧೯೪೩ ಲಾಹೊರದ ಸಂಗೀತ ಸಮ್ಮೇಳನದಲ್ಲಿ

೧೯೫೦ ಜನವರಿ ೮, ಧಾರವಾಡ ಆಕಾಶವಾಣಿ ಕೇಂದ್ರದ ಉದ್ಘಾಟನೆ ಸಮಾರಂಭದಲ್ಲಿ ರಾಗ-ಕೌಂಸಿ ಕಾನಡಾ

೧೯೫೨ -ರಲ್ಲಿ ಎಚ್.ಎಂ.ವಿ. ಕಂಪನಿಯಿಂದ ಬಿಡುಗಡೆಯಾದ ಧ್ವನಿ ಮುದ್ರಿಕೆಗಳು
ವಚನಗಳು ೧. ಚಂದ್ರೋದಯಕೆ ಅಂಬುದಿ ೨. ಎಮಗಿಂತ ಕಿರಿಯರಿಲ್ಲಯ್ಯಾ
ಭಾವಗೀತೆ ೧. ಜಾರುತಿದೆ ಜೀವನದ ನಶ್ವರದ ಕಾಲನದಿ [ರಾಗ-ಶಿವರಂಜನಿ]
೨. ದೇವರ ಮನೆಕಡೆ ನೋಡುತಿರೆ ನಾನು [ರಾಗ-ಸಿಂಧಿ ಭೈರವಿ]

೧೯೫೫ ವಿಷ್ಣು ದಿಗಂಬರ ಪುಲಸ್ಕರ ಸಂಗೀತ ಸಮಾರೋಹ ನಗರಭವನ ದಿಲ್ಲಿಯಲ್ಲಿ ರಾಗ - ನಾಯಕಿಕಾನಡ

೧೯೫೮ ಮಾರ್ಚ ೫ ಲಕ್ಷ್ಮೀನಾರಾಯಣ ರಾಗಸಭಾ, ಅಮೃತಸರದಲ್ಲಿ
ತಬಲಾಕ್ಕೆ - ಶಾಮ್ತಾಪ್ರಸಾದ, ಹಾರ್ಮೋನಿಯಂಗೆ ಹನುಮಾನ ಮಿಶ್ರಾ

೧೯೬೦ ರಾಮನವಮಿ ಉತ್ಸವ ಬೆಂಗಳೂರಿನಲ್ಲಿ

೧೯೬೦ ಉತ್ತರ ಕಾಲಿಕಟಾ ಸಂಗೀತ ಸಮ್ಮೇಳನ ಕಲ್ಕತ್ತಾದಲ್ಲಿ

೧೯೬೦ ಮೈಸೂರು ದಸರಾದಲ್ಲಿ [೧೯೭೩, ೧೯೮೦, ೧೯೮೩, ೧೯೮೯ ವರ್ಷಗಳಲ್ಲಿ ಕೂಡಾ]

೧೯೬೧ ಡೊವರ ಲೇನ ಮ್ಯೂಸಿಕ್ ಕಾನ್ಫರನ್ಸ್ ಕಲ್ಕತ್ತಾ

೧೯೬೨ ಸ್ವರ ವಿಲಾಸ ಸಭಾ ಠಾಣೆ ಮತ್ತು ತಾನಸೇನ ಸಂಗೀತ ಸಮಾರೋಹದಲ್ಲಿ [೧೯೬೧, ೧೯೬೪, ೧೯೭೦]ರಲ್ಲಿ ಗ್ವಾಲಿಯರ್



೧೯೬೪ ಶಂಕರರಾವ್ ಪಂಡಿತ ಜನ್ಮಶತಾಬ್ದಿ ಗ್ವಾಲಿಯರದಲ್ಲಿ

೧೯೬೬ ಹರಿವಲ್ಲಭ ಸಂಗೀತ ಸಮ್ಮೇಳನ ಜಲಂಧರದಲ್ಲಿ

೧೯೬೭ ಅಖಿಲ ಭಾರತೀಯ ಸಂಗೀತ ಪರಿಷದ್, ಹೈದರಾಬಾದ

೧೯೭೧ ವಿಷ್ಣುದಿಗಂಬರ ಜನ್ಮಶತಾಬ್ಧಿ, ಪುಣೆ

೧೯೭೩ ರೇಡಿಯೋ ಸಂಗೀತ ಸಮ್ಮೇಳನ ದಿಲ್ಲಿಯಲ್ಲಿ
[ಮತ್ತೆ ೧೯೭೪, ೧೯೭೮, ೧೯೮೩, ೧೯೮೫ ದಿಲ್ಲಿ, ದರ್ಬಾಂಗಾ, ಜಬಲಪುರ, ಇಂಪಾಲದಲ್ಲಿ]
ಹಫೀಸ್ ಅಲೀಖಾನ ಸಂಗೀತ ಸಮ್ಮೇಳನ ಕಲ್ಕತ್ತಾ
ಇಂಡಿಯನ್ ಮ್ಯೂಸಿಕ್ ಸೊಸೈಟಿ - ದಿಲ್ಲಿ

೧೯೭೫ ವಿಜಯನಗರ ಉತ್ಸವ - ಹಂಪಿ

೧೯೭೬ ಸರಸ್ವತಿ ಸಂಗೀತ ಸಮ್ಮೇಳನ ರಂಗಭವನ, ದಿಲ್ಲಿ

೧೯೭೭ ಹರಿವಲ್ಲಭ ಸಂಗೀತ ಮಹಾಸಭಾ ಜಬಲಪುರ
ಮಹಾರಾಣಾಕುಂಭ ಸಂಗೀತ ಪರಿಷದ್ - ಉದಯಪುರ

೧೯೭೯ ತಾನಸೇನ ಸಂಗೀತ ಸಮ್ಮೇಳನ - ಕಲ್ಕತ್ತಾ

೧೯೮೧ ಪಾಟ್ನಾ ಸಂಗೀತ ಸಮ್ಮೇಳನ

೧೯೮೨ ಶಂಕರಲಾಲ ಫೆಸ್ಟಿವಲ್ - ದಿಲ್ಲಿ

೧೯೮೫ ಸಂಗೀತ ಸಮ್ಮೇಳನ ಚಂಡಿಗಡ್

೧೯೮೬ ಮೈಸೂರು ಅಸೋಸಿಯೇಶನ್ - ಮುಂಬೈ

೧೯೮೭ ಕೆಸರಬಾಯಿ ಕೇರಕರ ಸಮ್ಮೇಳನ - ಪಣಜಿ ಗೋವಾ

೧೯೮೯ ಪ್ರಭಾತರಾಗ ಫೆಸ್ಟಿವಲ್ - ದಿಲ್ಲಿ

೧೯೯೦ ನಾಗಪುರ ಸಂಗೀತ ಸಮಾರೋಹ, ನವರಸಪುರ ಉತ್ಸವ ಬಿಜಾಪುರ

೧೯೯೧ ದೂರದರ್ಶನದ ರಾಷ್ಟ್ರೀಯ ಕಾರ್ಯಕ್ರಮ ದಿಲ್ಲಿ ಮುಂತಾದವುಗಳು.

ದೇಶದ ಹಲವಾರು ಆಕಾಶವಾಣಿ ಕೇಂದ್ರಗಳಲ್ಲಿ ರಿಕಾರ್ಡಿಂಗಗಳು ದಿಲ್ಲಿ, ಮುಂಬಯಿ, ಹೈದರಾಬಾದ, ಬೆಂಗಳೂರು ಮುಂತಾದ ದೂರದರ್ಶನ ಕೇಂದ್ರಗಳಲ್ಲಿ ರಿಕಾರ್ಡಿಂಗಗಳು.



ರಾಜಗುರುಗಳ ಬಗ್ಗೆ ಪ್ರಕಟವಾದ ಕೆಲ ಪತ್ರಿಕಾ ವರದಿಗಳು

ಈ ಕಚೇರಿಯಲ್ಲಿ ರಾಜಗುರುರವರು ನಿರೂಪಿಸಿದ ರಾಗಗಳು ಮುಖ್ಯವಾಗಿ ಮಧುವಂತಿ, ದೇಸ್, ಪೂರಿಯ ಕಲ್ಯಾಣ, ತಿಲಂಗ ಹಾಗೂ ಭೈರವಿ. ಇದರಲ್ಲಿ ವಿಸ್ತಾರವಾಗಿ ಚಿತ್ರಿಸಲ್ಪಟ್ಟ ರಾಗ ಮಧುವಂತಿ, ಕರ್ನಾಟಕ ಪದ್ಧತಿಯ ಧರ್ಮಾವತಿ ರಾಗದಲ್ಲಿ ೨ ನಿಷಾದಗಳನ್ನು ಪ್ರಯೋಗ ಮಾಡಿದಲ್ಲಿ ಆಗುವ ಅನುಭವ ಉಂಟಾಗುತ್ತಿತ್ತು. ಇದನ್ನು ಸರಾಗವಾಗಿ ಸುನಾದಯುತವಾದ ಎಳೆಗಳಿಂದ ವಿಸ್ತರಿಸಿದರು. ರಾಜಗುರು ಅವರ ಸ್ವರಪ್ರಸ್ತಾರವೂ ಕಲಸಿಕೊಳ್ಳದೇ ಬಿಡಿಸಿದಂತೆ ಸ್ವರಗುಚ್ಛಗಳಿಂದ ಕೂಡಿ ಆಕರ್ಷಣೀಯವಾಗಿದ್ದು ಅನೇಕ ಸಲ ಕರ್ನಾಟಕ ಪದ್ಧತಿಯಲ್ಲಿ ಸ್ವರಪ್ರಸ್ತಾರದ ಅನುಭವವಾಗುತ್ತಿತ್ತು. ರಾಜಗುರು ಅವರಿಗೆ ತಳಹದಿಯೇ ಕರ್ನಾಟಕ ಸಂಗೀತ ಎಂಬ ಅಂಶವು ಅನೇಕರಿಗೆ ತಿಳಿದಿರಲಾರದು.

ಅಂದಿನ ಕಚೇರಿಯಲ್ಲಿ ಅವರು ನಿರೂಪಿಸಿದುದರಲ್ಲಿ ಗಮನಾರ್ಹ ಅಂಶವೆಂದರೆ ಚತುರಂಗ, ಹಿಂದೂಸ್ತಾನಿ ಪದ್ಧತಿಯಲ್ಲಿದ್ದ ಇದರದೇ ಒಂದು ವಿಶೇಷ ಸಾಹಿತ್ಯ, ತೇನಕ, ಅಂದರೆ ತಾನ ಅಕ್ಷರಗಳ ಪ್ರಯೋಗ, ಸ್ವರ ಮತ್ತು ತರಾನಾ ಕೂಡಿದ ನಾಲ್ಕು ಅಂಗಗಳ ಕೃತಿಯೇ ಚತುರಂಗ, ಇದನ್ನು ಬಹಳ ಲವಲವಿಕೆಯಿಂದ ಹಾಡಿದರು.

-ಪ್ರಜಾವಾಣಿ, ೨೭.೧೦.೧೯೭೯

"Rajaguru is an uncut diamond". His recitals are rare moments of power and strong men could be seen swaying to the magic of his voice.

The most striking feature of the Kirana veteran singing in his mellifluous voice is the remarkable clarity of Bols and Taans. The imposing clarity defined sense of design and cohesiveness of ideas through the use of choice phrases an intricately oven boltaans are equally appealing.

Listening to Rajguru is a rare experience. This 60 years old Kirana gharana maestro sang with verve and vitality with rythmatic boltaans, sargams and tihais.

-Times of India, Bombay 1980 & 82



A tanpura is sufficient for him to create the heaven of swaras. A rare vocalist who can vibrate freely in three saptakas effectively.

-Shankar's Weekly

The mastery in control of swaras, the powerful voice and melody are the pillars of his success. Being blessed by different Gurus and Gharans, he has evolved new style of himself.

-Maratha

ತಾನಸೇನನು ದೀಪಕ ರಾಗ ಹಾಡಿ ದೀಪಗಳನ್ನು ಬೆಳಗಿಸಿದಂತೆ ಇವರು ಮಿಯಾ ಮಲ್ಹಾರ ರಾಗ ಹಾಡಿದಾಗ ಕಳೆದ ಒಂದೂವರೆ ತಿಂಗಳಿಂದ ಲುಪ್ತವಾಗಿದ್ದ ಮಳೆಯು ಧೋ ಧೋ ಎಂದು ಸುರಿಯುವಂತೆ ಆದ ಪ್ರಸಂಗವು ಎಲ್ಲರನ್ನು ಪ್ರಫುಲ್ಲಿತಗೊಳಿಸಿತು.

-ತರುಣ ಭಾರತ, ನಾಗಪುರ [ಮರಾಠಿ ಪತ್ರಿಕೆ]

Basavraj Rajguru who was featured in the National Programme has a rich and alluring voice which helped him to present a lively recital in the Kirana style. His Basant - Bahar had a lyrical finnesse all its own. The modal form as it emerged was gripping; the vilambit Khayal set to Ek Tal with the refrain 'Barajo na mane' was invested with sensuous fascination. Basavaj traverses through the octaves without deviating a bit from the melody scale. His improvisatory powers are immense. The lilting melody of spring which is Basant Bahar came alive to the core. With ease and expertise he passed on to 'Tarana' in Dhrut Teen Tal. The softening calm was transformed into an exciting parade of swift, spiralling 'boltaans' providing clear proof of the artiste's superior craftsmanship. Speed and serenity were accomodated with equal felicity which made the piece memorable.



The artiste opened with two khayals in Shudh Kalyan, The vilambit piece in Ek Tal did full justice to this important Rag. The Tivra Ma and Ni were handled with the requisite delicacy to heighten the sonority.

The Dhrut piece in Teen Tal 'Bajure Bajo' provided Basavraj an opportunity to revel in the Camak taans. They were executed flawlessly and fluently putting the listener to a delightful repose.

The artiste concluded his recital with a Thumri 'Gopala, Na Maro Pichkari'. He impregnated every vital word with appropriate musical feeling. The beauty of a Thumri lies in its uninhibited, sweet flowing lyricism. Basavraj succeeded in an abundant measure in begetting the brilliance of the piece he chose.

Basavaraj has learnt from many masters; but one could easily discern in his singing the dominating influence of Svai Gandharva and Suresh Babu Mane. He has, of course, perfected his own style, impulsive and interesting.

The accompaniment on the harmonium provided by S.A. Mahadkar deserves a word of praise. It was free from obstructions usually attributed to sarangi. The percussion support on table by M.L. Sangaonkar was noteworthy for its poise and steady playing.

- Rajeswari

- ನ್ಯಾಷನಲ್ ಪ್ರೋಗ್ರಾಂ,

ಬಗ್ಗೆ 23 ಜನವರಿ 1972ರಲ್ಲಿ ಶಂಕರ್ ವಿಕ್ಲೀ ಯಲ್ಲಿ ಬಂದ ವರದಿ



Rajguru of classical music

*Basavraj Rajguru was a great vocalist. But his protean artistic genius was not restricted to the realm of music alone, says **Subbudu** in this tribute to the versatile man of many arts.*

There have been Gurus, there are Gurus and there will be Gurus till eternity but there was only one Raj Guru-Basavaraj Rajguru in Karnataka who was really a king of Gurus. The title Raj-Guru, of course, stuck to him by way of heridity but it fitted him like a glove. Classical music man in his veins as-though. not in vain as his ancestors were the Court musicians of Kaladi.

It is indeed a paradox that Hindustani classical music has thrived more in the Southern Regions and produced stalwarts like Mallikarjun Mansoor, Bhimsen Joshi, Gangubai Hangal and the like. Even today two top violinists of the country well versed in Hindustani Music are Smt N. Rajam and M.S. Gopalakrishnan and they are from Tamil Nadu. Incidentally they are well groomed in Carnatic music also. This phenomenon is due to the fact that peace prevailed in the South and, therefore, people had the leisure to cultivate arts. Hindustani Music thrived in the Hubli, Dharwar region and it could be said that the Kirana Gharana was nurtured there. Many may not know that the late Ustad Abdul Harim Khan had a fascination for the South and during his visits not only gave exemplary concerts but learned a few kritis in Carnatic music as well.

Raj-Guru was unique in many respects and that makes him a class apart. He did not merely stick to classical music alone but was an adept in Natya Music class. One of his Gurus, Panchakshara Swamy was a great dramatist and discovered Raj



Guru's histrionic talents and on occasions made him don roles in his plays. I have particularly stressed this because singing on 'the stage requires a rich voice capable of reaching large audiences and this Raj Guru possessed. It must be remembered that those were mike- less days and unless one sported a high pitched-voice, he could not do justice. Singing on stage seasons the voice making it stand any weather This was indeed a great'asset. He was strictly wedded to traditionalism and never sought to compromise by taking part in Jugal Bandhis or manufacturing new ragas and giving them names with a political tinge like Indira Priyadarshini, Jawaharlal Manohari. and Jayaprakash Narayani. True, such antics would have ensured him .more concerts and popularity but he would not oblige. For him music was a spiritual voyage and he would not stoop low and try to conquer the ivory tower.

Although trained and groomed in the Kiarana-gharana he did not behave like a frog in the well. He was always anxious to widen his knowledge and repertoire by seeking guidance from other stalwarts in the field. He learnt Tumri, Natya Sangeeta and also has short spells of tutelage, under Inayatullah Khan, Wahid Khan and Weelakanta Thuuse. These widened his repertoire and he shone like a bright jewel. He also popularises the compositions of Saint Purandaradasa and as he had a grounding of Carnatic music also he was able to render them convincingly.

I have a faint recollection of the tremendous ovation that Rajguru got way back in 1955 when came to Delhi to take part in the centenary celebration of late Pandit Vishnu Digambar. Great names like Pandit Omkarnath thakur and others had been billed for the occasion and Raj Guru who was practically unknown was also scheduled though grudgingly. Thakar had sung first and the



organisers, afraid of an anti-. climax featured some instrumental music and then came Raj Guru's chance. To say that he sweft the audience off its feet is no exaggeration. Indeed he had "arrived" and was ready for the "take off'.

ನಗರದಲ್ಲಿ ನಡೆದ ಶ್ರೀ ರಾಜಗುರು ಸಂಗೀತ

ತಾ: 19-10-1969 ಬೆಂಗಳೂರು ನಗರ ಭವನದಲ್ಲಿ ಸಂಗೀತರತ್ನ ಪ್ರೊ. ಬಸವರಾಜ ರಾಜಗುರುಗಳ ಹಿಂದೂಸ್ತಾನಿ ಸಂಗೀತವನ್ನು ಬೆಂಗಳೂರಿನ ಶ್ರೀ ಅರವಿಂದ ಸಂಗೀತ ವಿದ್ಯಾಲಯದವರು ಏರ್ಪಡಿಸಿದ್ದರು. ಅತ್ಯಂತ ಯಶಸ್ವಿಯಾಗಿ ನಡೆದ ಆ ಕಾರ್ಯಕ್ರಮದ ಬಗ್ಗೆ ನಾಡಿನ ಅನೇಕ ಪತ್ರಿಕೆಗಳು ಪ್ರಶಂಸೆ ಮಾಡಿದುವು. ಅವುಗಳನ್ನು ಇಲ್ಲಿ ಹಾಗೆಯೇ ಸಂಗ್ರಹಿಸಲಾಗಿದೆ.

ಅಮೋಘ ಹಿಂದೂಸ್ತಾನಿ ಸಂಗೀತ

ಭಾರತದ ಹಿರಿಯ ಹಿಂದೂಸ್ತಾನಿ ಸಂಗೀತ ಶ್ರೇಣಿಗೆ ಸೇರಿದವರೂ, ಉಭಯ ಗಾಯನಾಚಾರ್ಯ ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯರೂ ಆದ ಸಂಗೀತರತ್ನ ಪ್ರೊ. ಬಸವರಾಜ ರಾಜಗುರುರವರ ಸಂಗೀತವು ಬೆಂಗಳೂರು ನಗರ ಭವನದಲ್ಲಿ ತಾ. 19-10-1969ರಂದು ಸಂಜೆ 6-30ರಿಂದ ಸುಮಾರು ನಾಲ್ಕು ಗಂಟೆಗಳ ಕಾಲ ನಡೆದು ಸಂಗೀತಾಭಿಮಾನಿಗಳ ಅತ್ಯಂತ ಆದರಕ್ಕೆ ಪಾತ್ರವಾಯಿತು.

ಈ ಕಾರ್ಯಕ್ರಮವನ್ನು ರಾಜಗುರುರವರ ಗುರು ಬಂಧುಗಳೂ, ಶ್ರೀ ಅರವಿಂದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರೂ, ಗಾಯನಗಂಗಾ ಸಂಪಾದಕರೂ ಆದ ಸಂಗೀತ ಕಲಾರತ್ನ ಶ್ರೀ ಶೇಷಾದ್ರಿ ಗವಾಯಿಗಳು ಮೇಲ್ಕಂಡ ವಿದ್ಯಾಲಯದ ಮುಖಾಂತರ ಏರ್ಪಡಿಸಿದ್ದಲ್ಲದೇ ತಾವೂ ಸಹ ಹಾರ್ಮೋನಿಯಂ ವಾದನದ ಮುಖಾಂತರ ತಮ್ಮ ಗುರುಬಂಧು ಶ್ರೀ ರಾಜಗುರುಗಳ ಸಂಗೀತಕ್ಕೆ ಸಹಕಾರವಿತ್ತು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು. ಶ್ರೀ ಜಿ.ಎಸ್. ಹಿರೇಮಠ ಧಾರವಾಡರವರ ತಬಲವಾದನ ಕಾರ್ಯಕ್ರಮಕ್ಕೆ ಹೊಂದಿಕೆಯಾಗಿತ್ತು.

ಶ್ರೀ ರಾಜಗುರುಗಳವರು ಮಧುವಂತಿ, ದೇಸ್, ಪೂರ್ವಾಕಲ್ಯಾಣ ರಾಗಗಳನ್ನು ವಿಸ್ತಾರವಾಗಿ ಹಾಡಿ ಶ್ರೋತೃಗಳನ್ನು ಮಂತ್ರಮುಗ್ಧರಂತೆ ಮಾಡಿದರು. ಮಧುವಂತಿಯಲ್ಲಿ ಅವರು ಕೋಮಲ ಗಾಂಧಾರದಿಂದ ತೀವ್ರ ಮಧ್ಯಮವನ್ನು ಪ್ರವೇಶಿಸಿದಾಗ ಅವರು ಆ ಸ್ವರಗಳನ್ನು ಉಪಯೋಗಿಸಿದ ಮತ್ತು ಆ ಪ್ರಯೋಗದಿಂದ ಆದ ಅನುಭವ ಅವರ್ಣನೀಯ. ಅವರು ಪಂಚಮಷಡ್ಜಗಳನ್ನು ಸೇರಿದಾಗ ನೀರಿನಲ್ಲಿ ನೀರು ಬೆರೆವಂತೆ ಅವರ ಧ್ವನಿಗೂ, ಸ್ವರಕ್ಕೂ ವ್ಯತ್ಯಾಸವೇ ಕಾಣದೆ



ಶೋತೃಗಳನ್ನು ಮೈಮರೆಸಿದರು. ದೇಸ್ ರಾಗವನ್ನು ಝಪ್‌ತಾಲದಲ್ಲಿ ಹಾಡಿ ಚತರಂಗವನ್ನು ನಂತರ ಹಾಡಿದ್ದು ಶ್ರೀ ರಾಜಗುರುಗಳಿಗೆ ಪ್ರದರ್ಶನದಲ್ಲಿರುವ ತಮ್ಮ ಅನುಭವ, ಶೋತೃಗಳ ಬಗ್ಗೆ ಅವರಿಗಿರುವ ಅನುಕಂಪಗಳನ್ನು ಸೂಚಿಸುತ್ತಿತ್ತು. ವಿರಾಮಕಾಲದ ನಂತರ ಪೂರ್ವಾಕಲ್ಯಾಣರಾಗವಂತೂ ಅತ್ಯಂತ ಯಶಸ್ವಿಯಾಗಿತ್ತು. ನಂತರ ಒಂದು ದೇವರನಾಮ ಹಾಡಿ ಭೈರವಿಯ ಎರಡು ವಚನಗಳೊಡನೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ಶೇಷಾದ್ರಿ ಗವಾಯಿಗಳ ಹಾರ್ಮೋನಿಯಂ ವಾದನ ತುಂಬಾ ಯಶಸ್ವಿಯಾಗಿದ್ದು ವಾದನದ ಬಗ್ಗೆ ಶ್ರೀ ರಾಜಗುರುಗಳ ಮಧ್ಯೆ ಮಧ್ಯೆ ಬಹುತಚ್ಚ ಎಂದು ಪ್ರಶಂಸೆಮಾಡಿದ್ದು ಗುರುಬಂಧುಗಳಿಬ್ಬರ ಅನ್ಯೋನ್ಯತಾ ಪ್ರೇಮ ವಿಶ್ವಾಸಗಳನ್ನು ಸೂಚಿಸುತ್ತಿತ್ತು. ತಬಲಾವಾದನವೂ ಸಹ ತುಂಬಾ ರಂಜನೀಯವಾಗಿದ್ದು, ಬೆಂಗಳೂರಿನಲ್ಲಿ ಇಂತಹ ಕಾರ್ಯಕ್ರಮಗಳೇ ತೀರಾ ಅಪರೂಪ ಅನ್ನುವಷ್ಟು ಜನರನ್ನು ತಣಿಸಿತು.

-ತೇಜಸ್ವಿ

[ಜನವಾಣಿ- 21-10-1969] ಗಾಯನಗಂಗಾ ಪತ್ರಿಕೆ

Musings on music
Basavaraj Rajaguru's fine recital

It is always a pleasure to listen to Basavaraj Rajaguru. His smooth, expressive voice alone is sufficient to evoke a rich music appeal.

In addition, the varied repertoire and the skilful way he utilises it makes Rajaguru's recitals enjoyable from both the technical and aesthetic angles. His concert at the Town Hall on Sunday justified expectations. It was organised by the Arvind Sangeetha Vidyalaya.

Rajaguru commenced with Madhuvanthi this is a raga which sounds like Dharmavti seasoned with Komal Nishada to South India ears. The initial exposttion was in a reposeful vein. And as he gradully warmed up and his voice also gained in timbre and colour, the singing also became zestful and vivacious correspondingly. The phrasing was neat, clear and melodious and rhythmic figure which were coming out with ease seemed to be fluttering all around.



Gradualluy accelerating the tempo, he drifted into the drut pece and going stil faster he rounded off Madhuvanti with a Tarana. Some of the curving and zigzagging Tans and Swara figures testified to his perfect control over rhythm and its implications. However, we also missed in the Tarana some of the very lively touches like the pernutation of the syllables in a dizzy speed, with which we were familiar in some of his previous recitals.

Raga Des came next. The most notable part here was the second item which was a Chaturang. It is rarely heard nowadays and perhaps this was the first time in any Hindustani music concert in Bangalore during the past decade. As its name itself indicates, it has four parts - word, Parana, Sargam and Trivat. Chaturang is perhaps a refined form of ancient Prabandhas combining - different section like Pada, Tenaka, Pata, Swara, etc.,

Rajguru's presentation of Chaturang was comparatively brief. But, it clearly highlighted the different characteristics of the composition.

Poorva Kalyan was taken up after intermission and next a Purandaradasara Pada in Misra Kapi was rendered in a fervent mood. Apart from the many exotic raga shades in the improvisation the pada was moving by its tender undertones.

Rajaguru concluded with two Vachans, the celebrated 'Kalabeda Kolabeda' with its lofty sentiments and the intensely lyrical 'Chakorange Chandramana Chinte' set in Bhairavi.

Seshadri Gavai competently supported Rajaguru on Harmonium, while G.S. Hiremath's. Tabla was animated and full of verve, particularly in the solo turns in between the improvisations of the vocalist.

-Murali

(Deccan Herald - Wednesday, October, 22, 1969)



ಶ್ರೀ ಬಸವರಾಜ ರಾಜಗುರು ರಂಜನೀಯ ಸಂಗೀತ

ರಾಷ್ಟ್ರದ ಸುವಿಖ್ಯಾತ ಹಿಂದೂಸ್ತಾನೀ ಸಂಗೀತಗಾರರಾದ "ಸಂಗೀತರತ್ನ" ಶ್ರೀ ಬಸವರಾಜ ರಾಜಗುರುರವರು ನಿನ್ನೆಯ ದಿನ ಸುಮಾರು ಮೂರೂವರೆ ಗಂಟೆಗಳ ಕಾಲ ತಮ್ಮ ಸುಶ್ರಾವ್ಯ ಸಂಗೀತದಿಂದ ಶ್ರೋತೃವರ್ಗದವರನ್ನು ರಂಜಿಸಿದರು.

"ಮಧುವಂತಿ" ರಾಗದಿಂದ ತಮ್ಮ ಸಂಗೀತ ಕಾರ್ಯಕ್ರಮ ಆರಂಭಿಸಿದ ಶ್ರೀ ರಾಜಗುರುರವರು, ಸುಮಾರು 70 ನಿಮಿಷಗಳ ಕಾಲ ವಿಸ್ತಾರವಾಗಿ ಆಲಾಪನೆಮಾಡಿ, ಕಲ್ಪನಾಸ್ವರಗಳನ್ನು ಹಾಕಿ ಶೋತೃಗಳ ಮೆಚ್ಚುಗೆಗೆ ಪಾತ್ರರಾದರು.

ಅನಂತರ 'ದೇಸ್', 'ಪೂರ್ವಕಲ್ಯಾಣ್' ರಾಗಗಳಲ್ಲಿ ಇವರು ಹಾಡಿ ಕರ್ಣಾನಂದವನ್ನುಂಟುಮಾಡಿದರು. ಕೊನೆಯಲ್ಲಿ ಇವರು ಹಾಡಿದ ಭೈರವಿ ರಾಗದ ಕಳಬೇಡ ಕೊಲಬೇಡ ವಚನವಂತೂ ಇಷ್ಟುಬೇಗ ಈ ಹಾಡು ಮುಗಿದುಹೋಯಿತೆ ಎನಿಸುವಂತೆ ಮಾಡಿತು.

'ಗಾಯನ ಗಂಗಾ' ಸಂಪಾದಕರೂ, ಶ್ರೀ ಅರವಿಂದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರೂ ಆದ ಶ್ರೀ ಶೇಷಾದ್ರಿ ಗವಾಯಿಗಳು ಈ ಕಾರ್ಯಕ್ರಮವನ್ನು ಪುರಭವನದಲ್ಲಿ ಏರ್ಪಡಿಸಿದ್ದರಲ್ಲದೆ, ಈ ಕಾರ್ಯಕ್ರಮಕ್ಕೆ ಶ್ರಾವ್ಯವಾಗಿ ಹಾರ್ಮೋನಿಯಂ ನುಡಿಸಿದರು.

[ಸಂಯುಕ್ತ ಕರ್ನಾಟಕ -21-10-1969]

ರಾಜಗುರು ಅವರ ರಂಜನೀಯ ಗಾಯನ

ಕಳೆದು ಭಾನುವಾರ ಪುರಭವನದಲ್ಲಿ ಶ್ರೀ ಬಸವರಾಜಗುರುಗಳ ಸಂಗೀತವು ನಡೆಯಿತು. ಶ್ರೀಯುತರು ಮಧುವಂತಿ ರಾಗದಿಂದ ತಮ್ಮ ಗಾಯನವನ್ನು ಪ್ರಾರಂಭಿಸಿ ದೇಸ್, ಪೂರ್ವಕಲ್ಯಾಣ್, ದೇವರನಾಮಗಳನ್ನು ಹಾಡಿ ಭೈರವಿರಾಗದೊಡನೆ ಮುಕ್ತಾಯಗೊಳಿಸಿದರು.

ಬಹುರಂಜನೀಯವಾಗಿ ಹಾಡಿದ ಇವರಿಗೆ ಹಾರ್ಮೋನಿಯಂ ವಾದನವನ್ನು ಬೆಂಗಳೂರಿನ ಶ್ರೀ ಅರವಿಂದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರೂ ಗಾಯನ ಗಂಗಾ ಸಂಪಾದಕರೂ ಆದ ಶ್ರೀ ಆರ್.ವಿ. ಶೇಷಾದ್ರಿ ಗವಾಯ್‌ಗಳು ಬಹು ಚೆನ್ನಾಗಿ ನುಡಿಸಿದರು. ಜಿ.ಎಸ್. ಹಿರೇಮಠರವರ ತಬಲಾ ತುಂಬಾ ಸಮರಸವಾಗಿತ್ತು. ಈ ಕಾರ್ಯಕ್ರಮವನ್ನು ನಗರದ ಶ್ರೀ ಅರವಿಂದ ಸಂಗೀತ ವಿದ್ಯಾಲಯ ಏರ್ಪಡಿಸಿತ್ತು.

[ಕನ್ನಡಪ್ರಭ -23-10-1969]

Spell - binder

Under the auspices of Arvind Sangeetha Vidyalaya Sri Basavaraj Rajaguru gave a recital of Hindustani music at the Town Hall of Bangalore on 19th October 1969. Sri Basavaraj Rajaguru is



a famous musician of Dharwar of All - India fame with a rich voice capable of drawing universal admiration from the audience.

Rajaguru started with Raga Madhuvanti. The beginning of the concert was soft and as he proceeded his voice kept the audience spell bound.

The second item of the programme was Raga Des. After intermission Raga Poorvakalyani was sung and it was followed by a Pada of Purandaradasa in Misrakapi, the concluding part of his concert was two Vachanas.

Sri Rajaguru was ably assisted by Sri Seshadri Gavai on Harmonim and by Sri G.S. Hiremat on the Tabla. Incidentally it may be mentioned that Sri Seshadri Gavai is the head of Arvind Sangeetha Vidyalaya.

He is publishing a monthly journal on music called "Gayana Ganga".

(Indian Express - October 27, 1969)

ರಾಜಗುರು ಸುಶ್ರಾವ್ಯ ಗಾಯನ

ಸಂಗೀತಕಲೆಯ ಅಭಿವೃದ್ಧಿಗೆ ಬೆಂಗಳೂರಿನಲ್ಲಿ ಶ್ರಮಿಸುತ್ತಿರುವ ಹತ್ತಾರು ಸಂಸ್ಥೆಗಳಲ್ಲಿ ಅರವಿಂದ ಸಂಗೀತ ವಿದ್ಯಾಲಯವೂ ಒಂದು. ಆದರೆ ಇಲ್ಲಿ ಒಂದು ವಿಶೇಷವಿದೆ. ಅದರ ಕಾರ್ಯಕ್ಷೇತ್ರವು ಕೇವಲ ಸಂಗೀತ ಪಾಠ ಹೇಳುವುದಾಗಲೀ ಅಥವಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದಷ್ಟಕ್ಕೇ ಮಿತಿಗೊಂಡಿಲ್ಲ. ಈ ಕಲೆಗೇ ಮೀಸಲಾದ ಮಾಸಪತ್ರಿಕೆಯೊಂದನ್ನೂ ಪ್ರಕಟಿಸುತ್ತಿದೆ.

ಇದರಲ್ಲಿ ಪ್ರಾಯಶಃ ಅಂತಹ ಅತಿಶಯವೇನು ಎನ್ನಿಸಬಹುದು. ಆದರೆ ಇಂದು ಸಣ್ಣಪತ್ರಿಕೆಗಳನ್ನು ಪ್ರಕಟಿಸುವುದು ಎಂತಹ ಕಷ್ಟಕರವಾದ ಕೆಲಸವೆಂಬುದನ್ನು ಆ ವಿಷಯಕ್ಕೆ ಕೈಹಾಕಿದವರೆಲ್ಲಾ ಬಲ್ಲರು. ಅದರಲ್ಲಿಯೂ ಯಾವುದೋ ಒಂದೇ ಕ್ಷೇತ್ರಕ್ಕೇ ಮಿತಿಗೊಂಡ ಪತ್ರಿಕೆಗಳ ಜೀವನವು ಇನ್ನೂ ತೊಡಕಿನಿಂದ ಕೂಡಿದುದು. ಇಂತಹ ನಿರೀಕ್ಷಿತ ಮತ್ತು ಅನಿರೀಕ್ಷಿತ ಎಡರುತೊಡರುಗಳನ್ನೆಲ್ಲಾ ಎದುರಿಸಿ, ಸುಧಾರಿಸಿ, ಈ ವಿದ್ಯಾಲಯದ ಮುಖ್ಯಾಧಿಕಾರಿಯಾದ



ಶೇಷಾದ್ರಿ ಗವಾಯ್‌ರವರು "ಗಾಯನಗಂಗಾ" ಮಾಸಪತ್ರಿಕೆಯನ್ನು ಪ್ರಕಟಿಸುತ್ತಾ ಬಂದಿದ್ದಾರೆ ಅದೂ 12 ವರುಷಗಳ ಕಾಲದಿಂದ. ಶೇಷಾದ್ರಿ ಗವಾಯ್‌ರವರು ನಿರಾಡಂಬರ ವ್ಯಕ್ತಿ. ಎಲೆಯ ಮರೆಯ ಕಾಯಿಯಂತಹ ಜೀವನವವರದು. ಸದ್ಯದಲ್ಲಿ ಕನ್ನಡ ಭಾಷೆಯಲ್ಲಿ ಸಂಗೀತ ವಿಷಯಕವಾಗಿ ಒಂದೇ ಒಂದಾದ ಈ ಗಾಯನಗಂಗಾ ಮಾಸ ಪತ್ರಿಕೆಯನ್ನು ಬೆಳಸಿಕೊಂಡು ಬಂದಿರುವ ಅವರ ದೃಢ ಸಂಕಲ್ಪವು ಮೆಚ್ಚಬೇಕಾದುದೆ. ಈ ಕಾರ್ಯದಲ್ಲಿ ಅವರ ಗುರುಗಳಾದ ಕೈ. ವಾ. ಪಂಚಾಕ್ಷರಿ ಗವಾಯಿಗಳ ಆಶೀರ್ವಾದ ಬಲವು ಮುಖ್ಯವಾದುದು.

ಕಳೆದ ಭಾನುವಾರ ಈ ಸಂಗೀತ ವಿದ್ಯಾಲಯದ ಆಶ್ರಯದಲ್ಲಿ ಪುರಭವನದಲ್ಲಿ ನಡೆದ ಹಿಂದೂಸ್ತಾನಿ ಸಂಗೀತ ಕಚೇರಿಯಲ್ಲಿ ಭಾಗವಹಿಸಿದ ಪ್ರಧಾನ ಗಾಯಕ ಬಸವರಾಜ ರಾಜಗುರು ಅವರು ಪಂಚಾಕ್ಷರಿ ಗವಾಯಿಗಳ ಪಟ್ಟಶಿಷ್ಯ. ಬೆಂಗಳೂರಿಗೆ ಹೊಸಬರೇನಲ್ಲ ಅವರ ಸುಸ್ವರ ಮತ್ತು ಸುನಾದಯುತ ಗಾಯನವು ಜನಪ್ರಿಯವಾಗಿದೆ ಎಷ್ಟು ಕೇಳಿದ್ದರೂ ಇನ್ನೂ ಕೇಳಬೇಕೆನ್ನಿಸುವಂತಹುದು. ಇದಕ್ಕೂ ಹೆಚ್ಚಾದ ಲಾಲಿತ್ಯವು ಅವರ ಗಾಯನದ ಪ್ರಧಾನ ಗುಣ.

ಈ ಕಚೇರಿಯಲ್ಲಿ ರಾಜಗುರುರವರು ನಿರೂಪಿಸಿದ ರಾಗಗಳು ಮುಖ್ಯವಾಗಿ ಮಧುವಂತಿ ದೇಸ್, ಪೂರಿಯಕಲ್ಯಾಣ್ ಇತರ ಅಂಗದ ಮಿಶ್ರಕಾಪಿ, ತಿಲಂಗ್, ಭೈರವಿ ಮುಂತಾದುವು ಸ್ವಲ್ಪ ಲಲಿತವಾದ ಕೃತಿಗಳ ನಿರೂಪಣೆಗೆ ವಿನಿಯೋಗಿಸಲ್ಪಟ್ಟುವು. ಇದರಲ್ಲಿ ವಿಸ್ತಾರವಾಗಿ ಚಿತ್ರಿಸಲ್ಪಟ್ಟ ರಾಗ ಮಧುವಂತಿ ಕರ್ನಾಟಕ ಪದ್ಧತಿಯ ಧರ್ಮವತಿ ರಾಗದಲ್ಲಿ ೨ ನಿಷಾದಗಳ ಪ್ರಯೋಗ ಮಾಡಿದಲ್ಲಿ ಆಗುವ ಅನುಭವವುಂಟಾಗುತ್ತಿದ್ದಿತು. ಇದನ್ನು ಸರಾಗವಾಗಿ ಸುನಾದಯುತವಾದ ಎಳೆಗಳಿಂದ ವಿಸ್ತರಿಸಿದರು-ರಾಜಗುರು. ಆಕರ್ಷಣೀಯವಾಗಿದ್ದು ಅನೇಕ ಸಲ ಕರ್ನಾಟಕ ಪದ್ಧತಿಯ ಸ್ವರಪ್ರಸ್ತಾರದ ಅನುಭವವುಂಟು ಮಾಡುತ್ತಿದ್ದಿತು. ಬಸವರಾಜ ರಾಜಗುರು ಅವರಿಗೆ ತಳಹದಿಯೇ ಕರ್ನಾಟಕ ಸಂಗೀತ ಎಂಬ ಅಂಶವು ಅನೇಕರಿಗೆ ತಿಳಿದಿರಲಾರದು.

ಅಂದಿನ ಕಚೇರಿಯಲ್ಲಿ ಅವರು ನಿರೂಪಿಸಿದುದರಲ್ಲಿ ಒಂದು ಗಮನಾರ್ಹ ಅಂಶವೆಂದರೆ ಚತುರಂಗ್. ಹಿಂದೂಸ್ತಾನಿ ಕೃತಿಗಳಲ್ಲಿ ಇದರದೇ ಒಂದು ವಿಶೇಷ. ಸಾಹಿತ್ಯ, ತೇನಕ, ಅಂದರೆ ತಾನಾ ಅಕ್ಷರಗಳ ಪ್ರಯೋಗ, ಸ್ವರ ಮತ್ತು ತರಾನಾ ಅಂದರೆ ಶೊಲ್ಲುಕಟ್ಟುಗಳಿಂದ ಕೂಡಿದ ನಾಲ್ಕು ಅಂಗಗಳ ಕೃತಿ ಚತುರಂಗ್. ಇದನ್ನು ಬಹು ಲವಲವಿಕೆಯಿಂದ ಹಾಡಿದರು.

ಲಲಿತವಾದ ಭಾಗದಲ್ಲಿ ಆಕರ್ಷಣೀಯ ರಾಗಛಾಯಗಳಿಂದ ಕೂಡಿ ಠುಮ್ರಿ ಶೈಲಿಯಲ್ಲಿ ನಿರೂಪಿಸಲಾದ ಪುರಂದರದಾಸ ಪದ ಮತ್ತು ಎರಡು ವಚನಗಳು ಬಹುಶ್ರಾವ್ಯವಾಗಿದ್ದುವು.

[ಪ್ರಜಾವಾಣಿ-27-10-1969]

-ಮುರಲಿ



ಉತ್ತರಾದಿ ಸಂಗೀತ ಮಹಾ ವಿದ್ವಾಂಸ ಸಂಗೀತ ಸುಧಾಕರ ಶ್ರೀ ಬಸವರಾಜ ರಾಜಗುರು

(ಗಾಯನ ಗಂಗಾ - ಏಪ್ರಿಲ್ 1960)

ಶ್ರೀ ರಾಮೋತ್ಸವ ಸಂದರ್ಭದಲ್ಲಿ ಶ್ರೀ ರಾಮಸೇವಾ ಮಂಡಲಿಯವರು ಸಿಟಿ ಇನ್‌ಸ್ಟಿಟ್ಯೂಟಿನ ಕಾಂಪೌಂಡಿನಲ್ಲಿ ಹಾಕಲಾಗಿದ್ದ ಚಪ್ಪರದಲ್ಲಿ ಸಂಗೀತ ಕಾರ್ಯಕ್ರಮಗಳಿಗೆ ಸಂಗೀತಾಭಿಮಾನಿಗಳು ಚಪ್ಪರದ ಒಳಗೂ ಹೊರಗೂ ಕಿಕ್ಕಿರಿದು ಸೇರುವಂತೆ ತಾ. ೧.೪.೬೦ ರಂದೂ ಶ್ರೀ ಬಸವರಾಜ ರಾಜಗುರುಗಳವರ ಸಂಗೀತ ಕಛೇರಿಗೆ ಸಹಾ ಸೇರಿದ್ದರು.

ಶ್ರೀ ರಾಜಗುರುಗಳವರು ಮೊದಲು "ಯರ್ಮಣ್" ರಾಗದಿಂದ ತಮ್ಮ ಕಾರ್ಯಕ್ರಮವನ್ನು ಪ್ರಾರಂಭಮಾಡಿದರು. ದಕ್ಷಿಣಾದಿಯ "ಕಲ್ಯಾಣಿ" ರಾಗವನ್ನು ಹೋಲುವ ಈ ಯರ್ಮಣ್‌ರಾಗವು ಅಂದು ಶ್ರಾವಕರನ್ನು ಮುಗ್ಧಗೊಳಿಸಿತು. ಶ್ರೀಯುತರು ನಿ ರಿ ಗಾ, ಗಾ ರಿ ನಿ ರಿ ಗಾ ಮಾ ಗಾ ರೀ ಸಾ ನೀ ರೀ ಗಾ ಇತ್ಯಾದಿ ಗಾಂಧಾರ (ವಾದಿ)ಕ್ಕೆ ಮಹತ್ವ ಕೊಟ್ಟು ರಾಗದ ಪೂರ್ವಾಂಗವನ್ನು ತುಂಬಾ ಕರ್ಣಾನಂದಕರವಾಗಿ ನ್ಯಾಸಮಾಡಿದರು. ನಂತರ ರಾಗವು ಪಂಚಮಕ್ಕೆ ಹೋಗಿ ಸೇರಿದಾಗಲಂತೂ ನೀರಿನೊಡನೆ ನೀರು ಬೆರೆಯುವಂತೆ ಶ್ರೀ ಬಸವರಾಜ ಗುರುಗಳವರ ಧ್ವನಿಗೂ ಶೃತಿಗೂ ವ್ಯತ್ಯಾಸವೇ ಗೊತ್ತಾಗದಂತೆ ಇತ್ತು. ಪಂಚಮ ನ್ಯಾಸ ಮುಗಿದಮೇಲೆ ದೈವತ ಮತ್ತು ನಿಷಾಧಗಳಿಗಾಗಿ, ಮಧನೀsನೀಧಮಧನೀsಮ ಧ ಮ ನಿ ಧ ನೀ ಇತ್ಯಾದಿ ವಿಧವಿಧವಾದ ಸ್ವರವಿಸ್ತಾರಗಳಿಂದ ಹಾಡುತ್ತಿರುವಾಗ ಯರ್ಮಣ್ ರಾಗವೇ ಮುಂದೆಬಂದು ನಿಂತಂತಿತ್ತು. ನಂತರ ಬೋಲ್ ತಾರ್ಣ್, ತಾರ್ಣ್, ಲಯಕಾರಿ ಕೆಲಸ, ಸ್ವರ ಹಾಕುವಿಕೆ, ಇತ್ಯಾದಿ ತಮ್ಮದೇ ಆದ ವೈಶಿಷ್ಟ್ಯದಿಂದ ಹಾಡಿ ತೋರಿಸಿದರು. ಧೀಮಾ ಏಕ್‌ತಾಲ್‌ನಲ್ಲಿ ಚೀಜನ್ನು ಮುಗಿಸಿ ತ್ರಿತಾಲ್‌ನಲ್ಲಿ ದೃತದ ಚೀಜ್ ಪ್ರಾರಂಭ ಮಾಡಿದಮೇಲೆ ತಬಲ ಸಾಥಿಗಾರರಾಗಿದ್ದ ಶ್ರೀ ಬಸವರಾಜ ಬೆಂಡಿಗೇರಿಯವರು ಮೊದಲಿಗಿಂತಲೂ ಉತ್ಸಾಹಶಾಲಿಗಳಾಗಿ ನುಡಿಸಲು ಪ್ರಾರಂಭಮಾಡಿದರು. ಶ್ರೀ ಬೆಂಡಿಗೇರಿಯವರು ಸಹ ಉತ್ತಮ ಕಲಾವಿದರು. ಕರ್ಣಾಟಕದ ಕಿರಿಯ ವಯಸ್ಸಿನ ಕಲಾವಿದರಾದ ಶ್ರೀ ಬೆಂಡಿಗೇರಿಯವರಿಗೆ ಉತ್ತಮ ಭವಿಷ್ಯವಿದೆ. ಶ್ರೀ ರಾಜಗುರುಗಳು ಯರ್ಮಣ್ ರಾಗ ಮುಗಿದ ಮೇಲೆ ಕಾಪಿ ರಾಗದಲ್ಲಿ "ಮಾಧವ ನಿನ್ನ ಮೂರುತಿಯನು ನಿಲ್ಲಿಸೋ" ಎಂಬ ಶ್ರೀ ಪುರಂದರದಾಸರ ಕೃತಿಯನ್ನು ಒಳ್ಳೆ ರಸವತ್ತಾಗಿ ಹಾಡಿದ್ದಲ್ಲದೆ ತಾರಸ್ಥಾಯಿಯ ಪಂಚಮದವರೆಗೆ ನ್ಯಾಸಮಾಡಿ ವರಪ್ರದವಾದ ತಮ್ಮ ಧ್ವನಿಮಾಧುರ್ಯದಿಂದ ಶೋತೃಗಳನ್ನು ಆನಂದಗೊಳಿಸಿದರು.

ಹತ್ತು ನಿಮಿಷಗಳ ವಿರಾಮದಲ್ಲಿ ಮಂಡಲಿ ಅಧ್ಯಕ್ಷ ಶ್ರೀ ಎ.ಎರ್ಣ್. ರಾಮರಾಯರೂ ಮತ್ತು ವಿದ್ಯಾ ಮಂತ್ರಿಗಳಾದ ಶ್ರೀ ಅಣ್ಣಾರಾವ್ ಗಣಮುಖಿಯವರು ಕಲಾವಿದರ ಬಗ್ಗೆ



ಸ್ವಾರಸ್ಯಪೂರ್ಣ ಭಾಷಣಗಳನ್ನು ಮಾಡುತ್ತಾ - ಶ್ರೀ ಬಸವರಾಜ ರಾಜಗುರುಗಳವರು ಸುಶ್ರಾವ್ಯವಾಗಿ ಹಾಡುವುದನ್ನು ಕೇಳಿ ನನಗೆ ತುಂಬಾ ಸಂತೋಷವಾಗಿದೆ. ಮರುಭೂಮಿಯಲ್ಲಿ ಸಿಹಿನೀರಿನ ಬುಗ್ಗೆಯು ಬಾಯಾರಿರುವಾಗ ಸಿಕ್ಕರೆ ಆಗುವ ಆನಂದಕ್ಕಿಂತ ಹೆಚ್ಚು ಆನಂದ, ಇಂಥ ಉತ್ತಮ ಸಂಗೀತವನ್ನು ಕೇಳುವುದರಿಂದ ಉಂಟಾಗುತ್ತದೆ. ಸಂಗೀತ ಕಲೆ ಬಹಳ ಪವಿತ್ರವಾದ ಕಲೆ. ಸಂಗೀತಗಾರರು, ಸಾಮಾನ್ಯವಾಗಿ ಒಳ್ಳೆಯವರಾಗಿರುತ್ತಾರೆ. ಅವರ ಹೃದಯ ತುಂಬಾ ಕೋಮಲವಾಗಿರುತ್ತದೆ. ಯಾರು ಸಂಗೀತವನ್ನು ಹಾಡುತ್ತಾರೆಯೋ ಮತ್ತು ಕೇಳಿ ಆನಂದ ಪಡುತ್ತಾರೆಯೋ ಅವರು ಮೋಸಮಾಡಲು ಅಂಜುತ್ತಾರೆ. ಯಾರಿಗೆ ಹಾಡುವ ಅಥವಾ ಕೇಳುವ ತಾಳ್ಮೆ ಸಹಾ ಇರುವುದಿಲ್ಲವೋ ಅವರು ಕೊಲೆ ಮಾಡಲು ಸಹಾ ಹಿಂದು ಮುಂದೆ ನೋಡುವುದಿಲ್ಲ. ಅದಕ್ಕಾಗಿ ಪ್ರತಿಯೊಬ್ಬರೂ ಸಂಗೀತಗಾರರಾಗದಿದ್ದರೂ ಸಂಗೀತದ ಬಗ್ಗೆ ಪ್ರೇಮಿಸುವುದನ್ನಾದರೂ ಕಲಿಯಬೇಕು. ಕೇಳುವುದನ್ನು ಅವಶ್ಯ ಎಲ್ಲರೂ ಅಭ್ಯಸಿಸಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಇಂದು ನನಗೆ ಇನ್ನೊಂದು ಸಂತೋಷದ ವಿಷಯವೆಂದರೆ, ದಕ್ಷಿಣಾದಿ ಕಛೇರಿಗಳ ಮಧ್ಯೆ ಉತ್ತರಾದಿಯ ಕಾರ್ಯಕ್ರಮವೇರ್ಪಡಿಸಿರುವುದು. ಈ ಭಾವನೆ ಕನ್ನಡಿಗರಲ್ಲಿ ಬೆಳೆಯಬೇಕು. ಉಭಯ ಪದ್ಧತಿಯ ಸಂಗೀತ ಶಾಸ್ತ್ರಗಳು ನೆಲೆಗೊಂಡಿರುವ ಕನ್ನಡ ನಾಡಿನ ಜನರಿಗೆ ಎರಡು ಸಂಪ್ರದಾಯಗಳಿಗೆ ಮನ್ನಣೆ ಕೊಡುವ ಬುದ್ಧಿ ಇದೇ ರೀತಿ ಹೆಚ್ಚಿದಾಗಲೆ ಕನ್ನಡನಾಡಿನ ಸಂಗೀತ ಕಲಾವಿದರ ಉದ್ಧಾರ ಸಾಧ್ಯ. ಎಂದು ಹೇಳಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ನಂತರ (ರಾಜಗುರುರವರು) ಬಸಂತ್ ಬಹಾರ್ ಮತ್ತು ವಚನವನ್ನು ಹಾಡಿ, ಶ್ರೀ ರಾಮರಾಯರ ಕೋರಿಕೆಯಂತೆ ಶ್ರೀ ತುಲಸಿದಾಸರ ಭಜನೆಹಾಡಿದರು. ಭೈರವಿಯೊಡನೆ ಸಂಗೀತವು ಮುಕ್ತಾಯವಾಯಿತು.

ಪಂ. ರಾಜಗುರು ಸ್ಮರಣೆಯ ಸಂಸ್ಥೆಗಳು

ರಾಜಗುರು ಸಂಗೀತ ಸಭಾ

ಕಳೆದ ೨೨ ವರ್ಷಗಳಿಂದ ಮಹಾನಗರದ ಸಂಗೀತ ಪ್ರಿಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಜನಪ್ರಿಯವಾಗಿರುವ ರಾಜಗುರು ಸಂಗೀತ ಸಭಾ ವಿವಿಧ ರೀತಿಯ ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಾ ಮುನ್ನಡೆಯುತ್ತಿದೆ. ಸತತವಾಗಿ ೨೨ ವರ್ಷಗಳಿಂದ ಅಹೋರಾತ್ರಿ ಸಂಗೀತ ಸಮ್ಮೇಳನವನ್ನು ಏರ್ಪಡಿಸುವ ಈ ಸಭಾದ ಕಾರ್ಯಕ್ರಮಗಳಿಗೆ ದೂರದ ಊರುಗಳಿಂದ ಕೂಡಾ ಕೇಳುಗರು ಆಗಮಿಸಿ ಸಂಗೀತ ಸುಧೆಯನ್ನು ಸವಿಯುತ್ತಾರೆ. ಅಹೋರಾತ್ರಿ ಸಂಗೀತ ಕೇಳುವ ಅಭಿರುಚಿಯನ್ನು ಸಭಾ ಕೇಳುಗರಲ್ಲಿ ಬೆಳೆಸಿದೆ.

೧೯೮೯ ಸೆಪ್ಟೆಂಬರ್ ೧೬ ರಂದು ಪಂಡಿತ ಬಸವರಾಜ ರಾಜಗುರು ಅವರ ೨೦ನೇ



ಹುಟ್ಟುಹಬ್ಬದ ಅಂಗವಾಗಿ ಬೃಹತ್ ಅಹೋರಾತ್ರಿ ಸಂಗೀತ ಸಮಾರಂಭವನ್ನು ಏರ್ಪಡಿಸುವ ಮೂಲಕ ನಿಜಗುಣ ರಾಜಗುರು ಅವರು "ರಾಜಗುರು ಸಂಗೀತ ಸಭಾ" ಆರಂಭಿಸಿದರು.

೧೯೯೦ ರಲ್ಲಿ ಪಂಡಿತ ಬಸವರಾಜ ರಾಜಗುರು ಅವರ ಸಮ್ಮುಖದಲ್ಲಿ ಖ್ಯಾತ ಗಾಯಕಿ ಡಾ. ಗಂಗೂಬಾಯಿ ಹಾನಗಲ್ ಅವರನ್ನು ಸನ್ಮಾನಿಸಲಾಯಿತು. ಮುಂದೆ ೧೯೯೧ ರಲ್ಲಿ ಪಂಡಿತ ರಾಜಗುರು ಅವರು ತೀರಿಹೋದ ನಂತರ ಅವರ ಸ್ಮಾರಕ ಸಭೆಯಾಗಿ ರಾಜಗುರು ಸಂಗೀತ ಸಭಾ ಕಾರ್ಯ ನಿರ್ವಹಿಸಿದೆ.

ಗುರು-ಶಿಷ್ಯ ಪರಂಪರೆಯನ್ನು ಪ್ರತಿಬಿಂಬಿಸುವ ಮತ್ತು ಪಂ. ರಾಜಗುರು ಅವರು ಬೆಳೆಸಿದ ಸಂಗೀತ ಪರಂಪರೆಯನ್ನು ಮುನ್ನಡೆಸುವ ಉದ್ದೇಶದಿಂದ ಪ್ರತಿವರ್ಷ ಅವರ ಸ್ಮರಣಾರ್ಥವಾಗಿ ಅಹೋರಾತ್ರಿ ಪುಣ್ಯಸ್ಮೃತಿ ಸಂಗೀತ ಸಮ್ಮೇಳನವನ್ನು ನಡೆಸಲಾಗುತ್ತದೆ. ಇದರ ಜೊತೆಯಲ್ಲಿ ಪರಂಪರಾ ಸಂಗೀತೋತ್ಸವ, ವಚನ ಸಂಗೀತೋತ್ಸವ [ಅಹೋರಾತ್ರಿ ವಚನ ಸಂಗೀತದ ಕಾರ್ಯಕ್ರಮ ನಡೆಸಿದ ಕೀರ್ತಿ ಸಭಾದ್ದು] ದಾಸ ಸಂಗೀತೋತ್ಸವ, ನಾಟ್ಯ ಸಂಗೀತೋತ್ಸವ ಹೀಗೆ ಹಲವು ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಭಾ ಹೆಸರಾಗಿದೆ. ಹಿರಿಯ ಕಲಾವಿದರಿಗೆ ಸನ್ಮಾನ, ಖ್ಯಾತ ಕಲಾವಿದರ ಹಾಗೂ ಪಂ. ರಾಜಗುರು ಅವರು ಹಾಡಿರುವ ಧ್ವನಿ ಸುರುಳಿಗಳ ಸಂಗ್ರಹ, ಸಂಗೀತಕ್ಕೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹ ಮಾಡಲಾಗಿದೆ. ಮುಂಬರುವ ದಿನಗಳಲ್ಲಿ ಪಂ. ರಾಜಗುರು ಪ್ರಶಸ್ತಿ ನೀಡುವ ಉದ್ದೇಶದಿಂದ ಸಭಾ ಕಾರ್ಯಗತವಾಗಿದೆ.

ಸಭಾದಿಂದ ಆಯೋಜಿಸಲಾದ ಕೆನರಾ ಬ್ಯಾಂಕ ದಾಸ ಸಂಗೀತೋತ್ಸವಕ್ಕೆ ಧಾರವಾಡ ಕಲಾಭವನದಲ್ಲಿ ಕಿಕ್ಕಿರಿದು ತುಂಬಿ ನೂರಾರು ಜನ ನಿಂತುಕೊಂಡೇ ಸಂಗೀತವನ್ನಾಲಿಸಿದ್ದು, ಸಭಾದ ಜನಪ್ರಿಯತೆಗೆ ಒಂದು ನಿದರ್ಶನ.

ಪಂಡಿತ ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್, ಪ್ರಭುದೇವ, ಸರದಾರ ಅಲಕಾದೇವ, ಪಂಚಾಕ್ಷರಿಸ್ವಾಮಿ ಮತ್ತೀಗಟ್ಟಿ, ಚಂದ್ರಶೇಖರ ಪುರಾಣಿಕಮಠ, ಬಸವರಾಜ ಬೆಂಡಿಗೇರಿ, ಕೃಷ್ಣಾ ಹಾನಗಲ್, ರತನಮೋಹನ ಶರ್ಮಾ, ಪುತ್ತೂರು ನರಸಿಂಹನಾಯಕ, ರಂಗ ದಿಗ್ಗಜ ಏಣಗಿ ಬಾಳಪ್ಪ, ಶ್ರೀಕಾಂತ ದೇಶಪಾಂಡೆ ಹೀಗೆ ನೂರಾರು ಹೆಸರಾಂತ ಕಲಾವಿದರು ಸಭಾದ ಕಾರ್ಯಕ್ರಮಗಳಿಗೆ ಆಗಮಿಸಿದ್ದಾರೆ.

ಪಂಡಿತ ಸೋಮನಾಥ ಮರಡೂರ, ಗಣಪತಿ ಭಟ್ಟ, ಪರಮೇಶ್ವರ ಹೆಗಡೆ, ಶಿವಾನಂದ ಪಾಟೀಲ, ಶ್ರೀಮತಿ ಸಂಗೀತಾ ಕಟ್ಟಿ, ಮುದ್ದು ಮೋಹನ, ಶ್ರೀಪಾದ ಹೆಗಡೆ, ಶಾಂತಾರಾಮ ಹೆಗಡೆ, ಗೋಜನೂರ, ಡಾ. ಹನುಮಣ್ಣ ನಾಯಕದೊರೆ ಇವರುಗಳು ಸಭಾದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರತಿವರ್ಷ ತಪ್ಪದೇ ಆಗಮಿಸಿ ಮಹಾನ್ ಗುರುವಿಗೆ ತಮ್ಮ ಸಂಗೀತ ನಮನಗಳನ್ನು ಸಲ್ಲಿಸಿರುತ್ತಾರೆ.



ಸಭಾದ ಏಳಿಗೆಗಾಗಿ ಶ್ರಮಿಸುತ್ತಿರುವ ಹಿರಿಯ ವೈದ್ಯ ಡಾ. ವಿ. ವಿ. ಪಾವಟೆ ಅಧ್ಯಕ್ಷರಾಗಿ, ಸಂಗೀತ ಬಗ್ಗೆ ಅಪಾರ ಆಸಕ್ತಿಯುಳ್ಳ ರಾಜಗುರು ಅವರ ಪರಮ ಅಭಿಮಾನಿ ಡಾ. ಎಚ್.ಎ. ಕಟ್ಟಿ ಹಾಗೂ ನಿಜಗುಣ ರಾಜಗುರು ಕಾರ್ಯದರ್ಶಿಗಳಾಗಿದ್ದರೆ, ಸಭಾಕ್ಕೆ ದಿವಂಗತ ಸಿ.ಬಿ. ಗುತ್ತಲ ಅವರ ಕೊಡುಗೆ ಮರೆಯಲಾಗದು. ಮಾತೋಶ್ರೀ ಭಾರತಿದೇವಿ ರಾಜಗುರು ಅವರ ಆಶೀರ್ವಾದ ಇದಕ್ಕೆ ಇದೆ. ಧಾರವಾಡದಂತೆ ಬೆಂಗಳೂರು, ಮುಂಬೈ, ದಿಲ್ಲಿ ನಗರಗಳಲ್ಲಿಯೂ ಕೂಡಾ ಕಾರ್ಯಕ್ರಮಗಳನ್ನು ನಡೆಸುವ ಯೋಜನೆಯನ್ನು ಸಭಾ ಹಾಕಿಕೊಂಡಿದೆ.

ಸಾಮ್ರಾಟ್ ಪಂ. ಬಸವರಾಜ ರಾಜಗುರು
ರಾಷ್ಟ್ರೀಯ ಸ್ಮಾರಕ ಟ್ರಸ್ಟ್

ಪಂ. ಬಸವರಾಜ ರಾಜಗುರು ಅವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿರುವ ಅನನ್ಯ ಕೊಡುಗೆಯನ್ನು ಮನಗಂಡ ಕರ್ನಾಟಕ ಸರಕಾರವು ಅವರ ಗೌರವಾರ್ಥ ಒಂದು ರಾಷ್ಟ್ರೀಯ ಸ್ಮಾರಕ ಟ್ರಸ್ಟನ್ನು ರಚನೆ ಮಾಡಿದೆ. ಅಲ್ಲದೆ ಅವರ ಹೆಸರಿನಲ್ಲಿ ಒಂದು ಸ್ಮಾರಕ ಭವನವನ್ನು ಸ್ಥಾಪಿಸಲು ೧ ಕೋಟಿ ರೂ. ಗಳನ್ನು ನೀಡಿದೆ.

ಟ್ರಸ್ಟಿನ ಪದಾಧಿಕಾರಿಗಳು

ಶ್ರೀ ಚಂದ್ರಕಾಂತ ಬೆಲ್ಲದ (ಶಾಸಕರು) ಅಧ್ಯಕ್ಷರು

ಶ್ರೀಮತಿ ಭಾರತಿದೇವಿ ರಾಜಗುರು ಸದಸ್ಯರು

ಶ್ರೀ ನಿಜಗುಣ ರಾಜಗುರು

ಪಂ. ಸೋಮನಾಥ ಮರಡೂರ

ಶ್ರೀಮತಿ ಸಂಗೀತಾ ಕಟ್ಟಿ

ಡಾ. ಉದಯಕುಮಾರ ದೇಸಾಯಿ

ಸಹಾಯಕ ನಿರ್ದೇಶಕರು ಸದಸ್ಯರ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಡಾ. ಮುದ್ದು ಮೋಹನ

ಡಾ. ಪಾವಟೆ

ಯೋಜನೆ :

೧. ರಾಜಗುರು ಸ್ಮಾರಕ ಭವನದ ನಿರ್ಮಾಣ, ಧಾರವಾಡ ರಾಜಗುರು ನಿವಾಸದಲ್ಲಿ ರಾಜಗುರು ಸ್ಮಾರಕ ವಸ್ತು ಸಂಗ್ರಹಾಲಯ.



೨. ರಾಷ್ಟ್ರೀಯ ಪ್ರಶಸ್ತಿ ನಗದು ೧ ಲಕ್ಷ ಹಿರಿಯ ಕಲಾವಿದರಿಗೆ ನೀಡುವುದು.

೩. ಧಾರವಾಡದಲ್ಲಿ ೩ ಅಥವಾ ೫ ದಿನಗಳ ಸಂಗೀತ ಸಮ್ಮೇಳನ, ಅದರಲ್ಲಿ ವಚನ, ದಾಸರ ಪದ, ನಾಟ್ಯ ಸಂಗೀತ ಹಾಗು ಶಾಸ್ತ್ರೀಯ ನೃತ್ಯಗಳು ಇರುವವು.

೪. ಮುಂಬೈ, ಬೆಂಗಳೂರು, ಗೋವಾಗಳಲ್ಲಿ ಟ್ರಸ್ಟ್ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನಡೆಸುವುದು.

೫. ರಾಜಗುರು ಸಂಗೀತಾಶ್ರಮವನ್ನು ತೆರೆದು ಗುರುಕುಲ ಪದ್ಧತಿಯಲ್ಲಿ ಸಂಗೀತ ಶಿಕ್ಷಣ ನೀಡುವುದು.

[ಪ್ರಾರಂಭಿಕ ಹಂತದಿಂದ ವಿಶ್ವವಿದ್ಯಾಲಯದ ಮಟ್ಟದವರೆಗೆ]

೬. ರಾಜಗುರುಗಳ ಬಗ್ಗೆ ಸಮಗ್ರ ಗ್ರಂಥಗಳ ರಚನೆ

೭. ರಾಜಗುರುಗಳ ಧ್ವನಿಸುರುಳಿಗಳ ಮರುಮುದ್ರಣ ಮತ್ತು ಸಾಕ್ಷ್ಯಚಿತ್ರಗಳನ್ನು ತಯಾರಿಸುವುದು.

೮. ಭಾರತೀಯ ಸಂಗೀತ ದಿಗ್ಗಜರ ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಿ ತಿಂಗಳಿಗೊಮ್ಮೆ ಶ್ರೋತೃಗಳಿಗೆ ಕೇಳಿಸುವಂಥ ಯೋಜನೆ.

೯. ಯುವ ಕಲಾವಿದರಿಗೆ ಪ್ರೋತ್ಸಾಹಿಸಲು ರಾಜಗುರು ಯುವ ಪ್ರಶಸ್ತಿ [೨೫,೦೦೦/- ರೂ.] ಫಲಕ ನೀಡುವುದು ಮುಂತಾದವುಗಳು.

"ಗುರುಶಿಷ್ಯ ಪರಂಪರೆಯು" ಗುರುಕುಲ

ರಾಜಗುರು ಅವರು ಪದೇ ಪದೇ ಹೇಳುತ್ತಿದ್ದರು. "ನಮ್ಮಲ್ಲಿ ಗುರು ಶಿಷ್ಯರು ಒಂದೇ ಸೂರಿನಡಿ ಇದ್ದು ಸಂಗೀತ ಸಾಧನೆ ಮಾಡುವ ಗುರುಕುಲ ಪದ್ಧತಿಯ ಆಶ್ರಮ ಇಲ್ಲವೇ ಸಂಗೀತ ಗ್ರಾಮದ ಸ್ಥಾಪನೆಯಾಗಬೇಕು. ಅಂದರೆ ಮಾತ್ರ ನಮ್ಮ ಪರಂಪರೆ ಮುಂದುವರೆಯುತ್ತದೆ. ಶಾಸ್ತ್ರೀಯ ಸಂಗೀತದ ಕಲಾವಿದರು ತಯಾರಾಗುತ್ತಾರೆ" ಎಂದು. ಸುಮಾರು ೩೦ ವರ್ಷಗಳ ಹಿಂದೆ ಹೇಳಿದ ಈ ಮಾತು ಎಷ್ಟು ಅರ್ಥಪೂರ್ಣವಾದುದು ಎಂದು ತಿಳಿಯುತ್ತದೆ.

ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ನಮ್ಮ ಕರ್ನಾಟಕ ನೀಡಿದ ಕೊಡುಗೆ ಉಲ್ಲೇಖನೀಯ. ಶಾಸ್ತ್ರೀಯ ಸಂಗೀತದ ಪಂಚರತ್ನರು ಎಂದು ಪ್ರಸಿದ್ಧರಾಗಿದ್ದ ಪಂ. ಭೀಮಸೇನ ಜೋಶಿ, ಪಂ. ಕುಮಾರ ಗಂಧರ್ವ, ಪಂ. ಬಸವರಾಜ ರಾಜಗುರು, ಪಂ. ಮಲ್ಲಿಕಾರ್ಜುನ ಮನ್ಸೂರ, ಡಾ. ಗಂಗೂಬಾಯಿ ಹಾನಗಲ್ ಇವರೆಲ್ಲ ಭಾರತೀಯ ಸಂಗೀತಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದುಕೊಟ್ಟ ಕನ್ನಡಿಗರು. ಈ ದಿಗ್ಗಜ ಕಲಾವಿದರ ನಂತರ ಅವರ ಸ್ಥಾನವನ್ನು ತುಂಬಬಲ್ಲವರು ಅಷ್ಟಾಗಿ ಬಾರದೆ ಇರುವದು ಕಳವಳಕಾರಿಯಾಗಿದೆ. ಇಂದು ಶಾಸ್ತ್ರೀಯ



ಸಂಗೀತ ಕೇಳುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಅದನ್ನೇ ಸಾಧನೆ ಮಾಡುವ ವ್ಯಕ್ತಿ ಕಲಾವಿದರು ವಿರಳರಾಗುತ್ತಿದ್ದಾರೆ. ಅನೇಕರು ಸುಲಭವಾಗಿ ಪ್ರಚಾರ, ದುಡ್ಡು ಸಿಗುವ ಮಾಧ್ಯಮಗಳತ್ತ ಆಕರ್ಷಿತರಾಗಿದ್ದಾರೆ. ಸಂಗೀತಾಭ್ಯಾಸ ಮಾಡುವದು ಹವ್ಯಾಸಕ್ಕಾಗಿ, ಟಿ. ವ್ಹಿ. ಶೋಗಳಲ್ಲಿ ಹಾಡುವದಕ್ಕಾಗಿ ಇಲ್ಲವೇ ನೌಕರಿ ದೊರಕಿಸಿಕೊಳ್ಳುವದಕ್ಕಾಗಿಯೋ ಆಗಿದೆ. ಅದರಲ್ಲಿಯೇ ತಮ್ಮನ್ನು ತೊಡಗಿಸಿಕೊಂಡು ಪರಿಪೂರ್ಣತೆಯನ್ನು ಪಡೆಯುವವರು ತುಂಬಾ ಕಡಿಮೆ. ಇದಕ್ಕೆ ಮುಖ್ಯ ಕಾರಣ ಕಲಿಯುವ ಹಂಬಲ ಇರುವವರಿಗೆ ಉತ್ತಮ ಗುರು ದೊರಕದೆ ಇರುವದು. ದಿಗ್ಗಜರು ಇರುವಲ್ಲಿ ಹೋಗಿ ಅವರು ಕೇಳಿದಷ್ಟು ಹಣ ನೀಡಿ ಅಭ್ಯಾಸ ಮಾಡಲಾಗದ ಪರಿಸ್ಥಿತಿ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಸಂಗೀತಾಭ್ಯಾಸ ಮಾಡಬಹುದಾದರೂ ಅಲ್ಲಿ ಶಿಕ್ಷಣ ನೀಡುವವರು ಉನ್ನತ ಶ್ರೇಣಿಯ ದಿಗ್ಗಜ ಕಲಾವಿದರಿಲ್ಲದಿರುವದು ಒಂದು ದೊಡ್ಡ ಕೊರತೆ.

ಹಿಂದಿನವರು ಹೇಗೆ ಪರಿಪೂರ್ಣ ಕಲಾವಿದರಾದರು ಎಂದು ಪಂ. ಬಸವರಾಜ ರಾಜಗುರು ಅವರನ್ನು ಕೇಳಿದಾಗ ಹೇಳುತ್ತಿದ್ದುದು "ನಾವೆಲ್ಲ ಅಭ್ಯಾಸ ಮಾಡಿದ್ದು ಗುರು ಶಿಷ್ಯ ಪರಂಪರೆಯಲ್ಲಿ ಸಂಗೀತವನ್ನು ಬಿಟ್ಟು ನಾವು ಬೇರೆಡೆಗೆ ಗಮನ ನೀಡುತ್ತಿರಲಿಲ್ಲ. ಸದಾ ಗುರುವಿನೊಡನೆ ಇದ್ದು ಪಾಠ, ಗುರುವಿನ ಮನ ಗೆದ್ದು ರಾಗದ ಮರ್ಮವನ್ನರಿಯುವದು, ನೀನು ಪರಿಣಿತನಾಗಿರುವೆ ಎಂದು ಗುರು ಹೇಳುವ ತನಕ ಎಲ್ಲೂ ಹಾಡದೆ ಶ್ರದ್ಧೆಯಿಂದ ಸಾಧನೆ ಮಾಡುವುದು. ತನ್ನ ಉನ್ನತಿಗೆ ಗುರುವಿನ ಆಶೀರ್ವಾದವೇ ಕಾರಣವೆಂದು ನಂಬಿ ಅಗ್ರ ಸ್ಥಾನಕ್ಕೇರಿದೆವು ಎಂದು. ನಮ್ಮ ಗುರುವಾದವರು ಕೂಡಾ ತನ್ನ ಶಿಷ್ಯ ಚೆನ್ನಾಗಿ ಹಾಡಲಿ ಮುಂದೆ ಬರಲಿ ಎಂದು ಪ್ರೀತಿಯಿಂದ ಕಲಿಸುತ್ತಿದ್ದರು" ಇವೆಲ್ಲ ಕಂಡು ಬರುವದು ಗುರು ಶಿಷ್ಟ ಪರಂಪರೆಯ ಮಧುರ ಬಾಂಧವ್ಯದಲ್ಲಿ, ಇಂದು ಈ ಪರಂಪರೆ ಅಲ್ಪಸ್ವಲ್ಪ ಉಳಿದಿದ್ದರೆ ಅದು ಸಂಗೀತ ಕ್ಷೇತ್ರದಲ್ಲಿ ಮಾತ್ರ. ಅದನ್ನು ಉಳಿಸಿ ಬೆಳೆಸುವದಕ್ಕಾದರೂ ಗುರುಕುಲಗಳು ಆಗಬೇಕು.

ಸರಕಾರವಾಗಲಿ, ಪ್ರಾಯೋಜಕ ಕಂಪನಿಗಳಾಗಲಿ ಇತ್ತಕಡೆಗೆ ಗಮನಹರಿಸಿದರೆ ಇದು ಅಸಾಧ್ಯವೇನಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಉತ್ಸವಗಳನ್ನು ಮಾಡುತ್ತಿರುವ ಸರಕಾರ ಇಂತಹ ಗುರುಕುಲ ಪದ್ಧತಿಯ ಸಂಗೀತ ಗ್ರಾಮದ ಸ್ಥಾಪನೆ ಮಾಡಿ ಅಲ್ಲಿ ವಿವಿಧ ಘರಾಣೆಗಳ ಸಂಗೀತ ದಿಗ್ಗಜರನ್ನು ಕರೆತಂದು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಲು ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟು ಒಬ್ಬ ವಿದ್ಯಾರ್ಥಿಗೆ ಕನಿಷ್ಠ ಕೆಲ ವರ್ಷಗಳ ಕಾಲ ಸಾಧನೆ ಮಾಡಲು ಅವಕಾಶ ನೀಡಿದಲ್ಲಿ ಉತ್ತಮ ಕಲಾವಿದರು ರೂಪಗೊಂಡು ಕರ್ನಾಟಕದ ಹಿರಿಮೆಯನ್ನು ಎತ್ತಿ ಹಿಡಿಯುವುದರಲ್ಲಿ ಸಂದೇಹವಿಲ್ಲ. ನಮ್ಮ ಕಲೆ ಹಾಗೂ ಸಂಸ್ಕೃತಿಗಳ ಬಗ್ಗೆ ಆಸಕ್ತಿ ಇರುವ ವಿದೇಶಿಗರು ಕೂಡ ಇಲ್ಲಿಗೆ ಹರಿದು ಬರುತ್ತಾರೆ.



ಹಲವಾರು ಲೇಖಕರು, ಸಂಗೀತ, ವಿಮರ್ಶಕರು, ಕಲಾವಿದರು ರಾಜಗುರುಗಳನ್ನು ಸಂದರ್ಶಿಸಿ, ಚರ್ಚಿಸಿ ಅವರ ಸಂಗೀತ ಮತ್ತು ವ್ಯಕ್ತಿತ್ವದ ಬಗ್ಗೆ ಹೇಳಿದ ಹಾಗೂ ಬರೆದ ಕೆಲ ಮಾತುಗಳು.

ಡಾ. ಪಾಟೀಲ ಪುಟ್ಟಪ್ಪನವರ ಮಾತುಗಳು

ರಾಜಗುರುಗಳ ಶಾರೀರವು ಅತ್ಯಂತ ಸುಪುರ. ಕೋಗಿಲೆಯ ಧ್ವನಿಯಂತೆ ಸವಿ ಎನ್ನುವ ಮತ್ತೊಂದು ಇದೆ. ಕೋಗಿಲೆಯ ಧ್ವನಿ ಅದೇಕೆ ಇಂಪಾಗಿದೆಯೆಂದರೆ ಅದು ರಾಜಗುರು ಅವರ ಕಂಠದಲ್ಲಿ ಹಾಯ್ದು ಬಂದಿದೆ. ಅವರ ಕಂಠ ಮಾಧುರ್ಯಕ್ಕೆ ಮಿತಿ ಎಂಬುದೇ ಇಲ್ಲ. ಹಾಡಿದಂತೆ ಅವರ ಇಂಪು ಇನ್ನೂ ಹೆಚ್ಚುತ್ತದೆ. ಅವರ ಕಂಠ ಕೆಟ್ಟಿದ್ದನ್ನು ಯಾರೂ ಕೇಳಿ ಅರಿಯರು. ಹೆಂಗಸರು ತಮ್ಮ ಸೌಂದರ್ಯವನ್ನು ಕಾಯ್ದುಕೊಳ್ಳುವಲ್ಲಿ ತಪ್ಪಿದರೂ ತಪ್ಪಬಹುದು. ಆದರೆ ಬಸವರಾಜ ರಾಜಗುರು ಅವರು ತಮ್ಮ ಕಂಠಶ್ರೀಯನ್ನು ಕಾಯ್ದುಕೊಳ್ಳುವಲ್ಲಿ ಎಂದೂ ತಪ್ಪಲಾರರು.

ರಾಜಗುರು ಭಾರತದಲ್ಲಿ ಹೋಗದ ಸ್ಥಳವಿಲ್ಲ. ಹಾಡದ ಚೀಜ್ ಇಲ್ಲ. ಆ ಕಂಠದಲ್ಲಿ ಯಾವುದು ಆಯ್ದು ಬಂದರೂ ಅದು ಕರ್ಣ ಮಧುರವಾಗಿಯೇ ಬರುತ್ತದೆ. ಅವರ ಸಂಗೀತವನ್ನು ಆಲಿಸಿದ ಆಗಿನ ಸಮಾಚಾರ ಮತ್ತು ಆಕಾಶವಾಣಿ ಮಂತ್ರಿ ಬಾಲಕೃಷ್ಣ ಕೇಸಕರರು ಅವರನ್ನು "ಹುಕುಮಿ ಯಕ್ಕಾ" ಎಂದು ಕರೆದರು. ಹುಕುಮಿ ಯಕ್ಕಾ ಕೈಯಲ್ಲಿದ್ದ ಮೇಲೆ ಹೊಡೆತ ಆಗಲೇ ಬೇಕು. ಬಸವರಾಜ ರಾಜಗುರು ಬೇಕಾದಂಥ ಸಂಗೀತ ಪಂಡಿತರ ಸಭೆಗೆ ಹೋಗಲಿ, ಅವರ ಕಂಠದಲ್ಲಿ ಹುಸಿ ಎನ್ನುವುದೇ ಇಲ್ಲ. ಅವರ ಸಂಗೀತವನ್ನು ಜ್ಯೂಲಿಯಸ್ ಸೀಜರನ ಶೌರ್ಯಕ್ಕೆ ಹೋಲಿಸಬಹುದು. ಸೀಜರನಂತೆ ಅವರು ಬರುತ್ತಾರೆ. ನೋಡುತ್ತಾರೆ ಮತ್ತು ಜಯಿಸುತ್ತಾರೆ. ತೋಡಿ, ಭೈರವಿ, ಮುಲ್ತಾನಿ, ಶುದ್ಧ ಸಾರಂಗ, ಅಲಯಾ ಬಿಲಾವಲ.ರಾಗಗಳಂತೆಯೇ ಅವರು ಶುದ್ಧ ಕಲ್ಯಾಣ, ಕೇದಾರ, ಕಾಮೋದ, ಬಹಾರ, ಸರಸ್ವತಿ ರಾಗಗಳನ್ನು ಅದೇ ದುಂದುಗಾರಿಕೆಯಿಂದ ಹಾಡುತ್ತಾರೆ. ಆ ರಾಗಗಳನ್ನು ಬೇರೆ ಯಾರೇ ಹಾಡಿದರೂ ರಾಜಗುರು ಹಾಡಿದಂತೆ ಆಗುವುದಿಲ್ಲ ಎನ್ನುವ ಅನುಭವವನ್ನು ಶ್ರೋತೃಗಳಿಗೆ ತಂದುಕೊಡುತ್ತಾರೆ.

ಅವರು ಸಿದ್ಧಿಯ ಹೊಸ ಶಿಖರಗಳನ್ನು ಗೆಲ್ಲುತ್ತಾ ನಡೆದಿದ್ದಾರೆ. ಅವರಿಗೆ ಪ್ರತಿಸ್ಪರ್ಧಿಗಳಿಲ್ಲ ಎನ್ನುವಷ್ಟರ ಮಟ್ಟಿಗೆ ಅವರು ಅಜೇಯರೆನಿಸಿದ್ದಾರೆ. ಅವರಲ್ಲಿ ಇರುವುದು ಗಿಲೀಟಿನ ಹೊಳಪಲ್ಲ, ಚೊಕ್ಕ ಚಿನ್ನದ ಬೆಳಕು. ಅವರಿಗೆ ಸಲ್ಲಿಸಿದ ಯಾವ ಮರ್ಯಾದೆಯೂ ಹೆಚ್ಚಿನದೆನಿಸುವುದಿಲ್ಲ. ಯಾಕೆಂದರೆ ಅವರು ಆ ಎಲ್ಲ ಮರ್ಯಾದೆಗಳಿಗಿಂತಲೂ ಮೇಲೆ ಇದ್ದಾರೆ. ಸಂಗೀತದ ಅಭಿಮಾನಿಗಳು ಅವರನ್ನು ಸಂಗೀತ ಸುಧಾಕರ ಎಂದು ಹೊಗಳಿದ್ದಾರೆ.

ಬಸವರಾಜ ರಾಜಗುರು ಹೇಗಿದ್ದಾರೆ ಎಂದರೆ ಸಂಗೀತವನ್ನು ಮೂರ್ತಿ ಮಾಡಿದರೆ ಹೇಗೆ ಇರುತ್ತದೆಯೋ ಹಾಗೆ ಇದ್ದಾರೆ ಎಂದು ಹೇಳಿದರೆ, ಅವರ ಬಗೆಗೆ ಯತಾರ್ಥವನ್ನೇ ನುಡಿದಂತೆ ಆದೀತು. ರಾಜಗುರು ಅವರ ಸಂಗೀತಕ್ಕೆ ಹೋಲಿಕೆ ಆಗಬಲ್ಲಂಥದ್ದು ಯಾವುದೂ ಇಲ್ಲ.

ರಾಜಗುರು ಅವರ ಸಂಗೀತವು ರಾಜಗುರು ಅವರ ಸಂಗೀತದಂತೆಯೇ ಇದೆ ಎಂದು ಹೇಳಬಹುದು.

(ಮಹಾರಾಷ್ಟ್ರದ ಖ್ಯಾತ ಸಂಗೀತ ವಿಮರ್ಶಕ ಶ್ರೀ ಎಸ್.ಎ. ಕುಲಕರ್ಣಿಯವರು [ಮರಾಠಿಯಲ್ಲಿ] ಹೇಳುವ ಮಾತುಗಳು)

ಸಂಗೀತ ಕಚೇರಿಯಲ್ಲಿ ಜಯಭೇರಿ ಮೊಳಗಿಸುವ ಬಸವರಾಜ

ಪಂಡಿತ ಬಸವರಾಜ ರಾಜಗುರು ಅವರ ಗಾಯನವು ವಿಶಿಷ್ಟ ರೀತಿಯದಾಗಿದೆ. ಅವರನ್ನು ಕಿರಾಣಾ ಘರಾಣೆಯ ಗಾಯಕರೆಂದು ಗುರುತಿಸಲಾಗುತ್ತಿದ್ದರೂ, ಗ್ವಾಲಿಯರ ಘರಾಣೆಯ ಪ್ರಭಾವವೂ ಅವರ ಗಾಯನದ ಮೇಲಾದುದು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ. ಶ್ರೋತೃಗಳ ನಾಡಿಯ ಮಿಡಿತವನ್ನು ಸರಿಯಾಗಿ ಗುರುತಿಸಿ ಹಾಡುವುದನ್ನು ಅವರು ಕೈವಶಪಡಿಸಿಕೊಂಡಿದ್ದಾರೆ. ಪ್ರಸನ್ನ ನಗುಮುಖದಿಂದ ಮತ್ತು ರಂಜನೀಯ ಗಾಯನದಿಂದ ಯಾವುದಾದರೂ ಸಂಗೀತ ಕಾರ್ಯಕ್ರಮಕ್ಕೆ ಕಳೆಯೇರಿಸಿ ಬಿಡುವುದರಲ್ಲಿ ಅವರು ಸಿದ್ಧಹಸ್ತರು. ಪರಿಣಿತ ರಸಿಕ ಶ್ರೋತೃಗಳು ಎದುರಿಗಿದ್ದರೆ ಗಂಟೆಗಟ್ಟಲೇ ಒಂದೊಂದು ಖ್ಯಾಲ ವಿಸ್ತರಿಸಿ ಹಾಡುವುದಕ್ಕೆ ಅವರು ಹಿಂದೆ ಮುಂದೆ ನೋಡುವವರಲ್ಲ. ಕೈಯಲ್ಲಿದ್ದುದನ್ನು ಕಾಯ್ದಿರಿಸಿಕೊಂಡು ಹಾಡುವ ರೂಢಿಯೇ ಅವರದಲ್ಲ. ಆದುದರಿಂದ ರಸಿಕರ ಕಂಠಪೂರ್ತಿ ಉಣಬಡಿಸುವ ಗುರಿಯಿಂದಲೇ ಅವರು ಕಚೇರಿಗೆ ಕೂಡ್ರುವರು. ಅವರ ಧ್ವನಿಯ ಮಾಧುರ್ಯಕ್ಕೆ ಇನ್ನೊಂದು ಹೋಲಿಕೆ ಇಲ್ಲ. ಅದು ಜೇನುತುಪ್ಪದಲ್ಲಿ ಅದ್ದಿದ ಜಿಲೇಬಿಯನ್ನು ಸವಿಯುವಂತೆ. ತಂಬುರಿಯನ್ನು ಹಿಡಿದು ಹಿಂದೆ ಕುಳಿದುಕೊಂಡ ತಮ್ಮ ಶಿಷ್ಯರಿಗೆ ಯಾವುದೋ ಒಂದು ಹೊಸ ರಾಗವನ್ನು ತಿಳಿಸಿಕೊಡುವ ರೀತಿಯಲ್ಲಿ ಅವರು ತಮ್ಮ ಹಾಡನ್ನು ಆರಂಭಿಸುತ್ತಾರೆ. ಯಾವುದೋ ಒಂದು ನವೀನ ರೀತಿಯ ವಿಲೋಭನೀಯ ಸ್ವರವನ್ನು ತಾವು ಆಲಾಪಿಸುವುದು ಮತ್ತು ಹಿಂದಿನ ಶಿಷ್ಯರಿಗೆ ಚಾನ್ಸ್ ಕೊಡುವುದು, ಅವನ ಆಸ್ವರ ಮನಸ್ಸಿಗೆ ಒಪ್ಪಿಗೆಯಾಗದಿದ್ದರೆ ಶಿಷ್ಯನೆಡೆ ತುಂಟ ನಗೆಯ ದೃಷ್ಟಿ ಬೀರುತ್ತಾ ನೋಡಿ ಮತ್ತೆ ಆ ಸ್ವರವನ್ನು ಹಚ್ಚಿ ತೋರಿಸುವುದು. ಈ ರೀತಿ ಶಿಷ್ಯರಿಗೆ ತರಬೇತಿ ನೀಡುವ ರೀತಿಯಲ್ಲಿ ಇವರ ಕಚೇರಿ ಸಾಗುತ್ತದೆ. ಸಮಯ ಸನ್ನಿವೇಶಕ್ಕೆ ಅನುಗುಣವಾಗಿ, ಈ ಮುಂದೆ ಯಾವ ಯಾವ ಹಾಡುಗಾರ ಯಾವ ರಾಗ ಹಾಡಿ ಹೋದ, ಇನ್ನು ಮುಂದೆ ತಾನು ಯಾವ ರಾಗ ಹಾಡಬೇಕೆಂಬುದರ ಉಚಿತ ಆಯ್ಕೆಯನ್ನು ಪಂಡಿತ್ ಬಸವರಾಜರು ಮಾಡುತ್ತಾರೆ. ಆದುದರಿಂದ ಇವರ ಗಾಯನ ಆರಂಭವಾದ ಕೂಡಲೇ ಮುಂಚಿನ ಎಲ್ಲ ಗಾಯಕರ ಹಾಡುಗಳು ಶ್ರೋತೃಗಳ ಮನಸ್ಸಿನಿಂದ ತಕ್ಷಣ ಮರೆಯಾಗುತ್ತವೆ.

ಸಂಗೀತ ಶಾಸ್ತ್ರದಲ್ಲಿ ಯಾವುದನ್ನು "ಸ್ವರಭಾರಣಾ" ಎಂದು ಕರೆಯುವರೋ ಅದು ಬಸವರಾಜರಲ್ಲಿರುವುದರಿಂದಾಗಿ ಅವರು ಸಂಗೀತ ಕ್ಷೇತ್ರದಲ್ಲಿ ಇಂದು ಓರ್ವ ಅಪರೂಪ ವ್ಯಕ್ತಿ ಎಂದು ಪ್ರಸಿದ್ಧರಾಗಿದ್ದಾರೆ. ಒಂದೊಂದು ಸಲ ಅವರು ತಮ್ಮ ಸ್ವರಕ್ಕೆ ಅನುನಾಸಿಕಗಳ



ಝೋಂಕಾರಗಳ ಅತಿಶಯ, ಮನೋಹರ ಝಲಕವನ್ನು ಅಂಟಿಸಿಬಿಡುವರು. ಸರಸ್ವತಿ, ಶ್ಯಾಮಕಲ್ಯಾಣ, ಹೇಮಕಲ್ಯಾಣ, ಶಂಕರಾ, ನಟಬಿಹಾಗ, ಹಂಸಕಿಂಕಿಣಿ, ಬಸಂತ ಈ ರಾಗಗಳನ್ನು ಅವರ ಮುಖದಿಂದಲೇ ಕೇಳಬಹುದು. ಅವರು ಜೀವಂತ ಸೌಂದರ್ಯವನ್ನು ಗಾಯನದಲ್ಲಿ ಸಹಜ ಸುಲಭವಾಗಿ, ಹಾಡುತ್ತಾ, ನಲಿಯುತ್ತಲೇ ತುಂಬುತ್ತಾರೆ. ಆದುದರಿಂದ ಬಸವರಾಜರ ಕಚೇರಿಗೆ ಶ್ರೋತೃಗಳ ಚಿತ್ತವೃತ್ತಿ ಅರಳಿದ ಗುಲಾಬಿ ಹೂವಿನಂತೆ ಎಚ್ಚೆತ್ತಿರುತ್ತದೆ. ದಟ್ಟವಾದ ಮಾವಿನ ಮರಗಳ ತಂಪಾದ ನೆರಳಿನಲ್ಲಿ ನಿಂತು ಮದೋನ್ಮತ್ತ ಮಯೂರದ ನೃತ್ಯವನ್ನು ಕಣ್ಣುತುಂಬ ನೋಡಬೇಕು ಅಥವಾ ಕೋಗಿಲೆಯ ಗೂಢ-ಧ್ವನಿಯನ್ನು ಕೇಳುತ್ತ ಇರಬೇಕೆಂಬ ಚಿತ್ತಾಕರ್ಷಿತ ಪರಿಸರವು ಬಸವರಾಜರ ಕಚೇರಿಯಲ್ಲಿ ನಿರ್ಮಾಣವಾಗುತ್ತದೆ.

ನಾಟ್ಯ ಸಂಗೀತದ ಆವಿಷ್ಕಾರ

ಬಸವರಾಜ ರಾಜಗುರು ಅವರು ಕಚೇರಿಯ ಮೊದಲ ಒಂದೂವರೆ ಗಂಟೆ ಸ್ವರಚಾಪಲ್ಯದ ಖ್ಯಾಲ ಕೇಳಿಸಿ ಆಮೇಲೆ ಠುಮರಿ ಮತ್ತು ನಾಟ್ಯ ಸಂಗೀತವನ್ನು ಕೈಗಿತ್ತಿಕೊಳ್ಳುವರು. ಅವರಲ್ಲಿ ಅವರ ಗಾಯನದ ನಿಜವಾದ ಕೌಶಲ್ಯ ಮತ್ತು ಯಶಸ್ವೀ ಗಾಯನದ ಮರ್ಮ ಅನುಭವಕ್ಕೆ ವೇದ್ಯವಾಗುತ್ತದೆ. "ಪಿಯಾಬಿನ್ ಆವತ ನಹಿ ಚೈನ್" ಅಬ್ದುಲ್ ಕರೀಮ್‌ಖಾನ್ ಸಾಹೇಬರ ಈ ಪೇಟಂಟ್ ಠುಮರಿಯನ್ನು ಸಾದರಪಡಿಸುವಾಗ ಶ್ರೋತೃಗಳ ಎದುರು ಅವರು ಖಾನ್ ಸಾಹೇಬರನ್ನು ಇದ್ದಕ್ಕಿದ್ದಂತೆ ತಂದು ನಿಲ್ಲಿಸುತ್ತಾರೆ. "ದೇಹಾತಾ ಶರಣಾಗತಾ" "ಮಿತ ಭಾಷಿಣಿ", "ಚಂದ್ರಿಕಾ ಹಿ ಜಣು" ದಂತಹ ನಾಟ್ಯ ಗೀತೆಗಳನ್ನು ಪೂರ್ಣ ಒಂದೊಂದು ಗಂಟೆಯವರೆಗೆ ಕೇಳಿಸುತ್ತಾ ರಸಿಕರ ಎದುರು ಸರ್ವಾಂಗೀಣ ಪಂಚ ಪಕ್ವಾನ್ನಗಳ ತಟ್ಟೆಯನ್ನು ಅವರು ಇರಿಸುತ್ತಾರೆ. ಅವರ ಇಂಥ ಅನೇಕ ರಂಜನೀಯ ಕಚೇರಿಗಳ ಆಸ್ವಾದವನ್ನು ನಾನು ಪಡೆದಿದ್ದೇನೆ. ಪಕ್ಕದಲ್ಲಿದ್ದ, ಕುಳಿತ, ಹಿಂದಿನ ಮರಾಠಿ ರಂಗಭೂಮಿಯ ಉತ್ಕರ್ಷ ಕಾಲವನ್ನು ಕಣ್ಣಾರೆ ಕಂಡ ಕಿವಿಯಾರೆ ಕೇಳಿದ ಜನ "ಹೋ! ಇದು ದೀನಾನಾಥ ಟೈಪ್, ಇದು ನಾರಾಯಣ ಬುವಾ ಅವರ ಮುರಕಾ; ಇದು ಕೇಶವರಾವರ ಚಕ್ರಿ ತಾನ, ಶಂಕರರಾವ ನಾಯಕರ ಸ್ವರ ಇದು" ಎಂದು ಅನ್ನುತ್ತಿದ್ದುದನ್ನು ನಾನು ಕೇಳಿದ್ದೇನೆ. ಬಸವರಾಜರು ಈ ನೈಪುಣ್ಯವನ್ನು ಎಲ್ಲಿಂದ ಮತ್ತು ಹೇಗೆ ಗಳಿಸಿಕೊಂಡರೆಂಬುದನ್ನು ತಿಳಿಯಲು ಸಾಧ್ಯವಿಲ್ಲ.

ಗ್ವಾಲಿಯರ್ ಘರಾಣೆಯ ಪ್ರಭಾವ ಬಸವರಾಜ ರಾಜಗುರು ಅವರ ನೋಟೆಶನ್ಸ್ ಮೇಲೆ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. "ನಿನಿ ಪಪ, ರೆರೆ ಸಾಸಾ" ದಂತಹ ನೊಟೇಶನ್ಸಗಳ ಮೂಲೆಗಳನ್ನು ಒಂದಕ್ಕಿಂತ ಇನ್ನೊಂದು ಮೃದು ಮಧುರವಾಗಿ ಅವರು ಹೆಣೆಯುತ್ತ ಹೊರಟರೆ ಎದೆಯುಬ್ಬಿಸಿ ಮೆರೆಯುವ ಹಾರ್ಮೊನಿಯಮ್ ವಾದಕ ಹಾಗೂ ಸಾರಂಗಿ ವಾದಕ ಗಲಿಬಿಲಿಗೊಳ್ಳುವರು. ಬಸವರಾಜರ ಸ್ವಭಾವ ತುಂಬ ಲಹರಿ ಎಂದು ಪ್ರಸಿದ್ಧವಿದೆ. ಅವರ ಮೂಡ ಸರಿಯಾಗಿದ್ದರೆ ನೋಟೆಶನ್ಸ್‌ಗಳ ಆವರ್ಣೀಯ ಅಲಂಕಾರವನ್ನು ಅವರು ಬೆಳಗಿಸಿ

ಬಿಡುವರು. ಕಚೇರಿಯಲ್ಲಿ ಜಯಭೇರಿ ಮೊಳಗಿಸುವ ಹಾಗೂ ಶ್ರೋತೃಗಳ ಹೃದಯವನ್ನು ವಶಪಡಿಸಿಕೊಳ್ಳುವ ಸಂಪೂರ್ಣ ಕೌಶಲ್ಯ ಅವರಲ್ಲಿದೆ.

ಎನ್. ಕೆ. ಕುಲಕರ್ಣಿ (ಎನ್ಕೆ)ಯವರ ನುಡಿಗಳು

ಪಂಡಿತ ಬಸವರಾಜ ರಾಜಗುರು ಸಂಗೀತ ಕ್ಷೇತ್ರದಲ್ಲಿ ಇಂದು ಅಖಿಲ ಭಾರತ ವ್ಯಕ್ತಿಯಾಗಿದ್ದಾರೆ. ಭಾರತದ ನಾಲ್ಕೂ ದಿಕ್ಕಿನ ನಾಲ್ಕೂ ಸೀಮೆಗಳನ್ನು ಮುಟ್ಟಿ ಬಂದಿದ್ದಾರೆ. ತಮ್ಮ ಗಾನಪತಾಕೆಯನ್ನು ಹಾರಿಸಿ ಬಂದಿದ್ದಾರೆ. ಅವರ ಕೀರ್ತಿ ಭಾರತ-ಪಾಕಿಸ್ತಾನಗಳನ್ನು ವ್ಯಾಪಿಸಿದೆ. ಧಾರವಾಡದ ಮಾಳಮಡ್ಡಿಯ ರಾಜಗುರು ಚಾಳಿನ ಇವರ ಅಟ್ಟದ ಮೇಲಿನ ಕೋಣೆಯನ್ನು ನೋಡಿದರೆ ಅಚ್ಚರಿಯುಂಟಾಗುತ್ತದೆ. ಅದು ಅಪರಿಚಿತರಿಗೆ ಬಜಾರಿನಂತೆ ಕಂಡೀತು. ಆದರೆ ಮೋಡಕಾ ಬಜಾರಿನಲ್ಲಿ ಬರಿ ಮುರುಕು ಸಾಮಾನುಗಳಿದ್ದರೆ ರಾಜಗುರು ಅವರ ಕೋಣೆಯಲ್ಲಿ ಬೆಲೆಬಾಳುವ ಸಾಮಾನುಗಳೇ ಮೋಡಕಾದಂತೆ ಎರಚಿರುತ್ತವೆ. ಬೆಲೆಬಾಳುವ ಕಾಶ್ಮೀರಿ ಶಾಲು, ನುಣುಪಾದ ಪಾಲಿಶ್‌ನಿಂದ ಹೊಳೆಯುವ ಪೆಟ್ಟಿಗೆ-ಕಪಾಟುಗಳು, ರಾಶಿಬಿದ್ದ ಕಾಗದ-ಪತ್ರಗಳು, ಸಂದಿ-ಗೊಂದಿಗಳಲ್ಲಿ ಸೂರಾಡಿ ಹೋಗಿರುತ್ತವೆ. ಒಂದೆಡೆಗೆ ವರ್ತಮಾನ ಪತ್ರಗಳ ಗುಂಪು, ಇನ್ನೊಂದೆಡೆ ಪುಸ್ತಕ, ಫೋಟೋ, ಪತ್ರ ವ್ಯವಹಾರಗಳ ಕಂತೆ Everything in its Place ಎಂಬ ಸುವ್ಯವಸ್ಥೆ ಮಾತ್ರ ಇಲ್ಲ. ಆದರೇನು ಯಾವುದೇ ಒಂದು ಪ್ರೆಸ್ ಕಟಿಂಗ್ ಆಗಲಿ, ಯಾವುದೇ ಮಾನಪತ್ರವಾಗಲಿ ರಾಜಗುರು ಅವರ ಕೈಗೆ ಒಂದೇ ಏಟಿಗೆ ಎಟಕುತ್ತವೆ. ತಾವು ಯಾವ ಸಾಮಾನು ಎಲ್ಲಿಟ್ಟಿರುತ್ತೇವೆಂಬುದು ಅವರಿಗೆ ಮಾತ್ರ ಖಚಿತವಾಗಿ ಗೊತ್ತು.

ರಾಜಗುರು ಅವರದು ರಸಿಕ ಜೀವ. ಮುಂಬಯಿಗೆ ಹೋದರೆ ಕ್ರಾಫರ್ಡ್ ಮಾರ್ಕೆಟ್ಟಿಗೆ ಹೋಗಿ ಶ್ರೇಷ್ಠ ಜಾತಿಯ ಹಣ್ಣು ಹಂಪಲು ತಂದಿರುತ್ತಾರೆ. ಅಂಗೈ ಗಾತ್ರದ ಚಿಕ್ಕು ಹಣ್ಣನ್ನು ಚಾಕುವಿನಿಂದ ನನ್ನ ಕೈಗೆ ಹೆಚ್ಚಿ ಕೊಟ್ಟಾಗ ಆ ಹಣ್ಣಿನ ರುಚಿ ಹಣ್ಣಿನ ಪ್ರಮಾಣ ನೋಡಿ ನನಗೆ ಅಚ್ಚರಿ. "ಇಂತಹ ಸೊಗಸಾದ ಹಣ್ಣು ಹ್ಯಾಂಗ ಹುಡಕಿಕೊಂಡು ಬಂದ್ರಿ?" ಎಂದು ಕೇಳಿದರೆ "ಎಲ್ಲೆಲ್ಲಿ ಏನೇನು ಶ್ರೇಷ್ಠ ಸಾಮಾನ ಸಿಗ್ತಾವ ಅಂಬೋದು ನನಗೆ ಗೊತ್ತು", ಎಂದಾಗ ಸಂಗೀತ ಕ್ಷೇತ್ರದಲ್ಲೂ ಯಾವ ಯಾವ ಗುರುವಿನ ಬಳಿ ಏನೇನು ದೊರಕುತ್ತದೆಂಬುದನ್ನು ಗೊತ್ತು ಹಚ್ಚಿ, ಅದನ್ನು ಕರಗತ ಮಾಡಿಕೊಂಡ ಅವರ ಸಂಗೀತ ಸಾಧನೆಯ ರೀತಿ ಮನದ ಮುಂದೆ ಸುಳಿದು ಹೋಯಿತು. ಆಮೇಲೆ ಮತ್ತೊಂದು ಬುಟ್ಟಿಯಿಂದ ಬಂಗಾರ ಬಣ್ಣದ ಬಾಳೇ ಹಣ್ಣು ತೆಗೆದು "ಇದು ನೋಡ್ರಿ ಯಲ್ಲಾಪುರದ ಜವಾರಿ ಹಣ್ಣು", ಎಂದು ಸುಲಿದು ಕೈಗೆ ಕೊಟ್ಟಾಗ ಅವರ ರಸಿಕತೆಯನ್ನು ಮೆಚ್ಚಿದೆ.

ಸುಮಾರು ಹತ್ತು ವರುಷ ಕಾಲ ಕರ್ನಾಟಕಿ ಹಿಂದೂಸ್ತಾನಿ ಎರಡೂ ಪದ್ಧತಿಗಳಲ್ಲಿಯೂ ಶಿಷ್ಯನಿಗೆ ಸಂಗೀತವನ್ನು ಪಂಚಾಕ್ಷರಿ ಗವಾಯಿಗಳು ಹೇಳಿಕೊಟ್ಟರು. ಹರಿತ ಬುದ್ಧಿಯ ಹೊನ್ನಿನ



ಕಂಠದ ಬಸವರಾಜರು ತಮ್ಮ ಅಸಾಧಾರಣ ಗ್ರಹಣ ಶಕ್ತಿಯಿಂದ, ಅವಿಶ್ರಾಂತ ಅಧ್ಯಯನದಿಂದ ಗುರುಗಳು ನೀಡಿದ ಶಿಕ್ಷಣವನ್ನು ಆತ್ಮಸಾತ್ ಮಾಡಿಕೊಂಡರು.

ಕರ್ನಾಟಕಿ ಪದ್ಧತಿಯ ಪಲಕುಪಡಿ ಎಂದರೇನು ನೆರವಲು ಎಂದರೇನೆಂದು ಅಲ್ಲಿಂದಲ್ಲಿಯೇ ರಾಜಗುರು ಉದಾಹರಿಸಿ ತೋರಿಸಿದಾಗ, "ಇದೇನ್ರಿ ರಾಜಗುರು, ನೀವು ಕರ್ನಾಟಕಿ ಪದ್ಧತಿ ಹಾಡತಾ ಇದ್ರ ಹಿಂದೂಸ್ತಾನಿ ಗಾಯಕರು ಅಂತಾ ಪತ್ತೆ ಹಚ್ಚಿದಾಂಗ ಹಾಡತೀರಲ್ಲಾ!" ಎಂದು ನಾನು ಉದ್ಗಾರ ತೆಗೆದರೆ, "ನಾನು ಕರ್ನಾಟಕಿ ಪದ್ಧತಿಯೊಳಗೂ ಹಾಡಬಲ್ಲೆ ಆದ್ರೆ ರೇಡಿಯೋದವರು ನೋರಾಯೆಂಟು ಕಾಯಿದೆ, ಕಟ್ಟಳೆ ಮಾಡಿರ್ತಾರಲ್ಲ; ಅದರ ಕಾಲಾಗ ಬ್ಯಾಡ ಅಂತ ಬಿಟ್ಟೀನಿ," ಎಂದರು. ಕಲೆಗೆ ಕಾಯಿದೆಯ ಮೂಗುದಾಣ ಹಾಕಿದರೆ ಅದರ ಸ್ವಚ್ಛಂದ ಅಭಿವ್ಯಕ್ತಿ ಹೇಗೆ ಆದೀತು! ಹಿಂದೊಮ್ಮೆ ರಾಜಗುರು ಅವರು ಬೆಂಗಳೂರಿನ ಒಂದು ಸಭೆಯಲ್ಲಿ ಹಿಂದೂಸ್ತಾನಿ ಹಾಗೂ ಕರ್ನಾಟಕಿ ಎರಡೂ ಪದ್ಧತಿಯಲ್ಲಿ ತಮ್ಮದೇ ವಿವರಣೆ ನೀಡಿ ಉಭಯ ಪದ್ಧತಿಯಲ್ಲಿಯ ಸಮಾನ ರಾಗಗಳನ್ನು ಸಾದರ ಪಡಿಸಿದ್ದರು. ಆಗ ಶ್ರೀ ಬಿ.ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದರು. ರಾಜಗುರುಗಳ ಉಭಯ ಸಂಗೀತ ಪಾಂಡಿತ್ಯಕ್ಕೆ ಮೆಚ್ಚುಗೆಯ ಕುರುಹಾಗಿ "ಸಂಗೀತ ಸುಧಾಕರ" ಎಂಬ ಬಿರುದನ್ನು ಸ್ವರ್ಣಪದಕವನ್ನು ನೀಡಿ ಗೌರವಿಸಿದರು. ಬರಿ ಬಿರುದು, ಬಂಗಾರದ ಪದಕ ದೊರೆತವೆಂಬುದು ಮುಖ್ಯವಲ್ಲ. ಕರ್ನಾಟಕಿ ಸಂಗೀತದ ದಿಗ್ಗಜಗಳಾದ ಶ್ರೀ ಮೈಸೂರು ಕೆ. ವಾಸುದೇವಾಚಾರ್ಯರು, ಟಿ. ಚೌಡಯ್ಯನವರು, ಬಿ. ದೇವೇಂದ್ರಪ್ಪನವರು ಇವರ ಕರ್ನಾಟಕಿ ಸಂಗೀತಕ್ಕೆ ತಲೆದೂಗಿದ್ದಾರೆಂಬುದು ಇಲ್ಲಿ ಗಮನಿಸಬೇಕಾದ ವಿಷಯ.

ಹಿಂದೂಸ್ತಾನಿ ಪದ್ಧತಿಯಲ್ಲಂತೂ ತಮ್ಮದೇ ಆದ ಒಂದು ಸ್ಥಾನಮಾನವನ್ನು ಕಲ್ಪಿಸಿಕೊಂಡ ರಾಜಗುರು ಅವರು ಒಂಭತ್ತು ಗುರುಗಳ ಗಡಿಯಲ್ಲಿ ಸಾಧನೆ ಮಾಡಿ ಬಂದಿದ್ದಾರೆ. ಶಾಸ್ತ್ರೀಯ ಸಂಗೀತ, ಲಘುಶಾಸ್ತ್ರೀಯ ಸಂಗೀತ, ಠುಮರಿ ಗಾಯನ, ಧ್ರುಪದ್, ಧಮಾರ ಗಾಯನ, ಗಝಲ್ ಗಾಯನ, ಕನ್ನಡ ಮರಾಠಿ ಭಾವಗೀತೆಗಳು, ವಚನ ಗಾಯನ, ದಾಸರ ಕೀರ್ತನೆಗಳು, ಕನ್ನಡ ಮರಾಠಿ ರಂಗಗೀತೆಗಳು ಇವು ಬಸವರಾಜರ ಬತ್ತಳಿಕೆಯ ನವ ನವ ಸಂಗೀತ ಸರಗಳು, ಸಂಗೀತ ಕಚೇರಿಯ ಸ್ಥಳೀಯ ಪರಿಸರ ಸಭಿಕರ ಸದಭಿರುಚಿ, ಎಲ್ಲಾ ಗಮನಿಸಿ ತಮ್ಮ ಬತ್ತಳಿಕೆಯಿಂದ ಶರಾವಳಿಯನ್ನು ಪುಂಖಾನುಪುಂಖವಾಗಿ ಶರಾವತಿಯ ವೇಗದಲ್ಲಿ ಹೂಡುತ್ತಾರೆ. ರಾಜಗುರು ಅವರಿಗೆ ಭಾರತೀಯ ಸಂಗೀತ ಪದ್ಧತಿಯಲ್ಲಿರುವ ಇಂತಹ ಒಂದು ಅಪರೂಪದ ವಿಷಯ ಗೊತ್ತಿಲ್ಲ ಎಂತಿಲ್ಲ. ಕನ್ನಡದ ಮೂಡಲಪಾಯದಿಂದ ಹಿಡಿದು ಸಂಸ್ಕೃತ ಶ್ಲೋಕಗಳವರೆಗೆ, ಆದಾರಾಗ ಸದಾರಾಗದ ಚೀಜುಗಳಿಂದ ಹಿಡಿದು ಟಪ್ಪಾ ಠುಮರಿಗಳವರೆಗೆ, ಕನ್ನಡ ಮರಾಠಿ ಭಕ್ತಿಗೀತೆಗಳಿಂದ ಮೊದಲ್ಗೊಂಡು ರಂಗಗೀತೆಗಳವರೆಗೆ ಇವರ ಸಂಗೀತ ಸನ್ನಾಹ ವಿಸ್ತರಿಸಿ ವೈವಿಧ್ಯಪೂರ್ಣವಾಗಿದೆ.

ಸಂಗೀತದ ಚಮತ್ಕಾರಿಕ ಪ್ರಭಾವದ ಬಗ್ಗೆ ಎಷ್ಟೋ ಐತಿಹ್ಯಗಳು ಪ್ರಚಲಿತವಿದೆ. ದೀಪಕ



ರಾಗದಿಂದ ಜ್ಯೋತಿ ಬೆಳಗಿತೆಂದೂ ಮೇಘಮಲ್ಹಾರದಿಂದ ಸ್ವರ್ಗದಿಂದ ವೃಷ್ಟಿಯಾಯಿತೆಂದು ಓದುತ್ತೇವೆ. ಆದರೆ ರಾಜಗುರುಗಳು ಹೇಳುವಂತೆ ವರ್ಹಾಡ ಪ್ರಾಂತದಲ್ಲಿ ಬುಲ್ಡಾನಾ ಜಿಲ್ಲೆಯ ಮೆಹಕರ್ ಎಂಬಲ್ಲಿ ಅವರ ಸಂಗೀತ ಕಾರ್ಯಕ್ರಮ ಏರ್ಪಟ್ಟಾಗಿ ಕಾಕತಾಲೀಯವೆಂದರೂ ಅಡ್ಡಿಯಿಲ್ಲ, ಪವಾಡವೊಂದು ನಡೆಯಿತು. ಆ ವರುಷ ಆ ಊರಿಗೆ ಮಳೆಯೇ ಇರಲಿಲ್ಲ. ಅನಾವೃಷ್ಟಿಯಲ್ಲಿ ಜನ ವ್ಯಾಗ್ರಚಿತ್ತರಾಗಿರುವಾಗ ಸಂಗೀತ ಕೇಳಿ ಮಜಾ ಮಾಡುವುದಕ್ಕೆ ಮನಸ್ಸು ಯಾರಿಗೆ? ಈ ಸುದ್ದಿ ರಾಜಗುರು ಅವರ ಕಿವಿವರೆಗೂ ಮುಟ್ಟಿ ಅವರಿಗೆ ಇದೊಂದು ಸವಾಲು ಎನಿಸಿತು. "ದೈವೇಚ್ಛೆ" ಹೇಗಿದೆಯೋ ನೋಡೋಣ ಎಂದುಕೊಂಡರು. ಅಷ್ಟು ದೂರ ಹೋದವರು ಹಾಗೆಯೇ ಹಿಂತಿರುಗುವದು ಬೇಡವೆನಿಸಿ, ಸಂಭಾವನೆ ಏನೇ ಇರಲಿ, ಸಂಗೀತ ಕಾರ್ಯಕ್ರಮ ಮಾಡಿಯೇ ತೀರಬೇಕೆಂದು ತಂಬೂರಿಯ ಕಿವಿ ಹಿಡಿದರು. ಶ್ರುತಿ ಮಾಡಿದರು. ವೀರಾಸನ ಹಾಕಿಕೊಂಡು ಮಿಯಾಮಲ್ಹಾರ ರಾಗ ಆಲಾಪನೆಗೆ ಮೊದಲು ಮಾಡಿದರು. ರಾಗ ಮುಕ್ತಾಯಗೊಂಡಾಗ, ಮರುದಿನ ಅವರು ಪ್ರವಾಸಕ್ಕೆ ತೊಂದರೆಯಾಗುವಷ್ಟು, ಊರಲ್ಲಿ ರಸ್ತೆಯ ಮೇಲೆ ಮೊಣಕಾಲುಮಟ ನೀರು ಹರಿಯುವಷ್ಟು ಮಳೆಯಾಗಿಬಿಟ್ಟಿತು.

ಶಾರೀರದ ಸಲುವಾಗಿ ಶರೀರವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ರಾಜಗುರು ಕಟ್ಟುಮಸ್ತ ಕುಸ್ತಿ ಆಳು. ಯಾವಾಗಲೂ ಆರೋಗ್ಯಕರವಾದ ಆಹಾರವನ್ನೇ ಸೇವಿಸುತ್ತಾರೆ. ಮನೆಯಲ್ಲಿ ನಿತ್ಯವೂ ಆಸನಗಳನ್ನು ಹಾಕುವುದನ್ನು ರೂಢಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಆಯುರ್ವೇದಿಯ ಮಾತ್ರೆ ಲೋಹಾದಿಗಳು ಬಳಿಯಲ್ಲಿಯೇ ಇರುತ್ತವೆ. ರಾಜಗುರು ಅವರ ಸಂಗೀತವು ಶಾಸ್ತ್ರ, ಕಲೆಗಳಿಂದ ಪರಿಪೂರ್ಣವಾಗಿರುವುದಷ್ಟೇ ಅಲ್ಲ ಅವರ ಮೋಹಕ ಮಧುರ ಧ್ವನಿಯು ಹಾಲಿಗೆ ಜೇನು ಬೆರೆತಂತಿದೆ.

ರಾಜಗುರು ಅವರ ಅನುಭವಗಳನ್ನು ಅವರ ಬಾಯಿಂದಲೇ ಕೇಳಬೇಕು. ಒಂದೊಂದು ಊರಲ್ಲಿ ಒಂದೊಂದು ತರಹದ ಅನುಭವ. ರಾಜಮಹಾರಜರ ವೈಭವದ ದರ್ಬಾರಿ ಸ್ವಾಗತವನ್ನು ಅನುಭವಿಸಿದ್ದಾರೆ. ಸರಿಯಾಗಿ ಊಟವಿಲ್ಲದೆ ಸಂಗೀತ ಕಾರ್ಯಕ್ರಮವೂ ಇಲ್ಲದೆ ಕಾಂಟ್ರಾಕ್ಟ ಕ್ಯಾನ್ಸಲ್ ಮಾಡಿಸಿಕೊಂಡು ಮನಸ್ಸಿಗೆ ಬೇಸರ ಬೇಗುಡಿ ತಂದುಕೊಂಡು ಹಿಂತಿರುಗಿಯೂ ಇದ್ದಾರೆ. ೧೯೬೫ರಲ್ಲಿ ಖಾನದೇಶ ಜಿಲ್ಲೆಯ ಧುಳೆಯಲ್ಲಿ ರಾಜುಗುರು ಅವರು ಶುದ್ಧ ಕಲ್ಯಾಣದ ಅಲಾಪನೆಯಿಂದಲೇ ಸಭಿಕರ ಮನಗಳನ್ನು ಸೆರೆಹಿಡಿದುಕೊಂಡು ಕೊನೆಯಲ್ಲಿ "ಮಾನತನಾಹಿ ಬರಜೋರಿ" ಎಂದು ಠುಮರಿ ಮತ್ತು "ಮಿತಭಾಷಣೆ ಶೀಚ ಕುಲಕಾಮಿನಿ" ಎಂಬ ಮರಾಠಿ ರಂಗಗೀತೆವೊಂದನ್ನು ಹಾಡಿದಾಗ ಜನರ ಕರತಾಡನ ಐದು ನಿಮಿಷಗಳಾದರೂ ನಿಂತಿದ್ದಿಲ್ಲವಂತೆ. ಏನು ಮೋಹಕ ಗಾಯಕಿ ಎಂದು ಎಲ್ಲರೂ ಉದ್ಗಾರ ತೆಗೆಯುವವರೇ.

ಖ್ಯಾತಕೊಳಲು ವಾದಕ ಪಂ. ಅರವಿಂದ ಗಜೇಂದ್ರಗಡಕರ ಅವರು ೧೯೬೦ ರಿಂದ ಕೆಲವರ್ಷ ಧಾರವಾಡ ಆಕಾಶವಾಣಿಯ ಮುಖ್ಯಸ್ಥರಾಗಿದ್ದವರು ರಾಜಗುರು ಅವರನ್ನು



ಸಮೀಪದಿಂದ ಬಲ್ಲ ಅವರು ತಮ್ಮ ಅನುಭವವನ್ನು ತಮ್ಮ ಮಾತಿನಲ್ಲೆ ಹೇಳಿದ್ದಾರೆ.

ಶ್ರೇಷ್ಠ ಗಾಯಕನ ಪಾಕ ಪ್ರಾವೀಣ್ಯತೆ

ಒಂದು ಬೆಳಗಿನ ೧೧ ಗಂಟೆಯ ಸುಮಾರಿಗೆ ಗಜಗಾಂಭೀರ್ಯದ ನಡೆಯ ವ್ಯಕ್ತಿ - ರೇಶಿಮೆ ಶರ್ಟು, ಅದರಿಂದ ಜೋತಾಡುವ ಬಂಗಾರದ ಗುಂಡಿಗಳ ಸರಮಾಲೆ, ಕೊರಳಿನಿಂದ ಹೊರಗೆ ಇಣುಕುತ್ತಿದ್ದ ಚಿನ್ನದ ಚೈನು, ಮೇಲೆ ಕರಿಯ ಕೋಟು, ತಲೆಗೆ ಜರಿ ಅಂಚಿನ ಟೊಪ್ಪಿಗೆ, ವೀಳ್ಯದಿಂದ ಕೆಂಪಾದ ತುಟಿಗಳಿಂದ ನಗು ಹೊರಸೂಸುತ್ತ. ದೇಹಕ್ಕೆ ಪೂಸಿಕೊಂಡ ಅತ್ತರದಿಂದ ಘಮಘಮಿಸುತ್ತ ಅಚ್ಚ-ಸ್ವಚ್ಚ ಬಿಳಿಯ ಧೋತರ ಉಟ್ಟು, ಕಾಲಲ್ಲಿಯ ಕಪ್ಪು ಪಂಪ ಶ್ಯೂಜಿನಿಂದ ಮೆಲ್ಲನೆ ಶಬ್ದ ಮಾಡುತ್ತ ನನ್ನ ಆಫೀಸಿಗೆ ಬಂದು "ಸಂಗೀತ ಸಾಹೇಬರೇ ಏನಂತದ ಧಾರವಾಡ?" ಬೆನ್ನು ತಟ್ಟಿ ನನ್ನನ್ನು ತಮ್ಮ ಊರಿಗೆ ಸ್ವಾಗತಿಸಿದ ಪಂ. ಬಸವರಾಜ ರಾಜಗುರುಗಳು "ಸೊಲ್ಲಾಪುರದ ಅಂದಿನ ತರುಣ ಸಾಥೀ, ಈ ಹುದ್ದೆಗೆ ಬಂದದ್ದು ಕೇಳಿ ಭಾಳ ಆನಂದಾಯ್ತು! ಇನ್ನು ನಾನು 'ಸಾಹೇಬ' ಎಂದೇ ಕರೆಯುವೆ" ಹೇಳಿದರು.

ಪಂ. ರಾಜಗುರುಗಳನ್ನು ಕಾಲೇಜು ದಿನಗಳಿಂದ ಬಲ್ಲೆ. ಸೋಲಾಪುರದಲ್ಲಿ ಓದುತ್ತಿರುವಾಗ, ಸ್ನೇಹ ಸಮ್ಮೇಳನದಲ್ಲಿ ಪ್ರಭುದೇವ ಸರದಾರ [ನಂತರ ಸುಪ್ರಸಿದ್ಧ ಶಾಸ್ತ್ರೀಯ ಗಾಯಕ ಹಾಗೂ ನ್ಯಾಯವಾದಿ ಪ್ರಭುದೇವ ಸರದಾರರು] ತನ್ನ ಗಾಯನ, ಹಾರ್ಮೋನಿಯಂ ವಾದನದಿಂದ ಪ್ರಸಿದ್ಧನಾದ ಬಿ.ಎ. ದ ವಿದ್ಯಾರ್ಥಿ, ನಾನು ಬಾನ್ಸುರಿ ನುಡಿಸಿ ವಿದ್ಯಾರ್ಥಿಗಳ ಪ್ರೀತಿ ಸಂಪಾದಿಸಿದ್ದೆ. ಹೀಗಾಗಿ ನಾವಿಬ್ಬರು ಘನಿಷ್ಠ ಮಿತ್ರರಾದೆವು. ಅವರಿಗೆ ಸಂಗೀತದ ಆಳವಾದ ಜ್ಞಾನವಿತ್ತು. ಸಾಧ್ಯವಿದ್ದ ಕಡೆಯಿಂದೆಲ್ಲ 'ಚೀಜು'ಗಳನ್ನು ದೊರಕಿಸಿ ಮನೋಗತ ಮಾಡಿಕೊಳ್ಳುವುದರಲ್ಲಿ ರಾಗದ ಸ್ವರೂಪ ಅರಿತು. ಅಳವಡಿಸಿಕೊಳ್ಳುವುದು ಅದರ ಬಗ್ಗೆ ವಿಚಾರ ವಿನಿಮಯ ಇದರಲ್ಲಿಯೇ ಕುಶಾಗ್ರಮತಿಯ ಪ್ರಭುದೇವರ ಕಾಲ ಕಳೆಯುತ್ತಿತ್ತು. ಅವರ ಸ್ನೇಹ ಸಂಗೀತದ ಅಪರಿಮಿತ ಒಳನೋಟ ನನಗೆ ನೀಡಿತು. ಅವರ ತಂದೆ ಬ್ಯಾರಿಸ್ಟರ ಸರದಾರರ ದೊಡ್ಡ ವಾಡೆ ಇದ್ದಿತು. ಖಾನದಾನಿ ಸಿರಿವಂತರಾದ ಅವರ ವಾಡೇದ ಮನೆ ಆಳು-ಕಾಳುಗಳಿಂದ ಧನ-ಧಾನ್ಯಗಳಿಂದ ಸಮೃದ್ಧವಾಗಿತ್ತು. ವೀರಶೈವ ಸಮಾಜದ ಪ್ರತಿಷ್ಠಿತ ಅವರಲ್ಲಿಗೆ, ಗುರುಸಮಾನರಾದ ಪಂ. ಬಸವರಾಜ ಗುರುಗಳು ಆಗಾಗ್ಗೆ ಆಗಮಿಸಿ ವಾರಗಟ್ಟಲೆ ವಾಡೆಯಲ್ಲಿ ತಂಗುತ್ತಿದ್ದರು. ಆಗ ನಾವೂ ಕಾಲೇಜು ತಪ್ಪಿಸಿ 'ವಾಡ'ದಲ್ಲಿ ಠಿಕಾಣಿ ಹೂಡುತ್ತಿದ್ದೆವು. ಅಹೋರಾತ್ರಿ ಗಾಯನ, ವಾದನ, ಭೋಜನ! ರಸಿಕತೆಯ ದಿನಗಳು! ಆಗಲೇ ರಾಜಗುರುಗಳ ವಾತ್ಸಲ್ಯ ನನಗೆ ಲಭಿಸಿತು. ಆಕರ್ಷಕ ಬಣ್ಣ, ಗುಂಗುರು ಕೂದಲು, ಸುಂದರ ಮೋಡಿ ಮಾಡುವ ಕಣ್ಣುಗಳು, ಮಧುರ ಸ್ವರ, ರಾಗಗಳ ಅಗಣಿತ ಸಂಗ್ರಹ ಇಂಥವರ ಸತ್ಸಂಗ-ಸಹವಾಸ ಸತತ ನಾಲ್ಕು ವರ್ಷ. ಪ್ರತಿ ಎರಡು-ಮೂರು ತಿಂಗಳಿಗೊಮ್ಮೆ ನನಗೆ ಸಿಕ್ಕಿತು. ಅವರು ನನಗೆ ಪ್ರೀತಿಯಿಂದ ಸಂಗೀತ ಶಾರದೆಯ ಸ್ವರೂಪದರ್ಶನ ಮಾಡಿಸಿದರು.



ನಾನು ಧಾರವಾಡಕ್ಕೆ ಬಂದಾಗ ಅವರು ಸಂಗೀತ ಕಾರ್ಯಕ್ರಮ ನೀಡಲು ಮೇಲಿಂದ ಮೇಲೆ ಕಲಕತ್ತಾ, ದಿಲ್ಲಿ, ಮುಂಬಯಿ, ಜಲಂದರ ಮುಂತಾದ ಕಡೆ ಹೋಗುತ್ತಿದ್ದರಿಂದ ಊರಲ್ಲಿರುವುದೇ ಅಪರೂಪ - ಹೀಗಾಗಿ ನಮ್ಮಿಬ್ಬರ ಭೆಟ್ಟಿಯಾಗಿರಲಿಲ್ಲ.

"ಸಾಹೇಬ ನಮ್ಮ ವಾಡೇಕ ಯಾವಾಗ ಬರ್ತೀರಿ? ನನ್ನ ವಾಡೆಯನ್ನು ನೀವು ನೋಡಲೇ ಬೇಕು. ಹೀಂಗ ಮಾಡ್ರಿ ಬರುವ ರವಿವಾರ ಮಧ್ಯಾಹ್ನ ಊಟಕ್ಕೆ ಬರ್ರಿ. ಸೋಮವಾರದಿಂದ ಒಂದು ತಿಂಗಳು ನನ್ನ ಪ್ರವಾಸ ಆದ. ತಪ್ಪಿಸಬ್ಯಾಡ್ರಿ." ರಾಜಗುರುಗಳ ಔತಣ. ನಾನು "ಹೂಂ!" ಅಂದೆ. ನಂತರ ಕುರ್ಚಿಯಲ್ಲಿ ಕುಳಿತು. ಅಡಿಕೆ ಚಂಚಿ ಬಿಚ್ಚಿ, ವೀಳ್ಯದೆಲೆಗೆ ಸುಣ್ಣ ಹಚ್ಚುತ್ತ, ಸೊಲ್ಲಾಪುರ ದಿನಗಳ ನೆನಪಿನ ಸುರುಳಿ ಬಿಚ್ಚಿ ಭಾವಪರವಶರಾದರು. ಹರಟೆಸಾಗಿತು. ಸಮಯ ಸರಿದದ್ದೇ ಗೊತ್ತಾಗಲಿಲ್ಲ. ಕೊನೆಗೆ "ರವಿವಾರ ಹಾದಿ ಕಾಯ್ತೇನೆ" ಎನ್ನುತ್ತ ಧೋತರದ ಅಂಚನ್ನು ಹಿಡಿದು ಹೊರಟರು.

ರವಿವಾರ ರಾಜಗುರುಗಳ ಮನೆ ಮುಟ್ಟಿದಾಗ ಶಿಷ್ಯರಿಬ್ಬರಿಗೆ ಪಾಠ ನಡೆದಿತ್ತು. ಎದ್ದು ಬಂದು ಉತ್ಸಾಹದಿಂದ ನನ್ನನ್ನು ಸ್ವಾಗತಿಸಿ, ಶಿಷ್ಯರಿಗೆ ಊಟದ ತಯಾರಿ ಮಾಡಲು ಹೇಳಿ, ನನ್ನೊಡನೆ ಮಾತುಕತೆಗೆ ತೊಡಗಿದರು. ಆ ಹುಡುಗರೇ ಟೇಬಲ್ ಮೇಲೆ ಅಡುಗೆ ಪದಾರ್ಥಗಳನ್ನು ತಂದಿಟ್ಟು, ತಾಟು-ಬಟ್ಟಲು ಅಣಿಗೊಳಿಸಿದರು. ಯಾವುದೇ ಸ್ತ್ರೀಯ ಸುಳಿವೇ ಕಾಣಲಿಲ್ಲ. "ಅರವಿಂದ ಸಾಹೇಬ, ಇದುವರೆಗೆ ನನ್ನ 'ಗಾಯಕಿ' ನೋಡಿದ್ದೀರಿ, ಇಂದು ನನ್ನ ಇನ್ನೊಂದು ಕಲೆ ಕಾಣುವಿರಿ." "ರಾಜಗುರುಗಳೇ ದಯವಿಟ್ಟು ನನಗೆ ಸಾಹೇಬ ಅನ್ನಬೇಡಿ. ನಿಮ್ಮ ಇನ್ನೊಂದು ಕಲೆ ಯಾವುದೆ?" ನನ್ನ ಕೋರಿಕೆ. "ನಾನು ಸಾಹೇಬ ಅನ್ನುವವನೇ ಇರಲಿ. ನಿಮಗೆ ನನ್ನ ಗಾಯನ ಪಸಂದ ಇದೆ ಅಲ್ಲವೇ?" "ಇದನ್ನು ಕೇಳಬೇಕೆ?" ನಾನು ಉತ್ತರಿಸಿದೆ. "ಇಂದಿನ ಅಡಿಗೆ ಅದಕ್ಕಿಂತ ಹೆಚ್ಚು ರುಚಿಸುವದು. ಎಲ್ಲ ಅಡಿಗೆ ನಾನು ಸ್ವತಃ ಮಾಡಿರುವೆ. ಊಟದ ನಂತರ ಅದರ ಬಗ್ಗೆ ಹೇಳಿರಿ" ಬಸವರಾಜರು ನಸುನಗುತ್ತ ಹೇಳಿದರು.

ಶಿಷ್ಯ ಮಂಡಳಿ ಊಟಕ್ಕೆ ನೀಡಿತು. ಬಸವರಾಜರು ಬಡಿಸುವಲ್ಲಿ ನೆರವಾದರು. ತಾಟಿನ ತುಂಬ ಬಾಯಿಯಲ್ಲಿ ನೀರು ಬರಿಸುವ ಖಾದ್ಯಗಳು; ಪರಾಠಾ, ಚಪಾತಿ, ಬಟಾಟಿ ಪಲ್ಯ, ಎರಡು-ಮೂರು ಥರದ ಭಜಿ, ಎರಡು ಬಗೆಯ ಕೋಸಂಬರಿ, ಎರಡು ಚಟ್ನಿ, ವಿವಿಧ ರುಚಿಯ ಹಪ್ಪಳಗಳು - ಪ್ರೀತಿಯಿಂದ ಬಡಿಸುವ ರಾಜಗುರುಗಳು. ಕೇಳಬೇಕೆ? ತಮ್ಮ ತಾಟನ್ನೂ ಸಿದ್ಧಮಾಡಿಕೊಂಡು ಬಂದು ಕುಳಿತರು. ಎರಡೂ ಕೈ ಜೋಡಿಸಿ "ಓಂ ನಮಃ ಶಿವಾಯ!" ಜಪಿಸಿ, "ಇನ್ನು ಶಾಂತ ರೀತಿಯಿಂದ ಊಟ ಮಾಡ್ರಿ, ಅತಿ-ವಿಲಂಬಿತ ರಾಗದ ಹಾಗೆ; ನಂತರ ಯಾವುದು ಸೇರಿತು, ಏನು ರುಚಿಸಲಿಲ್ಲ ಹೇಳ್ರಿ" ಹೇಳಿದರು. ನಿಜವಾಗಿ ಎಲ್ಲವೂ ರುಚಿಕಟ್ಟಾಗಿತ್ತು.

"ನಿಮ್ಮ ಗಾಯನದಂತೆ ನಿಮ್ಮ ಪಾಕ ಕೌಶಲ್ಯವೂ ಶ್ರೇಷ್ಠವಾಗಿದೆ. ಪರಾಠಾ ನಿಮ್ಮ ಖಯಾಲ ಸಂಗೀತವಾದರೆ, ಭಜಿ ಠುಮ್ರಿಗೆ ಸಮಾನ. ಚಟ್ನಿ ಭಾವಗೀತದಂತೆ, ಇನ್ನೇನು ಬಣ್ಣಿಸಲಿ?" ನಾನು ಉದ್ಗರಿಸಿದೆ.



"ವರ್ಣನೆ ಸಾಕು! ಅಡಿಗೆ ಬರೋಬ್ಬರ ಆಗಿತ್ತಲ್ಲ, ಅಷ್ಟೇ ಸಾಕು!!" ಖುಷಿಯಿಂದ ರಾಜಗುರುಗಳು ಮುಂದುವರಿಸಿದರು. "ಭಾರತದ ಎಲ್ಲ ಪ್ರಾಂತ್ಯಗಳಲ್ಲಿ ನನ್ನ ಸಂಗೀತ ಪ್ರೇಮಿಗಳಿದ್ದಾರೆ. ಕಾರ್ಯಕ್ರಮದ ಮರುದಿನ ಅವರಲ್ಲಿ ನನ್ನ ಭೋಜನ ಇದ್ದದ್ದೇ. ಅಲ್ಲಿ ಹೊಸ ಅಡಿಗೆ ಇದ್ದರೆ ನಿಸ್ಸಂಕೋಚವಾಗಿ ಅದನ್ನು ಮಾಡುವ ವಿಧಾನ ಕೇಳುವೆ. ಆ ಗೃಹಿಣಿಯರೂ ಹುರುಪಿನಿಂದ ತಿಳಿಸುವರು. ಧಾರವಾಡಕ್ಕೆ ಬಂದೊಡನೆ ನಾನು ಮನೆಯಲ್ಲಿ ಮಾಡಿ ನೋಡುತ್ತೇನೆ. ನನಗೆ ಎರಡೇ ನಾದಗಳುಂಟು-ಗಾಯನ, ಭೋಜನ, ವಿವಿಧ ರಾಗಗಳ ನೂರಾರು ಚೀಜುಗಳನ್ನು ಸಂಗ್ರಹಿಸಿದಂತೆ, ಅನೇಕ ಅಡಿಗೆಗಳ ವಿಧಾನಗಳನ್ನು ಬರೆದು ಇಟ್ಟುಕೊಂಡಿರುವೆ - ಇಂಗ್ಲೀಷನಲ್ಲಿ ಏನೋ ಅಂತಾರ - ಹಾಗೆ!" "ರಿಸೆಪಿ" ನಾನು ಹೇಳಿದೆ.

"ಸರಿ, ನನಗೆ ಹನ್ನೇರಡು ತರಹದ ಪರಾಠಾ. ಹತ್ತು ಬಗೆಯ ಉಪ್ಪಿನಕಾಯಿ, ಉಪವಾಸಕ್ಕಾಗಿ ಹನ್ನೆರಡು ನಮೂನೆಯ "ಏಕಾದಶೀ ಪದಾರ್ಥ, ಇನ್ನೂ ಅನೇಕ ಅಡಿಗೆ ಮಾಡಲು ಬರುವದು. ರಾಗ ಭೈರವೀ, ಬಿಲಾವಲ್, ದರಬಾರಿ ಕಾನಡಾ ರಾಗಗಳ ಬಗ್ಗೆ ವಿವರಿಸುವಷ್ಟೇ ಉತ್ಸಾಹದಿಂದ ಹೇಳತೊಡಗಿದರು.

ಊಟವಾದ ಮೇಲೆ "ಮಸಾಲಾ ಪಾನ" ಜಗಿದು ತುಟಿ ಕೆಂಪಾಗುತ್ತಿದ್ದಂತೆ ಹರಟೆ ಗಾಯನದ ಕಡೆಗೆ ಸಾಗಿತು. ರಾಜಗುರುಗಳ ಹತ್ತಿರ ರಾಗಗಳ ಅಪಾರ ಸಂಗ್ರಹವಿದ್ದುದು ನನಗೆ ಗೊತ್ತಿತ್ತು. ಅಪ್ರಚಲಿತ ಅಪರೂಪದ ರಾಗಗಳ ವಿಷಯ ಬರುತ್ತಿದ್ದಂತೆ, ಶಿಷ್ಯನಿಗೆ ತಂಬೂರಿ ಮೀಟಲು ಹೇಳಿ, ಒಂದಾದನಂತರ ಒಂದರಂತೆ ಅಪ್ರಸಿದ್ಧ ರಾಗ ಸಂಗೀತ ಸುರು ಮಾಡಿದರು. ರಾಗ ಶಿವಕಲಿ, ಶಿವಕಂಸ, ಶಿವಶಂಕರಾ ದೀಪರಂಜಿನಿ, ಪಟರಂಜಿನಿ, ಲಾಜವಂತಿ, ಮಾಂಡಕೇದಾರ, ಕೇದಾರ ಕಂಸ, ಅಬ್ಬಾಬ್ಬಾ!! ಅಂದು ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ರಾಗಗಳನ್ನು ಕೇಳಿದ ಸೌಭಾಗ್ಯ ನನ್ನದು. ಹೃದಯ ತುಂಬಿ ಬಂದಿತು. ತೃಪ್ತನಾಗಿ ಮನೆಗೆ ಮರಳಿ, ನೆನಪಿಗೆ ಬಂದ ರಾಗಗಳನ್ನು ಒಂದು ಕಡೆಗೆ ಬರೆದು ಇಟ್ಟುಕೊಂಡೆ. ಮುಂದೆ ಅನೇಕ ಸಂಗೀತ ಸಭೆಗಳಲ್ಲಿ ಅವುಗಳ ಉಪಯೋಗ ಮಾಡಿಕೊಂಡೆ.

ಪಂ. ಬಸವರಾಜ ರಾಜಗುರುಗಳ ಮಧುರ ಧ್ವನಿ. ಅಭ್ಯಾಸು ಮನೋವೃತ್ತಿ, ಶ್ರೋತೃವೃಂದದ ಸರಿಯಾದ ಅರಿವು. ರಾಗ-ಜೀಜುಗಳ ಸಂಗ್ರಹ, ದಕ್ಷಿಣಾದಿ ಸಂಗೀತದ ಜ್ಞಾನ - ಇವುಗಳಿಂದ 'ಮೆಹಫೀಲ್' ಎಲ್ಲೇ ಇರಲಿ, ಹೇಗೇ ಇರಲಿ ಅವರು ಸಭೆಯನ್ನು ಕೂಡಲೇ ಒಲಿಸಿಕೊಂಡು ಬಿಡುತ್ತಿದ್ದರು. ಅವರೊಡನೆ ಕೊಳಲು ಸಾಥ ನೀಡುವ ಅನೇಕ ಸುಮಧುರ ಸಂದರ್ಭಗಳು ನನಗೆ ದೊರಕಿವೆ. ಅದು ನನ್ನ ಭಾಗ್ಯ!

ಆಗಿನ ಗೋವಾ ರಾಜ್ಯದ ಮುಖ್ಯಮಂತ್ರಿ ದಯಾನಂದ ಬಾಂಡೋಡಕರ ತಮ್ಮ ಹಳ್ಳಿಯ ಮನೆಯಲ್ಲಿ ದಸರೆ ನಂತರ ಬರುವ "ಕೋಜಾ ಗೌರೀ" ಉತ್ಸವದಂದು ಪ್ರತಿ ವರ್ಷ ಸಂಗೀತ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಅವರ ಪುತ್ರಿ ಶಶಿಕಲಾ ಬಾಂಡೋಡಕರ [ಕಾಕೋಡಕರ] ರಿಂದ ಒಂದು ದಿನ ನನಗೆ ಪೋನ ಬಂದಿತು. "ಈ ಸಾರೆ ಕೋಜಾ ಗೌರೀ ಪೂರ್ಣಿಮೆಯಂದು



ಬಸವರಾಜ ರಾಜಗುರುಗಳ ಗಾಯನವನ್ನು ಗೋವೆಯಲ್ಲಿ ಏರ್ಪಡಿಸಲು ಸಾಧ್ಯವೇ? ಅವರು ಒಪ್ಪಿದಲ್ಲಿ "ಬಾನ್ಸುರಿ"ಯೊಂದಿಗೆ ನೀವೂ ಬನ್ನಿ. ಸಾಥಿದಾರರನ್ನು ಗೊತ್ತುಪಡಿಸಿರಿ ಹಾಗೂ ಕೂಡಲೇ ನಮಗೆ ತಿಳಿಸಿರಿ. ಸ್ಪೆಶಲ್ ಕಾರು ಕಳಿಸುವೆವು."

ಪಂ. ರಾಜಗುರುಗಳು ಒಪ್ಪಿದರು ಸಾಥಿದಾರರು ಗೊತ್ತಾದರು. ಗೋವೆಗೆ ತಿಳಿಸಿದೆ. ಅಭಾರಿಯಾದ ಅವರು ಕಾರು ಎಲ್ಲಿ ಕಳಿಸಬೇಕು, ಮುಂತಾಗಿ ವಿಚಾರಿಸಿದರು. ಆಮಂತ್ರಣ ಪತ್ರಿಕೆ ಬಂದಿತು. ಬಸವರಾಜರೊಂದಿಗೆ ನನ್ನ ಹೆಸರನ್ನೂ ಮುದ್ರಿಸಿದ್ದರು. ಗೋವಾದಲ್ಲಿ ಇದು ನನ್ನ ಪ್ರಥಮ ಕಾರ್ಯಕ್ರಮ ಅದೂ ಪಂ. ಬಸವರಾಜ ರಾಜಗುರುಗಳಂತಹ ಹಿರಿಯ ಕಲಾವಿದರೊಂದಿಗೆ!! ಮುಖ್ಯಮಂತ್ರಿಗಳ ಸ್ವನಿವಾಸದಲ್ಲಿ!! ನನ್ನ ಹೃದಯ ಒಂದು ಕ್ಷಣ ಜೋರಾಗಿ ಬಡಿದುಕೊಂಡಿತು. ಐಷಾರಾಮೀ ಕಾರಿನಲ್ಲಿ ಪ್ರವಾಸ, ಭವ್ಯ ಬಂಗಲೆಯಲ್ಲಿ ವಾಸ, ರುಚಿ ಕಟ್ಟಾದ ಭೋಜನ, ಸಂಗೀತ ಬಲ್ಲ ರಸಿಕ ಶ್ರೋತೃಗಳು!! ಮೆಹಫಿಲ್ ರಂಗೇರಿತ್ತು. ಸಾಕಷ್ಟು ಮಾನ ಸನ್ಮಾನ್ಯ, ಸಂಭಾವನೆ ಎಲ್ಲ ಕಲಾಕರರನ್ನು ತೃಪ್ತಿಯ ಸಾಗರದಲ್ಲಿ ತೇಲಿಸಿತು.

ಈಗಲೂ ರೇಡಿಯೋದಲ್ಲಿ ರಾಜಗುರುಗಳ ಸಂಗೀತ ಕೇಳಿಬಂದಾಗ ಗೋವೆಯ ಕಾರ್ಯಕ್ರಮವನ್ನು ನೆನೆಯುತ್ತೇನೆ. ಅವರ ಭೋಜನ ಪ್ರಿಯತೆ - ಪ್ರಾವೀಣ್ಯತೆಯೊಂದಿಗೆ.

(ಕಲಾವಿದ, ಸಂಗೀತದ ಅಭಿಮಾನಿ ಮುಂಬೈದ ಶ್ರೀ ಜಿ.ಜಿ. ಜೋಶಿ ತಾವು ಆಯೋಜಿಸಿದ ರಾಜಗುರುಗಳ ಕಾರ್ಯಕ್ರಮದ ಅನುಭವವನ್ನು ಈ ರೀತಿಯಾಗಿ ಹೇಳುತ್ತಾರೆ.)

ಮರೆಯಲಾಗದ ಸಂಗೀತ ಕಾರ್ಯಕ್ರಮ

ಪಂ. ಬಸವರಾಜ ರಾಜಗುರು ಹಾಗೂ ಅವರ ಸಂಗೀತ ಸುಧೆ [ಸಂಗೀತ ಮೆಹೆಫಿಲ್ಲಿನ] ನೆನಪುಗಳು. ಪಂ. ಬಸವರಾಜ ರಾಜಗುರುಗಳನ್ನು ನಮ್ಮ ಸಂಗೀತ ಪ್ರೇಮಿ ಮಂಡಳದ ಉದ್ಘಾಟನೆಯ ನಿಮಿತ್ಯವಾಗಿ ಆಮಂತ್ರಿಸಲಾಗಿತ್ತು. ಠಾಣೆಯ ಜೈನ ಮಂದಿರದ ಸಭಾಗ್ರಹದಲ್ಲಿ ಜನಕ್ಕೆ ಕೂಡಲು ಜಾಗೆ ಇರಲಿಲ್ಲ ಅಷ್ಟೊಂದು ಜನ ಪಂ. ಬಸವರಾಜ ರಾಜಗುರು ಅವರ ಗಾಯನಕ್ಕೆ ಬರುವರೆಂದು ನಿರೀಕ್ಷೆ ಇರಲಿಲ್ಲ. ಅವರ ಸಾಥಿದಾರರನ್ನು ಕರೆದುಕೊಂಡು ಬರಲು ನಾನು ಮುಂಬಯಿಗೆ ಹೋಗಿದ್ದೆ ಬರಲು ಬಹಳೇ ಸಮಯ ಹಿಡಿದ ಕಾರಣ - ವೇಳೆಗೆ ಸರಿಯಾಗಿ ಕಾರ್ಯಕ್ರಮ ಆಗುವದು ಅಶಕ್ಯವಾಗಿತ್ತು. ಆದರೂ ಸಹ ಜನರು ಪಂ. ಬಸವರಾಜರ ಕಾರ್ಯಕ್ರಮಕ್ಕೆ ಕಾತುರರಾಗಿ ಕುಳಿತಿದ್ದರು. ಶ್ರೀಯುತ ಡಿ.ಎಸ್. ಬೋರವಣಕರು, ಶ್ರೀರಾಮಭಾವು ಫಡಕೆ ಇವರ ಭಾಷಣ ಮುಗಿಯುತ್ತಲೆ ಪಂ. ಬಸವರಾಜರ ಕಾರ್ಯಕ್ರಮ ಪ್ರಾರಂಭವಾಯಿತು. ರಾಗ ಸರಸ್ವತಿ, ಮಾರುಬಿಹಾಗ, ಕೇದಾರ ಇತ್ಯಾದಿ. ಒಂದು ರಾಗದಿಂದ ಮತ್ತೊಂದು ರಾಗ ಪ್ರಾರಂಭಿಸುವವಾಗ್ಗೆ ಅನೇಕ ಕಲಾವಿದರು ೧೦-೧೫ ನಿಮಿಷಗಳನ್ನಾದರೂ ಸ್ವರ ಹೊಂದಾಣಿಕೆಗೆ ತೆಗೆದುಕೊಳ್ಳುತ್ತಾರೆ. ಇವರು ೧ ನಿಮಿಷವನ್ನು ಕಳೆಯದೆ ಬೇರೆ ರಾಗಕ್ಕೆ ಹೇಗೆ ಸ್ವರ ಹಚ್ಚುತ್ತಾರೆ



ಎಂಬುದೇ ಅಲ್ಲಿಯ ಪ್ರೇಕ್ಷರನ್ನು ಆಶ್ಚರ್ಯಗೊಳಿಸಿತ್ತು. ಎರಡನೇಯ ಆಶ್ಚರ್ಯ ಅಂದರೆ "ತರಾನಾ". ರಾಗ ಕೇದಾರಕ್ಕೆ ಜೋಡಿಸಿ "ತರಾನಾ" ಪ್ರಾರಂಭಿಸಿದರು. ಆ ದಿನದ ಹಾರ್ಮೋನಿಯಮ್ ಸಾಥಿಗೆ ವಾಸಂತಿಬಾಯಿ ಮ್ಹಾಪ್ಸೇಕರ್ ಇದ್ದರು. ತರಾನಾ ಹಾಡನ್ನು ಬಾರಿಸುವಾಗ್ಗೆ ಗಾಯಕ ಅಂಗವನ್ನು ಬಾರಿಸುವದು ಪಂ. ಬಸವರಾಜರಿಗೆ ಮನಸ್ಸು ಬರಲಿಲ್ಲ. ಹೀಗಾಗಿ ಅವರು ಸ್ವತಃ ಹಾರ್ಮೋನಿಯಮ್ ಕೈಯಲ್ಲಿ ತೆಗೆದುಕೊಂಡು ಬಾರಿಸುತ್ತಾ ಹಾಡ ತೊಡಗಿದರು. "ತರಾನಾ" ಜಲದಗತಿಯಾದ ಕಾರಣ ಅದನ್ನು ತಬಲಾ ತಾಳದ ತಕ್ಕ ಹಾಗೆ ಹೊಂದಾಣಿಕೆ ಮಾಡಿ ಹಾಡುವದೆ ಕಠಿಣ. ಬಾರಿಸುತ್ತಾ ಹಾಡುವದೆಂದು ಮತ್ತಷ್ಟು ಕಠಿಣ. ಇಂತಹ ಚಮತ್ಕಾರವನ್ನು ಮಾಡಿ ರಸಿಕರ ಮುಂದೆ ಸಹಜವಾಗಿ ಸುಮಧುರವಾಗಿ ಹಾಡಿ ತೋರಿಸಿದಾಗ್ಗೆ ರಸಿಕ ಸಮುದಾಯದಿಂದ ಚಪ್ಪಾಳೆಯ ಮಳೆಯ ಪ್ರಾರಂಭವಾಯಿತು. ಈ ಎರಡು ಆಶ್ಚರ್ಯಜನಕ ಸಂಗತಿಗಳು ಠಾಣೆಯ ರಸಿಕರ ಮುಂದೆ ಇನ್ನೂ ಸ್ಮರಣೆಯಲ್ಲಿ ಇದೆ. ತಬಲಾ ವಾದಕ ಶಶಿ ಬಳ್ಳಾರಿ ಪಂ. ಬಸವರಾಜರನ್ನು ಹಿಂದೆ ಹಾಕಲು ಪ್ರಯತ್ನಿಸಿದರಲ್ಲಿ ಬಸವರಾಜರು ತರಾನಾದಲ್ಲಿ ಹೆಚ್ಚಾದ ಬಡತ್ ತೋರಿಸಿ ಒಂದೇ ನಿಮಿಷದಲ್ಲಿ ಶಶಿ ಬಳ್ಳಾರಿ ಅವರನ್ನು ಸೋಲಿಸಿ ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸಿ ಸಹಜವಾಗಿ ಆಕರ್ಷಿಸುತ್ತಿದ್ದರು. ಇವು ಪಂ. ಬಸವರಾಜ ಸಂಗೀತ ಸಭೆಯಲ್ಲಿ ರಸಿಕರನ್ನು ಆಶ್ಚರ್ಯಗೊಳಿಸುವ ಕಲಾಕೃತಿಗಳು.

ನಿರ್ದಿಗಂತವಾಗಿ ಏರಿ ನಿಂತ ರಾಜಗುರು

ಪಂಡಿತ್ ಬಸವರಾಜ ರಾಜಗುರು ಧಾರವಾಡ ಆಕಾಶವಾಣಿ ಅಂಗಳಕ್ಕೆ ಬರುತ್ತಾರೆ. ಅಂದರೆ ಅವತ್ತೆಲ್ಲಾ ಹಬ್ಬ. ಅವರನ್ನು ಮನೆಯಿಂದ ಕರೆದುಕೊಂಡು ಬರುವ ಕಾರ್ ಡ್ರೈವರ್‌ನಿಂದ ಹಿಡಿದು ಜೊತೆಯಲ್ಲಿ ಹಾಡುವವರು, ನುಡಿಸುವವರೆಲ್ಲರ ಮೊಗದ ಮೇಲೆ ಲವಲವಿಕೆ. ಖುಷಿ, ತಮಾಷೆ, ನಗು ಎಲ್ಲವೂ ಅವರ ಜೊತೆಯಲ್ಲೇ ಬರುತ್ತಿದ್ದವು. ದೊಡ್ಡ ಕಲಾವಿದ ಎನ್ನುವ ಕಲ್ಪನೆ ಅವರ ತಲೆಯಲ್ಲಿ ಎಳ್ಳಷ್ಟೂ ಇರಲಿಲ್ಲ. ಸ್ಟುಡಿಯೊಗೆ ಬಂದವರೇ 'ಇವತ್ತು ಕಾಫಿ ಹಾಡಿಕೊಳ್ಳೋಣ' ಎಂದು ಹಾಡು ಶುರುಮಾಡುತ್ತಿದ್ದರು. ಅದು ನೇರ ಪ್ರಸಾರವಾಗಲಿ, ಧ್ವನಿ ಮುದ್ರಿಕೆಯೇ ಆಗಲಿ, 'ಹಾಡಿಕೊಳ್ಳೋಣ' ಎಂದೇ ಹೇಳುತ್ತಿದ್ದರು. ನಾನೊಬ್ಬನೇ ಹಾಡುತ್ತೇನೆ ಎನ್ನುವ ಕಲ್ಪನೆ ಅವರಲ್ಲಿ ಇರಲಿಲ್ಲ. ಸಂಗೀತವನ್ನು ಎಲ್ಲರೂ ಸೇರಿ ಕಟ್ಟಬೇಕು ಎಂದು ಬಲವಾಗಿ ಅವರು ನಂಬಿದ್ದರು. ಸಹ ಗಾಯನದಲ್ಲಿ ಕೂತವರಿಗೆ ಅವರೆಂದೂ ಅವಕಾಶ ಕೊಡದೇ ಇರುವವರಲ್ಲ. ಎತ್ತರದ ಸ್ವರವನ್ನೂ ಸಹಗಾಯಕನಿಂದಲೇ ಹಾಡಿಸಿ ತೋರಿಸುತ್ತಿದ್ದರು. ಚೆನ್ನಾಗಿ ಹಾಡಿದರೆ ಅಲ್ಲೇ 'ಭಲಾ' ಎಂದು ಮನಸಾರೆ ಮೆಚ್ಚಿಕೊಳ್ಳುತ್ತಿದ್ದರು. ಸಹಗಾಯಕನಿಗೆ ಮಾತ್ರವಲ್ಲ, ವಾದ್ಯಗಾರರಿಗೂ ನುಡಿಸಲು ಸೂಕ್ತ ಸಮಯ ಕೊಡುತ್ತಿದ್ದರು. ನುಡಿಸಾಣಿಕೆಯನ್ನು ಕೂತು ಕೇಳುತ್ತಿದ್ದರು.



ರಾಜಗುರು ಅವರ ಈ ಗುಣ ಅವರ ಜೊತೆ ಕೆಲಸ ಮಾಡುವವರೆಲ್ಲಗೂ ಅಪ್ಯಾಯಮಾನ ಅನ್ನಿಸುತ್ತಿತ್ತು. ಕೆಲವು ವೇಳೆ ಮನೆಯಿಂದ ಸಿಹಿತಿಂಡಿ ತಂದು ಎಲ್ಲಾ ಕಲಾವಿದರಿಗೆ ಕೊಡುತ್ತಿದ್ದರು. ಶಿಷ್ಯರನ್ನು ಹಚ್ಚಿಕೊಳ್ಳುತ್ತಿದ್ದ ಅವರು ಪಕ್ಕದಲ್ಲಿ ಕೂರಿಸಿಕೊಂಡು ಹಾಡಲಿಕ್ಕೆ ಹಚ್ಚುತ್ತಿದ್ದರು. ಅವರು ಪಕ್ಕದಲ್ಲಿದ್ದರೆ ಶಿಷ್ಯರು ಚಳಿ ಬಿಟ್ಟು ಹಾಡುತ್ತಿದ್ದರು. ಸಂಗೀತಾ ಕಟ್ಟಿ, ಗಣಪತಿ ಭಟ್ ಹಾಸಣಗಿ, ಶ್ರೀಪಾದ ಹೆಗಡೆ ಮುಂತಾದ ಸಂಗೀತಗಾರರೆಲ್ಲರೂ ಬಸವರಾಜ ರಾಜಗುರು ಅವರ ಪ್ರೀತಿಯ ಪರಧಿಯಲ್ಲೇ ಎತ್ತರಕ್ಕೆ ಬೆಳೆದವರು.

ಸಂಗೀತ ಬ್ರಹ್ಮ ಪಂಚಾಕ್ಷರಿ ಗವಾಯಿಗಳ ಗರಡಿಯಲ್ಲಿ ಪಳಗಿದ್ದ ರಾಜಗುರು ಮುಂದೆ ಮುಂಬೈನಲ್ಲಿ ನೆಲೆಸಿದರು. ತಮ್ಮ 18ನೇ ವಯಸ್ಸಿನಲ್ಲಿ ಹಾಡುವುದಕ್ಕೆ ಆರಂಭಿಸಿದ ಬಸವರಾಜ ರಾಜಗುರು ಅವರು ಮೊದಲು ಹಾಡಿದ್ದು ಮುಂಬೈ ಆಕಾಶವಾಣಿಗೆ. ಅವರ ಬಿಲಾವಲ್ ಮತ್ತು ಗೌಡಮಲ್ಹಾರ್ ರಾಗಗಳು ನೇರಪ್ರಸಾರಗೊಂಡವು. ಅವರ ಸುಶ್ರಾವ್ಯ ಸಂಗೀತವನ್ನು ಕೇಳಿದ ರಸಿಕರು ಮುದಗೊಂಡರು. 1936 ರಿಂದ 1943ರವರೆಗೆ ಅವರು ಮುಂಬೈ ಆಕಾಶವಾಣಿಗೆ ಹಾಡಿದರು. ಮುಂಬೈನಲ್ಲಿ ವಿವಿಧ ಭಾಷೆ, ವಿವಿಧ ಸಂಗೀತ ಪ್ರಕಾರಗಳನ್ನು ಕಲಿತ ಅವರು ಮುಂದೆ ಲಾಹೋರ್‌ಗೆ ತೆರಳಿದರು. ಅಲ್ಲಿ ಉಸ್ತಾದ್ ವಹೀದ್ ಖಾನ್ ಅವರ ಶಿಷ್ಯತ್ವ ಪಡೆದರು. ಭಾರತ, ಪಾಕಿಸ್ತಾನ ಇಬ್ಭಾಗವಾದ ಕಾಲದಲ್ಲಿ ಉಂಟಾದ ರಕ್ತಪಾತದ ಕರಿನೆರಳು ರಾಜಗುರು ಅವರ ಮೇಲೂ ಬಿತ್ತು. ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಬಂದು ಧಾರವಾಡ ಸೇರಿದರು. 1950ರಲ್ಲಿ ಆರಂಭವಾದ ಧಾರವಾಡ ಆಕಾಶವಾಣಿಗೆ ಸಂಗೀತದ ಅಡಿಪಾಯವಾಗಿ ನಿಂತರು.

ರಂಗ ಪರಂಪರೆ

ರಾಜಗುರು ಅವರ ಪೂರ್ವಿಕರು ಕೆಳದಿ ಸಂಸ್ಥಾನದ ಅರಸರಿಗೆ ರಾಜಗುರುಗಳಾಗಿದ್ದರು. ಆ ಕಾರಣದಿಂದಲೇ ಅವರಿಗೆ ರಾಜಗುರು ಎಂಬ ಹೆಸರು ಬಂತು. ಅವರ ಬಾಲ್ಯ ಆರಂಭವಾಗುವುದು ಕಂಪೆನಿ ನಾಟಕದಿಂದ. ಬಾಲ್ಯದಲ್ಲೇ ಅವರು ರಂಗಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರಿಗೆ ರಂಗ ಸಂಸ್ಕಾರ ಇದ್ದ ಕಾರಣ ರಂಗಛಾಯೆ ಅವರ ಸಂಗೀತದಲ್ಲಿ ಎದ್ದು ಕಾಣುತ್ತಿತ್ತು. ಅವರು ಹಾಡುತ್ತಿದ್ದ ಒಂದೊಂದು ಚೀಜ್‌ಗಳಲ್ಲೂ ರಂಗಶಕ್ತಿ ಕಾಣುತ್ತಿತ್ತು. ಧಾರವಾಡ ಆಕಾಶವಾಣಿಯಲ್ಲಿ ನೂರಾರು ಮಧುರ ರಂಗಗೀತೆಗಳನ್ನು ಹಾಡಿರುವ ಅವರು ಪಾತ್ರ ಮಾಡಲೂ ಸೈ ಎನ್ನುತ್ತಿದ್ದರು. ಆಕಾಶವಾಣಿಯಲ್ಲಿ ಶಿವಾನಂದ ಪಾಟೀಲ, ವಸಂತ ಕವಲಿ, ಸಂಗಮೇಶ್ವರ ಗುರುವ ಮುಂತಾದವರ ಜೊತೆ ರಂಗಗೀತೆ ಹಾಡುವುದರ ಜೊತೆಗೆ ಪಾತ್ರವನ್ನೂ ಮಾಡಿದ್ದಾರೆ. ಹುಬ್ಬಳ್ಳಿಯ ಕಲಾಭವನದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ರಾಜಗುರು ಅವರು ರಂಗ ಪೋಷಾಕು ಧರಿಸಿ ರಂಗಗೀತೆಗಳನ್ನು ಹಾಡಿ ರಂಜಿಸಿದರು. ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದವರು ಇದನ್ನು ಎಂದಿಗೂ ಮರೆಯಲಾರರು. ಎಂಬತ್ತರ ದಶಕ



ಕನ್ನಡ ಮತ್ತು ಮರಾಠಿ ರಂಗಭೂಮಿಯ ನಡುವೆ ಕೊಟ್ಟು ತೆಗೆದುಕೊಳ್ಳುವ ಕಾಲವಾಗಿತ್ತು. ಆ ಸಂದರ್ಭದಲ್ಲಿ ಬಸವರಾಜ ರಾಜಗುರು ಅವರು ಮರಾಠಿಗೆ ನೂರಾರು ರಂಗಗೀತೆಗಳನ್ನು ಕೊಟ್ಟರು. ಮರಾಠಿಯಲ್ಲಿ ಹಾಡಿ ಮರಾಠಿಗರಿಗೆ ಆಪ್ತರಾದರು.

ಸಂಗೀತ ಕಛೇರಿಗಳಲ್ಲಿ ರಂಗಗೀತೆಗಳನ್ನು ಹಾಡುವವರು ಬಹಳ ಕಡಿಮೆ. ಆದರೆ ರಾಜಗುರು ಸಂಗೀತ ಕಛೇರಿ ಅಂದರೆ ಅದು ಕೇವಲ, ಭಾರತೀಯ ಶಾಸ್ತ್ರೀಯ ಸಂಗೀತ ಕಛೇರಿಯಲ್ಲ, ಅಲ್ಲಿ ಹಿಂದೂಸ್ತಾನಿ, ಕರ್ನಾಟಕಿ, ರಂಗ, ಗಜಲ್ ಮುಂತಾದ ಸಂಗೀತ ಪ್ರಕಾರಗಳ ಮೇಳವೇ ಆಗಿರುತ್ತದೆ. ಆಕಾಶವಾಣಿ ಸ್ಟುಡಿಯೊದಲ್ಲಿ ರೆಕಾರ್ಡಿಂಗ್‌ಗಾಗಿ ಕೂತರೆ ಸಹ ಗಾಯನದಲ್ಲಿ ಹಾಡುವವರಿಗೆ ಸಿಹಿ ತಿಂದಷ್ಟು ಖುಷಿ. ಶಾಸ್ತ್ರೀಯ ಗಾಯನದಲ್ಲಿ ಬೇರೆ ಬೇರೆ ಸಂಗೀತ ಪ್ರಕಾರಗಳ ರಸವನ್ನು ಸೇರಿಸಿ ಹಾಡುವುದನ್ನು ಸಹಗಾಯಕರು ಅನುಭವಿಸುತ್ತಿದ್ದರು. ತಾವೂ ಧ್ವನಿಗೂಡಿಸುತ್ತಿದ್ದರು.

ಆಕಾಶವಾಣಿ ಪಂಡಿತ

ಆಕಾಶವಾಣಿಯಲ್ಲಿ ಮೊದಲು ನೇರ ಪ್ರಸಾರವೇ ಆಗಲಿ, ರೆಕಾರ್ಡಿಂಗ್ ಆಗಲಿ ಕಾರ್ಯಕ್ರಮಗಳು ಪೂರ್ವನಿರ್ಧಾರಿತವಾಗಿರುತ್ತಿದ್ದವು. ಆದರೆ ಬಸವರಾಜ ರಾಜಗುರು ಅವರ ವಿಚಾರದಲ್ಲಿ ಯಾವ ನಿರ್ಧಾರಗಳೂ ಇರುತ್ತಿರಲಿಲ್ಲ. ಅವರು ಯಾವ ಊರಿನಲ್ಲೇ ಇರಲಿ ಅಲ್ಲಿಯ ಆಕಾಶವಾಣಿ ಕೇಂದ್ರಗಳು ಅವರನ್ನು ಕರೆಸಿ ನೇರ ಪ್ರಸಾರದಲ್ಲಿ ಕೂರಿಸುತ್ತಿದ್ದವು. ಗಂಟೆಗಟ್ಟಲೇ ಹಾಡುತ್ತಿದ್ದ ಅವರನ್ನು ಶ್ರೋತೃಗಳು ಆರಾಧಿಸುತ್ತಿದ್ದರು. ಮುಂಬೈ, ದೆಹಲಿ, ಪುಣೆ ಹೀಗೆ ಅವರು ಎಲ್ಲೇ ಇದ್ದರೂ ಅಲ್ಲಿಯ ಆಕಾಶವಾಣಿ ಕೇಂದ್ರಗಳು ಅವರಿಗೆ ಆಹ್ವಾನ ಕೊಡುತ್ತಿದ್ದರು.

ಧಾರವಾಡ ಆಕಾಶವಾಣಿ ಕೇಂದ್ರದ ಮೇಲೆ ಅಪಾರ ಪ್ರೀತಿ ಹೊಂದಿದ್ದ ರಾಜಗುರು ಅವರು ಎಲ್ಲೇ ಇದ್ದರೂ ಇಲ್ಲಿಗೆ ಬಂದು ಹಾಡಿ ಹೋಗುತ್ತಿದ್ದರು. ಸಿದ್ಧಾರೂಢ ಸ್ವಾಮಿ ಮಠದಲ್ಲಿ ಪ್ರತೀ ವರ್ಷ ನಡೆಯುವ ಶ್ರಾವಣ ಮಾಸದ ಉತ್ಸವಕ್ಕೆ ತಪ್ಪದೆ ಹಾಜರಾಗುತ್ತಿದ್ದ ಅವರು ಧಾರವಾಡ ಆಕಾಶವಾಣಿಗೆ ಬಂದು ಹಾಡಿ ಹೋಗುತ್ತಿದ್ದರು. ಮುಂದೆ ಇಲ್ಲೇ ಬಂದು ನೆಲೆಸಿದಾಗ ಅವರ ಸಂಗೀತ ಧಾರವಾಡ ಆಕಾಶವಾಣಿಯಿಂದ ಸತತವಾಗಿ ಪ್ರಸಾರವಾಯಿತು. ಬಸವರಾಜ ರಾಜಗುರು ಅವರ ಸಂಗೀತಕ್ಕಾಗಿ ದೇಶದಾದ್ಯಂತ ಧಾರವಾಡ ಆಕಾಶವಾಣಿ ಕೇಳುವವರಿದ್ದರು. ಅದರಲ್ಲಿ ಕೇಂದ್ರ ಸಚಿವರಾಗಿದ್ದ ಡಾ. ಬಿ.ವಿ. ಕೇಸ್ಕರ್ ಒಬ್ಬರು.

ಧಾರವಾಡ ಆಕಾಶವಾಣಿಗೆ ರಾಜಗುರು ನೂರಾರು ರಾಗಗಳನ್ನು ಕೊಟ್ಟಿದ್ದಾರೆ. ಕೋಮಲರಿಷಭ, ಅಸಾವರಿ, ಭೂಪಾಲಿ ತೋಡಿ, ಚಾಂದನೀ ಕೇದಾರ, ಮಾಲಕಂಸ, ದರಬಾರಿ ಕಾನಡಾ, ಹಂಸ ಕಲ್ಯಾಣ, ಗೌಡಮಲ್ಹಾರ, ಬಿಲಾವಲ, ಶ್ರೀನಂದ, ಗೌರಿ, ಭೈರವಿ, ಹಂಸಧ್ವನಿ ಮುಂತಾದವು ಪ್ರಮುಖವಾಗಿವೆ. ಹಂಸ ಕಲ್ಯಾಣ ರಾಗದಲ್ಲಿರುವ 'ಬಲ್ಮಾನ ಜಾ ಪಲ್ ಸೌತಾನ್



ಕೆ', ಬೃಂದಾವನಿ ಸಾರಂಗಕ್ಕೆ ನಿಬದ್ಧಿತವಾಗಿರುವ 'ಸಾಗರಿ ಉಮರಿಯಾ ಮೋರಿ', ಹಂಸಧ್ವನಿಯಲ್ಲಿರುವ 'ಲಾಗೆ ಲಗನ್ ಪತೇ ಸಖೆ....' ಇಂತಹ ನೂರಾರು ಕೃತಿಗಳು ಶ್ರೋತೃಗಳ ಮನಸ್ಸಿನಲ್ಲಿ ಇಂದಿಗೂ ಹಸಿರಾಗಿವೆ.

ವಚನಗಳ ಸರದಾರ

ವಚನ ಗಾಯನಕ್ಕೆ ಹೊಸ ರೂಪ ಕೊಟ್ಟವರು ಬಸವರಾಜ ರಾಜಗುರು. ಧಾರವಾಡ ಆಕಾಶವಾಣಿದಲ್ಲಿ ಅವರು ಹಾಡಿರುವ ವಚನಗಳು ಪ್ರತಿನಿತ್ಯ ಪ್ರಸಾರವಾಗುತ್ತಿದ್ದವು. ವಚನಗಳನ್ನು ಮಾತಿನ ರೂಪದಲ್ಲಿ ಕೇಳಿದ್ದ ಜನರು ಗಾಯನದ ರೂಪದಲ್ಲಿ ಕೇಳಿ ಆನಂದಿಸಿದರು. ಮತ್ತೂ ಹಾಡುವಂತೆ ಕೇಳಿದ ಸಾವಿರಾರು ಪತ್ರಗಳು ಧಾರವಾಡ ಆಕಾಶವಾಣಿಗೆ ಬರುತ್ತಿದ್ದವು. ಇದನ್ನರಿತ ಧಾರವಾಡ ಆಕಾಶವಾಣಿ ವಚನ ಗಾಯನಕ್ಕೆ ಮಹತ್ವ ನೀಡಿತು. ರಾಜಗುರು ಅವರೂ ವಚನ ಗಾಯನವನ್ನು ತಮ್ಮ ರೆಕಾರ್ಡಿಂಗ್‌ಗಳಲ್ಲಿ, ಕಛೇರಿಗಳಲ್ಲಿ ವಚನಗಳನ್ನು ಪ್ರಮುಖ ಅಂಗವನ್ನಾಗಿ ಮಾಡಿಕೊಂಡರು. ಬಸವಣ್ಣ, ಅಕ್ಕಮಹಾದೇವಿ, ಸರ್ವಜ್ಞ, ಶಿಶುನಾಳ ಶರೀಫ, ನಿಜಗುಣ ಶಿವಯೋಗಿಗಳ ವಚನಗಳನ್ನು ನಿರಂತರವಾಗಿ ಹಾಡುತ್ತಾ ವಚನ ಸಂಗೀತ ಪರಂಪರೆಗೆ ಭದ್ರ ಬುನಾದಿ ಹಾಕಿದರು.

'ಉಳ್ಳವರು ಶಿವಾಲಯವ ಮಾಡುವರಯ್ಯಾ ನಾನೇನು ಮಾಡಲಿ ಬಡವನಯ್ಯ....' ಬಸವಣ್ಣನ ಈ ವಚನವನ್ನು ಬಸವರಾಜ ರಾಜಗುರು ಅವರು ಧ್ವನಿಯಲ್ಲಿ ಕೇಳಿದರೇ ಚೆನ್ನ. ಎಷ್ಟು ಸಲ ಕೇಳಿದರೂ ಬೇಸರ ಅನ್ನುವುದೇ ಇಲ್ಲ. ಮನಸ್ಸನ್ನು ತಾಕುವ ಆ ಸುಶ್ರಾವ್ಯ ಸಂಗೀತ ಚೈತನ್ಯದ ಅಲೆ ಎಬ್ಬಿಸುತ್ತದೆ. 'ನುಡಿದರೆ ಮುತ್ತಿನ ಹಾರದಂತಿರಬೇಕು' ವಚನ ಧಾರವಾಡ ಆಕಾಶವಾಣಿಯಲ್ಲಿ ಸಾವಿರ ಬಾರಿ ಪ್ರಸಾರವಾಗಿದೆ. ಇವತ್ತಿಗೂ ಶ್ರೋತೃ ಈ ವಚನಕ್ಕೆ ತಲೆದೂಗುತ್ತಲೇ ಇದ್ದಾನೆ. ಪರಚಿಂತೆ ನಮಗೆ ಏಕಯ್ಯ, ಮಡಕೆಯ ಮಾಡುವೆಡೆ ಮಣ್ಣೇ ಮೊದಲು, ಸ್ವಾಮಿ ನೀನು, ಶಾಶ್ವತ ನೀನು ಮುಂತಾದ ವಚನಗಳನ್ನು ಪ್ರಖ್ಯಾತಗೊಳಿಸಿದ ಕೀರ್ತಿ ಬಸವರಾಜ ರಾಜಗುರು ಅವರಿಗೆ ಸಲ್ಲುತ್ತದೆ.

'ಹೆಂಗಸರು ತಮ್ಮ ಸೌಂದರ್ಯವನ್ನು ಕಾಯ್ದುಕೊಳ್ಳುವಲ್ಲಿ ತಪ್ಪಬಹುದು. ಆದರೆ ರಾಜಗುರು ತಮ್ಮ ಕಂಠಶ್ರೀಯನ್ನು ಕಾಯ್ದುಕೊಳ್ಳುವಲ್ಲಿ ತಪ್ಪಲಾರರು' ಎಂದು ಡಾ. ಪಾಟೀಲ ಪುಟ್ಟಪ್ಪ ರಾಜಗುರು ಅವರ ಕುರಿತು ಹೇಳುತ್ತಾರೆ. ರಾಜಗುರು ಅವರ ಕಂಠಸಿರಿ ನದಿಯಂತೆ ಸದಾ ಹರಿಯುತ್ತಿತ್ತು. ಮುತ್ತಿನ ಹಾರದಂತೆ ಮಿನುಗುತ್ತಿತ್ತು. ಧಾರವಾಡ ಆಕಾಶವಾಣಿಯಲ್ಲಿ ಇರುವ ಅವರ ಧ್ವನಿಮುದ್ರಿಕೆಗಳು ಇಂದಿಗೂ ಅವರ ಗಾಯನದ ಹೊಳೆಯನ್ನು ಶ್ರೋತೃಗಳ ಮನಸ್ಸಿನ ಮೇಲೆ ಹರಿಸುತ್ತಿವೆ.

ಭಾರತೀಯ ಸಂಗೀತ ಪ್ರಪಂಚದಲ್ಲಿ ಅನರ್ಘ್ಯ ರತ್ನವಾಗಿ ಮಿಂಚಿದ ಬಸವರಾಜ



ರಾಜಗುರು ಅವರು ಸಂಗೀತಕ್ಕೆ ಭಾಷೆಯ ಬೇಲಿ ಇರಲಿಲ್ಲ. ಎಂಟು ಭಾಷೆಗಳಲ್ಲಿ ಅವರು ಗಾಯನ ಪ್ರಸ್ತುತಪಡಿಸುತ್ತಿದ್ದರು. ಕುಂದಗೋಳದ ಯಲಿವಾಳಗದಲ್ಲಿ ಹುಟ್ಟಿ, ರಂಗಸಾಗರದಲ್ಲಿ ಮಿಂದು, ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಸಂಸ್ಕೃತ ಕಲಿತು, ಪಂಚಾಕ್ಷರಿ ಗವಾಯಿಗಳ ಗರಡಿಯಲ್ಲಿ ಪಳಗಿ, ಮುಂಬೈ ಆಕಾಶವಾಣಿಯ ಬಾಂದಳ ಲೋಕದಲ್ಲಿ ಹಾರಾಡಿ, ಲಾಹೋರ್‌ನಲ್ಲಿ ತಮ್ಮ ಪ್ರತಿಭೆ ತೋರಿ ನಂತರ ಧಾರವಾಡ ಆಕಾಶವಾಣಿಗೆ ಬಂದ ಬಸವರಾಜ ರಾಜಗುರು ಅವರ ಸಂಗೀತ ಯಾತ್ರೆ ಅಪ್ರತಿಮವಾದುದು. 'ಮಾಧುರ್ಯದ ರಾಜ' (ಕಿಂಗ್ ಆಫ್ ಮೆಲೊಡಿ)ನಾಗಿದ್ದ ಬಸವರಾಜ ರಾಜಗುರು ಅವರ ಹಿಂದೆ ಬಂದ ಪ್ರಶಸ್ತಿ ಬಿರುದುಗಳು ಸಾವಿರಾರು. ಪದ್ಮಶ್ರೀ, ಪದ್ಮಭೂಷಣ, ಸಂಗೀತರತ್ನ, ಗಾನಗಂಧರ್ವ, ಸ್ವರ ಸಾಮ್ರಾಟ ಮುಂತಾದ ಗೌರವಗಳು ಅವರ ಮುಡಿಯಲ್ಲಿವೆ. 1991, ಜುಲೈ 21 ರಂದು ಇಹಲೋಕ ತ್ಯಜಿಸಿದ ರಾಜಗುರು ನೂರಾರು ಶಿಷ್ಯರ ಮನಸ್ಸಿನಲ್ಲಿದ್ದಾರೆ. ಕೋಟ್ಯಂತರ ರಸಿಕರ ಎದೆಯಲ್ಲಿದ್ದಾರೆ. ಧಾರವಾಡ ಆಕಾಶವಾಣಿಯ ಅಂಗಳದಲ್ಲಿ ಜೀವಂತವಾಗಿದ್ದಾರೆ.

- ಯೋಗೇಶ್ ಮಾರೇನಹಳ್ಳಿ



ಕರ್ನಾಟಕ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರು ದಿನಾಂಕ ೫.೮.೮೧ ರ ಶನಿವಾರ ಶ್ರೀಶಕ್ತಿ ಗಣೇಶೋತ್ಸವದ ಸಮಿತಿಯ ಪರವಾಗಿ

ಪದ್ಮಶ್ರೀ ಪಂಡಿತ ವೇ|| ಬಸವರಾಜ ರಾಜಗುರು ಅವರಿಗೆ ಅರ್ಪಿಸಿದ ಸನ್ಮಾನ ಪತ್ರ

ಒಂದು ದಿನ

ಶಾರದೆಯು ಬ್ರಹ್ಮನೊಡೆ ಸರಸ ವಾಡುತ್ತಿದ್ದಾಗ
ಆ ಆಟ ಅತಿಯಾಯಿತು ವೀಣೆಗೆ ಕೋಪ ಬಂದಿತು
ಕೋಪದಲಿ ಅಲ್ಲಿಂದ ಮೆಲ್ಲಗೆ ಜಾರಿತು ಭೂಲೋಕದೆಡೆ ಇಳಿಯಿತು
ಕ್ಷಣ ಕಳೆದು ಎಚ್ಚೆತ್ತ ಶಾರದೆ 'ಎಲ್ಲಿ ಸ್ವಾಮಿ! ನನ್ನಯ ವೀಣೆ' ಎನೆ
ಬ್ರಹ್ಮ ನಕ್ಕು ನುಡಿದ 'ಅಗೋ, ನೋಡು ಹೋಗುತಿದೆ ಅಲ್ಲಿ ಕಣೆ,
ಕೋಪದಲಿ ನಿನ್ನನ್ನು ತೊರೆದು ಈ ಲೋಕ ಮರೆದು'.
ಶಾರದೆ ಕೋಪದಲಿ ವೀಣೆಯನು ಹಿಡಿಯಲು ಕೈಚಾಚಿದಾಗ
ಆ ಬ್ರಹ್ಮ ತಡೆದ 'ವಿದ್ಯಾಧಿದೇವತೇ ತಡೆ
ಒಳಗಣ್ಣ ತೆರೆ. ನೋಡು! ಆ ವೀಣೆಯ ಅವತಾರ
ಭೂಲೋಕದಲಿ ಸಂಗೀತ ಶಾರದೆಯ ಅಪರಾವತಾರ'
ಶಾರದೆ ನೋಡಿದಳು ಕಣ್ಮುಚ್ಚಿ
ನಕ್ಕು ಹರಸಿದಳು ಕೈಯೆತ್ತಿ.

ಅವತಾರ

ಕರ್ನಾಟಕ ಕೆಳದಿ ಅರಸು ಮನೆತನಕ್ಕೆ
ರಾಜಗುರು, ಸಿದ್ದಯ್ಯಸ್ವಾಮಿ
ಅವರ ಮಗ ಮಹಾಂತಸ್ವಾಮಿ
ಮಹಾಂತಸ್ವಾಮಿಯ ಮಗನಾಗಿ ವೀಣೆ ಜನಿಸಿತು
'ಬಸವರಾಜ' ಎಂದು ಹೆಸರ ಪಡೆಯಿತು||

ಒಲವು, ಯಶಸ್ಸು

ಸಂಗೀತ ಎಂದರೆ ಕುಮಾರ ಬಸವರಾಜನಿಗೆ ಪಂಚಪ್ರಾಣ
ಗುಣು ಗುಣು ಸದಾ ತಂ ತಂ ತಾನ



ಅದುವೇ ಪಾನ, ಅದುವೆ ಮಾನ
ಕುಳಿತರೂ ನಿಂತರೂ ಸಂಗೀತ ಧ್ಯಾನ ||
ಗುರು ಪಂಚಾಕ್ಷರ ಗವಾಯಿ
ನೀಲಕಂಠ ಬುವಾ; ಸವಾಯಿ
ಗಂಧರ್ವ; ಸುರೇಶ ಬಾಬು ಮಾನೆ
ಅಬ್ದುಲ್ ವಹೀದಖಾನ,
ಇನಾಯಿತುಲ್ಲಾ ಖಾನ,
ಮುಬಾರಕ ಅಲಿ,
ರೋಷನ ಅಲಿ,
ಗೋವಿಂದರಾವ ಟೇಂಬೆ
ಈ ಹಿರಿಯರೇನೆಂಬ
ಇವರೆಲ್ಲ ಮೆಚ್ಚಿ ಕರೆದರು
ಸಂಗೀತ ಧಾರೆಯೆರೆದರು.
ಕಲಿತ ಇವರು ಸಂಗೀತ ತಾವಾದರು.

ಸಂಗೀತ ಸಾಮ್ರಾಟ

ಸಂಗೀತ ಒಲಿಯಿತು
ಹಾಡೇ ಸಂಗೀತವಾಯಿತು
ಉತ್ತರಾದಿಯೆ ಯೇನು;
ದಕ್ಷಿಣಾದಿ ಕೂಡ ಕರಗತವಾಯಿತು|
ಶಬ್ದ ಬ್ರಹ್ಮರಾದಿರಿ
ನಾದ ಬ್ರಹ್ಮರಾದಿರಿ
ಸಂಗೀತ ಸಮ್ರಾಟರಾಗಿ ಮೆರೆಯುತಿರುವಿರಿ.
ಎಷ್ಟು ಆ ಬಿರುದಾವಳಿ
ಸಂಗೀತ ರತ್ನ, ಗಾನ ಕೋಕಿಲೆ,
ಸಂಗೀತ ಸರ್ವೋದಯ, ಸಂಗೀತ ಸುಧಾಕರ,
ಸೂರಕಾ ಬಾದಶಹಾ, ಹುಕುಮಿ ಎಕ್ಕಾ,
ಮೇಲೆ ಪದ್ಮಶ್ರೀ
ಇವುಗಳೆಲ್ಲದರ ಹಾವಳಿ
ಅಹಂಕಾರ ತರಿಸಲಿಲ್ಲ.



ಅದೇ ವ್ಯಕ್ತಿ, ಅದೇ ಶಕ್ತಿ

ಸರಳ ಸಾದಾ ವ್ಯಕ್ತಿ
ಒಂದು ಸಂಗೀತ ಶಕ್ತಿ
ಸಂಗೀತವೇ ನೀವಾಗಿ
ನೀವೇ ಸಂಗೀತ ವಾಗಿ
ವಿಹರಿಸುವ ನೀವಿಂದು
ನಮ್ಮಲ್ಲಿಗೈತಂದು
ಉಪಸ್ಥಿತರಾಗಿರುವದೇ
ನಮ್ಮ ಭಾಗ್ಯ, ಸೌಭಾಗ್ಯ ||
ಕೃಷ್ಣೆಯಾ ಬಳಿಯಲ್ಲಿ,
ಶ್ರೀ ಸೂಗೂರೇಶನ ಅಡಿಯಲ್ಲಿ
ಮಂತ್ರಾಲಯದ ಮಹಾಗುರು
ಶ್ರೀ ರಾಘವೇಂದ್ರನ ಸನಿಹದಲಿ
ಹಾಕಿರುವ ಈ ಭವ್ಯ ಸಭಾಂಗಣದಲಿ
ನಾವೆಲ್ಲ ನೆರಿದಿಹೆವು
ನಿಮ್ಮ ಸಂಗೀತ ರಸ ಸವಿಯ ಬಂದಿಹೆವು
ಅರವತ್ತು ತುಂಬಿಹ ನಿಮಗೆ,
ಸಂಗೀತ ಋಷಿಗೆ, ನಮೋ, ನಮಃ
ಚಿರಕಾಲ ಸಂಗೀತ ಹರಿಸಿ
ಜಗವನೆಚ್ಚರಿಸಿ,
ಚೆಲುವಾಗಿ, ಗೆಲುವಾಗಿ ಬಾಳಿರಿ
ನೀವೆ ನೀವಾಗಿ ಮೆರೆಯಿರಿ.||



ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು
ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ ಅವರ ದಿವ್ಯ ಸನ್ನಿಧಿಯಿಂದ
ಶ್ರೀ ಜಗದ್ಗುರು ಮೂರುಸಾವಿರ ಮಠದಲ್ಲಿ
ದಿ. ೨೪.೮.೧೯೭೫ ರಂದು

'ಪದ್ಮಶ್ರೀ' ಶ್ರೀ ಬಸವರಾಜ ರಾಜಗುರು ಅವರಿಗೆ ದಯಪಾಲಿಸಿದ ಪ್ರಶಸ್ತಿ ಪತ್ರ

ಕನ್ನಡಾಂಬೆಯ ವರಪುತ್ರರೇ,

ಕನ್ನಡ ವಾಗ್ದೇವಿಯ ವರಪುತ್ರರಾಗಿ ಸಂಗೀತ ಸಿರಿದೇವಿಯ ಮುಡಿಗೆ ಹೂವೇರಿಸಿದ ನೀವು ಧಾರವಾಡ ಜಿಲ್ಲೆಯ ಎಲಿವಾಳ ಗ್ರಾಮದ ಹಿರಿಯ ಮಠದಲ್ಲಿ ಜನಿಸಿದಿರಿ ನಮ್ಮ ನಾಡಿನ ಇತಿಹಾಸದಲ್ಲಿಯೇ ಒಂದು ಅಪೂರ್ವಸ್ಥಾನ ಗಳಿಸಿಕೊಂಡ ಕೆಳದಿಯ ರಾಜರ ಗುರುಗಳಾಗಿದ್ದ ನಿಮ್ಮ ಪೂರ್ವಜರ ಕೀರ್ತಿಯನ್ನು ಉಳಿಸಿ ರಾಜಗುರು ಅನ್ವರ್ಥಕ ನಾಮವನ್ನು ಸಾರ್ಥಕಗೊಳಿಸಿದ ನೀವು ಕನ್ನಡಾಂಬೆಯ ವರಪುತ್ರರೆನಿಸಿದ್ದೀರಿ.

ಗುರು ಪಂಚಾಕ್ಷರರ ವರಶಿಷ್ಯರೆ,

ಯುಗಪುರುಷ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳವರು ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ವೀರಶೈವ ಪುರುಷನ ಹೃದಯದಂತಿರುವ ಶ್ರೀ ಶಿವಯೋಗ ಮಂದಿರವನ್ನು ಸ್ಥಾಪಿಸಿದರು. ಧರ್ಮಯೋಗಗಳ ಪ್ರಸಾರದೊಂದಿಗೆ ಮೂಲೆ ಗುಂಪಾಗಿದ್ದ ಕಲೆಯ ಪುನರುಜ್ಜೀವನಗೊಳಿಸುವುದು ಅವರ ಘನವಾದ ಉದ್ದೇಶವಾಗಿತ್ತು. ಸಂಗೀತ ಕೇವಲ ರಂಜನೆಗಾಗಿರದೆ ನಾದಬ್ರಹ್ಮದಿಂದ ಪರಬ್ರಹ್ಮನನ್ನು ಒಲಿಸಲು ಸಾಧನವೆಂದು ಸಂಗೀತಕ್ಕೆ ಹೊಸ ಚೇತನವನ್ನು ತಂದುಕೊಟ್ಟರು. ಸಾಹಿತ್ಯ ಸಂಗೀತಗಳಿಂದ ನಮ್ಮ ಧರ್ಮ ಸಂಸ್ಕೃತಿಯ ಪ್ರಸಾರ ಮಾಡುವ ಹವಣಿಕೆ ಅವರದಾಗಿತ್ತು. ಅವರು ಅಂದು ನೆಟ್ಟ ಸಸಿಯನ್ನು ಬೆಳಸಿ ದಾಂಗುಡಿಯಿಡುವಂತೆ ಮಾಡಿದವರು ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳು. ನೀವು ಎಳೆಯ ವಯದಲ್ಲೇ ತಂದೆ ಮಹಾಂತಯ್ಯನವರ ಪ್ರೇರಣೆಯಂತೆ ಶಿವಯೋಗಮಂದಿರದ ಸಂಚಾರಿ ಸಂಗೀತ ಪಾಠಶಾಲೆಯಲ್ಲಿ ಪ್ರವೇಶ ಪಡೆದಿರಿ. ಪಂ. ಪಂಚಾಕ್ಷರಿ ಗವಾಯಿಗಳವರ ಅಚ್ಚುಮೆಚ್ಚಿನ ಶಿಷ್ಯರಾದಿರಿ. ಶ್ರೀ ಗವಾಯಿಗಳವರ ಪ್ರೇಮದ ಪುತ್ಥಳಿಯಾಗಿ ಪುತ್ರವಾತ್ಸಲ್ಯವನ್ನು ಪಡೆದ ಭಾಗ್ಯ ನಿಮ್ಮದಾಗಿತ್ತು.



ಸಂಗೀತ ಸರಸ್ವತಿಯ ಕಣ್ಮಣಿಗಳೇ,

ಯೋಗ್ಯ ಗುರುವಿನ ಮಾರ್ಗದರ್ಶನದಲ್ಲಿ ಆಸಕ್ತಿಯಿಂದ ಗೈದ ಹನ್ನೆರಡು ವರ್ಷಗಳ ಸಾಧನೆಯಿಂದ ಉತ್ತರ-ದಕ್ಷಿಣಾದಿ ಸಂಗೀತದಲ್ಲಿ ಪರಿಪೂರ್ಣತೆಯನ್ನು ಪಡೆದಿರಿ. ದೈವದತ್ತವಾದ ಸುಮಧುರಕಂಠ ಪಡೆದಿರುವುದು, ಕಬ್ಬಿನ ಮೇಲೆ ಜೇನಿಟ್ಟಂತಾಗಿದೆ. ಆಕರ್ಷಕ ವ್ಯಕ್ತಿತ್ವ ಸುಮಧುರಕಂಠ, ಹಾಗೂ ಪಾಂಡಿತ್ಯ ಇವು ಮೂರೂ ಮುಪ್ಪುರಿಗೊಂಡ ಸುದೈವಿಗಳಾಗಿದ್ದೀರಿ. ನಿಮ್ಮಲ್ಲಿರುವ ವಿಚಕ್ಷಣದೃಷ್ಟಿ ಸಂಗೀತದಲ್ಲಿ ಆಸಕ್ತಿ ನಿಮ್ಮನ್ನು ಬಹಬೇಗ ಸಮರ್ಥ ಗವಾಯಿಗಳನ್ನಾಗಿಸಿದವು. ಮುಂದೆ ಗುರುವಿನ ಅನುಜ್ಞೆ ಪಡೆದು ಸಂಗೀತರಸ ಮಾಧುರ್ಯವನ್ನು ನಾಡ ರಸಿಕರಿಗೆ ನೀಡಲು ಅಣಿಯಾದಿರಿ. ಸಂಗೀತ ಸರಸ್ವತಿಯು ನಿಮ್ಮಲ್ಲಿ ನೆಲೆನಿಂತಳು. ನಮ್ಮ ನಾಡಿನ ಅನೇಕ ನಗರಗಳಲ್ಲಿ ಸಂಗೀತ ಕಛೇರಿಗಳನ್ನು ಮಾಡಿ ರಸಿಕರಿಂದ ವಿದ್ವಾಂಸರಿಂದ ಮನ್ನಣೆ ಪಡೆದುಕೊಂಡ ಪುಣ್ಯಜೀವಿಗಳಾಗಿರುವಿರಿ. ಅಂದಿನಿಂದ ಪ್ರಾರಂಭವಾಯಿತು ನಿಮ್ಮ ದಿಗ್ವಿಜಯ. ೧೯೩೮ರಲ್ಲಿ ಜಮಖಂಡಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನವು ನೀವು ಪ್ರದರ್ಶಿಸಿದ ಸ್ವರ ತಾಳಗಳ ಚಮತ್ಕಾರಿಕ ಸುಮಧುರ ಸಂಗೀತವನ್ನು ಕಂಡು ನಿಮಗೆ 'ಗಾಯನ ಕೋಕಿಲ' ಎಂಬ ಬಿರುದನ್ನಿತ್ತು ಪ್ರೋತ್ಸಹಿಸಿದುದು ನಿಮ್ಮ ಕಲೆಯ ಹೂವರಳಿ ಪರಿಮಳಿಸುವಂತಾಯಿತು.

ಸಂಗೀತ ಸುಧಾಕರರೇ,

ನಿಮ್ಮ ಗಾನಸುಧೆ ಕೇವಲ ಕನ್ನಡಿಗರಿಗೆ ಮಾತ್ರ ಮೀಸಲಾಗದೆ ನೆರೆನಾಡಿನವರಿಗೂ ದೊರೆಯುವ ಅವಕಾಶ ಒದಗಿತು. ೧೯೪೧ರಲ್ಲಿ ಹೈದರಾಬಾದದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯು ನಿಮ್ಮ ಸಂಗೀತ ಕಛೇರಿಯನ್ನು ಏರ್ಪಡಿಸಿ 'ಸಂಗೀತ ಸುಧಾಕರ' ಎಂಬ ಸಾರ್ಥಕ ಬಿರುದನ್ನಿತ್ತು ಗೌರವಿಸಿತು.

ಪದ್ಮಶ್ರೀ ಭೂಷಣರೇ,

ನಿಮ್ಮ ಸಂಗೀತ ಸೌರಭವು ಭಾರತದ ಮಹಾನಗರಗಳಾದ ಕಲಕತ್ತ, ಮುಂಬಯಿ, ಕಾಶಿ, ದಿಲ್ಲಿ, ಮೊದಲಾದೆಡೆಗಳಲ್ಲಿ ಪಸರಿಸಿ ಅಸಂಖ್ಯ ರಸಿಕರನ್ನು ತಣಿಸಿತು. ನಿಮ್ಮ ಕೀರ್ತಿ ದೇಶದ ತುಂಬೆಲ್ಲ ವ್ಯಾಪಿಸಿತು. ನಿಮ್ಮ ಕಛೇರಿಗಳಿಗೆ ಜನ ಸಕ್ಕರೆಗೆ ಇರುವೆ ಮುಕುರುವಂತೆ ಬಂದು ಕೇಳಿ ಮೈ ಮರೆಯುತ್ತಿದ್ದರು. ೧೯೫೩ರಲ್ಲಿ ದಿಲ್ಲಿಯ ಪುರಭವನದಲ್ಲಿ ಆಗ ಭಾರತದ ಹೆಸರಾಂತ ಗವಾಯಿಗಳಾದ ಪಂ. ಓಂಕಾರನಾಥ ಠಾಕೂರ ಅವರ ಬೈಟಕಿಯ ನಂತರ ಹಾಡಿ ಎಲ್ಲರಿಂದ ಮೆಚ್ಚುಗೆಯ ಹಾರ ತುರಾಯಿಗಳನ್ನು ಪಡೆದ ಪ್ರಪ್ರಥಮ ಕನ್ನಡಿಗರು ನೀವಾದಿರಿ. ದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಸಂಗೀತ ಕಛೇರಿಯನ್ನು ಮಾಡಿ ರಾಷ್ಟ್ರಾಧ್ಯಕ್ಷರ ಪ್ರಶಂಸೆಗೆ ಪಾತ್ರರಾದಿರಿ. ಮಹಾರಾಷ್ಟ್ರ, ಮಧ್ಯಪ್ರದೇಶಗಳಲ್ಲಿಯೂ ನಿಮ್ಮ ಕಲೆಯನ್ನು ಮೆಚ್ಚಿ ಆದರಿಸಿ ಮಾನಪತ್ರ ನೀಡಿದ್ದಾರೆ. ಇಂತಹ ಅಪೂರ್ವ ಕಲಾವಂತರಾದ ನಿಮ್ಮನ್ನು ಗುರುತಿಸಿ ಇತ್ತೀಚೆಗೆ ಕೇಂದ್ರ



ಸರಕಾರದವರು. 'ಪದ್ಮಶ್ರೀ' ಎಂಬ ಮಹೋನ್ನತ ಪದವಿಯನ್ನು ನೀಡಿ ಆ ಪದವಿಯ ಘನತೆಯನ್ನು ಹೆಚ್ಚಿಸಿದ್ದಾರೆ.

ಸಂಗೀತ ಸಾರ್ವಭೌಮರೇ,

ನಿಮ್ಮ ಕೀರ್ತಿ ಪತಾಕೆಯ ಗೌರಿಶಂಕರದ ಉನ್ನತಿಗೇರಲು ಗುರುಕೃಪೆ ಹಾಗೂ ನಿಮ್ಮ ಪ್ರತಿಭೆ ಕಾರಣವೆಂದು ಬೇರೆ ಹೇಳಬೇಕಿಲ್ಲ. ಅಂತೆಯೇ ಇಂದು ಶ್ರೀ ಜಗದ್ಗುರು ಮೂರಸಾವಿರ ಮಠದಲ್ಲಿ ನಿಮ್ಮನ್ನು ಸತ್ಕರಿಸಲಾಗುತ್ತಿದೆ. ಈ ಪೀಠದ ಬಗ್ಗೆ ನೀವು ತುಂಬಾ ಗೌರವಾದರಗಳನ್ನು ಹೊಂದಿದ್ದು, ಸಮಾಜ ಪ್ರೇಮಿಗಳು ಶರಣಾಗತ ರಕ್ಷಕರಾದ ಲಿಂ. ಜಗದ್ಗುರು ಗುರುಸಿದ್ಧ ರಾಜಯೋಗಿಂದ್ರ ಮಹಾಸ್ವಾಮಿಗಳವರ ಪೂರ್ಣಕೃಪೆಗೆ ಈ ಮೊದಲೇ ಪಾತ್ರರಾಗಿದ್ದೀರಿ. ಸಂಗೀತ ಸಾಹಿತ್ಯ ಕಲೆಗಳ ಉದ್ಧಾರಕ್ಕಾಗಿ ಪರಿಶ್ರಮಿಸುತ್ತಾ ಪ್ರೋತ್ಸಾಹಿಸುತ್ತಿರುವ ಶ್ರೀ ಜಗದ್ಗುರು ಗಂಗಾಧರ ರಾಜಯೋಗಿಂದ್ರ ಮಹಾ ಸನ್ನಿಧಿಯವರು ನಿಮ್ಮಲ್ಲಿರುವ ಶಕ್ತಿಭರಿತ, ಭಕ್ತಿ ಕಂಪಿತ ಸುಮಧುರ ಕಂಠದ ಕಲಾ ಶ್ರೀಮಂತಿಕೆಯನ್ನು ಕಂಡು ಮನವಾರೆ ಮೆಚ್ಚಿಕೊಂಡು ಚಿನ್ನದ ಪದಕದೊಡನೆ "ಸಂಗೀತ ಸಾರ್ವಭೌಮ" ಎಂಬ ಪ್ರಶಸ್ತಿಯನ್ನಿತ್ತು ಆಶೀರ್ವದಿಸುತ್ತಿದ್ದಾರೆ. ಪಾಂಡಿತ್ಯ ಪ್ರತಿಭಾವಂತ ಕಲಾವಿದರಾದ ನಿಮ್ಮನ್ನು ಹುಬ್ಬಳ್ಳಿ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರನು ಆಯುರಾರೋಗ್ಯ ಭಾಗ್ಯವನ್ನಿತ್ತು ಸಂರಕ್ಷಿಸಿ ಕರುಣಿಸಲಿ.

ಹುಬ್ಬಳ್ಳಿ — ಶ್ರೀ ಜಗದ್ಗುರು ಮೂರುಸಾವಿರ ಮಠ ಮಹಾಸಂಸ್ಥಾನ

ತಾ. ೨೪.೮.೧೯೭೫ — ಹಾಗು ಭಕ್ತವೃಂದ



ಅಭಿಮಾನಿಗಳು ಬರೆದ ಹಾಡುಗಳು

ಸಗ್ಗಕೆ ಹಾರಿತು ಕೋಗಿಲೆಯು
ಇಂದ್ರನ ಸಭೆಯಲಿ ಹಾಡಲು ಎಂದು |
ಸಗ್ಗಕೆ ಹಾರಿತು ಕೋಗಿಲೆಯು
ದೇವತೆಗಳ ಮನ ತಣಿಸಲಿಕೆಂದು
ಸಗ್ಗಕೆ ಹಾರಿತು ಕೋಗಿಲೆಯು ||೧||

ತನ್ನಯ ಹಾಡಿನ ಜೇನನು ಉಣಿಸಿ |
ಮರ್ತ್ಯದ ಜನವನು ತಣಿಸಿತ್ತು ||
ನಿತ್ಯವು ಹಾಡಿನ ಪೂಜೆಯ ಸಲ್ಲಿಸಿ |
ದೇವನ ಮನವನು ಗೆದ್ದಿತ್ತು ||೨||

ಸಂಗೀತ ಸಾಹಿತ್ಯ ಲೌಕಿಕದಲ್ಲುss|
ಅಪಾರ ಪಾಂಡಿತ್ಯ ಪಡೆದಿತ್ತು ||
ತನ್ನಯ ಹಾಡಿನ ಬಲೆಯನು ಬೀಸಿ |
ಜನತೆಯ ಮನ ಸೆರೆಹಿಡಿದಿತ್ತು ||೩||

ಸಂಗೀತದ ಗುರು ಸಾಹಿತ್ಯದ ಗುರು ss |
ಆಧ್ಯಾತ್ಮತೆ ಗುರು ವಾಗಿತ್ತು ssss |
ಬಸವ ರಾಜ ರಾಜಗುರುವು ss ತಾ sss |
ಭಾರತ ಕೋಗಿಲೆ ಯಾಗಿತ್ತು sss ||೪||

ದೇವಲೋಕದಲಿ ಹಾಡಲು ಎಂದು ss |
ಇಂದ್ರನ ಸಭೆಯಲಿ ಮೆರೆಯಲು ಎಂದು ||
ಆಪ್ಸರೆಯರ ಮನ ತಣಿಸಲು ಎಂದು ssss |
ಸಗ್ಗಕೆsss ಹಾರಿತು sss ಕೋಗಿಲೆಯು ||೫||

ಎಸ್. ವಿ. ಪತ್ತಾರ ಗುರುಗಳು
ಹೊಸಯಲ್ಲಾಪುರ, ಧಾರವಾಡ



ಪಂ. ಬಸವರಾಜ ರಾಜಗುರು (ಭಜನ ಟೀಕ)

ಪದ್ಮ ಭೂಷಣರು | ಇವರು | ರಾಜ | ಗುರು || ಧೀನ ಧೀನ ನಕ
ಬಸವರಾಜರಿಗೆ | ವಂದನೆಯು
ಖ್ಯಾತಿವಂತ ಸಂ|ಗೀತರತ್ನ ಅತಿ |
ಮಧುರ ಸ್ವರದ ನಿಧಿ ವಂದನೆಯು

ಜನುಮಿಸಿ ಯಲವಾಳದಿ ಶುಭಸಮಯದಿ
ಗಾನಯೋಗಿ ಪಂಚಾಕ್ಷರರಾ
ಶಿಷ್ಯ ವೃತ್ತಿಯನು ಗೈದು ಗಾಯನದಿ
ಪರಿಣತಿ ಪಡೆದ ಕಲಾಕಾರಾ

ದೇಶವಿದೇಶದಿ ಭಾರತಮಾತೆಗೆ
ಗೌರವ ಗಳಿಸಿದ ಗಂಭೀರ
ಕನ್ನಡ ತಾಯಿಯ ಹೆಮ್ಮೆಯ ಪುತ್ರನು
ಸ್ವರಲೋಕದ ಕೀರ್ತಿಯ ಶಿಖರ

ಎಲ್ಲರ ಜೊತೆಯಲಿ ಬೆರೆಯುತ ನಲಿಯುವ
ಸದ್ಗುಣಿ ಸುಚರಿತ ಮೃದು ಭಾ
ಮಧುರಗಾನ ಗಂಧರ್ವನೆ ಎನಿಸಿದ
ಪುಣ್ಯಪುರುಷ ವರ ಸ್ವರಕಾಶಿ

ವ್ಹಿ. ಪಿ. ಡಿರಸಂಗ

ಪ್ರಸಾರಾಂಗದ ಪ್ರಕಟಣೆಗಳು

ಪುಸ್ತಕಗಳು :

- **ಸಂಗೀತಸಾಮ್ರಾಟ್ : ಪಂ. ಬಸವರಾಜ ರಾಜಗುರು :**
  ಲೇಖಕರು : ನಿಜಗುಣ ರಾಜಗುರು. ಬೆಲೆ : ರೂ. 100 /-

- **ಗಾಯನಗಂಗೆ ಡಾ. ಗಂಗೂಬಾಯಿ ಹಾನಗಲ್ :**
  ಲೇಖಕರು : ರೇಖಾ ಹೆಗಡೆ ಅರವಿಂದ್. ಬೆಲೆ : ರೂ. 50/-

- **ರಂಗಸಂಗೀತ :**
  ಸಂಪಾದಕರು : ಡಾ. ರಾಮಕೃಷ್ಣ ಮರಾಠೆ. ಬೆಲೆ : ರೂ. 150/-

ಸಾಕ್ಷ್ಯಚಿತ್ರದ ಅಡಕಮುದ್ರಿಕೆ :
ರಾಷ್ಟ್ರಕವಿ ಕುವೆಂಪುರವರ ರಾಮಾಯಣದರ್ಶನಂ :
ಗಮಕವಾಚನ ಮತ್ತು ವ್ಯಾಖ್ಯಾನ : ಬೆಲೆ : ರೂ. 120/-

ಈ ಎಲ್ಲ ಪ್ರಕಟಣೆಗಳನ್ನು ಪಡೆದುಕೊಳ್ಳು ಸಂಪರ್ಕಿಸಬಹುದಾದ ವಿಳಾಸ :
ಪ್ರಸಾರಾಂಗ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಅಶೋಕವೃತ್ತ, ಜೆ.ಎಲ್.ಬಿ. ರಸ್ತೆ, ಲಕ್ಷ್ಮೀಪುರಂ, ಮೈಸೂರು – 4, ಕರ್ನಾಟಕ.
ದೂರವಾಣಿ : 0821 2402141, 2402114,

ಇಮೇಲ್ : musicuniversitymys@gmail.com, Website :
www.musicuniversity.ac.in

ಸಂಗೀತ ಸಾಮ್ರಾಟ್ ಪಂ. ಬಸವರಾಜ ರಾಜಗುರು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಸಂಗೀತಾದಿ ಪ್ರದರ್ಶಕ ಕಲೆಗಳು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರಮುಖ ರಾಯಭಾರಿಗಳು. ಇವು ಮನುಕುಲದಷ್ಟೇ ಆರ್ಷೇಯ ಸ್ಥಾನ ಪಡೆದಿದ್ದು, ಆನಂದ ಮತ್ತು ಸೌಹಾರ್ದತೆಗಳನ್ನು ಜೀವಾಳವಾಗಿ ಉಳ್ಳವು. ಇವುಗಳ ಸಹಚರ್ಯದಿಂದ ಮನುಕುಲವು ಸಮೃದ್ಧಿಯತ್ತ ಸಾಗಿ ಮುನ್ನಡೆದಿರುವುದು ಕಂಡುಬರುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಇವುಗಳ ಅಗತ್ಯತೆಯೂ ಹೆಚ್ಚಾಗಿದ್ದು, ಪ್ರಸ್ತುತವೂ ಆಗಿದೆ. ಇದನ್ನು ಮನಗಂಡು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕರ್ನಾಟಕ ಸರ್ಕಾರದಿಂದ 2008ರಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಅನಂತರ 2009ರಲ್ಲಿ 'ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ' ಎಂದು ಘೋಷಿತವಾಗಿದೆ. ಈ ವಿಶ್ವವಿದ್ಯಾಲಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನ – ಅಧ್ಯಾಪನ – ಸಂಶೋಧನ – ಸಂಗೋಪನ ಮತ್ತು ಪ್ರಸರಣ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಮೇಲ್ಕಂಡ ಕಲೆಗಳ ಉನ್ನತಿಗೆ ತನ್ನನ್ನು ಮುಡುಪಾಗಿಸಿಕೊಂಡಿದೆ.

ವಿಶ್ವವಿದ್ಯಾಲಯವು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದರೊಂದಿಗೆ ಆಧುನಿಕ ತಂತ್ರಜ್ಞಾನವನ್ನು, ವೈಜ್ಞಾನಿಕ ನೆಲೆಗಟ್ಟುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಒಂದು ಪೂರಕ ವಾತಾವರಣವನ್ನು ಸೃಜಿಸುವತ್ತ ಮುನ್ನಡೆದಿದೆ. ಅಲ್ಲದೆ, ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಂತಹ ಶೈಕ್ಷಣಿಕ ವಿದ್ಯಾಭ್ಯಾಸವನ್ನು ನೀಡುತ್ತಿದೆ.

ಮುಂದೆ, ವಿಶ್ವವಿದ್ಯಾಲಯವು ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಧ್ವನಿದೃಶ್ಯ ಮುದ್ರಣ, ಹಸ್ತಪ್ರತಿ ಸಂಗ್ರಹ, ಸಂಗ್ರಹಾಲಯ, ಕಲಾ ದಿಗ್ಗಜರನ್ನು ಕುರಿತ ದಾಖಲೀಕರಣ, ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಪ್ರಸಾರಾಂಗದ ಮೂಲಕ ಗ್ರಂಥಪ್ರಕಟಣೆಯಂಥ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಇನ್ನೂ ಹೆಚ್ಚು ಗ್ರಂಥಮಾಲೆಗಳನ್ನು ರೂಪಿಸಿ ಅವುಗಳನ್ನು ಲೋಕಾರ್ಪಣೆ ಮಾಡುವ ಮೂಲಕ ಕಲಾವಿದರು, ಕಲಾರಸಿಕರು, ಸಂಶೋಧಕರು ಹಾಗೂ ಸಹೃದಯರನ್ನು ತಲುಪುವ ಅಭಿಲಾಷೆಯನ್ನು ಹೊಂದಿದೆ. ವಿಶ್ವವಿದ್ಯಾಲಯದ ಈ ಎಲ್ಲಾ ಕಾರ್ಯಗಳಿಗೆ ತಮ್ಮ ಸಲಹೆ ಮತ್ತು ಸಹಕಾರಗಳನ್ನು ಯಾಚಿಸುತ್ತೇನೆ.

ಡಾ. ಸರ್ವಮಂಗಳ ಶಂಕರ್
ಕುಲಪತಿ

